

ಅರ್ಥ–6



ಈ ಬಾರಿ ನೋಬೆಲ್ ಬಹುಮಾನ ಪಡೆದ ಜೋಯೆಲ್ ಮೊಕಿರ್, ಫಿಲಿಪ್ ಅಘಿಯಾನ್ ಮತ್ತು ಪೀಟರ್ ಹೌವಿಟ್



ಅರ್ಥ–೬

‘ಅರ್ಥ’ದ ಆರನೇ ಸಂಚಿಕೆ ಈಗ ನಿಮ್ಮ ಮುಂದಿದೆ. ಈ ಮಧ್ಯೆ ಹಲವು ಘಟನೆಗಳು ನಡೆದಿವೆ. ಟ್ರಂಪ್ ಸುಂಕದ ಸಮರವನ್ನು ಸಾರಿದ್ದಾರೆ. ಅದು ಜಾಗತಿಕವಾಗಿ ವ್ಯಾಪಕ ಪರಿಣಾಮ ಉಂಟು ಮಾಡಿದೆ ಹಾಗೂ ಹಲವು ವಿವಾದಗಳನ್ನು ಸೃಷ್ಟಿಸಿ ಚರ್ಚೆಗೆ ಕಾರಣವಾಗಿದೆ. ಅದರ ವಿಭಿನ್ನ ಮಗ್ಗುಲುಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಈ ನಿಟ್ಟಿನಲ್ಲಿ ಕೆಲವು ಅಭಿಪ್ರಾಯಗಳನ್ನು ಈ ಸಂಚಿಕೆಯಲ್ಲಿ ಹಂಚಿಕೊಳ್ಳುತ್ತಿದ್ದೇವೆ.

ಈ ಬಾರಿಯ ನೊಬೆಲ್ ಬಹುಮಾನವನ್ನು ಜೋಯೆಲ್ ಮೊಕಿರ್, ಫಿಲಿಪ್ ಅಘಿಯಾನ್ ಮತ್ತು ಪೀಟರ್ ಹೌವಿಟ್ ಪಡೆದುಕೊಂಡಿದ್ದಾರೆ. ಅವರ ಚಿಂತನೆಗಳನ್ನು ಪರಿಚಯಿಸುವ ಲೇಖನ ಈ ಸಂಚಿಕೆಯಲ್ಲಿದೆ. ಆ ಬಗ್ಗೆ ವಿಭಿನ್ನ ಅಭಿಪ್ರಾಯಗಳನ್ನು ನೀಡಬೇಕೆಂಬ ಆಸೆಯಿದ್ದರೂ, ಓದಿನ ಹಾಗೂ ಕಾಲದ ಮಿತಿಯಿಂದ ಸಾಧ್ಯವಾಗಲಿಲ್ಲ. ಮುಂದಿನ ಸಂಚಿಕೆಯಲ್ಲಿ ನೀಡುವ ಪ್ರಯತ್ನ ಮಾಡಲಾಗುತ್ತದೆ.

ಅಮರ್ತ್ಯ ಸೇನ್ ಅವರ ಚಿಂತನೆಗಳನ್ನು ಪರಿಚಯಿಸುವ ಮಾಲಿಕೆಯ ಈ ಸಂಚಿಕೆಯಲ್ಲಿ, ‘ಅಭಿವೃದ್ಧಿ’ಯನ್ನು ಕುರಿತ ಅವರ ಚಿಂತನೆಯನ್ನು ಪರಿಚಯಿಸಲಾಗಿದೆ. ಹಾಗೆಯೇ ಕಾರ್ತಿಕ್ ಮುರುಳಿಧರನ್ ಅವರ ಕೃತಿಯ ಎರಡನೆಯ ಅಧ್ಯಾಯವಾದ ‘ರಾಜಕಾರಣೆಯ ಸಂಕಟ’ವನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ಭಾರತೀಯ ಅರ್ಥಶಾಸ್ತ್ರಜ್ಞರನ್ನು ಪರಿಚಯಿಸುವ ಮಾಲಿಕೆಯಲ್ಲಿ, ಈ ಸಲ ಪಿ.ಆರ್. ಬ್ರಹ್ಮಾನಂದರ ವಿಚಾರಗಳನ್ನು ಗಮನಿಸಲಾಗಿದೆ.

ಆಫ್ರಿಕಾದ ಆರ್ಥಿಕತೆ ಸಾಮಾನ್ಯವಾಗಿ ಅಷ್ಟಾಗಿ ಚರ್ಚಿತವಾಗದ ವಿಷಯ. ಇಂದಿಗೂ ಅಲ್ಲಿಯ ಎಷ್ಟೋ ದೇಶಗಳಿಗೆ ತಮ್ಮದೇ ಆದ ಕರೆನ್ಸಿಯಿಲ್ಲ. ಅವರ ಆರ್ಥಿಕತೆಯನ್ನು ಕುರಿತು ಫ್ಯಾನಿ ಪಿಗಿಯೊ ಮತ್ತು ಎನ್‌ಡೊಂಗೊ ಸಂಬಾ ಸಿಲ್ಲಾ ಅವರು ಬರೆದ **“Africa’s Last Colonial Currency: The CFA Franc”**ಪುಸ್ತಕವನ್ನು ಇಲ್ಲಿ ಪರಿಚಯಿಸಲಾಗಿದೆ.

ಹಾಗೆಯೇ ಕೃತಕ ಬುದ್ಧಿಮತ್ತೆ (**AI**) ಇಂದು ತುಂಬಾ ಸುದ್ದಿಯಲ್ಲಿದೆ. ಅದರ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳುವ ಒಂದು ಪ್ರಯತ್ನ ಇಲ್ಲಿದೆ.

ಮಕ್ಕಳಿಗೆ ಅರ್ಥಶಾಸ್ತ್ರವನ್ನು ಪರಿಚಯಿಸಲು ದುಫ್ಲೊ ಅವರು ಬರೆದಿರುವ ‘ಪೂರ್ ಎಕಾನಾಮಿಕ್ಸ್ ಫಾರ್ ಕಿಡ್ಸ್’ ಪುಸ್ತಕವನ್ನು ಪರಿಚಯಿಸಲಾಗಿದೆ.

ಅರ್ಥಶಾಸ್ತ್ರವು ಕೆಲವು ಪರಿಣತರಿಗಷ್ಟೇ ಮೀಸಲಾದ ವಿಷಯವೆಂದು ಭಾವಿಸಬಾರದು. ಇದು ನಮ್ಮೆಲ್ಲರನ್ನೂ ಕಾಡುವ ವಿಷಯ. ಈ ಬಗ್ಗೆ ಸಾಮಾನ್ಯ ತಿಳುವಳಿಕೆ ಎಲ್ಲರಿಗೂ ಇರಬೇಕು ಹಾಗೂ ಎಲ್ಲರೂ ಈ ಬಗ್ಗೆ ಚರ್ಚಿಸಬೇಕು. ಒಂದು ವಿಷಯದ ಬಗ್ಗೆ ಹಲವು ಅಭಿಪ್ರಾಯಗಳು ಸಾಧ್ಯ; ಆದರೆ ಚರ್ಚಿಸುತ್ತಾ ಹೋದಂತೆ ಸ್ಪಷ್ಟತೆ ಸಿಗಬಹುದು. ಅಂತಹ ಚರ್ಚೆ ಸಾಧ್ಯವಾಗಲಿ ಎನ್ನುವ ಕಾರಣಕ್ಕೆ ‘ಅರ್ಥ’ ಬರುತ್ತಿದೆ.

ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವನ್ನಾದರೂ ಕನ್ನಡದಲ್ಲಿ ಪರಿಚಯಿಸುವ ಪ್ರಯತ್ನ ಮಾಡುತ್ತಿದ್ದೇವೆ.

೧. ದಯವಿಟ್ಟು ನಿಮ್ಮ ಅಭಿಪ್ರಾಯ ತಿಳಿಸಿ. ೨. ಗೆಳೆಯರೊಂದಿಗೆ ಹಂಚಿಕೊಳ್ಳಿ. ೩. ಗೆಳೆಯರ ಇ–ಮೇಲ್ (**E-mail**) ನೀಡಿ. ಅವರಿಗೂ ಪ್ರತಿಯನ್ನು ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆ. ೪. ಹಿಂದಿನ ಪ್ರತಿಗಳಿಗೆ **lokayatha.com** ಗಮನಿಸಿ.

ಸಂಪರ್ಕ


ಟಿ ಎಸ್ ವೇಣುಗೋಪಾಲ್
ಸಿ.ಎಚ್:೭೩, ೭ನೇ ಮುಖ್ಯ ರಸ್ತೆ
ಸರಸ್ವತಿಪುರಂ, ಮೈಸೂರು–೯

ಫೋನ್: ೯೯೦೦೦೮೨೭೭೩


statsvenugopal@gmail.com









Reciprocal Tariffs


Poor Economics
for KIDS
Esther Duflo and Cheyenne Olivier

ಒಳಗೇನಿದೆ?

ಈ ಬಾರಿ ನೋಬೆಲ್ ಬಹುಮಾನ ಜೋಯೆಲ್ ಮೊಕಿರ್, ಫಿಲಿಪ್ ಅಘಿಯಾನ್ ಮತ್ತು ಪೀಟರ್ ಹೌವಿಟ್ ಅವರಿಗೆ ಲಭಿಸಿದೆ. ಅರ್ಥಶಾಸ್ತ್ರದ ಇತಿಹಾಸಕಾರ ಮೊಕಿರ್ ನಿರಂತರ ಪ್ರಗತಿಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಚಾರಿತ್ರಿಕ ಮಾಹಿತಿಯನ್ನು ಆಳವಾಗಿ ಶೋಧಿಸಿದ್ದಾರೆ. ಅಘಿಯಾನ್ ಮತ್ತು ಹೌವಿಟ್ ಅವರು ಗಣಿತೀಯ ಮಾದರಿಗಳನ್ನು ಬಳಸಿಕೊಂಡು ಮಾರುಕಟ್ಟೆಯ ಆರ್ಥಿಕತೆಯಲ್ಲಿ ಹೇಗೆ ಅನ್ವೇಷಣೆಗಳು ಆಗುತ್ತವೆ ಎಂಬುದನ್ನು ವಿವರಿಸಿದ್ದಾರೆ.



ಅನ್ವೇಷಣೆಯ ಸಂಸ್ಕೃತಿ: ಆರ್ಥಿಕ ಪ್ರಗತಿಯ ಇಂಜಿನ್

ಅವಶ್ಯಕತೆ ಇದ್ದ ಮಾತ್ರಕ್ಕೆ ಅನ್ವೇಷಣೆಗಳು ಆಗಿಬಿಡೋದಿಲ್ಲ. ಜ್ಞಾನ ತನ್ನಷ್ಟಕ್ಕೆ ಬೆಳೆಯುವುದಿಲ್ಲ. ಸಮಾಜದಲ್ಲಿನ ಸಂಸ್ಕೃತಿಗಳು ಹಾಗೂ ಸಂಸ್ಥೆಗಳು ಅದನ್ನು ಬೆಳೆಸುತ್ತವೆ. ಒಂದು ಸಮಾಜದಲ್ಲಿ ಜ್ಞಾನ ನಿರಂತರವಾಗಿ ಹರಿದು ಬರುತ್ತಿದ್ದರೆ ನಿರಂತರ ಪ್ರಗತಿ ಸಾಧ್ಯವಾಗುತ್ತದೆ. ಅಂದರೆ, ನಿರಂತರ ಪ್ರಗತಿ ಸಾಧ್ಯವಾಗಬೇಕಾದರೆ ಅನ್ವೇಷಣೆಗಳು ಆಗೊಮ್ಮೆ ಈಗೊಮ್ಮೆ ಆಗಿ ನಿಂತುಹೋಗುವ ಘಟನೆಗಳಾಗದೆ, ನಿರಂತರ ನಡೆಯುತ್ತಿರುವ ಪ್ರಕ್ರಿಯೆಯಾಗಬೇಕು. ಇದು ಈ ಬಾರಿ ನೋಬೆಲ್ ಬಹುಮಾನ ಪಡೆದ ಜೋಯೆಲ್ ಮೊಕಿರ್, ಫಿಲಿಪ್ ಅಘಿಯಾನ್ ಮತ್ತು ಪೀಟರ್ ಹೌವಿಟ್ ಅವರ ಅಧ್ಯಯನ ಹೇಳುವ ಸಂಗತಿಯಾಗಿದೆ. ಅರ್ಥಶಾಸ್ತ್ರದ ಇತಿಹಾಸಕಾರ ಮೊಕಿರ್ ನಿರಂತರ ಪ್ರಗತಿಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಚಾರಿತ್ರಿಕ ಮಾಹಿತಿಯನ್ನು ಆಳವಾಗಿ ಶೋಧಿಸಿದ್ದಾರೆ. ಅಘಿಯಾನ್ ಮತ್ತು ಹೌವಿಟ್ ಅವರು ಗಣಿತೀಯ ಮಾದರಿಗಳನ್ನು ಬಳಸಿಕೊಂಡು ಮಾರುಕಟ್ಟೆಯ ಆರ್ಥಿಕತೆಯಲ್ಲಿ ಹೇಗೆ ಅನ್ವೇಷಣೆಗಳು ಆಗುತ್ತವೆ ಎಂಬುದನ್ನು ವಿವರಿಸಿದ್ದಾರೆ.

ಕೆಲವು ದೇಶಗಳಲ್ಲಿ ಪ್ರಗತಿ ನಿರಂತರವಾಗಿ ಆಗುತ್ತಿರುತ್ತದೆ. ಕೆಲವು ದೇಶಗಳು ಪ್ರಗತಿ ಕಾಣದೆ ಸೊರಗುತ್ತಲೇ ಇರುತ್ತವೆ. ಕೆಲವೊಮ್ಮೆ ಪ್ರಗತಿ ತೀವ್ರವಾಗಿರುತ್ತದೆ. ಕೆಲವೊಮ್ಮೆ ಸ್ಥಗಿತವಾಗಿರುತ್ತದೆ. ಯಾಕೆ ಹೀಗೆ? ಆರ್ಥಿಕ ಪ್ರಗತಿ ಯಾವಾಗ ಮತ್ತು ಏಕೆ ಆಗುತ್ತದೆ? ಈ ಪ್ರಶ್ನೆಗಳು ಅರ್ಥಶಾಸ್ತ್ರಜ್ಞರನ್ನು ಬಹಳ ಹಿಂದಿನಿಂದಲೂ ಕಾಡುತ್ತಿವೆ. ಕೆಲವರು ಆರ್ಥಿಕ ಪ್ರಗತಿಗೆ ಬಂಡವಾಳದ ಉಳಿತಾಯ ಹಾಗೂ ಹೂಡಿಕೆ ಕಾರಣ ಎನ್ನುತ್ತಾರೆ. ಅವರು ಅರ್ಥಿಕತೆ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಹೆಚ್ಚಿನ ಹೂಡಿಕೆ ಮಾಡಬೇಕೆಂದು ಸಲಹೆ ನೀಡಿದ್ದಾರೆ. ರಾಬರ್ಟ್ ಸೋಲೊ ಆರ್ಥಿಕ ಪ್ರಗತಿಗೆ ತಂತ್ರಜ್ಞಾನವನ್ನು ಮುಖ್ಯ ಚಾಲಕ ಶಕ್ತಿಯಾಗಿ ಕಂಡಿದ್ದ. ಆದರೆ ಆತನಿಗೆ ತಂತ್ರಜ್ಞಾನದ ಬದಲಾವಣೆಗೆ ಯಾವ ಅಂಶಗಳು ಪ್ರೇರೇಪಿಸುತ್ತವೆ ಎಂಬುದನ್ನು ಗುರುತಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ಅವನು ಅದನ್ನೊಂದು ಹೊರಗಿನ ಅಂಶವನ್ನಾಗಿ ನೋಡಿದ್ದ. ಮೊಕಿರ್, ಅಘಿಯಾನ್ ಹಾಗೂ ಹೌವಿಟ್ ಈ ಮೂವರು ತಂತ್ರಜ್ಞಾನ ಹಾಗೂ ಪ್ರಗತಿ ಇವೆಲ್ಲಾ ಯಾವುದೋ ಮಾಂತ್ರಿಕ ವಿದ್ಯಮಾನಗಳಲ್ಲ. ಅದು ಆರ್ಥಿಕತೆಯ ಅಂತರಿಕ ರಚನೆಗಳು, ಸಂಸ್ಥೆಗಳು ಹಾಗೂ ಸಂಸ್ಕೃತಿಗಳ ಪರಿಣಾಮವಾಗಿ ಒಳಗಿಂದಲೇ ರೂಪುಗೊಳ್ಳುವ ಪ್ರಕ್ರಿಯೆ ಎಂದು ವಾದಿಸಿದ್ದಾರೆ.

ಆದರೆ ಅನ್ವೇಷಣೆಗಳು ಆಗುತ್ತಿದ್ದ ಮಾತ್ರಕ್ಕೆ ನಿರಂತರ ಪ್ರಗತಿ ಖಚಿತವಾಗಿ ಆಗುತ್ತದೆ ಅಂತೇನಿಲ್ಲ. ಅನ್ವೇಷಣೆಗಳು ಹಾಗೂ ತಾಂತ್ರಿಕ ಬದಲಾವಣೆಗಳು ನಿನ್ನೆ-ಮೊನ್ನೆಯ ವಿದ್ಯಮಾನಗಳೇನಲ್ಲ. ತುಂಬಾ ಮೊದಲಿನಿಂದಲೂ ಆಗುತ್ತಿವೆ. ಚೀನಾ, ಗ್ರೀಸ್, ರೋಮ್ ಇಲ್ಲೆಲ್ಲಾ ಬಹಳ ಹಿಂದೆಯೇ ಮಹತ್ತರ ಅನ್ವೇಷಣೆಗಳು ಆಗಿವೆ. ಮುದ್ರಣ ಯಂತ್ರಗಳು, ಗಾಳಿಯಂತ್ರಗಳು ಇವೆಲ್ಲಾ ದೊಡ್ಡ ಅನ್ವೇಷಣೆಗಳೆ. ಆದರೆ ಆಗ ನಿರಂತರ ಪ್ರಗತಿ ಸಾಧ್ಯವಾಗಿರಲಿಲ್ಲ. ಆಗೀಗ ಒಂದಿಷ್ಟು ಪ್ರಗತಿಯಾಗಿ ನಿಂತುಹೋಗುತ್ತಿತ್ತು. ಆರ್ಥಿಕ ಸ್ಥಗಿತತೆ ಸಾಮಾನ್ಯವಾಗಿತ್ತು. ೧೮೦೦ರ ನಂತರವಷ್ಟೆ ಜಗತ್ತು ನಿರಂತರ ಪ್ರಗತಿಯನ್ನು ಕಂಡಿದ್ದು. ಅಂದರೆ ಕೈಗಾರಿಕಾ ಕ್ರಾಂತಿಯ ನಂತರ ಜಗತ್ತಿನಲ್ಲಿ ಅನ್ವೇಷಣೆ ಹಾಗೂ ತಂತ್ರಜ್ಞಾನದ ಬದಲಾವಣೆಗಳು ನಿರಂತರವಾಗಿ ಘಟಿಸತೊಡಗಿತು. ಇದು ಬದಲಾವಣೆಯ ಮುಖ್ಯ ಚಾಲಕ ಶಕ್ತಿಯಾಗಿ ಕೆಲಸ ಮಾಡಿದೆ. ನಂತರದ ದಿನಗಳಲ್ಲಿ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಾ, ಸುತ್ತಲ ಜಗತ್ತನ್ನು ಸಂಪೂರ್ಣ ಬದಲಿಸಿತು. ಪರಿಣಾಮವಾಗಿ ನಮ್ಮ ಬದುಕು ಹಾಗೂ ಆರ್ಥಿಕತೆಯೂ ಮೂಲಭೂತವಾಗಿ ಬದಲಾಯಿತು. ಈ ಬೆಳವಣಿಗೆಗೆ ಕಾರಣವನ್ನು ಕಂಡುಕೊಳ್ಳಲು ಮೊಕಿರ್, ಫಿಲಿಪ್ ಮತ್ತು ಹೌವಿಟ್ ಪ್ರಯತ್ನಿಸಿದ್ದಾರೆ.




ನಿರಂತರ ಪ್ರಗತಿ ಸಾಧ್ಯವಾಗಬೇಕಾದರೆ ಉಪಯುಕ್ತ ಜ್ಞಾನ ನಿರಂತರವಾಗಿ ಹರಿದು ಬರುತ್ತಿರಬೇಕು. ಇದು ಅವರು ಮುಖ್ಯವಾಗಿ ಕಂಡುಕೊಂಡ ಸತ್ಯ. 'ಉಪಯುಕ್ತ ಜ್ಞಾನ' ಅನ್ನುವಾಗ ಮೊಕಿರ್ ಎರಡು ಬಗೆಯ ಜ್ಞಾನವನ್ನು ಗುರುತಿಸುತ್ತಾರೆ. ಒಂದು ಸೈದ್ಧಾಂತಿಕ ಜ್ಞಾನ. ಇದು ಪ್ರಾಕೃತಿಕ ನಿಯಮಗಳಿಗೆ ಒಂದು ವ್ಯವಸ್ಥಿತ ವಿವರಣೆ ಕೊಡುತ್ತದೆ. ಪ್ರಾಕೃತಿಕ ವಿದ್ಯಮಾನಗಳು ಯಾಕೆ ಜರುಗುತ್ತವೆ ಎನ್ನುವುದಕ್ಕೆ ಕಾರಣವನ್ನು ಕೊಡುತ್ತವೆ. ಮತ್ತೊಂದು ಪ್ರಾಯೋಗಿಕ ಜ್ಞಾನ. ಇದು ಸೈದ್ಧಾಂತಿಕ ಜ್ಞಾನವನ್ನು ಪ್ರಾಯೋಗಿಕವಾಗಿ ಬಳಕೆಗೆ ತರುವುದಕ್ಕೆ ಬೇಕಾದ ಕ್ರಮವನ್ನು ತಿಳಿಸುತ್ತದೆ. ಅದಕ್ಕೆ ಬೇಕಾದ ನೀಲಿ ನಕ್ಷೆಯನ್ನು, ಅನುಸರಿಸಬೇಕಾದ ವಿಧಾನವನ್ನು, ವಿವರವಾದ ಸೂಚನೆಗಳನ್ನು ನೀಡುತ್ತದೆ.

ನಿರಂತರ ಪ್ರಗತಿಯಾಗಬೇಕಾದರೆ ಎರಡು ಬಗೆಯ ಜ್ಞಾನಗಳು ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕು. ಕೇವಲ ವೈಜ್ಞಾನಿಕ ಚಿಂತನೆಗಳಷ್ಟೇ ಸಾಲುವುದಿಲ್ಲ. ಅದನ್ನು ಬಳಕೆಗೆ ತರಲು ಪ್ರಾಯೋಗಿಕ ಜ್ಞಾನ ಬೇಕು. ನುರಿತ ಕುಶಲಕರ್ಮಿಗಳು ಬೇಕು. ಲಿಯೋನಾರ್ಡೊ ಡಾವಿನ್ಸಿ ೧೫ನೇ ಶತಮಾನದಲ್ಲೇ ಹೆಲಿಕಾಪ್ಟರ್ ನಕ್ಷೆಯನ್ನು ರಚಿಸಿದ್ದ. ಆದರೆ ಅದನ್ನು ನಿರ್ಮಿಸುವುದಕ್ಕೆ ಬೇಕಾದ ಇಂಜಿನಿಯರುಗಳು, ತಂತ್ರಜ್ಞಾನಿಗಳು ಆಗ ಇರಲಿಲ್ಲ.

ಹಾಗೆಯೇ ಕೇವಲ ಪ್ರಾಯೋಗಿಕ ಜ್ಞಾನವೂ ಸಾಲುವುದಿಲ್ಲ. ಕಮ್ಮಾರನಿಗೆ ಕಬ್ಬಿಣವನ್ನು ಕಾಯಿಸಿ ತಟ್ಟುವ ಮೂಲಕ ಆಯುಧಗಳನ್ನು ಮಾಡಬಹುದೆನ್ನುವ ಪ್ರಾಯೋಗಿಕ ಜ್ಞಾನ ಪರಂಪರಾಗತವಾಗಿ ಬಂದಿದೆ. ಅದರ ಹಿಂದಿನ ವಿಜ್ಞಾನ ಅವನಿಗೆ ತಿಳಿದಿರುವುದಿಲ್ಲ. ಆ ತಂತ್ರಜ್ಞಾನ ಯಾಕೆ ಕೆಲಸ ಮಾಡುತ್ತಿದೆ ಅನ್ನುವುದು ತಿಳಿದಿರಲಿಲ್ಲ. ಆಗಿನ ಜ್ಞಾನ "ಯಾಂತ್ರಿಕ ಜ್ಞಾನ ತಿಳಿಯದ ಕಮ್ಮಾರಿಕೆಯಾಗಿತ್ತು. ಮಣ್ಣಿನ ಜ್ಞಾನವಿಲ್ಲದ ಕೃಷಿಯಾಗಿತ್ತು." ವೈಜ್ಞಾನಿಕ ಹಾಗೂ ಪ್ರಾಯೋಗಿಕ ಜ್ಞಾನ ಪರಸ್ಪರ ಸಂವಹಿಸುತ್ತಾ, ಕೊಡುಕೊಳ್ಳುತ್ತಾ ಸಾಗಿದರೆ ಮಾತ್ರ ನಿರಂತರ ಬೆಳವಣಿಗೆ ಸಾಧ್ಯ. ರಸವಾದಿಗೆ ಸೀಸದಿಂದ ಚಿನ್ನವನ್ನು ತಯಾರಿಸುವುದಕ್ಕೆ ಸಾಧ್ಯವಿಲ್ಲವೆಂಬ ವೈಜ್ಞಾನಿಕ ಅರಿವು ಇದ್ದಿದ್ದರೆ, ಅವನು ಸೀಸದಿಂದ ಚಿನ್ನವನ್ನು ತಯಾರಿಸುವುದಕ್ಕೆ ಪ್ರಯತ್ನಿಸುತ್ತಾ ಹಲವು ಶತಮಾನಗಳ ಕಾಲ ಶ್ರಮವನ್ನು ವ್ಯರ್ಥಮಾಡಬೇಕಾಗಿರಲಿಲ್ಲ.

ಕೈಗಾರಿಕಾ ಕ್ರಾಂತಿಗೆ ಮೊದಲು ಇವೆರಡು ಜ್ಞಾನಶಾಖೆಗಳು ಪರಸ್ಪರ ಪ್ರತ್ಯೇಕವಾಗಿದ್ದವು. ತಾಂತ್ರಿಕ ಅನ್ವೇಷಣೆಗಳು ಪ್ರಾಯೋಗಿಕ ಜ್ಞಾನದ ನೆಲೆಯಲ್ಲಿ ನಡೆಯುತ್ತಿತ್ತು. ಅವು ಬಹುತೇಕ ಅನುಭವದಿಂದ ಕಂಡುಕೊಂಡ, ತಲೆಮಾರುಗಳಿಂದ ಹರಿದುಬಂದ ಜ್ಞಾನವಾಗಿತ್ತು.



ಇನ್ನು ವಿಜ್ಞಾನಿಗಳು ಹಾಗೂ ದಾರ್ಶನಿಕರು ಗಣಿತ, ಭೌತಶಾಸ್ತ್ರ ಹಾಗೂ ತತ್ತ್ವಶಾಸ್ತ್ರದ ಸಿದ್ಧಾಂತಗಳನ್ನು ಬೆಳೆಸಿದರು. ಆದರೆ ಅವುಗಳನ್ನು ಪ್ರಾಯೋಗಿಕ ಸಮಸ್ಯೆಗಳಿಗೆ ಅನ್ವಯಿಸಲು ಪ್ರಯತ್ನಿಸಲಿಲ್ಲ. ಎರಡು ಜ್ಞಾನ ಶಾಖೆಗಳು ಪ್ರತ್ಯೇಕವಾಗಿಯೇ ಉಳಿದುಕೊಂಡಿದ್ದವು. ಹದಿನೆಂಟನೆಯ ಶತಮಾನದ ನಂತರ ಇವು ಪರಸ್ಪರ ಪೂರಕವಾಗಿ ಕೆಲಸ ಮಾಡಲು ಪ್ರಾರಂಭಿಸಿದವು. ಇವುಗಳ ಮಿಲನ ಸಾಧ್ಯವಾದ ಮೇಲಷ್ಟೆ ಅನ್ವೇಷಣೆಗಳು ಹಾಗು ತಾಂತ್ರಿಕ ಬದಲಾವಣೆಗಳು ನಿರಂತರ ಪ್ರಕ್ರಿಯೆಯಾಗಿದ್ದು. ಪರಿಣಾಮವಾಗಿ ಆರ್ಥಿಕ ಪ್ರಗತಿ ಸಾಧ್ಯವಾಯಿತು ಎನ್ನುತ್ತಾರೆ ಮೊಕಿರ್. (ಚಿತ್ರ– ೧. ೧೮೦೦ರವರೆಗೆ ತಲಾ ಜಿಡಿಪಿಯಲ್ಲಿ ಬೆಳವಣಿಗೆಯಾಗಿರಲಿಲ್ಲ. ನಂತರವಷ್ಟೇ ತೀವ್ರವಾದ ಬೆಳವಣಿಗೆಯನ್ನು ನೋಡಬಹುದು)

ವೈಜ್ಞಾನಿಕ ಅನ್ವೇಷಣೆಗಳು ಹಾಗೂ ಅವುಗಳ ಪ್ರಾಯೋಗಿಕ ಬಳಕೆ ಒಂದನ್ನೊಂದು ಬೆಳೆಸುತ್ತವೆ. ವೈಜ್ಞಾನಿಕ ಅನ್ವೇಷಣೆಗಳು ಪ್ರಾಯೋಗಿಕವಾಗಿ ಬಳಕೆಯಾದರೆ, ವಾಣಿಜ್ಯದ ದೃಷ್ಟಿಯಿಂದ ಲಾಭದಾಯಕವಾದರೆ ವೈಜ್ಞಾನಿಕ ಅನ್ವೇಷಣೆಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ. ಹೊಸ ಹೊಸ ಅನ್ವೇಷಣೆಗಳಾದರೆ ಬಳಕೆಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ. ಹೊಸ ಉತ್ಪನ್ನಗಳು ತಯಾರಾಗುತ್ತವೆ. ಉತ್ಪಾದನಾ ವಿಧಾನಗಳಲ್ಲಿ ಸುಧಾರಣೆಯಾಗುತ್ತದೆ. ಉತ್ಪಾದಕತೆ ಹೆಚ್ಚುತ್ತದೆ. ಆರ್ಥಿಕತೆಯಲ್ಲಿ ನಿರಂತರ ಪ್ರಗತಿ ಸಾಧ್ಯವಾಗುತ್ತದೆ.

ಇಂಗ್ಲೆಂಡಿನಲ್ಲಿ ಯಂತ್ರಗಳನ್ನು ವಿರೋಧಿಸಿ ಲಡ್ಡೈಟರು ಚಳುವಳಿ ನಡೆಸಿದ್ದರು.



ಇದು ಸಾಧ್ಯವಾಗಬೇಕಾದರೆ ಸಮಾಜ ಹೊಸ ಚಿಂತನೆಗಳಿಗೆ, ಬದಲಾವಣೆಗೆ ತೆರೆದುಕೊಳ್ಳಬೇಕು. ಬದಲಾವಣೆಯನ್ನು ಒಪ್ಪಿಕೊಳ್ಳಬೇಕು. ಚರಿತ್ರೆಯುದ್ದಕ್ಕೂ ತಂತ್ರಜ್ಞಾನದ ಬದಲಾವಣೆಗೆ ವಿರೋಧ ವ್ಯಕ್ತವಾಗುತ್ತಲೇ ಇತ್ತು. ಹೊಸ ಅನ್ವೇಷಣೆಗಳ ಬಗ್ಗೆ, ತಾಂತ್ರಿಕ ಬದಲಾವಣೆಗಳ ಬಗ್ಗೆ ಜನರಲ್ಲಿ ಯಾವಾಗಲೂ ಆತಂಕವಿರುತ್ತದೆ. ಅದರಿಂದ ತಮ್ಮ ನಿಪುಣತೆಗೆ, ಜ್ಞಾನಕ್ಕೆ, ಘನತೆಗೆ, ಸಂಪನ್ಮೂಲದ ಒಡೆತನಕ್ಕೆ, ಏಕಸ್ವಾಮ್ಯಕ್ಕೆ ದಕ್ಕೆಯಾಗುತ್ತದೆ ಅನ್ನುವ ಗಾಬರಿ ಇರುತ್ತದೆ. ಅಭದ್ರತೆ ಕಾಡುತ್ತಿರುತ್ತದೆ. ಹೊಸ ಅನ್ವೇಷಣೆಗಳು ಹಳೆಯ ಕ್ರಮಕ್ಕೆ ಸವಾಲಾಗಿ ತೋರುತ್ತವೆ. ಪರಿಣಾಮವಾಗಿ ಅನ್ವೇಷಣೆಗಳನ್ನು ಮತ್ತು ತಾಂತ್ರಿಕ ಬದಲಾವಣೆಯನ್ನು ತಡೆಯಲು ಪ್ರಯತ್ನಿಸುತ್ತಾರೆ. ೧೮೧೧-೧೬೨ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಯಂತ್ರಗಳನ್ನು ವಿರೋಧಿಸಿ ಲಡ್ಡೈಟರು ಚಳುವಳಿ ನಡೆಸಿದ್ದರು. ಕೆಲವೊಮ್ಮೆ ವಿಜ್ಞಾನಿಗಳೂ ಬದಲಾವಣೆಯನ್ನು ವಿರೋಧಿಸಿದ್ದಾರೆ. ಇಂತಹ ಹಲವು ಪ್ರಕರಣಗಳನ್ನು ಮೊಕಿರ್ ತಮ್ಮ ಬರಹಗಳಲ್ಲಿ ನೀಡಿದ್ದಾರೆ. ಶಸ್ತ್ರಚಿಕಿತ್ಸೆಯ ಉಪಕರಣಗಳನ್ನು ಸ್ಟರ್ಲೈಜ್ ಮಾಡಬೇಕೆನ್ನುವ ಸರಳಚಿಂತನೆಯನ್ನು ಪ್ರಾರಂಭದಲ್ಲಿ ವೈದ್ಯರಿಗೆ ಒಪ್ಪಿಕೊಳ್ಳುವುದಕ್ಕೆ ಆಗಿರಲಿಲ್ಲ. ಅದನ್ನು ವಿರೋಧಿಸಿದ್ದರು. ತಾವು ಮಾಡುವ ಶಸ್ತ್ರಚಿಕಿತ್ಸೆಯಿಂದ ರೋಗಗಳು ಹರಡಬಹುದೆನ್ನುವ ಯೋಚನೆಯೇ ತಮಗೆ ಮಾಡುತ್ತಿರುವ ಅವಮಾನ ಅಂತ ಅವರು ಭಾವಿಸಿದ್ದರು

ಹೊಸ ಬಗೆಯ ಆಲೋಚನೆಗಳನ್ನು ಒಪ್ಪಿಕೊಳ್ಳುವುದಕ್ಕೆ ಬೌದ್ಧಿಕ ಸಹನೆ ಬೇಕಾಗುತ್ತದೆ. ಹದಿನೆಂಟನೇ ಶತಮಾನದಲ್ಲಿ ಯುರೋಪಿನಲ್ಲಿ ನಡೆದ ಪುನರುತ್ಥಾನ ಚಳುವಳಿ ಸಮಾಜವನ್ನು ಬದಲಾವಣೆಗಳಿಗೆ ಹೆಚ್ಚೆಚ್ಚು ತೆರೆದುಕೊಳ್ಳುವಂತೆ, ಬದಲಾವಣೆಗಳನ್ನು ಒಪ್ಪಿಕೊಳ್ಳುವಂತೆ ಪ್ರೇರೇಪಿಸಿತು. ಸಮಾಜದಲ್ಲಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪಲ್ಲಟಕ್ಕೆ ಅವಕಾಶ ಮಾಡಿಕೊಟ್ಟಿತು. ಬ್ರಿಟನ್ನಿನಲ್ಲಿ ವಿಜ್ಞಾನದೊಂದಿಗೆ ವ್ಯವಹರಿಸಲು ತಯಾರಿದ್ದ ವೃತ್ತಿಪರರು ಇದ್ದರು. ಬದಲಾವಣೆಯನ್ನು ಒಪ್ಪಿಕೊಳ್ಳುವಂತಹ ರಾಜಕೀಯ ವ್ಯವಸ್ಥೆಯೂ ಬ್ರಿಟನ್ನಿನಲ್ಲಿ ಸೃಷ್ಟಿಯಾಗಿತ್ತು. ಅಂದಿನ ಬ್ರಿಟಿಷ್ ಪಾರ್ಲಿಮೆಂಟ್ ಇಂದಿನ ದೃಷ್ಟಿಯಿಂದ ನೋಡಿದರೆ ಒಳ್ಳೆಯ ಪ್ರಜಾಸತ್ತಾತ್ಮಕ ವ್ಯವಸ್ಥೆಯಾಗಿರಲಿಲ್ಲ. ಸಾಕಷ್ಟು ನ್ಯೂನತೆಗಳಿದ್ದವು. ಆದರೆ ಅದು ಬದಲಾವಣೆಗೆ ಪ್ರೋತ್ಸಾಹ ನೀಡಿತು. ಈ ಎಲ್ಲಾ ಬೆಳವಣಿಗೆಗಳು ಬದಲಾವಣೆಗೆ ಇದ್ದ ಅಡಚಣೆಗಳನ್ನು ನಿವಾರಿಸಿತು. ಬದಲಾವಣೆಯನ್ನು ಒಪ್ಪಿಕೊಳ್ಳುವುದಕ್ಕೆ ಬೇಕಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಾತಾವರಣ ಬ್ರಿಟನ್ನಿನಲ್ಲಿ ಸೃಷ್ಟಿಯಾಯಿತು. ಕೈಗಾರಿಕಾ ಕ್ರಾಂತಿ ಸಾಧ್ಯವಾಯಿತು. ಅಲ್ಲಿ ಪ್ರಾರಂಭವಾದ ನಿರಂತರ ಪ್ರಗತಿ ಕ್ರಮೇಣ ಇತರ ಕಡೆಗಳಿಗೆ ಹರಡುತ್ತಾ ಇದೊಂದು ಜಾಗತಿಕ ವಿದ್ಯಮಾನವಾಯಿತು. ಜನರ ಜೀವನಮಟ್ಟವೂ ಸುಧಾರಿಸತೊಡಗಿತು.

ಪುನರುತ್ಥಾನ ಚಳುವಳಿಯಿಂದಾಗಿ ಉಪಯುಕ್ತ ಜ್ಞಾನವು ಹೆಚ್ಚೆಚ್ಚು ಕ್ರೋಡೀಕರಣಗೊಳ್ಳುವುದಕ್ಕೆ ಸಾಧ್ಯವಾಯಿತು. ಪುನರುತ್ಥಾನವು ಸೈದ್ಧಾಂತಿಕ ಜ್ಞಾನದ ವ್ಯಾಪ್ತಿಯನ್ನು ವಿಸ್ತರಿಸುವುದರ ಜೊತೆಗೆ, ಅದನ್ನು ಪ್ರಾಯೋಗಿಕವಾಗಿ ಉಪಯುಕ್ತವಾಗುವಂತೆಯೂ ಮಾಡಿತು. ಕೈಗಾರಿಕಾ ಕ್ರಾಂತಿಯಿಂದಾಗಿ ನ್ಯೂಟನ್, ಬೇಕನ್ ಮೊದಲಾದವರು ಸೃಷ್ಟಿಸಿದ ಶುದ್ಧ ವೈಜ್ಞಾನಿಕ ಜ್ಞಾನ ಹಾಗೂ ಕುಶಲಕರ್ಮಿಗಳ ಹಾಗೂ ಅನ್ವೇಷಕರ ಪ್ರಾಯೋಗಿಕ ಜ್ಞಾನಗಳ ನಡುವೆ ಸೇತುವೆ ನಿರ್ಮಾಣವಾಯಿತು. ಹಾಗಾಗಿಯೇ ಮೋಕಿರ್ ಕೈಗಾರಿಕಾ ಕ್ರಾಂತಿಯನ್ನು "ಕೈಗಾರಿಕಾ ಪುನರುತ್ಥಾನ" ಅಂತ ಕರೆದದ್ದು. ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಜ್ಞಾನಗಳ ನಡುವಿನ ಸಂಬಂಧ ಕ್ರಮೇಣ ಹೆಚ್ಚೆಚ್ಚು ಬಲಗೊಳ್ಳುತ್ತಾ ಹೋಯಿತು.
ಪುನರುತ್ಥಾನ ಚಳುವಳಿ ತಂತ್ರಜ್ಞಾನದ ಬದಲಾವಣೆಯ ಮುಖ್ಯ ಚಾಲಕ ಶಕ್ತಿಯಾಗಿತ್ತು ಅನ್ನುವುದು ನಿಜ. ಆದರೆ ಪುನರುತ್ಥಾನವೊಂದರಿಂದಲೇ ಬದಲಾವಣೆ ಆಗಿಬಿಡಲಿಲ್ಲ. ಹೊಸ ಚಿಂತನೆಗಳು, ಅನ್ವೇಷಣೆಗಳು ಸೃಷ್ಟಿಯಾದಾಗ, ಅವುಗಳನ್ನು ಬಳಸಿಕೊಂಡು ಉತ್ಪನ್ನಗಳನ್ನು ತಯಾರಿಸುವುದಕ್ಕೆ, ಬಳಕೆಗೆ ತರುವುದಕ್ಕೆ ನುರಿತ ಕೆಲಸಗಾರರು ಬೇಕು. ತಾಂತ್ರಿಕ ಜ್ಞಾನ ಹಾಗೂ ಯಾಂತ್ರಿಕ ಸಾಮರ್ಥ್ಯ ಬೇಕು. ಬ್ರಿಟನ್ನಿನಲ್ಲಿ ನುರಿತ ಕುಶಲಕರ್ಮಿಗಳು ಹಾಗೂ ಇಂಜಿನಿಯರುಗಳು ದೊಡ್ಡ ಪ್ರಮಾಣದಲ್ಲಿ ಇದ್ದರು. ಜೇಮ್ಸ್‌ವಾಟ್ ಅಂತಹ ಪ್ರಖ್ಯಾತ ಅನ್ವೇಷಕರಿದ್ದರು. ನಕ್ಷೆಗಳನ್ನು, ಸೂಚನೆಗಳನ್ನು ಅರ್ಥಮಾಡಿಕೊಂಡು ಅದನ್ನು ಉಪಯುಕ್ತ ಉತ್ಪನ್ನಗಳನ್ನಾಗಿ ಮಾಡಬಲ್ಲ ಸಾಮರ್ಥ್ಯವಿದ್ದ ಕುಶಲಕರ್ಮಿಗಳಿದ್ದರು. ಹಾಗಾಗಿ ಕೈಗಾರಿಕಾ ಕ್ರಾಂತಿ ಸಾಧ್ಯವಾಯಿತು.
ಮೊಕಿರ್ ಅಭಿಪ್ರಾಯದಲ್ಲಿ ನಿರಂತರ ಆರ್ಥಿಕ ಪ್ರಗತಿ ಸಾಧ್ಯವಾಗಬೇಕಾದರೆ ಮೊದಲನೆಯದಾಗಿ ವಿಜ್ಞಾನ ಹಾಗೂ ತಂತ್ರಜ್ಞಾನ ಒಟ್ಟಿಗೆ ವಿಕಾಸವಾಗಬೇಕು. ಎರಡನೆಯದಾಗಿ ವೈಜ್ಞಾನಿಕ ಜ್ಞಾನವನ್ನು ಪ್ರಾಯೋಗಿಕವಾಗಿ ಬಳಕೆಗೆ ತರುವುದಕ್ಕೆ ಯಾಂತ್ರಿಕ ಸಾಮರ್ಥ್ಯ ಹಾಗೂ ನುರಿತ ಕೆಲಸಗಾರರು ಬೇಕು. ಮೂರನೆಯದಾಗಿ ಅನ್ವೇಷಣೆಗಳನ್ನು ಹಾಗೂ ತಾಂತ್ರಿಕ ಬದಲಾವಣೆಯನ್ನು ಸಮಾಜ ಒಪ್ಪಿಕೊಳ್ಳಬೇಕು. ಈ ಮೂರರಲ್ಲಿ ಯಾವೊಂದು ಸಾಧ್ಯವಾಗದಿದ್ದರೂ ನಿರಂತರ ಪ್ರಗತಿ ಸಾಧ್ಯವಾಗುವುದಿಲ್ಲ.

ಹದಿನೆಂಟನೇ ಶತಮಾನದ ಮೊದಲು ಗ್ರೀಕ್, ರೋಮ್ ನಾಗರಿಕತೆಗಳು ತತ್ತ್ವಶಾಸ್ತ್ರ, ಜ್ಯಾಮಿತಿ, ರಾಜಕೀಯ ವಿಜ್ಞಾನ ಇವುಗಳಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದವು. ೧೪ನೇ ಶತಮಾನದವರೆಗೆ ಚೀನಾ ಯುರೋಪಿಗಿಂತ ತಾಂತ್ರಿಕವಾಗಿ ಹೆಚ್ಚು ಮುಂದುವರಿದಿತ್ತು. ಉಳುಮೆ, ಕುಲುಮೆ ಇವೆಲ್ಲಾ ಬೆಳೆದಿತ್ತು. ಬಟ್ಟೆ, ಕಾಗದ, ಪೋರ್ಸಲಿನ್ ಇವುಗಳ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿತ್ತು. ಅಲ್ಲಿಯ ಉತ್ಪನ್ನಗಳು ಯುರೋಪಿಗೆ ಹೋಗುತ್ತಿದ್ದವು. ಆದರೆ ಅಲ್ಲಿಯ ಜ್ಞಾನ ಬಹುತೇಕ ಅನುಭವವನ್ನು ಆಧರಿಸಿದ ಜ್ಞಾನವಾಗಿತ್ತು. ಅದಕ್ಕೆ ಬೇಕಾದ ವಿಜ್ಞಾನ ಬೆಳೆದಿರಲಿಲ್ಲ. ಹಾಗಾಗಿ ಚೀನಾದಲ್ಲಿ ಕೈಗಾರಿಕಾ ಕ್ರಾಂತಿ ಸಾಧ್ಯವಾಗಲಿಲ್ಲ. ಮುಕ್ತ ವಿಜ್ಞಾನ ಹಾಗೂ ಸ್ಪರ್ಧೆಗೆ ಅವಕಾಶ ಇಲ್ಲದ್ದು ಚೀನಾವನ್ನು ತಾಂತ್ರಿಕವಾಗಿ ಸ್ಥಗಿತವಾಗಿಟ್ಟಿತ್ತು. ಯುರೋಪಿನಲ್ಲೂ ಕೈಗಾರಿಕಾ ಕ್ರಾಂತಿಯ ಮೊದಲು ಪ್ರಾಯೋಗಿಕ ಹಾಗೂ ಸೈದ್ಧಾಂತಿಕ ಜ್ಞಾನದ ನಡುವಿನ ಅಂತರ ದೊಡ್ಡದಾಗಿಯೇ ಇತ್ತು. ನುರಿತ ಕೆಲಸಗಾರರು, ಯಂತ್ರಿಕ ಜ್ಞಾನವಿದ್ದವರು ಇರಲಿಲ್ಲ. ಹಾಗಾಗಿ ಸೈದ್ಧಾಂತಿಕ ಜ್ಞಾನವನ್ನು ಪ್ರಾಯೋಗಿಕ ಬಳಕೆಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಡಾವಿನ್ಸಿಯ ಎಷ್ಟೋ ಚಿತ್ರಗಳು ಅವನ ಜೀವಿತ ಕಾಲದಲ್ಲಿ ಪ್ರಯೋಗಕ್ಕೆ ಬರಲೇ ಇಲ್ಲ. ಮೊಕಿರ್ ತಂತ್ರಜ್ಞಾನವನ್ನು ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ನೋಡಲಿಲ್ಲ. ಬದಲಿಗೆ ಕೈಗಾರಿಕಾ ಕ್ರಾಂತಿಗೆ ಕಾರಣವನ್ನಾಗಿ ನೋಡುತ್ತಾನೆ.

ಅಘಿಯಾನ್ ಹಾಗೂ ಹೌವಿಟ್ ಇಡೀ ಪ್ರಕ್ರಿಯೆಯನ್ನು ಇನ್ನೊಂದು ಆಯಾಮದಿಂದ ನೋಡುತ್ತಾರೆ. ಬದಲಾವಣೆಗಳಿಂದ, ಹೊಸ ಅನ್ವೇಷಣೆಗಳಿಂದ ಯಾವಾಗಲೂ ಎಲ್ಲರಿಗೂ ಅನುಕೂಲವಾಗುವುದಿಲ್ಲ. ಕೆಲವರು ಪಡೆದುಕೊಂಡರೆ ಕೆಲವರು ಕಳೆದುಕೊಳ್ಳುತ್ತಾರೆ. ಹೊಸ ಅನ್ವೇಷಣೆಗಳು ಹಳೆಯ ತಂತ್ರಜ್ಞಾನವನ್ನು ಹೊರದಬ್ಬುತ್ತವೆ. ಚಾಲ್ತಿಯಲ್ಲಿರುವ ಉತ್ಪನ್ನಗಳನ್ನು ಹಾಗೂ ಉತ್ಪಾದನಾ ವಿಧಾನಗಳನ್ನು ಮಾರುಕಟ್ಟೆ ಕಳೆದುಕೊಳ್ಳುತ್ತವೆ. ಒಂದು ಕಾಲದಲ್ಲಿ ಮಾರುಕಟ್ಟೆಯನ್ನು ಆಕ್ರಮಿಸಿದ್ದ ನೋಕಿಯ ಮೊಬೈಲ್ ನಂತರದಲ್ಲಿ ನಿರ್ಗಮಿಸಿತು. ಆಪಲ್, ಸ್ಯಾಮ್‌ಸಂಗ್ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡವು. ಶಿವನ ತಾಂಡವ ನೃತ್ಯದಂತೆ ಹೊಸದರ ಸೃಷ್ಟಿ ಹಾಗೂ ಹಳೆಯದರ ನಾಶ ಒಟ್ಟಿಗೆ ನಡೆಯುತ್ತಿರುತ್ತದೆ. ಜೋಸೆಫ್ ಶುಂಪಿಟರ್ ಇದನ್ನು "ಸೃಜನಶೀಲ ವಿನಾಶ" ಅಂತ ಕರೆದ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದೊಂದು "ನಿಲ್ಲದ ಬಿರುಗಾಳಿ"

ಅಂತ ವಿವರಿಸಿದ.


ಅಘಿಯಾನ್ ಹಾಗೂ ಹೌವಿಟ್ ಶುಂಪಿಟರ್ ಅವರ ವಿವರಣೆಯನ್ನೇ ಮುಂದುವರಿಸುತ್ತಾ ನಿರಂತರ ಪ್ರಗತಿಗೆ ಈ ಸೃಜನಶೀಲ ವಿನಾಶದ ಪ್ರಕ್ರಿಯೆ ಮುಖ್ಯ ಕಾರಣ ಎಂದು ವಾದಿಸಿದ್ದಾರೆ. ಸಾಮಾನ್ಯವಾಗಿ ಯಾವುದೇ ಹೊಸ ಅನ್ವೇಷಣೆಯೂ ಈಗಿರುವ ತಂತ್ರಜ್ಞಾನಕ್ಕೆ ಪೂರಕವಾಗಿರುವುದಿಲ್ಲ. ಅದೊಂದು ಬದಲಿ ತಂತ್ರಜ್ಞಾನವಾಗಿರುತ್ತದೆ. ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಾದ ಹೊಸ ಉತ್ಪನ್ನವು ಹಳೆಯದಕ್ಕೆ ಬದಲಿ ಉತ್ಪನ್ನವಾಗಿರುತ್ತದೆ. ಹೊಸ ಉತ್ಪನ್ನವು ಈಗಿರುವುದಕ್ಕಿಂತ ಉತ್ತಮ ಗುಣಮಟ್ಟದ ಉತ್ಪನ್ನವಾದರೆ ಹಳೆಯದರ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತದೆ. ಹಳೆಯ ಉತ್ಪನ್ನ ಮಾರುಕಟ್ಟೆಯಿಂದ ಹೊರಹೋಗುತ್ತದೆ. ಹೊಸ ಯಶಸ್ವಿ ಉದ್ದಿಮೆದಾರರು ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುತ್ತಾರೆ. ಹಳಬರ ವ್ಯಾಪಾರ ಕಳೆದುಹೋಗುತ್ತದೆ. ಅವರು ಹೊರಹೋಗುತ್ತಾರೆ.

ಸೃಜನಶೀಲ ವಿನಾಶದ ಸಿದ್ಧಾಂತವು ಮೂಲಭೂತವಾಗಿ ಸ್ಪರ್ಧೆ ಮತ್ತು ಅನ್ವೇಷಣೆಯ ನಡುವಿನ ಸಂಬಂಧವನ್ನು ತಿಳಿಸುತ್ತದೆ. ಹೊಸದರ ಪ್ರವೇಶ ಹಳೆಯದರ ನಿರ್ಗಮನ ಒಟ್ಟಿಗೆ ನಡೆಯುತ್ತಲೇ ಇರುತ್ತವೆ. ಅಮೇರಿಕಯಲ್ಲಿ ಶೇಕಡ ೧೦ರಷ್ಟು ಉದ್ದಿಮೆಗಳು ಪ್ರತಿ ವರ್ಷ ಆರ್ಥಿಕತೆಯನ್ನು ಪ್ರವೇಶಿಸುತ್ತವೆ. ಹಾಗೆಯೇ ಶೇಕಡ ೧೦ರಷ್ಟು ಉದ್ದಿಮೆಗಳು ಮಾರುಕಟ್ಟೆಯಿಂದ ಹೊರಹೋಗುತ್ತವೆ. ಇದು ಉದ್ಯೋಗಗಳ ವಿಷಯದಲ್ಲೂ ನಿಜ. ಒಂದು ಕಡೆ ಹಲವರು ಉದ್ಯೋಗ ಕಳೆದುಕೊಳ್ಳುತ್ತಿರುತ್ತಾರೆ. ಇನ್ನೊಂದು ಕಡೆ ಉದ್ಯೋಗ ಸೃಷ್ಟಿಯೂ ಆಗುತ್ತಿರುತ್ತದೆ. ಹಾಗೆಯೇ ಪ್ರತಿ ಅನ್ವೇಷಣೆಯೂ ಹಳೆಯ ಅನ್ವೇಷಣೆಯನ್ನು ಆಧರಿಸಿ ಸೃಷ್ಟಿಯಾಗಿರುತ್ತದೆ. ಹಳೆಯದನ್ನು ಸುಧಾರಿಸಿಕೊಂಡು ಇನ್ನೊಂದು ಹೆಜ್ಜೆ ಮುಂದಿಡುತ್ತದೆ. ಆರ್ಥಿಕ ಪ್ರಗತಿಯ ದರ ಹೆಚ್ಚಬೇಕಾದರೆ ಈ ವಿನಾಶಕಾರಿ ಪ್ರಕ್ರಿಯೆಯೂ ತೀವ್ರವಾಗಬೇಕು. ಪ್ರಗತಿಯ ಪ್ರಮಾಣ ಸ್ಪರ್ಧೆ ಹಾಗೂ ಸ್ಥಿರತೆಯ ನಡುವಿನ ಸಮತೋಲನವನ್ನು ಅವಲಂಭಿಸಿರುತ್ತದೆ.
ಆದರೆ ಕಳೆದ ೨೦೦ ವರ್ಷಗಳಲ್ಲಿ ನಾವು ನೋಡುತ್ತಿರುವ ಪ್ರಗತಿ ಹೀಗೆ ಮುಂದುವರಿಯುತ್ತದೆ ಅನ್ನುವ ಖಾತರಿಯೇನಿಲ್ಲ. ಯಾಕೆಂದರೆ ಸ್ಥಗಿತತೆಯೇ ನಮ್ಮ ಆರ್ಥಿಕತೆಯ ಸ್ಥಾಯಿ ಸ್ವಭಾವ. ಕಳೆದ ಎರಡು ಶತಮಾನಗಳಲ್ಲಿ ಪ್ರಗತಿಗೆ ಒದಗಿಬಂದಿರುವ ಪೂರಕ ಬೆಳವಣಿಗೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗದೆ ಹೋದರೆ ಮತ್ತೆ ಜಗತ್ತು ಸ್ಥಗಿತತೆಯ ಸ್ಥಿತಿಗೆ ಜಾರಿಬಿಡಬಹುದು. ನಾವು ಸದಾ ಆ ಬಗ್ಗೆ ಎಚ್ಚರದಿಂದಿರಬೇಕು. ಇತ್ತೀಚಿನ ದಿನಗಳಲ್ಲಿ ಜಾಗತಿಕವಾಗಿ ಪ್ರಗತಿ ನಿಧಾನವಾಗಿದೆ. ಅನ್ವೇಷಣೆಗಳಾಗುತ್ತಿದ್ದರೂ ಪ್ರಗತಿ ಆ ದರದಲ್ಲಿ ಆಗುತ್ತಿಲ್ಲ. ಅದಕ್ಕೆ ಹಲವು ವಿವರಣೆಗಳನ್ನು ನೀಡಲಾಗುತ್ತಿದೆ. ಮೊದಲನೆಯದಾಗಿ ಅನ್ವೇಷಣೆಗೆ ಹಾಗೂ ಪ್ರಗತಿಗೆ ಸ್ಪರ್ಧಾತ್ಮಕ ಪರಿಸರ ಅವಶ್ಯಕ. ಸ್ಪರ್ಧಾತ್ಮಕ ವಾತಾವರಣವಿದ್ದಾಗ ಲಭ್ಯವಿರುವ ಸಂಪನ್ಮೂಲಗಳನ್ನು ಹೆಚ್ಚು ಉತ್ಪಾದಕವಾಗಿ ಬಳಸಿಕೊಳ್ಳಲಾಗುತ್ತದೆ. ಗರಿಷ್ಠ ಪ್ರಮಾಣದ ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಉದ್ದಿಮೆಗಳ ಕೇಂದ್ರೀಕರಣ ಹೆಚ್ಚುತ್ತಿದೆ. ಕೆಲವೇ ಉದ್ದಿಮೆಗಳು ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುತ್ತಿವೆ. ಪ್ರಬಲ ಉದ್ದಿಮೆಗಳು ಹಣದ ಬಲದಿಂದ ಹಾಗೂ ಸರ್ಕಾರದ ನೆರವಿನಿಂದ ಬೇರೆಯವರು ಮಾರುಕಟ್ಟೆಯನ್ನು ಪ್ರವೇಶಿಸುವುದನ್ನು ತಡೆಯುತ್ತಿವೆ. ಹೊಸ ಅನ್ವೇಷಣೆಗಳಿಗೆ ತಡೆಯೊಡ್ಡುತ್ತಿವೆ. ಇದರಿಂದ ಮಾರುಕಟ್ಟೆಯಲ್ಲಿನ ಸ್ಪರ್ಧಾತ್ಮಕ ವಾತಾವರಣ ದುರ್ಬಲವಾಗುತ್ತದೆ. ಉದಾಹರಣೆಗೆ ಇಂದು ಮೈಕ್ರೊಸಾಫ್ಟ್, ಗೂಗಲ್ ಅಂತಹ ಕೆಲವೇ ದೈತ್ಯ ಕಂಪೆನಿಗಳು ಕೃತಕ ಬುದ್ಧಿಮತ್ತೆಯ ಕ್ಷೇತ್ರವನ್ನು ನಿಯಂತ್ರಿಸುತ್ತಿವೆ. ಅವುಗಳ ಬಳಿ ಹಣಬಲದ ಜೊತೆಗೆ ಬೃಹತ್ ಪ್ರಮಾಣದ ಡೇಟಾ ಮತ್ತು ಕಂಪ್ಯೂಟರ್ ಶಕ್ತಿ ಇದೆ. ಬೇರೆಯವರಿಗೆ ಅವರೊಂದಿಗೆ ಸ್ಪರ್ಧಿಸುವುದಕ್ಕೆ ಕಷ್ಟವಾಗುತ್ತದೆ. ಬಹುಶಃ ಇದೇ ಕಾರಣಕ್ಕೆ ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯನ್ನು ಪ್ರವೇಶಿಸುತ್ತಿರುವ ಹಾಗೂ ಮಾರುಕಟ್ಟೆಯಿಂದ ನಿರ್ಗಮಿಸುತ್ತಿರುವ ಉದ್ದಿಮೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅಂದರೆ ಸೃಜನಶೀಲ ವಿನಾಶದ ದರ ಕಡಿಮೆಯಾಗುತ್ತಿದೆ. ಇದು ಅಂತಿಮವಾಗಿ ಆರ್ಥಿಕ ಪ್ರಗತಿಯ ಮೇಲೆ ಋಣಾತ್ಮಕ ಪರಿಣಾಮವನ್ನುಂಟು ಮಾಡುತ್ತದೆ.



ಫಿಲಿಪ್ ಅಘಿಯಾನ್





ಮುಕ್ತ ಚಿಂತನೆಗೆ, ಚಿಂತನೆಯ ವಿನಿಮಯಕ್ಕೆ ಅವಕಾಶಗಳು ಕಡಿಮೆಯಾಗುತ್ತಿರುವುದು ಕೂಡ ಅನ್ವೇಷಣೆಗಳ ಇಳಿಕೆಗೆ ಮತ್ತೊಂದು ಕಾರಣ. ವಿಜ್ಞಾನಕ್ಕೆ ಬೆಂಬಲ ಕಡಿಮೆಯಾಗುತ್ತಿರುವುದು ಸಮಸ್ಯೆಯನ್ನು ಹೆಚ್ಚು ಗಂಭೀರಗೊಳಿಸುತ್ತಿದೆ. ಅಂದರೆ ಅನ್ವೇಷಣೆಗೆ ಬೇಕಾದ ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ವಾತಾವರಣ ಮಾಸಿಹೋಗುತ್ತಿದೆ. ಹವಾಮಾನದ ಬದಲಾವಣೆ, ನೈಸರ್ಗಿಕ ಸಂಪನ್ಮೂಲದ ಅಪಬಳಕೆ ಇವೆಲ್ಲಾ ಪ್ರಗತಿಯ ಮೇಲೆ ಋಣಾತ್ಮಕ ಪರಿಣಾಮ ಬೀರುವುದರ ಜೊತೆಗೆ, ತಂತ್ರಜ್ಞಾನದ ಬದಲಾವಣೆಗೆ ವಿರೋಧವನ್ನು ಸೃಷ್ಟಿಸುತ್ತದೆ. ಹೊಸ ಅನ್ವೇಷಣೆಯೊಂದಿಗೆ ಸ್ಪರ್ಧಿಸಲಾರದ ಉದ್ಯಮಿಗಳಿಗೆ, ಹಾಗೂ ಉದ್ಯೋಗ ಕಳೆದುಕೊಂಡ ಕಾರ್ಮಿಕರಿಗೆ ಬದಲಾವಣೆಯ ಬಗ್ಗೆ ಮೊದಲೇ ಅಸಮಾಧಾನವಿರುತ್ತದೆ. ಈಗ ಮತ್ತಷ್ಟು ಹೆಚ್ಚಾಗುತ್ತದೆ. ಸರ್ಕಾರಗಳು ಪೂರಕ ಸಂಸ್ಕೃತಿಯನ್ನು ಬಲಪಡಿಸುವ ನಿಟ್ಟಿನಲ್ಲಿ ನೀತಿಗಳನ್ನು ರೂಪಿಸಬೇಕಾಗುತ್ತದೆ.

ಉದ್ಯೋಗ ಕಳೆದುಕೊಂಡವರಿಗೆ ಹೊಸ ಉದ್ಯೋಗ ಕಂಡುಕೊಳ್ಳುವುದಕ್ಕೆ ನೆರವಾಗಬೇಕು. ಅವಶ್ಯಕತೆ ಇದ್ದರೆ ತರಬೇತಿಯನ್ನು ಕೊಡಬೇಕು. ಅನ್ವೇಷಣೆಗಳಿಗೆ ಸಬ್ಸಿಡಿಯನ್ನು ನೀಡಬೇಕಾಗಬಹುದು. ಡೆನ್ಮಾರ್ಕಿನಲ್ಲಿ "ಫ್ಲೆಕ್ಸಿಕ್ಯುರಿಟಿ" ಎಂಬ ವ್ಯವಸ್ಥೆ ಇದೆ. ಇದು ಉದ್ದಿಮೆದಾರರಿಗೆ 'ಫ್ಲೆಕ್ಸಿ'ಬಿಲಿಟಿ ಒದಗಿಸುತ್ತಲೇ, ಕಾರ್ಮಿಕರ ಸೆ'ಕ್ಯುರಿಟಿ'ಯನ್ನು ಒದಗಿಸುವ ವ್ಯವಸ್ಥೆ. ಉದ್ದಿಮೆದಾರರಿಗೆ ಸೂಕ್ತ ಕೆಲಸಗಾರರನ್ನು ನೇಮಿಸಿಕೊಳ್ಳುವುದಕ್ಕೆ ಸ್ವಾತಂತ್ರ್ಯವನ್ನು ನೀಡಲಾಗುತ್ತದೆ. ಆದರೆ ಈ ಪ್ರಕ್ರಿಯೆಯಲ್ಲಿ ಕೆಲಸ ಕಳೆದುಕೊಂಡವರಿಗೆ ನಿರುದ್ಯೋಗ ಭತ್ಯೆ ಹಾಗೂ ಮರುತರಬೇತಿಯ ವ್ಯವಸ್ಥೆಯೂ ಇರುತ್ತದೆ. ಇದರ ಉದ್ದೇಶ ಉದ್ಯೋಗದಲ್ಲಿ ಚಲನೆಯನ್ನು ತರುವುದು, ನಿರುದ್ಯೋಗವನ್ನು ತಗ್ಗಿಸುವುದು, ಕಾರ್ಮಿಕರಿಗೆ ತೊಂದರೆಯಾಗದಂತೆ ಅನ್ವೇಷಣೆಯನ್ನು ಉತ್ತೇಜಿಸುವುದು.

ಭಾರತಲ್ಲೂ ಈ ನೋಬೆಲ್ ವಿಜೇತರ ಸಿದ್ಧಾಂತವನ್ನು ಅನುಸರಿಸಬೇಕಾದರೆ, ತಾಂತ್ರಿಕ ಬದಲಾವಣೆಗಳು ಹಾಗೂ ಅನ್ವೇಷಣೆಗಳು ನಡೆಯುವುದಕ್ಕೆ ಬೇಕಾದ ವಾತಾವರಣವನ್ನು ನಿರ್ಮಿಸಬೇಕು. ಅನ್ವೇಷಣೆಗಳು ಒಂದು ನಿರಂತರ ಪ್ರಕ್ರಿಯೆಯಾಗುವಂತೆ ನೋಡಿಕೊಳ್ಳಬೇಕು. ಎಲ್ಲೋ ಒಂದು ಕೃತಕ ಬುದ್ಧಿಮತ್ತೆಯ ಕೇಂದ್ರ ಸ್ಥಾಪನೆಯಾದರೆ, ಅಥವಾ ಒಂದು ಸ್ಯಾಟಲೈಟ್ ಉಡಾವಣೆ ಮಾಡಿಬಿಟ್ಟರೆ ಸಾಲುವುದಿಲ್ಲ. ಅದೊಂದು ನಿರಂತರ ಪ್ರಕ್ರಿಯೆಯಾಗಬೇಕು. ಅದು ಸಾಧ್ಯವಾಗಬೇಕಾದರೆ ಅದಕ್ಕಿರುವ ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕು. ವಿಜ್ಞಾನ ಹಾಗೂ ತಂತ್ರಜ್ಞಾನದ ನಡುವಿನ, ಅನ್ವೇಷಣೆ ಹಾಗೂ ಪ್ರಾಯೋಗಿಕ ಬಳಕೆಯ ನಡುವಿನ, ಕಾರ್ಖಾನೆ ಹಾಗೂ ಪ್ರಯೋಗಾಲಯದ ನಡುವಿನ, ವಿಶ್ವವಿದ್ಯಾನಿಲಯಗಳು ಹಾಗೂ ಕೈಗಾರಿಕೆಗಳ ನಡುವಿನ ಕಂದರ ಕಿರಿದಾಗಬೇಕು. ಬಂಡವಾಳ ಮಾತ್ರವಲ್ಲ, ಜ್ಞಾನವೂ ನಿರಂತರವಾಗಿ ಹರಿದು ಬರುತ್ತಿರುವಂತೆ ನೋಡಿಕೊಳ್ಳಬೇಕು. ಸಂಶೋಧನೆಯ ಮೇಲೆ ಹೂಡಿಕೆ ಮಾಡುವ ಮೂಲಕ ಸ್ಪರ್ಧಾತ್ಮಕ ವಾತಾವರಣವನ್ನು ನಿರ್ಮಿಸುವ ಪ್ರಯತ್ನ ಮಾಡಬೇಕು. ಚಿಂತನೆಯ ಪ್ರಕ್ರಿಯೆ ಯಾವುದೇ ನಿಯಂತ್ರಣವೂ ಇಲ್ಲದೆ ಮುಕ್ತವಾಗಿ ನಡೆಯುವುದಕ್ಕೆ ಅವಕಾಶವಿರಬೇಕು. ಎಲ್ಲಾ ಬಗೆಯ ಕೇಂದ್ರೀಕರಣವೂ ಅಂತಿಮವಾಗಿ ಸ್ಪರ್ಧಾತ್ಮಕ ವಾತಾವರಣಕ್ಕೆ ಅಡ್ಡಿಯೇ ಅನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಅನ್ವೇಷಣೆಗಳು ನಿರಂತರವಾಗಿ ನಡೆಯಲು, ಜ್ಞಾನವೂ ನಿರಂತರವಾಗಿ ಹರಿದುಬರಲು, ಈ ವೈಜ್ಞಾನಿಕ ಚಿಂತನೆಗಳು ಪ್ರಾಯೋಗಿಕವಾಗಿ ಬಳಕೆಯಾಗಲು ಅವಶ್ಯಕವಾದ ಪರಸ್ಪರ ಸಹಕಾರವುಳ್ಳ ವಾತಾವರಣವನ್ನು ನಿರ್ಮಿಸುವುದಕ್ಕೆ ನಮ್ಮ ಸಂಸ್ಥೆಗಳಿಗೆ ಸಾಧ್ಯವಾದರೆ ನಮ್ಮ ಪ್ರಗತಿಗೆ ಸಂಪೂರ್ಣವಾಗಿ ವಿಭಿನ್ನವಾದ ದಾರಿಗಳು ಕಾಣುತ್ತವೆ. ನಿರಂತರ ಹೊಸತನ್ನು ಸೃಷ್ಟಿಸುವ ಸಂಸ್ಕೃತಿಯನ್ನು ನಿರ್ಮಿಸಬೇಕು. "ಸರಸ್ವತಿ ಕೇವಲ ಪೂಜಿಸುವ ದೇವತೆಯಾಗದೆ, ನಮ್ಮ ನಡುವೆಯೇ ಇರುವ ಜೀವಂತ ಸಾಮಾಜಿಕ ಶಕ್ತಿಯಾಗಬೇಕು." ಆಗ ಉತ್ತಮ ಜಗತ್ತು ಸಾಧ್ಯವಾಗುತ್ತದೆ.
ಇದು ಸ್ಥೂಲವಾಗಿ ಈ ಮೂವರು ಹೇಳುವ ಸಂಗತಿಗಳು.

ಪ್ರತಿಕ್ರಿಯೆಗಳು:

ಇದಕ್ಕೆ ಹಲವು ಬಗೆಯ ಪ್ರತಿಕ್ರಿಯೆಗಳು ಇವೆ. ಪ್ರಾಸಂಗಿಕವಾಗಿ ಒಂದೆರಡನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಮುಂದಿನ ಸಂಚಿಕೆಗಳಲ್ಲಿಯೂ ಈ ಬಗ್ಗೆ ಹೆಚ್ಚಿನ ವಿವರ ನೀಡುವುದಕ್ಕೆ ಪ್ರಯತ್ನಿಸಲಾಗುತ್ತದೆ.

ಹಿಂದಿನ ವರ್ಷ ನೋಬೆಲ್ ಬಹುಮಾನ ಪಡೆದಿದ್ದ ಡೆರೆನ್ ಅಸಿಮೊಗ್ಲು ದೇಶದ ಅಭಿವೃದ್ಧಿಯನ್ನು ಒಂದು ದೇಶದ ಸಂಸ್ಥೆಗಳಲ್ಲಿ ಕಾಣುತ್ತಾರೆ. ಒಂದು ದೇಶ ಹೆಚ್ಚು ಪ್ರಜಾಸತ್ತಾತ್ಮಕವಾದಷ್ಟೂ ಅಲ್ಲಿ ಅಭಿವೃದ್ಧಿ ಹೆಚ್ಚುತ್ತದೆ ಎಂದು ವಾದಿಸುತ್ತಾರೆ.

ಇನ್ನೊಂದು ತುದಿಯಲ್ಲಿ ಮಾರ್ಕ್ಸ್‌ವಾದಿ ಚಿಂತಕ ಹಾಬ್ಸವಾನ್ ಅನ್ವೇಷಣೆಗಳ ಕೊಡುಗೆಯ ಮಟ್ಟಿಗೆ ಮೊಕಿರ್ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಾನೆ. ಆದರೆ ಒಂದು ಸಮಾಜ ಈ ಅನ್ವೇಷಣೆಗಳನ್ನು ಯಾಕೆ ಬಯಸುತ್ತದೆ ಹಾಗು ಬಳಸುತ್ತದೆ ಅನ್ನುವುದಕ್ಕೆ ಸಂಬಂಧಿಸಿದಂತೆ ವಿರೋಧ ವ್ಯಕ್ತಪಡಿಸುತ್ತಾರೆ. ಹಾಬ್ಸವಾನ್ ದೃಷ್ಟಿಯಲ್ಲಿ ಈ ಅನ್ವೇಷಣೆಗಳು ತರುವ ಲಾಭ ಅದನ್ನು ಒಪ್ಪಿಕೊಳ್ಳುವುದಕ್ಕೆ ಕಾರಣ. "ಮೊಕಿರ್ ಅನ್ವೇಷಣೆಯ ಪೂರೈಕೆಯ ಮಗ್ಗಲನ್ನು ಕುರಿತಂತೆ ತುಂಬಾ ಚರ್ಚಿಸಿದ್ದಾರೆ. ಆದರೆ ಅದಕ್ಕೆ ಬೇಡಿಕೆಗೆ ಇರುವ ಕಾರಣಗಳನ್ನು ಕುರಿತು ಅಷ್ಟಾಗಿ ಚರ್ಚಿಸುವುದಿಲ್ಲ." ಎನ್ನುತ್ತಾರೆ. ತಂತ್ರಜ್ಞಾನವನ್ನು ಬಳಸಬೇಕೋ ಬೇಡವೋ, ಅದನ್ನು ಹೇಗೆ ಬಳಸಬೇಕು ಅನ್ನುವುದನ್ನು ನಿರ್ಧರಿಸುವ ಸಾಮಾಜಿಕ ಹಾಗೂ ಸಾಂಸ್ಥಿಕ ವ್ಯವಸ್ಥೆಯನ್ನು ಕುರಿತಂತೆ ಮೊಕಿರ್ ಚರ್ಚಿಸುವುದಿಲ್ಲ ಎಂದು ಟೀಕಿಸುತ್ತಾರೆ.

ಇವ ನಮ್ಮವ ಇವ ನಮ್ಮವ


ಭಾರತೀಯ ಅರ್ಥಶಾಸ್ತ್ರಜ್ಞರನ್ನು ಕುರಿತ ಮಾಲಿಕೆ

ಪಾಲಹಳ್ಳಿ ರಾಮಯ್ಯ ಬ್ರಹ್ಮಾನಂದ ಅವರ ಜನ್ಮಶತಾಬ್ಧಿಯ ವರ್ಷ ಇದು. ಈ ಸಂದರ್ಭದಲ್ಲಿ ಅವರ ಚಿಂತನೆಗಳನ್ನು, ವಿಚಾರಗಳನ್ನು ನೆನಪಿಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅವರ ಜೀವಿತಕಾಲದಲ್ಲಿ ಪ್ರಮುಖ ಸಮಕಾಲೀನ ಅರ್ಥಶಾಸ್ತ್ರಜ್ಞರು ಅವರ ಚಿಂತನೆಗಳನ್ನು ಮೆಚ್ಚಿಕೊಂಡಿದ್ದರು. ಆ ಬಗ್ಗೆ ಗಂಭೀರವಾಗಿ ಚರ್ಚಿಸಿದ್ದರು. ಆದರೂ ಅವರಿಗೆ ಸಿಕ್ಕ ಮಾನ್ಯತೆ ಕಡಿಮೆ ಎಂದೇ ಹೇಳಬಹುದು. ಅವರು ಸರ್ಕಾರದ ಅಧಿಕೃತ ಆರ್ಥಿಕ ಮಾದರಿಯನ್ನು ಬಲವಾಗಿ ಟೀಕಿಸಿದ್ದರಿಂದ ಸರ್ಕಾರದ ನಿರ್ಲಕ್ಷ್ಯಕ್ಕೂ ಗುರಿಯಾಗಿದ್ದರು. ಸಿಗಬಹುದಾಗಿದ್ದ ಗೌರವಗಳು ಸಿಗಲಿಲ್ಲ. ಈಗಂತೂ ನಾವು ಅವರನ್ನು, ಅವರ ಚಿಂತನೆಗಳನ್ನು, ವಿಚಾರಗಳನ್ನು ಪೂರ್ಣ ಮರೆತಿದ್ದೇವೆ. ಅವರ ಸೇವೆಗೆ ಒಂದು ನುಡಿನಮನ ಈ ಲೇಖನ.

ದೇಶೀಯ ಅಭಿವೃದ್ಧಿ ಮಾದರಿಗೆ ಶ್ರಮಿಸಿದ ಪಿಆರ್‌ಬಿ

ಪಾಲಹಳ್ಳಿ ರಾಮಯ್ಯ ಬ್ರಹ್ಮಾನಂದ ನಮ್ಮ ಕರ್ನಾಟಕದ ಹೆಮ್ಮೆಯ ಪುತ್ರರು. ಪ್ರಮುಖ ಅರ್ಥಶಾಸ್ತ್ರಜ್ಞರು. ಒಳ್ಳೆಯ ಸಂಘಟಕರು, ಗುರುಗಳು, ಸ್ವಾತಂತ್ರ ಹೋರಾಟಗಾರರು. ಹೀಗೆ ಏನೇನೋ ಆಗಿದ್ದರು. ಹುಟ್ಟಿದ್ದು ಸೆಪ್ಟೆಂಬರ್ ೨೬, ೧೯೨೬ರಲ್ಲಿ. ತಂದೆ ಪಿ. ಆರ್ ರಾಮಯ್ಯ ಸ್ವತಂತ್ರ ಹೋರಾಟಗಾರರು. 'ತಾಯಿನಾಡು' ಪತ್ರಿಕೆಯ ಸಂಪಾದಕರಾಗಿದ್ದವರು. ಪಿ. ಆರ್ ಬ್ರಹ್ಮಾನಂದ ಐಎಎಸ್ ಅಧಿಕಾರಿಯಾಗಬೇಕಿತ್ತು. ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಬಂದಿದ್ದರೂ ಕಣ್ಣಿನ ಸಮಸ್ಯೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಅದರಿಂದ ಅರ್ಥಶಾಸ್ತ್ರಕ್ಕೆ ಲಾಭವಾಯಿತು. ಮಹಾರಾಜಾ ಕಾಲೇಜಿನಲ್ಲಿ ಪದವಿ ಮುಗಿಸಿದರು. ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ಸಿ ಎನ್ ವಕೀಲ್ ಅವರ ಮಾರ್ಗದರ್ಶನದಲ್ಲಿ 'ದೇಶದ ವಿಭಜನೆಯ ಆರ್ಥಿಕ ಪರಿಣಾಮಗಳು' ಎಂಬ ವಿಷಯವಾಗಿ ಪಿಎಚ್‌ಡಿ ಮುಗಿಸಿದರು. ನಿವೃತ್ತರಾಗುವವರೆಗೆ ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲೇ ಉಳಿದರು.

ಇವರ ಅಧ್ಯಯನದ ಹರವು ತೀರಾ ವಿಶಾಲವಾಗಿತ್ತು. ಸುಮಾರು ೨೬ ಗ್ರಂಥಗಳನ್ನು ಹಾಗೂ ೯೬೭ ಲೇಖನಗಳನ್ನು ಬರೆದಿದ್ದಾರೆ. ಬಿಸಿನೆಸ್ ಲೈನ್ ಪತ್ರಿಕೆಗೆ ಕೊನೆಯವರೆಗೂ ಅಂಕಣ ಬರೆಯುತ್ತಲೇ ಇದ್ದರು. ಕ್ಲಾಸಿಕಲ್ ಅರ್ಥಶಾಸ್ತ್ರದ ನವನಿರೂಪಣೆ, ಅಭಿವೃದ್ಧಿ ಅರ್ಥಶಾಸ್ತ್ರ, ಹಣಕಾಸು ಅರ್ಥಶಾಸ್ತ್ರ, ಕಲ್ಯಾಣ ಅರ್ಥಶಾಸ್ತ್ರ, ಮೌಲ್ಯ ಸಿದ್ಧಾಂತ, ಆರ್ಥಿಕ ಚಿಂತನೆಯ ಇತಿಹಾಸ ಹೀಗೆ ಹಲವು ವಿಷಯಗಳ ಬಗ್ಗೆ ಇವರು ಬರೆದಿದ್ದಾರೆ. ಇವರು ಅಧ್ಯಯನಕ್ಕೆ ವಿದೇಶಕ್ಕೆ ಹೋಗಬೇಕೆಂದು ಬಯಸಿದವರಲ್ಲ. ಭಾರತದಲ್ಲಿ ಇದ್ದುಕೊಂಡೇ ಸಂಶೋಧನೆಯನ್ನು ಮಾಡಬಹುದು.



'ಹೊಸ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಬೇರೆ ದೇಶಕ್ಕೆ ಹೋಗಬೇಕಾಗಿಲ್ಲ' ಎಂಬ ಸಿ ವಿ ರಾಮನ್ ಅವರ ವಾದವನ್ನು ಇವರು ಸಂಪೂರ್ಣ ಒಪ್ಪಿಕೊಂಡಿದ್ದರು. ನಮ್ಮ ದೇಶಕ್ಕೆ ಬೇಕಾದ ಆರ್ಥಿಕ ಮಾದರಿಯನ್ನು ನಾವೇ ಕಂಡುಕೊಳ್ಳಬೇಕು ಅನ್ನುವುದು ಇವರ ನಂಬಿಕೆಯಾಗಿತ್ತು. ಭಾರತದ ಅರ್ಥಶಾಸ್ತ್ರಜ್ಞರು ಜಗತ್ತಿನ ಪ್ರಖ್ಯಾತ ಅರ್ಥಶಾಸ್ತ್ರಜ್ಞರ ಮಟ್ಟಕ್ಕೆ ಬೆಳೆಯಬೇಕು. ಔತ್ತಮ್ಯವನ್ನು ಸಾಧಿಸುವುದಕ್ಕೆ ಅವರು ಬೇರೆ ದೇಶಕ್ಕೆ ಹೋಗಿ ಅಧ್ಯಯನ ಮಾಡಬೇಕಾಗಿಲ್ಲ. ಇಲ್ಲೆ ಇದ್ದುಕೊಂಡು ಬೇಕಾದ ಜ್ಞಾನವನ್ನು ಸಂಪಾದಿಸಿಬಹುದು. ಅಮರ್ತ್ಯಸೇನ್ ಅವರಿಗೆ ನೋಬೆಲ್ ಬಂದಿದ್ದಕ್ಕೆ ಅವರು ತುಂಬಾ ಸಂತೋಷ ಪಟ್ಟಿದ್ದರು. ಆದರೆ ಸೇನ್ ಅಷ್ಟನ್ನೂ ಭಾರತದಲ್ಲಿದ್ದುಕೊಂಡೇ ಮಾಡಬಹುದಿತ್ತು ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಭಾರತದ ಬಡತನ, ನಿರುದ್ಯೋಗ ಎಲ್ಲವೂ ಅವರನ್ನು ಕಾಡಿದ್ದವು. ಮತ್ತು ಅವರ ಚಿಂತನೆಯನ್ನು ಪ್ರಭಾವಿಸಿದ್ದವು. ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕೆ ನಮ್ಮದೇ ಆದ ಅರ್ಥನೀತಿಯನ್ನು, ಸೈದ್ಧಾಂತಿಕ ಕ್ರಮವನ್ನು ಬೆಳೆಸಿಕೊಳ್ಳಬೇಕು. ಅಗತ್ಯವಾದ ಪರಿಕಲ್ಪನೆಗಳನ್ನು ಮಾತ್ರ ಹೊರಗಡೆಯಿಂದ ಎರವಲು ಪಡೆದುಕೊಳ್ಳಬೇಕು. ಅಧಿಕಾರದಲ್ಲಿರುವ ಅರ್ಥಶಾಸ್ತ್ರಜ್ಞರು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಥಶಾಸ್ತ್ರಗಳ ನಡುವೆ ವಿಚಾರ ವಿನಿಮಯ ನಡೆಯುತ್ತಿರಬೇಕು. ಆಗ ಭಾರತೀಯ ಎನ್ನಬಹುದಾದ ಒಂದು ಅರ್ಥಶಾಸ್ತ್ರ ಪದ್ಧತಿ ಬೆಳೆಯುತ್ತದೆ ಎಂದು ಭಾವಿಸಿದ್ದರು. ಇವರಿಗೆ ಗಾಂಧಿಯವರನ್ನು ಕುರಿತಂತೆ ಅಪಾರವಾದ ಗೌರವವಿತ್ತು. ಸರಳ ಬದುಕನ್ನು ಒಪ್ಪಿಕೊಂಡಿದ್ದರು. ಖಾದಿ ಧರಿಸುತ್ತಿದ್ದರು. ಆದರೆ ಅವರನ್ನು ಗಾಂಧಿವಾದಿಯೆಂದು ಹೇಳುವುದು ಕಷ್ಟ. ಗಾಂಧಿಯವರ ಹಲವು ವಿಚಾರಗಳಿಂದ ಪ್ರಭಾವಿತರಾಗಿದ್ದರು. ಆದರೆ ಗಾಂಧಿಯವರ ಚಿಂತನೆಯನ್ನು ಸಾರಾಸಗಟಾಗಿ ಒಪ್ಪಿಕೊಂಡಿರಲಿಲ್ಲ. ಅವರಿಗೆ ಗಾಂಧಿಯವರ ಸ್ವದೇಶಿ ಹಾಗೂ ಸ್ವಾವಲಂಬಿ ಗ್ರಾಮಗಳ ಕಲ್ಪನೆಯ ಬಗ್ಗೆ ಅನುಮಾನಗಳಿದ್ದವು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನಗರೀಕರಣವೂ ಅನಿವಾರ್ಯ ಅನ್ನುವುದನ್ನು ಒಪ್ಪಿಕೊಂಡಿದ್ದರು. ರಫ್ತು ಅವಶ್ಯಕ ಎನ್ನುವುದು ಅವರಿಗೆ ಸ್ಪಷ್ಟವಿತ್ತು. ಆದರೂ ಗಾಂಧಿಯವರ ಮೇಲಿನ ಗೌರವದಿಂದ ಅದನ್ನು ಬಹಿರಂಗವಾಗಿ ಟೀಕಿಸುತ್ತಿರಲಿಲ್ಲ. ಅವರಿಗೆ ಅರ್ಥಶಾಸ್ತ್ರಜ್ಞನಾಗಿ

ಮಾರ್ಕ್ಸ್ ಬಗ್ಗೆಯೂ ಗೌರವವಿತ್ತು. ಆದರೆ ಮಾರ್ಕ್ಸ್‌ನ ರಾಜಕೀಯ ಹಾಗೂ ಸಾಮಾಜಿಕ ತತ್ತ್ವಗಳ ಬಗ್ಗೆ ಸಾಕಷ್ಟು ತಕರಾರುಗಳಿದ್ದವು. ರಿಕಾರ್ಡೊ ಅವರ ಚಿಂತನೆಗಳ ಬಗ್ಗೆ ಒಲವಿತ್ತು. ಸ್ರಾಫ ಅವರ ಚಿಂತನೆಗಳಿಂದಲೂ ಪ್ರಭಾವಿತರಾಗಿದ್ದರು. ಹೀಗೆ ಹಲವು ಚಿಂತನೆಗಳು ಹಲವು ಸಂದರ್ಭಗಳಲ್ಲಿ ಹಲವು ಕಾರಣಕ್ಕೆ ಅವರ ಚಿಂತನೆಯನ್ನು ಪ್ರಭಾವಿಸಿವೆ.

ದಿಲೀಪ್ ಎಂ ನಾಚನೆ ಪಿಆರ್‌ಬಿಯವರ ಬರಹಗಳನ್ನು ನಾಲ್ಕು ನೆಲೆಗಳಲ್ಲಿ ಗಮನಿಸುತ್ತಾರೆ. ಮೊದಲನೆಯದಾಗಿ ಪಿಆರ್‌ಬಿಯವರು ಭಾರತೀಯ ಆರ್ಥಿಕತೆಗೆ ಅನ್ವಯವಾಗುವಂತಹ ಒಂದು ಸಮಷ್ಟಿ ಆರ್ಥಿಕ ಸಿದ್ಧಾಂತವನ್ನು (ಮ್ಯಾಕ್ರೊ ಎಕನಾಮಿಕ್ ಥಿಯರಿಯನ್ನು) ರೂಪಿಸಲು ಪ್ರಯತ್ನಿಸಿದ್ದರು. ಅಭಿವೃದ್ಧಿ ಹಾಗೂ ಹಣಕಾಸು ಅರ್ಥಶಾಸ್ತ್ರ ಕುರಿತ ಅವರ ಅಧ್ಯಯನಗಳೆಲ್ಲಾ ಈ ಗುಂಪಿಗೆ ಸೇರುತ್ತವೆ. ಎರಡನೆಯದಾಗಿ ಸಿದ್ಧಾಂತಗಳು ವಾಸ್ತವಾಂಶಗಳಿಗೆ ಹೊಂದಿಕೆಯಾಗುವಂತಿರಬೇಕು ಎಂದು ಅವರು ಭಾವಿಸಿದ್ದರು. ಹಾಗಾಗಿ ತಮ್ಮ ಸಿದ್ಧಾಂತವೂ ಸೇರಿದಂತೆ ಹಲವು ಸಿದ್ಧಾಂತಗಳನ್ನು ಗಣಿತೀಯ ಅರ್ಥಶಾಸ್ತ್ರದ ವಿಧಾನ ಬಳಸಿ ಒರೆಹಚ್ಚಿ ನೋಡುವ ಪ್ರಯತ್ನ ಮಾಡುತ್ತಿದ್ದರು. ಅ ಕುರಿತಂತೆ ಅವರ ಅನೇಕ ಬರಹಗಳು ಇವೆ. ಮೂರನೆಯದಾಗಿ ಅವರಿಗೆ ಭಾರತದಲ್ಲಿನ ಆರ್ಥಿಕ ಚಿಂತನೆಯ ಇತಿಹಾಸವನ್ನು ಕುರಿತಂತೆ ವಿಶೇಷ ಆಸಕ್ತಿ ಇತ್ತು. ಹಾಗಾಗಿ ದಾದಾಭಾಯಿ ನವರೋಜಿ, ಮಹದೇವ ಗೋವಿಂದ ರಾನಡೆಯವರಂತಹವರ ಚಿಂತನೆಗಳು ರೂಪುಗೊಂಡ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಅಂತಿಮವಾಗಿ ಅವರು ವಾಸ್ತವಕ್ಕೆ ಬೆನ್ನು ಮಾಡಿಕೊಂಡು ಕೇವಲ ಓದು ಬರಹದಲ್ಲಿ ತೊಡಗಿಕೊಂಡಿದ್ದ ಅರ್ಥಶಾಸ್ತ್ರಜ್ಞರಲ್ಲ. ರಾಷ್ಟ್ರದಲ್ಲಿ ಯಾವುದೇ ಮಹತ್ತರ ಸಮಸ್ಯೆ ಕಾಣಿಸಿಕೊಂಡಾಗಲೂ ತಮ್ಮ ಅಭಿಪ್ರಾಯವನ್ನು ನಿರ್ಭಿಡೆಯಿಂದ ವ್ಯಕ್ತಪಡಿಸುತ್ತಿದ್ದರು. ಹಣದುಬ್ಬರ, ಐಎಂಎಫ್ ಸಾಲ ಇತ್ಯಾದಿ ವಿಷಯಕ್ಕೆ ಸಂಬಂಧಿಸಿದಂತೆ ಅವರು ಬರೆದ ಲೇಖನಗಳೆಲ್ಲಾ ಸಮಕಾಲೀನ ವಿಷಯಗಳಿಗೆ ಪ್ರತಿಕ್ರಿಯೆಯಾಗಿ ಬಂದಂತಹ ಬರಹಗಳು.

ಸ್ವತಂತ್ರ ಭಾರತಕ್ಕೆ ಆರ್ಥಿಕ ಯೋಜನೆಯ ಹುಡುಕಾಟ
ದೇಶ ಸ್ವಾತಂತ್ರಗೊಂಡ ಮೇಲೆ ಬ್ರಿಟಿಷರ ಆಳ್ವಿಕೆಯಲ್ಲಿ ಛಿದ್ರವಾಗಿದ್ದ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಬೇಕಾಗಿತ್ತು. ಅದಕ್ಕಾಗಿ ಯೋಜನೆಗಳನ್ನು ರೂಪಿಸಬೇಕೆನ್ನುವ ಸರ್ಕಾರದ ಅಭಿಪ್ರಾಯದ ಬಗ್ಗೆ ಪ್ರಾರಂಭದಲ್ಲಿ ಸಾಕಷ್ಟು ಚರ್ಚೆಗಳು, ವಿವಾದಗಳು ನಡೆದಿದ್ದವು. ಕ್ರಮೇಣ ೫೦ರ ದಶಕದ ಪ್ರಾರಂಭದ ವೇಳೆಗೆ ಯೋಜನೆ ಬೇಕೋ ಬೇಡವೋ ಅನ್ನುವ ಚರ್ಚೆ ತಣ್ಣಗಾಗಿತ್ತು. ಭಾರತದಲ್ಲಿ ಬಹುತೇಕ ಎಲ್ಲರೂ ಯೋಜನೆಯ ಬೆಂಬಲಿಗರಾಗಿಬಿಟ್ಟಿದ್ದರು. ಚರ್ಚೆಯ ದಿಕ್ಕೂ ಬದಲಾಯಿತು. ಬಡತನ, ನಿರುದ್ಯೋಗ ಹಾಗೂ ಅಸಮಾನತೆ ವಿಪರೀತವಿರುವ ಭಾರತದಲ್ಲಿ ಎಂತಹ ಯೋಜನೆಯನ್ನು ಹಮ್ಮಿಕೊಳ್ಳಬೇಕೆಂಬುದನ್ನು ಕುರಿತಂತೆ ಅರ್ಥಶಾಸ್ತ್ರಜ್ಞರು ಚರ್ಚೆ ನಡೆಸುತ್ತಿದ್ದರು. ವಿ.ಕೆ.ಆರ್.ವಿ.ರಾವ್ ಅವರು ನಮ್ಮಲ್ಲಿ ಅವಶ್ಯಕತೆಗೆ ಬೇಕಾದಷ್ಟು ಪೂರೈಕೆ ಇಲ್ಲ. ಹಾಗಾಗಿ ಕೇನ್ಸ್ ಸಿದ್ಧಾಂತವನ್ನು ಅನ್ವಯಿಸುವುದಕ್ಕೆ ಸಾಧ್ಯವಿಲ್ಲ ಎಂದು ಪ್ರತಿಪಾದಿಸುತ್ತಿದ್ದರು. ನಮ್ಮ ದೇಶಕ್ಕೆ ಹೊಂದಿಕೆಯಾಗುವ ಹಾದಿಗಾಗಿ ಹುಡುಕಾಟ ನಡೆದಿತ್ತು. ಹಲವು ಪರ್ಯಾಯ ದಾರಿಗಳನ್ನು ಸೂಚಿಸಲಾಗಿತ್ತು. ಪಿಬಿಆರ್ ಹಾಗೂ ವಕೀಲ್ ತಮ್ಮ ವೇತನ-ಉತ್ಪನ್ನ (ವೇಜ್-ಗೂಡ್ಸ್ ಮಾಡೆಲ್) ಮಾದರಿಯನ್ನು ಮುಂದಿಟ್ಟರು. ಮಹಾಲನೋಬಿಸ್ ತಮ್ಮದೇ ಆದ ಮಾರ್ಗವನ್ನು ಪ್ರತಿಪಾದಿಸಿದ್ದರು. ಅಮರ್ತ್ಯ ಸೇನ್, ಭಗವತಿ, ರಾಜ್ ಹೀಗೆ ಹಲವರು ಈ ಕುರಿತ ಚರ್ಚೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ವೇತನ-ಉತ್ಪನ್ನ ಮಾದರಿ

ಪಿಬಿಆರ್ ಇದನ್ನು ೧೯೫೦ರಲ್ಲಿ ಅವರು ಬ್ರೆಜಿಲ್‌ನಲ್ಲಿ ನಡೆದ ಅಂತರಾಷ್ಟ್ರೀಯ ದುಂಡುಮೇಜಿನ ಸಮ್ಮೇಳನದಲ್ಲಿ ಮಂಡಿಸಿದ್ದರು. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಗೆ ಉಳಿತಾಯದ ಕೊರತೆಯಾಗಲಿ ಅಥವಾ ಬಂಡವಾಳದ ಕೊರತೆಯಾಗಲಿ ಕಾರಣವಲ್ಲ. ವೇತನ-ಉತ್ಪನ್ನಗಳು ಅಂದರೆ ಶ್ರಮಿಕರು ಬಳಸುವ ಕೃಷಿ ಪದಾರ್ಥಗಳು, ಬಟ್ಟೆ, ಅಗ್ಗದ ಮನೆಗಳು ಹಾಗೂ ಕೃಷಿ ಸಲಕರಣೆಗಳು ಇತ್ಯಾದಿ ಸರಕುಗಳ ಕೊರತೆ ರಾಷ್ಟ್ರದ ಅಭಿವೃದ್ಧಿಗೆ ಅಡ್ಡಿಯಾಗಿದೆ. ಉತ್ಪಾದನೆಗೆ ಕೇವಲ ಯಂತ್ರಗಳು ಹಾಗೂ ಬಂಡವಾಳ ಇದ್ದರೆ ಸಾಲದು ಕಾರ್ಮಿಕರು ಬದುಕುವುದಕ್ಕೆ, ದುಡಿಯುವುದಕ್ಕೆ ವೇತನ ಉತ್ಪನ್ನಗಳು ಬೇಕಾಗುತ್ತವೆ. ಅವುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದು ವಾದಿಸಿದ್ದರು. ವೇತನ ಉತ್ಪನ್ನಗಳ ಕೊರತೆಗೆ ಸಂಪನ್ಮೂಲದ ಕೊರತೆ ಕಾರಣವಾಗಬಾರದು ಎಂದು ವಾದಿಸುತ್ತಿದ್ದರು. ಅದೇ ಕಾರಣಕ್ಕಾಗಿಯೇ ಅವರು "ಕೊರತೆಯ ಆರ್ಥಿಕತೆಗಾಗಿಯೇ ಯೋಜನೆ"ಯನ್ನು ಮುಂದಿಟ್ಟರು. ವೇತನ-ಉತ್ಪನ್ನಗಳ ಕೊರತೆಯನ್ನು ನೀಗಿಸಬೇಕು. ವೇತನ-ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಗಮನಕೊಡಬೇಕು. ಅದರ ಉತ್ಪಾದನೆಗೆ ನಮ್ಮಲ್ಲಿ ಹೇರಳವಾಗಿ ಲಭ್ಯವಿರುವ ಶ್ರಮಶಕ್ತಿಯನ್ನು ಬಳಸಿಕೊಳ್ಳಬೇಕು. ಆ ಮೂಲಕ ಕಾರ್ಮಿಕರಿಗೆ ಬದುಕಲು ಅವಶ್ಯಕವಾದ ವೇತನ ಉತ್ಪನ್ನಗಳು ಅವಶ್ಯಕವಾದಷ್ಟು ಸಿಗುವಂತಾಗಬೇಕು. ಈ ಪ್ರಕ್ರಿಯೆಯಿಂದ ನಮ್ಮ ಆರ್ಥಿಕತೆ ಕಡಿಮೆ ಉತ್ಪಾದಕತೆಯ ಕೃಷಿಯಿಂದ ಹೆಚ್ಚಿನ ಉತ್ಪಾದಕತೆಯ ಕೈಗಾರಿಕೆಯ ಕಡೆಗೆ ಚಲಿಸುವುದಕ್ಕೆ ಸಾಧ್ಯವಾಗುತ್ತದೆ. ಅವಶ್ಯಕ ಸರಕುಗಳು ಅವಶ್ಯಕ ಪ್ರಮಾಣದಲ್ಲಿ ದೊರೆಯದೇ ಹೋದರೆ ಅವುಗಳ ಬೆಲೆ ಹೆಚ್ಚುತ್ತದೆ. ವೇತನ ಉತ್ಪನ್ನಗಳ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಕ್ರಮೇಣ ಆರ್ಥಿಕತೆ ಸ್ಥಗಿತತೆಯ ಕಡೆಗೆ ಸಾಗುತ್ತದೆ. ಈ ಅಪಾಯದಿಂದ ತಪ್ಪಿಸಿಕೊಳ್ಳಬೇಕಾದರೆ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳಿಗೆ ಆದ್ಯತೆ ನೀಡಬೇಕೆಂದು ಪಿಬಿಆರ್ ವಾದಿಸಿದರು. ಇರುವ ಮಿತವಾದ ಸಂಪನ್ಮೂಲವನ್ನು ಸಣ್ಣ ಹಾಗೂ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳಿಗೆ ಹೆಚ್ಚಾಗಿ ಬಳಸಬೇಕಾದ್ದರಿಂದ ಬೃಹತ್ ಕೈಗಾರಿಕೆಗಳಿಗೆ ಆದ್ಯತೆ ಕೊಡುವುದನ್ನು ವಿರೋಧಿಸಿದರು.

ಕೇವಲ ವೇತನ ಉತ್ಪನ್ನಗಳ ಉತ್ಪಾದನೆ ಹೆಚ್ಚಿದರೆ ಸಾಲದು. ಅದನ್ನು ಮೀರಿ ಜನಸಂಖ್ಯೆ ಬೆಳೆದರೆ ಅವಶ್ಯಕ ಪದಾರ್ಥಗಳ ಕೊರತೆ ಮುಂದುವರಿಯುತ್ತದೆ. ಹಾಗಾಗಿ ಒಟ್ಟೊಟ್ಟಿಗೆ ಜನಸಂಖ್ಯೆಯನ್ನು ನಿಯಂತ್ರಿಸಬೇಕು. ಆಗಷ್ಟೆ ವೇತನ ಉತ್ಪನ್ನಗಳ ಮೇಲಿನ ಒತ್ತಡ ಕಡಿಮೆಯಾಗುತ್ತಿದೆ. ಮತ್ತು ಆರ್ಥಿಕ ಬೆಳವಣಿಗೆಯ ವೇಗವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ ಅನ್ನುವುದು ಅವರ ವಾದವಾಗಿತ್ತು. ಪಿಬಿಆರ್ ತಮ್ಮ 'ಪ್ಲಾನಿಂಗ್ ಫಾರ್ ಎನ್ ಎಕ್ಸ್‌ಪ್ಯಾಂಡಿಂಗ್ ಎಕಾನಮಿ' ಕೃತಿಯಲ್ಲಿ ವೇತನ-ಉತ್ಪನ್ನಗಳಿಗೆ ಸಂಬಂಧಿಸಿದಂತೆ ವಿವರವಾಗಿ ಚರ್ಚಿಸಿದ್ದಾರೆ. ಅವರು ಸೂಚಿಸುವ ಬೆಳವಣಿಗೆಯ ಮಾದರಿಯಲ್ಲಿ ಮೊದಲು ಕೃಷಿಗೆ ಆದ್ಯತೆ ನಿಡಬೇಕು. ಜೊತೆಗೆ ಕೃಷಿಗೆ ಪೂರಕವಾದ ಕೀಟನಾಶಕ, ಸರಳ ಹತಾರಗಳು ಇತ್ಯಾದಿಗಳಿಗೆ ಮತ್ತು ಬಟ್ಟೆ ಮುಂತಾದ ಅವಶ್ಯಕ ವೇತನ ಉತ್ಪನ್ನಗಳ ತಯಾರಿಕೆಗೆ ಆದ್ಯತೆ ನೀಡಬೇಕು. ಪ್ರಾರಂಭದಲ್ಲಿ ವೇತನ-ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಬೇಕಾಗಬಹುದು. ಆದರೆ ಇದು ತಾಳಿಕೆಯ ವಿಧಾನವಲ್ಲ. ನಮ್ಮಲ್ಲೇ ಉತ್ಪಾದಿಸುವುದು ನಮ್ಮ ಆದ್ಯತೆಯಾಗಬೇಕು. ಅವಶ್ಯಕ ಸರಕುಗಳ ಉತ್ಪಾದನೆಯ ಹೆಚ್ಚಳದಿಂದ ಆರ್ಥಿಕತೆಯ ಮೇಲೆ ಗುಣಾತ್ಮಕ ಪರಿಣಾಮ ಆಗುತ್ತದೆ. ಅದು ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುತ್ತದೆ. ಅನುಭೋಗ ಹೆಚ್ಚಾದಂತೆ ಬೆಳವಣಿಗೆಯ ದರವೂ ಹೆಚ್ಚುತ್ತಾ ಹೋಗುತ್ತದೆ. ಆದರೆ ರಾಷ್ಟ್ರದ ಆದಾಯ ಹೆಚ್ಚಿದಂತೆ ಅದರಷ್ಟಕ್ಕೆ ಬಡತನ ಕಮ್ಮಿಯಾಗುವುದಿಲ್ಲ ಹಾಗೂ ಅಸಮಾನತೆ



ಹೋಗಿಬಿಡುವುದಿಲ್ಲ ಅನ್ನುವುದು ಅವರಿಗೆ ಸ್ಪಷ್ಟವಿತ್ತು. ಶ್ರೀಮಂತರ ಆದಾಯಕ್ಕೆ ಮಿತಿ ಹೇರಬೇಕು. ಜೊತೆಗೆ ವೇತನ-ಉತ್ಪನ್ನಗಳ ಉತ್ಪಾದಕತೆಯನ್ನು ಹೆಚ್ಚಿಸಬೇಕು. ಆಗಷ್ಟೆ ಬಡತನ ಪರಿಹರಿಸುವುದಕ್ಕೆ ಸಾಧ್ಯವೆಂದು ಹೇಳುತ್ತಿದ್ದರು.

ಮಹಾಲನೊಬಿಸ್ ಮಾದರಿ

ಇದಕ್ಕೆ ತದ್ವಿರುದ್ಧವಾಗಿ ಮಹಾಲನೊಬಿಸ್ ಬೃಹತ್ ಹಾಗೂ ಬಂಡವಾಳ ಕೇಂದ್ರಿತ ಕೈಗಾರಿಕಾ ಮಾದರಿಯನ್ನು ಪ್ರತಿಪಾದಿಸುತ್ತಿದ್ದರು. ಇವರು ಬೃಹತ್ ಯಂತ್ರಗಳನ್ನು ಆಧರಿಸಿದ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಆದ್ಯತೆ ನೀಡಿದ್ದರು. ಮೂಲಭೂತ ಅವಶ್ಯಕ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಬದಲು ದೇಶದಲ್ಲೇ ಉತ್ಪಾದಿಸುವುದು ಅವರ ಯೋಜನೆಯ ಗುರಿಯಾಗಿತ್ತು. ಆ ಮೂಲಕ ರಾಷ್ಟ್ರೀಯ ವರಮಾನದ ಬೆಳವಣಿಗೆಯನ್ನು ತ್ವರಿತಗೊಳಿಸುವ ಮತ್ತು ಅನುಭೋಗವನ್ನು ಹೆಚ್ಚಿಸುವ ಯತ್ನ ಅವರದ್ದಾಗಿತ್ತು. ಪ್ರಧಾನಿ ನೆಹರೂ ಅವರು ಎರಡನೆಯ ಪಂಚವಾರ್ಷಿಕ ಯೋಜನೆಗೆ ಮಹಾಲನೊಬಿಸ್ ಅವರನ್ನು ಬೆಳವಣಿಗೆಯ ಮಾದರಿಯನ್ನು ರೂಪಿಸುವುದಕ್ಕೆ ಕೇಳಿದ್ದರು. ೧೯೫೪ರಿಂದ ಕಲ್ಕತ್ತೆಯ ಇಂಡಿಯನ್ ಸ್ಟಾಟಿಸ್ಟಿಕಲ್ ಇನ್ಸ್ಟಿಟ್ಯೂಟ್‌ನಲ್ಲಿ ಯೋಜನೆಯ ಮಾದರಿ ಸಿದ್ಧವಾಗುತ್ತಿತ್ತು. ಸಹಜವಾಗಿಯೇ ಈ ಯೋಜನೆಯಲ್ಲಿ ಬೃಹತ್ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಸಂಪನ್ಮೂಲವನ್ನು ಮೀಸಲಿಡಲಾಗಿತ್ತು. ಕೃಷಿಯೂ ಸೇರಿದಂತೆ ಅನುಭೋಗದ ಸರಕುಗಳ ತಯಾರಿಕೆಗೆ ಸಂಪನ್ಮೂಲಗಳನ್ನು ಮಿತಗೊಳಿಸಲಾಗಿತ್ತು. ಮುಂದಿನ ಯೋಜನೆಗಳಲ್ಲಿ ಅನುಭೋಗದ ವಸ್ತುಗಳ ಕಡೆಗೆ ಗಮನಕೊಡಬಹುದೆಂಬ ಆಲೋಚನೆ ಅವರದಾಗಿತ್ತು. ಸ್ವಾತಂತ್ರ ಬಂದ ಹೊಸದರಲ್ಲಿ ಖಾಸಗಿ ಕ್ಷೇತ್ರ ಅಷ್ಟೊಂದು ಪ್ರಬಲವಾಗಿರಲಿಲ್ಲ. ಅವುಗಳಿಗೆ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡುವ ಸಾಮರ್ಥ್ಯವಿರಲಿಲ್ಲ. ಹಾಗಾಗಿ ಮಹಾಲನೋಬಿಸ್ ಯೋಜಿಸಿದ್ದ ಮಾದರಿಗೆ ಸರ್ಕಾರವೇ ಬಂಡವಾಳ ಕ್ರೋಢೀಕರಿಸಬೇಕಾಗಿತ್ತು. ಉಕ್ಕು ಹಾಗೂ ಇತರ ಬೃಹತ್ ಕೈಗಾರಿಕೆಗಳಿಗೆ ಅಪಾರ ಬಂಡವಾಳ ಬೇಕಿತ್ತು. ಈ ಮೂಲ ಕೈಗಾರಿಕೆಗಳು ಇತರ ಯಂತ್ರಗಳ ತಯಾರಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅವು ಇಲ್ಲದೆ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲ. ಸಂಪನ್ಮೂಲಗಳು ಸೀಮಿತವಾಗಿದ್ದರಿಂದ ಭಾರಿ ಕೈಗಾರಿಕೆಗೆ ಆದ್ಯತೆ ನೀಡಬೇಕೆಂದು ಅವರು ಸಲಹೆ ನೀಡಿದರು. ಉಕ್ಕು, ವಿದ್ಯುಚ್ಛಕ್ತಿ, ಸಾರಿಗೆ ಮತ್ತು ಸಂಪರ್ಕ ಮುಂತಾದವುಗಳ ಬೆಳವಣಿಗೆಯಿಂದ ಆರ್ಥಿಕತೆಯಲ್ಲಿ ಕ್ರಮೇಣ ಉತ್ಪಾದನೆ ಹೆಚ್ಚುತ್ತದೆ. ಆರ್ಥಿಕತೆಯ ಬೆಳವಣಿಗೆ ಹೆಚ್ಚು ತೀವ್ರವಾಗುತ್ತದೆ. ಬಂಡವಾಳದ ಕ್ರೋಢೀಕರಣ ಹಾಗೂ ತಾಂತ್ರಿಕ ಅಭಿವೃದ್ಧಿಯನ್ನು ಸಾಧಿಸುವ ಮೂಲಕ ಸರ್ಕಾರ ಆರ್ಥಿಕ ಬೆಳವಣಿಗೆಯ ವೇಗ ಹಾಗೂ ದಿಕ್ಕನ್ನು ನಿರ್ಧರಿಸಬಹುದು ಎನ್ನುವುದು ಅವರ ವಾದವಾಗಿತ್ತು.

ವಕೀಲ್-ಬ್ರಹ್ಮಾನಂದ ಅವರ ಹಾದಿ ಪೂರ್ಣ ಭಿನ್ನ. ಅವರದು ವಿಕೇಂದ್ರೀಕೃತ ಮಾದರಿ. ಭಾರತದಲ್ಲಿ ಹಣಕಾಸು ಬಂಡವಾಳದ ಕೊರತೆ ಇತ್ತು. ಆದರೆ ಅಗ್ಗದ ಮಾನವ ಸಂಪನ್ಮೂಲ ಧಾರಾಳವಾಗಿ ಸಿಗುತ್ತಿತ್ತು. ಹಾಗಾಗಿ ಹಣದುಬ್ಬರಕ್ಕೆ ಅವಕಾಶ ಮಾಡಿಕೊಡದೆ ಹೂಡಿಕೆಯನ್ನು ಹೆಚ್ಚಿಸುವುದಕ್ಕೆ ಇದ್ದ ದಾರಿಯೆಂದರೆ ಬಹುತೇಕ ಜನ ಬಳಸುವ ಸರಕುಗಳನ್ನು ತಯಾರಿಸುವುದು. ಅಂದರೆ ಅನುಭೋಗದ ಸರಕುಗಳನ್ನು ತಯಾರಿಸುವ ಕೃಷಿ ಹಾಗೂ ಸಣ್ಣ ಕೈಗಾರಿಕೆಗಳ ಮೇಲೆ ಹೂಡಿಕೆ ಮಾಡುವುದು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಇರುವ ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಉದ್ಯೋಗ ಸಿಕ್ಕವರು ಈ ಸರಕುಗಳನ್ನು ಕೊಳ್ಳುತ್ತಾರೆ. ಆ ಮೂಲಕ ಬೇಡಿಕೆಯನ್ನು ಸೃಷ್ಟಿಸುತ್ತಾರೆ.

ವೇತನ-ಉತ್ಪನ್ನ ಬೆಳವಣಿಗೆಯ ಮಾದರಿ ಅನುಭೋಗದ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಆ ಮೂಲಕ ಜನತೆಯ ಯೋಗಕ್ಷೇಮವನ್ನು ಹೆಚ್ಚಿಸುತ್ತದೆ. ಜೊತೆಗೆ ಭಾರತದ ಆರ್ಥಿಕತೆಯ ಬೆಳವಣಿಗೆಯನ್ನು ಹೆಚ್ಚು ತ್ವರಿತಗೊಳಿಸುತ್ತದೆ. ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಅದು ಬಂಡವಾಳಕ್ಕಿಂತ ಹೇರಳವಾಗಿ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳುವುದಕ್ಕೆ ಅದು ಆದ್ಯತೆ ನೀಡಿತ್ತು. ಹಾಗಾಗಿ ಪಿಬಿಆರ್ ಮಾನವ ಶ್ರಮವನ್ನು ಹೆಚ್ಚಾಗಿ ಬೇಡುವ ಕೃಷಿ ಹಾಗೂ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಆದ್ಯತೆ ನೀಡಿದರು. ಸಹಜವಾಗಿಯೇ ಮಹಾಲನೋಬಿಸ್ ರೂಪಿಸಿದ ಎರಡನೆಯ ಪಂಚವಾರ್ಷಿಕ ಯೋಜನೆ ಪಿಬಿಆರ್ ಅವರಿಗೆ ರುಚಿಸಲಿಲ್ಲ. ಅದನ್ನು ಕಟುವಾಗಿಯೇ ಟೀಕಿಸಿದರು. ಇಡೀ ಯೋಜನೆಯಲ್ಲಿ ಕೃಷಿ ಮತ್ತಿತರ ಸಂಬಂಧಿತ ಉತ್ಪನ್ನಗಳ ಬೆಳವಣಿಗೆಯನ್ನು ಅಸಡ್ಡೆ ಮಾಡಲಾಗಿದೆ. ಬೃಹತ್ ಕೈಗಾರಿಕೀಕರಣಕ್ಕೆ ಒತ್ತು ಕೊಡಲಾಗಿದೆ. ಈ ಪ್ರಕ್ರಿಯೆಯಲ್ಲಿ ಸಂಪನ್ಮೂಲಗಳು ಕೃಷಿ ಕ್ಷೇತ್ರದಿಂದ ಆಧುನಿಕ ಕೈಗಾರಿಕಾ ಕ್ಷೇತ್ರಕ್ಕೆ ವರ್ಗಾಯಿಸಲ್ಪಡುತ್ತದೆ. ಅದರಿಂದ ವೇತನ-ಉತ್ಪನ್ನಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಅದರ ಪರಿಣಾಮವಾಗಿ ಉದ್ಯೋಗವಕಾಶಗಳು ಕಮ್ಮಿಯಾಗುತ್ತದೆ. ಇದರಿಂದ ಅನುಭೋಗ ವಸ್ತುಗಳನ್ನು ತಯಾರಿಸುತ್ತಿದ್ದ ಸಾಂಪ್ರದಾಯಿಕ ಕೈಗಾರಿಕೆಗಳೂ ಸೊರಗುತ್ತವೆ. ಅವಶ್ಯಕ ಸರಕುಗಳಿಗೆ ಬೇಡಿಕೆ ಹೆಚ್ಚಿರುತ್ತದೆ. ಆದರೆ ಅದರ ಪೂರೈಕೆ ಆ ಪ್ರಮಾಣದಲ್ಲಿ ಹೆಚ್ಚುವುದಿಲ್ಲ. ಹಾಗಾಗಿ ಅದನ್ನು



ಆಮದು ಮಾಡಿಕೊಳ್ಳಬೇಕಾಗುತ್ತದೆ. ಆಮದಿನ ಖರ್ಚನ್ನು ಭರಿಸಲು ವಿದೇಶಿ ವಿನಿಮಯ ಬೇಕಾಗುತ್ತದೆ. ರಫ್ತು ಆ ಪ್ರಮಾಣದಲ್ಲಿ ಹೆಚ್ಚುವುದಿಲ್ಲವಾದ್ದರಿಂದ ವಿದೇಶಿ ವಿನಿಮಯದ ಕೊರತೆ ಬೀಳುತ್ತದೆ. ಪರಿಣಾಮವಾಗಿ ಪಾವತಿ ಶಿಲ್ಕಿನ ಕೊರತೆಯುಂಟಾಗುತ್ತದೆ. ಅದನ್ನು ಸರಿಪಡಿಸುವುದಕ್ಕೆ ಹಣದ ಮೌಲ್ಯವನ್ನು ಇಳಿಸಬೇಕಾಗುತ್ತದೆ. ಆಗ ಹಣದುಬ್ಬರ ಹೆಚ್ಚುತ್ತದೆ. ಬಡವರ ಸ್ಥಿತಿ ಇನ್ನಷ್ಟು ಹದಗೆಡುತ್ತದೆ ಎಂದು ಅವರು ವಾದಿಸಿದ್ದರು. ಅಷ್ಟೇ ಅಲ್ಲ ಅವರ ದೃಷ್ಟಿಯಲ್ಲಿ ಇದರ ಪರಿಣಾಮ ರಾಜಕೀಯ ವ್ಯವಸ್ಥೆಯ ಮೇಲೂ ಆಗುತ್ತದೆ. ಇಂತಹ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದಕ್ಕೆ "ಹೆಚ್ಚೆಚ್ಚು ನಿರಂಕುಶಾಧಿಕಾರದ ನಿರ್ಬಂಧಗಳು ಮತ್ತು ನಿಯಂತ್ರಣಗಳು ಅನಿವಾರ್ಯವಾಗುತ್ತವೆ. ಅದರ ಪ್ರಭಾವ ರಾಜಕೀಯ ವ್ಯವಸ್ಥೆಯ ಮೇಲೂ ಆಗುತ್ತದೆ. ಅದರಿಂದ ಸೋವಿಯತ್ ಮಾದರಿಯ ನಿರಂಕುಶ ಆಳ್ವಿಕೆ ಬರುವ ಸಾಧ್ಯತೆ ಇದೆ. ಅಂತಿಮವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬುಡ ಶಿಥಿಲವಾಗುತ್ತದೆ" ಅನ್ನುವ ಆತಂಕವನ್ನು ಅವರು ವ್ಯಕ್ತಪಡಿಸಿದ್ದರು.

ಅದಕ್ಕೆ ಪರ್ಯಾಯವಾಗಿ ಅವರು ವಿಕೇಂದ್ರೀಕೃತ ಮಾದರಿಯನ್ನು ಮುಂದಿಟ್ಟರು. ಪ್ರತಿದಿನ ಬೇಡಿಕೆ ಇರುವ ವೇತನ-ಉತ್ಪನ್ನಗಳನ್ನು ತಯಾರಿಸುವ ಕೃಷಿ, ಸಣ್ಣ ಮತ್ತು ಗೃಹೋಪಯೋಗಿ ಕೈಗಾರಿಕೆಗಳಿಗೆ ಮತ್ತು ಸೇವೆಗಳಿಗೆ ಆದ್ಯತೆಯನ್ನು ನೀಡಬೇಕೆಂದು ವಾದಿಸಿದರು. ಇಂತಹ ವಸ್ತುಗಳ ಉತ್ಪಾದನೆ ದೈನಂದಿನ ಬೇಡಿಕೆಗೆ ತಕ್ಕಂತೆ ಇರುವುದರಿಂದ ಬೆಲೆಗಳು ಏರುವ ಸಾಧ್ಯತೆ ಕಡಿಮೆ. ಇವು ಶ್ರಮ ಪ್ರಧಾನವಾದ ಉದ್ದಿಮೆಗಳಾದ್ದರಿಂದ ಉದ್ಯೋಗವನ್ನು ಸೃಷ್ಟಿಸುತ್ತವೆ, ಆ ಮೂಲಕ ಬಡತನ ಹಾಗೂ ನಿರುದ್ಯೋಗದ ಸಮಸ್ಯೆಗಳಿಗೆ ಪರಿಹಾರವಾಗುತ್ತದೆ ಎಂದು ಭಾವಿಸಿದರು. ಇದು ಮಹಾಲನೋಬಿಸ್ ಮಾದರಿಗೆ ವ್ಯತಿರಿಕ್ತವಾದ ಮಾದರಿಯಾಗಿತ್ತು. ಸ್ಥೂಲವಾಗಿ ಇವರ ವಾದವನ್ನು ಕೆಳಕಂಡಂತೆ ಸಂಗ್ರಹಿಸಬಹುದು.

ವೇತನ ಉತ್ಪನ್ನಗಳ ಮಾದರಿ:

೧. ವೇತನ-ಉತ್ಪನ್ನಗಳ ತಯಾರಿಕೆಯನ್ನು ಗರಿಷ್ಠಗೊಳಿಸುತ್ತದೆ. ಆ ಮೂಲಕ ಗರಿಷ್ಠ ಉದ್ಯೋಗಾವಕಾಶವನ್ನು ಕಲ್ಪಿಸುತ್ತದೆ. ಬೇಡಿಕೆ ಹಾಗೂ ಉತ್ಪಾದನೆಯ ನಡುವಿನ ಸಮತೋಲನಕ್ಕೆ ನಿಗಾ ಕೊಡುವುದರಿಂದ ಹಣದುಬ್ಬರದ ಸಾಧ್ಯತೆ ಕಡಿಮೆ. ಈ ಬೆಳವಣಿಗೆಯ ಮಾದರಿ ಪ್ರಾದೇಶಿಕ ವೈವಿಧ್ಯತೆಗೆ ಗಮನಕೊಡುತ್ತದೆ.

೨. ಸಮಾಜಕ್ಕೆ ಅವಶ್ಯಕವಾದ 'ವೇತನ-ಸರಕುಗಳ' ಉತ್ಪಾದನೆಗೆ ಬೇಕಾದ ಬಂಡವಾಳ ಉತ್ಪನ್ನಗಳ ತಯಾರಿಕೆಗೆ ಆದ್ಯತೆ ನೀಡಲಾಗುತ್ತದೆ.

೩. ಎಲ್ಲಾ ರೀತಿಯ ನಿರುದ್ಯೋಗಿಗಳನ್ನು ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಸುವುದಕ್ಕೆ ವೇತನ-ಉತ್ಪನ್ನಗಳ ಉತ್ಪಾದನೆಯ ದರ ಜನಸಂಖ್ಯೆಯ ಬೆಳವಣಿಗೆಯ ದರಕ್ಕಿಂತಲೂ ಹೆಚ್ಚಿಗೆ ಇರುವಂತೆ ನೋಡಿಕೊಳ್ಳಬೇಕು.

೪. ಇಂತಹ ಬೆಳವಣಿಗೆಯಿಂದ ಸೃಷ್ಟಿಯಾಗುವ ಉಳಿತಾಯವನ್ನು ಆರ್ಥಿಕತೆಯ ಬೆಳವಣಿಗೆಯ ದರವನ್ನು ಹೆಚ್ಚಿಸಲು ಪರಿಣಾಮಕಾರಿಯಾಗಿ ಕ್ರೋಡೀಕರಿಸಬಹುದು. ಹಾಗೂ ವೇತನ ಉತ್ಪನ್ನಗಳನ್ನು ವಿಸ್ತರಿಸುವ ಮೂಲಕ ದೇಶದ ಸಮಷ್ಠಿ-ಆರ್ಥಿಕ ಬೆಳವಣಿಗೆ ಹೆಚ್ಚು ತ್ವರಿತವಾಗಿ ಆಗುವಂತೆ ನೋಡಿಕೊಳ್ಳಬಹುದು.

೫. ಆರ್ಥಿಕ ಬೆಳವಣಿಗೆಯ ಫಲ ಕೆಳಗಿನವರಿಗೆ ಹರಿದು ಬರುತ್ತದೆ ಎಂದು ಭಾವಿಸುವ ಮಹಾಲನೋಬಿಸ್-ಫೀಲ್ಡ್‌ಮನ್ ಮಾದರಿಗಿಂತ ಉದ್ಯೋಗಾವಕಾಶಗಳಿಗೆ ಆದ್ಯತೆ ನೀಡುವ ವೇತನ-ಉತ್ಪನ್ನಗಳ ಮಾದರಿಯಲ್ಲಿ ಹೆಚ್ಚಿನ ಸಮಾನತೆ ಸಾಧ್ಯ.

೬. ವೇತನ-ಉತ್ಪನ್ನಗಳ ಕಾರ್ಯವಿಧಾನದಲ್ಲಿ ಉತ್ಪಾದನಾ ದಕ್ಷತೆಯನ್ನು ಬೇಗ ಸಾಧಿಸಬಹುದು. ಹಣದುಬ್ಬರದ ಸಾಧ್ಯತೆಗಳು ಕಡಿಮೆ. ಮತ್ತು ವಿದೇಶಿ ಬಂಡವಾಳದ ಮೇಲಿನ ಅವಲಂಬನೆಯೂ ಅಷ್ಟಾಗಿ ಇರುವುದಿಲ್ಲ. ಜೊತೆಗೆ ಕೇಂದ್ರೀಕೃತ ಆಡಳಿತದ ನಿಯಂತ್ರಣಗಳು ಅಷ್ಟಾಗಿ ಅವಶ್ಯವಾಗುವುದಿಲ್ಲ.

ಪಿಬಿಆರ್ ಅವರ ಬೆಳವಣಿಗೆಯ ಯೋಜನೆ ಜನತೆಯ ತಕ್ಷಣದ ಬಳಕೆಯ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಹಾಗೂ ಜನರ ಯೋಗಕ್ಷೇಮವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡುತ್ತದೆ. ಆದರೆ ಅದೇ ಸಮಯದಲ್ಲಿ ದೀರ್ಘಾವಧಿ ಬೆಳವಣಿಗೆಗೂ ಗಮನಕೊಡುತ್ತದೆ. ಅವರ ಯೋಜನೆಯಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಒಟ್ಟಾರೆ ಆರ್ಥಿಕತೆಯಲ್ಲಿ ಉಳಿತಾಯವನ್ನು ಹೆಚ್ಚಿಸುವುದಕ್ಕೆ ಅವಕಾಶವಿದೆ. ಸರ್ಕಾರಕ್ಕೆ ಸಾಂಸ್ಥಿಕ ಸುಧಾರಣೆಯನ್ನು ತರುವುದಕ್ಕೆ ಸಾಧ್ಯವಾದರೆ ಈ ಉಳಿತಾಯವನ್ನು ಕ್ರೋಡೀಕರಿಸಿ ಉತ್ಪಾದನೆಗೆ ಬೇಕಾದ

ಬಂಡವಾಳವನ್ನು ಒಟ್ಟುಮಾಡಿಕೊಳ್ಳಬಹುದು. ಬ್ರಹ್ಮಾನಂದರ ದೃಷ್ಟಿಯಲ್ಲಿ ಈ ಕಾರ್ಯತಂತ್ರ ಒಪ್ಪಿಕೊಂಡರೆ ವಿದೇಶಿ ಸಂಪನ್ಮೂಲದ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಬಡತನವನ್ನು ನಿಯಂತ್ರಿಸಲು ಬಜೆಟ್ ಬೆಂಬಲಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುವುದಿಲ್ಲ. ವಿದೇಶಿ ವಿನಿಮಯದ ಹೊರೆಯೂ ಕಮ್ಮಿಯಾಗುತ್ತದೆ. ಯಾಕೆಂದರೆ ಕೃಷಿ ಉತ್ಪನ್ನಗಳನ್ನು ಹಾಗೂ ವೇತನ-ಉತ್ಪನ್ನಗಳನ್ನು ರಫ್ತು ಮಾಡುವುದರಿಂದ ವಿದೇಶಿ ವಿನಿಮಯ ಸಂಚಯವೂ ಸಾಧ್ಯವಾಗುತ್ತದೆ. ಅದರಿಂದ ವೇತನ-ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಬೇಕಾದ ಬಂಡವಾಳ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳಬಹುದಿತ್ತು.

ಮಹಾಲನೋಬಿಸ್ ಯೋಜನೆಯಲ್ಲಿ ಸರಕು ಯಂತ್ರಗಳನ್ನು ಆಮದು ಮಾಡಿಕೊಳ್ಳುವ ಬದಲು ಸ್ಥಳೀಯವಾಗಿ ಉತ್ಪಾದಿಸುವುದು ಮುಖ್ಯವಾಗಿತ್ತು. ಆದರೆ ಸಾಮಾಜಿಕ ನ್ಯಾಯ ಹಾಗೂ ಸ್ವಾಯತ್ತತೆಯ ಹೆಸರಿನಲ್ಲಿ ಜಾರಿಗೆ ತರಲಾದ ವ್ಯವಸ್ಥೆ ಅದಕ್ಷ್ಯವೂ, ಭ್ರಷ್ಟವೂ ಆಯಿತು. ಅದು ನಿರಂತರವಾಗಿ ಸರ್ಕಾರದ ಬೆಂಬಲವನ್ನು ಅವಲಂಬಿಸಿತ್ತು. ಹಾಗಾಗಿ ಆರ್ಥಿಕತೆ ಪದೇ ಪದೇ ಬಿಕ್ಕಟ್ಟಿಗೆ ಗುರಿಯಾಗುತ್ತಿತ್ತು. ವಿದೇಶಿ ಸಾಲ ಅನಿವಾರ್ಯವಾಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ನಂತರ ದಿನಗಳಲ್ಲಿ ಭಾರತ ಅನುಭವಿಸಿದ ಬಡತನ, ಅಪೌಷ್ಟಿಕತೆ ಇತ್ಯಾದಿ ಎಲ್ಲಾ ಸಮಸ್ಯೆಗಳಿಗೂ ಭಾರತ ಅನುಸರಿಸಿದ ಮಹಾಲನೋಬಿಸ್ ಅವರ ಮಾದರಿಯೇ ಕಾರಣ ಎನ್ನುತ್ತಾರೆ ಪಿಬಿಆರ್. ತಳದಿಂದ ಅಭಿವೃದ್ಧಿಯನ್ನು ತರುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರೆ ಈ ಸಮಸ್ಯೆಗಳು ತಪ್ಪುತ್ತಿದ್ದವು ಎನ್ನುವುದು ಇವರ ಭಾವನೆ.

ಪಿಬಿಆರ್ ಅವರ ಆಸಕ್ತಿ ಕ್ರಮೇಣ ೧೯೬೦ರ ಮಧ್ಯಭಾಗದ ವೇಳೆಗೆ ಹಣಕಾಸು ಅರ್ಥಶಾಸ್ತ್ರದ ಕಡೆಗೆ ತಿರುಗಿತು. ಫ್ರೀಡ್‌ಮನ್ ಅವರ ಕೃತಿಗಳು ಅವರನ್ನು ಆಳವಾಗಿ ಪ್ರಭಾವಿಸಿದ್ದವು. ಭಾರತೀಯ ಸನ್ನಿವೇಶಕ್ಕೆ ತಕ್ಕಂತೆ ಅದನ್ನು ಸೂಕ್ತವಾಗಿ ಮಾರ್ಪಡಿಸುವುದು ಅವರಿಗೆ ಮುಖ್ಯವಾಗಿ ತೋರಿತು. ಅವರು ಹಣದುಬ್ಬರವನ್ನು ನಿಯಂತ್ರಿಸುವುದಕ್ಕೆ ಹಾಗೂ ಸಮತೋಲಿತ ವಿತ್ತೀಯ ಬಜೆಟ್ಟಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು. ಆ ಸಮಯದಲ್ಲಿ ಅವರು ರಚಿಸಿದ ಮೂರು ಕೃತಿಗಳು ಗೋಲ್ಡ್ ಮನಿ ರಿಫ್ಟ್, ಆಪ್ಟಿಮಮ್ ಮಾನಿಟರಿ ಅಂಡ್ ಬ್ಯಾಂಕಿಂಗ್ ಸಿಸ್ಟಂ ಹಾಗೂ ಎಕ್ಸ್‌ಪ್ಲೋರೇಷನ್ಸ್ ಇನ್ ನ್ಯೂ ಕ್ಲಾಸಿಕಲ್ ಥಿಯರಿ. ಗೋಲ್ಡ್ ಮನಿ ರಿಫ್ಟ್ ಚಿನ್ನದ ಪರಿಮಾಣವನ್ನು ಬೇರೆಯ ರೂಪದಲ್ಲಿ ಸೂಚಿಸುತ್ತಿದೆ ಅನ್ನುವ ಟೀಕೆಯಿತ್ತು. ಆಪ್ಟಿಮಮ್ ಮಾನಿಟರಿ ಥಿಯರಿ ಕೃತಿ ಹಣದುಬ್ಬರದ ನಿಯಂತ್ರಣಕ್ಕೆ ಫ್ರೀಡ್‌ಮನ್ ಸೂಚಿಸಿದ ಕ್ರಮಗಳನ್ನು ಒಪ್ಪಿಕೊಂಡಿತ್ತು. ನ್ಯೂ ಕ್ಲಾಸಿಕಲ್ ಥಿಯರಿ ಅವರ ಪ್ರಮುಖ ಕೃತಿ ಅದು ನಂತರದ ಹಲವು ಸಿದ್ಧಾಂತಗಳನ್ನು ಊಹಿಸಿತ್ತು.

ಸಂಘಟಕರಾಗಿ ಪಿಬಿಆರ್

ಇಂಡಿಯನ್ ಎಕಾನಮಿಕ್ ಜರ್ನಲ್‌ನಲ್ಲಿ ಇವರ ಪಾತ್ರ ಗಣನೀಯವಾಗಿತ್ತು. ಇದು ಪ್ರಾರಂಭವಾಗಿದ್ದು ೧೯೫೩–೫೪ರಲ್ಲಿ. ಸಿ ಎನ್ ವಕೀಲ್ ಇದರ ಪ್ರಧಾನ ಸಂಪಾದಕರಾಗಿದ್ದರು. ೧೯೬೧ರಲ್ಲಿ ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅಲ್ಲಿಂದ ಮುಂದಕ್ಕೆ ೨೦೦೩ರವರೆಗೆ ಅವರ ಆರೋಗ್ಯ ತಪ್ಪುವವರೆಗೆ ಅದರ ಪ್ರಧಾನ ಚಾಲಕ ಶಕ್ತಿಯಾಗಿದ್ದರು. ತರುಣರ ಲೇಖನಗಳನ್ನು ಓದಿ ಸಲಹೆ ನೀಡಿ, ಪ್ರೋತ್ಸಾಹಿಸುತ್ತಿದ್ದರು. ಹಾಗೆಯೇ ಭಾರತೀಯ ಅರ್ಥಶಾಸ್ತ್ರ ಸಂಘದ ಸಮ್ಮೇಳನದಲ್ಲೂ ಇವರದು ಕೇಂದ್ರ ಪಾತ್ರ. ೨೦೦೦ರಲ್ಲಿ ಜಮ್ಮುವಿನಲ್ಲಿ ನಡೆದ ಸಮ್ಮೇಳನವೊಂದನ್ನು ಬಿಟ್ಟರೆ



೧೯೬೧ – ೨೦೦೨ರವರೆಗೆ ಪ್ರತಿಯೊಂದು ಸಮ್ಮೇಳನವೂ ಅವರ ಮಾರ್ಗದರ್ಶನದಲ್ಲೇ ನಡೆದಿರುವುದು. ಜಮ್ಮುವಿನ ಸಮ್ಮೇಳನದಲ್ಲಿ ಅನಾರೋಗ್ಯದಿಂದ ಅವರಿಗೆ ಭಾಗವಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಅರ್ಥಶಾಸ್ತ್ರದಷ್ಟೇ ಆರ್ಥಶಾಸ್ತ್ರ ಸಂಘದ ಸಮ್ಮೇಳನಗಳಲ್ಲಿ ಹಾಗೂ ಇಂಡಿಯನ್ ಎಕನಾಮಿಕ್ ಜರ್ನಲ್ ಪ್ರಕಟಣೆಯಲ್ಲೂ ಅತ್ಯಂತ ಬದ್ಧತೆಯಿಂದ ಇವರು ಕೆಲಸ ಮಾಡಿದ್ದರು.

ಅರ್ಥಶಾಸ್ತ್ರವೇ ಅವರ ಪ್ರಿಯತಮೆಯಾಗಿಬಿಟ್ಟಿದ್ದರಿಂದಲೋ ಏನೋ ಅವರು ಮದುವೆಯಾಗದೆ ಬ್ರಹ್ಮಚಾರಿಯಾಗಿಯೇ ಉಳಿದು ಬಿಟ್ಟರು. ತಮ್ಮ ಅಚ್ಚುಮೆಚ್ಚಿನ ಕ್ರಿಕೆಟ್ ಆಟಗಾರ ಫ್ರಾಂಕ್ ವೊರೆಲ್ ಅವರನ್ನು ನೆನಪಿಸಿಕೊಳ್ಳುತ್ತಾ ಬ್ಯಾಟಿನಿಂದ ಸೊಗಸಾದ ಸ್ಟ್ರೋಕ್‌ಗಳು ಬರುತ್ತಿರುವಾಗಲೇ ಲೋಕವನ್ನು ಆತ ತ್ಯಜಿಸಿಬಿಟ್ಟ. "ಜೀವನ ಅಂದರೆ ಹಾಗಿರಬೇಕು. ಸಂಕ್ಷಿಪ್ತವಾಗಿರಬೇಕು ಮತ್ತು ಭವ್ಯವಾಗಿರಬೇಕು" ಅನ್ನುತ್ತಿದ್ದರಂತೆ.

ಜನವರಿ ೨೩, ೨೦೦೩ರಂದು ಅವರ ನಿಧನದಿಂದ ಬಹುಮುಖ ಪ್ರತಿಭೆಯ ಚೇತನವೊಂದನ್ನು ಜಗತ್ತು ಕಳೆದುಕೊಂಡಿತು. ಭಾರತದಂತಹ ಅಭಿವೃದ್ಧಶೀಲ ರಾಷ್ಟ್ರಗಳ ಆರ್ಥಿಕ ಬೆಳವಣಿಯ ದೃಷ್ಟಿಯಿಂದ ಮೂಡಿಬಂದಿದ್ದ ಅವರ ಚಿಂತನೆಯನ್ನು ನಾವು ಗಮನಿಸಬೇಕಾದಷ್ಟು ಗಮನಿಸಿಲ್ಲ. ಚರ್ಚಿಸಬೇಕಾದಷ್ಟು ಚರ್ಚಿಸಿಲ್ಲ. ಬಳಸಿಕೊಳ್ಳಬಹುದಾದಷ್ಟು ಬಳಸಿಕೊಂಡಿಲ್ಲ. ಅವರ ಸಾಧನೆಗಳನ್ನೂ ನಿರ್ಲಕ್ಷಿಸಿದ್ದೇವೆ. ಮರೆತಿದ್ದೇವೆ. ಅವರನ್ನು ಕಾಡಿದ್ದ ಬಡತನ, ನಿರುದ್ಯೋಗ, ಅಸಮಾನತೆ ಇವೆಲ್ಲಾ ಇಂದಿಗೂ ನಮ್ಮನ್ನು ಕಾಡುತ್ತಿವೆ. ಹಾಗಾಗಿ ಅವರ ಚಿಂತನೆಗಳೂ ಇಂದಿಗೂ ಪ್ರಸ್ತುತ. ಅವನ್ನು ಗಂಭೀರವಾಗಿ ಚರ್ಚಿಸಬೇಕಾದ ಅವಶ್ಯಕತೆಯಿದೆ.

ಮಕ್ಕಳಿಗಾಗಿ ಅರ್ಥಶಾಸ್ತ್ರ

ಎಸ್ಥರ್ ದುಫ್ಲೋ ಅವರ "ಪೂರ್ ಎಕನಾಮಿಕ್ಸ್ ಫಾರ್ ಕಿಡ್ಸ್" ಪುಸ್ತಕವನ್ನು ಕುರಿತು

ಅಭಿಜಿತ್ ಬ್ಯಾನರ್ಜಿ ಹಾಗೂ ಎಸ್ಥರ್ ದುಫ್ಲೋ "ಪೂರ್ ಎಕನಾಮಿಕ್ಸ್ – ರಿಥಿಂಕಿಂಗ್ ಪಾವರ್ಟಿ ಅಂಡ್ ವೇ ಟು ಎಂಡ್ ಇಟ್" ಪುಸ್ತಕವನ್ನು ೨೦೧೧ರಲ್ಲಿ ಪ್ರಕಟಿಸಿದ್ದರು. ಅದರ ಹೆಸರೇ ಸೂಚಿಸುವಂತೆ ಬಡತನವನ್ನು ಕುರಿತಂತೆ ಮರುಚಿಂತನೆಯನ್ನು ಮಾಡುತ್ತಾ ಅದನ್ನು ಕೊನೆಗಾಣಿಸುವ ಬಗೆಯೂ ಅದರಲ್ಲಿ ಚರ್ಚಿಸಲಾಗಿದೆ. ಇಲ್ಲಿ "ಪೂರ್" ಅನ್ನುವ ಪದ ಅದು ಬಡತನದ ಬಗೆಗಿನ ಪುಸ್ತಕ ಅನ್ನುವುದನ್ನು ಸೂಚಿಸುತ್ತದೆ. ಜೊತೆಗೆ ಬಡತನವನ್ನು ಕುರಿತಂತೆ ಅರ್ಥಶಾಸ್ತ್ರದ ದಾರಿದ್ರ್ಯವನ್ನೂ ತೋರಿಸುತ್ತದೆ. ಅವರು ಹೇಳುವಂತೆ ಬಡತನವನ್ನು ಕುರಿತು ಇಂದು ನಡೆಯುತ್ತಿರುವ ಚರ್ಚೆಯಲ್ಲೇ ಸಮಸ್ಯೆಯಿದೆ. ಬಡತನದ ಸಂಕಷ್ಟವನ್ನು ಅದು ಗಮನಿಸುವುದಿಲ್ಲ. ಬದಲಿಗೆ ಬಡವರು ಬದಕಲು ನಡೆಸುತ್ತಿರುವ ಹೆಣಗಾಟಕ್ಕೆ ಅವರೇ ಕಾರಣ ಅನ್ನೋ ತರಹ ಮಾತನಾಡುತ್ತಿವೆ. ದುಫ್ಲೋ ಸಂದರ್ಶನವೊಂದರಲ್ಲಿ ಹೇಳಿರುವಂತೆ ಬಡವರ ಬದುಕು ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತುಂಬಾ ತಪ್ಪು ಗ್ರಹಿಕೆಗಳಿವೆ. ದುರಂತವೆಂದರೆ ಇಂದು ಬಡತನಕ್ಕೆ ಸಂಬಂಧಿಸಿದ ಬಹುತೇಕ ನೀತಿಗಳು ಇಂತಹ ತಪ್ಪು ಗ್ರಹಿಕೆಗಳನ್ನು ಆಧರಿಸಿಯೇ ರೂಪುಗೊಂಡಿವೆ. ಬಡವರ ಬಗ್ಗೆ ಇರುವ ಹಲವು ಪೂರ್ವಗ್ರಹಗಳನ್ನು ಅವರು ಪುಸ್ತಕದಲ್ಲಿ ಪರಿಶೀಲಿಸಿದ್ದಾರೆ. ಬಡತನದ ಬಗ್ಗೆ ನಡೆಯುತ್ತಿರುವ ಚರ್ಚೆಯನ್ನಾಗಲಿ, ಅದರಿಂದ ಮೂಡಿಬಂದ ನೀತಿಗಳನ್ನಾಗಲಿ ತಪ್ಪು ಎಂದು ತಳ್ಳಿಹಾಕುವುದು ಇವರ ಉದ್ದೇಶವಲ್ಲ. ಅವರಿಗಿರುವ ಬೇಸರ ಅಂದರೆ ಹಲವು ಅಧ್ಯಯನಗಳಲ್ಲಿ ಬಡವರು ಕ್ಯಾರಿಕೇಚೆರುಗಳಾಗಿ ಚಿತ್ರಿತರಾಗಿದ್ದಾರೆ ಅನ್ನುವುದು. ಬಡವರೂ ಉಳಿದವರಂತೆಯೇ ಪ್ರತಿಭೆ, ಶಕ್ತಿ, ದೌರ್ಬಲ್ಯ, ಮಿತಿ ಎಲ್ಲಾ ಇರುವ ಮನುಷ್ಯರು. "ಅವರೆಲ್ಲಾ ಮಹಾನ್ ಪ್ರತಿಭಾವಂತರು, ಹೂಡುವುದಕ್ಕೆ ಹಣ ಇಲ್ಲ ಅಷ್ಟೆ. ಇದ್ದಿದ್ದರೆ ಅವರೆಲ್ಲಾ ಬಿಲ್ ಗೇಟ್ಸ್ ಆಗಿಬಿಡುತ್ತಾರೆ" ಅಂತ ನೋಡುವಷ್ಟೇ ಅವರೆಲ್ಲಾ ದಡ್ಡರು ಅಂತ ನೋಡುವುದು ತಪ್ಪು. ದುಫ್ಲೋ ಹೇಳುವಂತೆ "ಅವರಲ್ಲೂ ಎಲ್ಲಾ ಥರದವರಿರುತ್ತಾರೆ. ಕೆಲವರಿಗೆ ಹಾಗೆ ಬೆಳೆಯುವ ಸಾಮರ್ಥ್ಯವೂ ಇರುತ್ತದೆ. ಹಾಗೆಯೇ ಕೆಲವರಿಗೆ ಸಾಮರ್ಥ್ಯವಿರುವುದಿಲ್ಲ." ಎಲ್ಲರಿಗೂ ರಿಸ್ಕ್ ತೆಗೆದುಕೊಳ್ಳುವ ಮನಸ್ಥಿತಿಯೂ ಇರುವುದಿಲ್ಲ. ಹಾಗೆಯೇ ಬಡತನವೇ ಕೆಲವರನ್ನು ರಿಸ್ಕ್ ತೆಗೆದುಕೊಳ್ಳಲು ಒತ್ತಾಯಿಸಿದೆ. ಇಲ್ಲದಿದ್ದರೆ ಹಲವರು ಹಾಗೆಯೇ ಆರಾಮಾಗಿ ಇರೋದಕ್ಕೆ ಇಷ್ಟ ಪಡುತ್ತಿದ್ದರು.

ನಮ್ಮನ್ನು ಕಾಡುತ್ತಿರುವ ಹಲವು ಪ್ರಮುಖ ಸಮಸ್ಯೆಗಳನ್ನು ನೋಡುವ ಬಗೆಯನ್ನು ಬದಲಿಸಿಕೊಳ್ಳಲು ಅಭಿಜಿತ್ ಹಾಗೂ ದುಫ್ಲೋ ನಮ್ಮನ್ನು ಒತ್ತಾಯಿಸುತ್ತಾರೆ. ಅದು ತುಂಬಾ ಮುಖ್ಯ. ನಮ್ಮ ಎಲ್ಲಾ ಸಮಸ್ಯೆಗಳಿಗೂ ಒಂದು ಸಾರ್ವತ್ರಿಕವಾದ ಪರಿಹಾರವಿದೆ ಎಂದು ಭಾವಿಸುವುದರಲ್ಲೇ ಸಮಸ್ಯೆಯಿದೆ ಎನ್ನುವುದು ಅವರ ನಿಲುವು. ಉದಾಹರಣೆಗೆ ಬಡತನವನ್ನೇ ಗಮನಿಸಿ. "ಸಂಶೋಧಕರು ತಮ್ಮ ಕೊಠಡಿಗಳಿಂದ ಹೊರಬಂದು ವಾಸ್ತವ ಜಗತ್ತನ್ನು ಗಮನಿಸಿದರೆ ಬಡವರು ಅನುಭವಿಸುತ್ತಿರುವ ಹಲವು ಸಮಸ್ಯೆಗಳು ಕಾಣುತ್ತವೆ. ನಮಗೆ ಬಡತನವನ್ನು ಒಂದು ದೊಡ್ಡ ಸಮಸ್ಯೆಯಾಗಿ ನೋಡದೆ ನೂರಾರು ಪರಿಹರಿಸಬಹುದಾದ ಸಣ್ಣ ಸಣ್ಣ ಸಮಸ್ಯೆಗಳ ಮೊತ್ತವಾಗಿ ನೋಡುವುದಕ್ಕೆ ಸಾಧ್ಯವಾಗಬೇಕು. ಆಗ ನಮಗೆ ಪರಿಹರಿಸಲಾಗದ ಭೂತಾಕಾರದ ಸಮಸ್ಯೆ ಪರಿಹಾರ ಸಾಧ್ಯವಾಗುವ ಹಲವು ಸಣ್ಣ ಸಣ್ಣ ಸಮಸ್ಯೆಗಳಾಗಿ ಕಾಣುತ್ತವೆ. ಆರೋಗ್ಯ, ಶಿಕ್ಷಣ, ಹಣಕಾಸು, ಉದ್ಯಮಶೀಲತೆ ಹೀಗೆ ಹಲವು ಸಮಸ್ಯೆಗಳು ಸೇರಿಕೊಂಡು ಬಡತನದ ಸಮಸ್ಯೆಯಾಗಿದೆ ಅನ್ನುವುದು ತಿಳಿಯುತ್ತದೆ. ಈ ಸಮಸ್ಯೆಗಳನ್ನು ಇನ್ನೊಂದಿಷ್ಟು ಸೂಕ್ಷ್ಮವಾಗಿ ನೋಡಿದರೆ ಅವು ಮತ್ತೆ ಹಲವು ಸಣ್ಣ ಸಣ್ಣ ಸಮಸ್ಯೆಗಳ ಮೊತ್ತವಾಗಿ ಕಾಣುತ್ತವೆ. ಆರೋಗ್ಯದ ಸಮಸ್ಯೆ ಆಗ ಪೌಷ್ಠಿಕಾಂಶದ ಕೊರತೆ, ಶಿಶು ಮರಣ, ಆಮಶಂಕೆ, ಲಸಿಕೆ ಇತ್ಯಾದಿ ಬಿಡಿಸಿಕೊಳ್ಳಬಹುದಾದ ಸಮಸ್ಯೆಗಳಾಗಿ ಕಾಣುತ್ತದೆ. ಇವುಗಳಲ್ಲಿ ಎಷ್ಟೋ ಸಮಸ್ಯೆಗಳನ್ನು ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಸಮಸ್ಯೆಗಳಿಗೆ ಪರಿಹಾರ ಸಿಗದೇ ಹೋಗಬಹುದು. ಆದರೂ ಪರಿಹಾರದ ಕಡೆ ಸಣ್ಣ ಸಣ್ಣ ಹೆಜ್ಜೆಗಳನ್ನು ಎಚ್ಚರಿಕೆಯಿಂದ ಇಡುತ್ತಾ ಸಾಗುವುದಕ್ಕೆ ಸಾಧ್ಯವಾಗುತ್ತದೆ. ಹಾಗೆಯೇ ಇಟ್ಟ ಹೆಜ್ಜೆ ಸರಿಯಾಗಿದೆಯೇ ಎಂದು ಪರೀಕ್ಷಿಸಿಕೊಳ್ಳುತ್ತಾ, ಜವಾಬ್ದಾರಿಯಿಂದ ಮುಂದುವರಿಯುವುದಕ್ಕೂ ಆಗುತ್ತದೆ. ಇಂತಹ ಬಿಡಿ ಬಿಡಿ ಸಮಸ್ಯೆಗಳಿಗೆ ಸಿಕ್ಕ ಉತ್ತರ ಒಟ್ಟಾರೆಯಾಗಿ ಬಡತನಕ್ಕೆ ಒಂದು ಉತ್ತರವನ್ನು ಸೂಚಿಸಬಹುದು.

ಬ್ಯಾನರ್ಜಿ ಹಾಗೂ ದುಫ್ಲೋ ತಮ್ಮ ಪುಸ್ತಕದಲ್ಲಿ ಬಡತನಕ್ಕೆ





ಕಾರಣವಾದ ಇಂತಹ ಹಲವು ಮುಖ್ಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಅವಕ್ಕೆ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕೆ ಸಂಬಂಧಿಸಿದ ಹಲವು ಅಧ್ಯಯನಗಳನ್ನು ಹಾಗೂ ಸಿದ್ಧಾಂತಗಳನ್ನು ಪರಿಶೀಲಿಸುವ ಜೊತೆಗೆ ಅದಕ್ಕೆ ಪೂರಕವಾಗಿ ಜನರ ವಾಸ್ತವ ಬದುಕನ್ನು ಪರಿಶೀಲಿಸುವ ಕೆಲಸವನ್ನೂ ಮಾಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಮೂಡಿಬಂದ ಗ್ರಹಿಕೆಗಳನ್ನು ಪ್ರಯೋಗಗಳ ಮೂಲಕ ಪರೀಕ್ಷಿಸಿ ನೋಡುವ ಪ್ರಯತ್ನವನ್ನೂ ಮಾಡಿದ್ದಾರೆ. ಇವರು ಕೃಷಿ, ವೈದ್ಯಕೀಯ ಕ್ಷೇತ್ರಗಳಲ್ಲಿ ಬಳಸುವ ರ್‍ಯಾಂಡಮೈಸ್ಡ್ ಕಂಟ್ರೋಲ್ಡ್ ಟ್ರಯಲ್ –ಯಾದೃಚ್ಛಿಕ ನಿಯಂತ್ರಿತ ಪ್ರಯೋಗಗಳ ವಿಧಾನವನ್ನು ಅರ್ಥಶಾಸ್ತ್ರಕ್ಕೆ ತಂದಿದ್ದಾರೆ. ಈ ವಿಧಾನದ ಬಗ್ಗೆ ಹಲವು ಟೀಕೆಗಳಿವೆ. ಜೀನ್ ಡ್ರೀಜ್ ಅದನ್ನು ಅಂತಿಮ ಕ್ರಮವೆಂದಾಗಲಿ ಅಥವಾ ಶ್ರೇಷ್ಠ ಕ್ರಮವೆಂದಾಗಲಿ ಪರಿಗಣಿಸುವುದನ್ನು ವಿರೋಧಿಸುತ್ತಾರೆ. ಆದರೆ ಕನಿಷ್ಠ ಕೆಲವು ಸಂದರ್ಭದಲ್ಲಿ ಅದೊಂದು ಉಪಯುಕ್ತ ಕ್ರಮವೆಂಬುದನ್ನು ಒಪ್ಪಿಕೊಳ್ಳಬಹುದು. ಬಡತನವನ್ನು ಕುರಿತಂತೆ ಪರ್ಯಾಯವಾದ ನಿಲುವು ಸಾಧ್ಯ ಅಂತ ಒಪ್ಪಿಕೊಂಡರೂ ಬಡತನವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಇದೊಂದು ಕಡೆಗಣಿಸಲಾಗದ ಕೃತಿ ಅನ್ನುವುದರಲ್ಲಿ ಸಂದೇಹವಿಲ್ಲ.

ದುಫ್ಲೋ ಹಾಗೂ ಬ್ಯಾನರ್ಜಿಯವರಿಗೆ ಕಥೆ ಹೇಳುವ ಗುಣ ಇದೆ. ಈ ಪುಸ್ತಕ ಓದಿಸಿಕೊಂಡು ಹೋಗುತ್ತದೆ. ಅವರು ಬಡತನದ ಚಿತ್ರವನ್ನು ಕಟ್ಟಿಕೊಡುವುದಕ್ಕೆ ಪುಸ್ತಕದ ಉದ್ದಕ್ಕೂ ಹಲವು ಘಟನೆಗಳನ್ನು, ಪ್ರಸಂಗಗಳನ್ನು ಬಳಸಿಕೊಂಡಿದ್ದಾರೆ. ಅವು ನಮಗೆ ಬಡತನದ ಹಲವು ಆಯಾಮಗಳನ್ನು ತಿಳಿಸುತ್ತವೆ. ಆ ಘಟನೆಗಳು ನಮ್ಮನ್ನು ಕಾಡುತ್ತವೆ. ಅವರಿಗೆ ತಮ್ಮ ಅಧ್ಯಯನವನ್ನು ಕೇವಲ ಅಕೆಡೆಮಿಕ್ ವಲಯದಲ್ಲಿ ಮಾತ್ರವಲ್ಲ ಎಲ್ಲರೊಂದಿಗೂ ಹಂಚಿಕೊಳ್ಳಬೇಕೆಂಬ ಕಾಳಜಿ ಇದೆ. ಮಕ್ಕಳಿಗೂ ಈ ವಿಚಾರಗಳು ತಿಳಿಯಬೇಕು ಅನ್ನುವುದು ಅವರ ವಿಚಾರ. ಮೂಲ ಪುಸ್ತಕ ಬಂದಾಗಲೇ ಮಕ್ಕಳಿಗಾಗಿ ಈ ಪುಸ್ತಕವನ್ನು ಪುನರ್‌ರಚಿಸಬೇಕು ಅಂದುಕೊಂಡಿದ್ದರಂತೆ. ಈಗ ದುಫ್ಲೋ ಅವರ ಪೂರ್ ಎಕಾನಮಿಕ್ಸ್ ಫಾರ್ ಕಿಡ್ಸ್ ಪುಸ್ತಕ ಹೊರಬಂದಿದೆ. ಇಂತಹ ಪ್ರಯತ್ನದಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತವೆ. ಅವರ ಮೂಲ ಅಧ್ಯಯನದಲ್ಲಿ ಬರುವ ಎಲ್ಲಾ ವಿಷಯಗಳನ್ನು ಮಕ್ಕಳ ಪುಸ್ತಕದಲ್ಲಿ ತರಲು ಸಾಧ್ಯವಾಗುವುದಿಲ್ಲ. ಕೆಲವನ್ನು ಹೆಕ್ಕಿಕೊಳ್ಳಬೇಕಾಗುತ್ತದೆ. ಇನ್ನೊಂದು ಸಮಸ್ಯೆ ಅಂದರೆ ಬಡವರ ಬದುಕಿನ ಎಷ್ಟೋ ಅಂಶಗಳು ನಿರ್ದಿಷ್ಟ ಸಂಸ್ಕೃತಿಯೊಂದಿಗೆ ತೆಕ್ಕೆ ಹಾಕಿಕೊಂಡಿರುತ್ತವೆ. ಕೆಲವು ನಿರ್ದಿಷ್ಟ ಭೂಪ್ರದೇಶಕ್ಕೆ ಸಂಬಂಧಿಸಿರುತ್ತದೆ. ಅವುಗಳಲ್ಲಿ ಹೆಚ್ಚು ಸಾರ್ವತ್ರಿಕವಾದ ಸಮಸ್ಯೆಗಳನ್ನು ಆರಿಸಿಕೊಳ್ಳಬೇಕು. ಇಂತಹ ಹಲವು ಸಾರ್ವತ್ರಿಕವಾದ ಸಮಸ್ಯೆಗಳಿಗೆ ಜಾಗತಿಕವಾಗಿ ಒಂದೇ ರೀತಿಯ ಪರಿಹಾರವೂ ಸಾಧ್ಯವಾಗುತ್ತದೆ. ಅಂದರೆ ಒಂದು ಕಡೆ ಕಂಡುಕೊಂಡ ಪರಿಹಾರವನ್ನು ಇನ್ನೊಂದೆಡೆ ಪ್ರಯೋಗಿಸುವುದಕ್ಕೂ ಸಾಧ್ಯವಾಗುತ್ತದೆ. ಜೊತೆಗೆ ಮಕ್ಕಳ ಪುಸ್ತಕ ಅಂದರೆ ಚಿತ್ರಗಳು ಬೇಕು. ಚಿತ್ರಗಳು ಪ್ರತ್ಯೇಕವಾಗಿ ನಿಲ್ಲಬಾರದು. ವಿವರಣೆಗೆ, ಉದ್ದೇಶಕ್ಕೆ ಪೂರಕವಾಗಿರಬೇಕು. ಈ ದೆಸೆಯಲ್ಲಿ ಕಲಾವಿದೆ ಶಾಯೆನ್ ಒಲೀವ್ಹಿಯೆ ಒಳ್ಳೆಯ ಕೆಲಸ ಮಾಡಿದ್ದಾರೆ. ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಇಲ್ಲಿ ಕಥೆ ಹಾಗೂ ಚಿತ್ರಗಳು ಒಂದಕ್ಕೊಂದು ಪೂರಕವಾಗಿದೆ. ಡಫ್ಲೊ ಹೇಳುವಂತೆ ಕಥೆ ಕೇವಲ ಚಿತ್ರಕ್ಕೆ ಹಿನ್ನಲೆಯಲ್ಲ. ಹಾಗೆಯೇ ಚಿತ್ರಗಳು ಕೇವಲ ಕಥೆಯ ಇಲ್ಲಸ್ಟ್ರೇಷನ್ ಅಲ್ಲ. ಎರಡೂ ಕಥೆಯನ್ನು ಬೇರೆ ಬೇರೆ ಆಯಾಮಗಳಲ್ಲಿ ಹೇಳುತ್ತಿವೆ. ದುಫ್ಲೋ ಹೇಳುವ ಸಾರ್ವತ್ರಿಕತೆ ಚಿತ್ರದಲ್ಲೂ ಕಾಣುತ್ತದೆ. ಯಾವುದೇ ಪಾತ್ರಗಳು, ಪರಿಸರ ಒಂದು ನಿರ್ದಿಷ್ಟ ಸ್ಥಳಕ್ಕೆ, ಜನಾಂಗಕ್ಕೆ ಫಿಕ್ಸ್ ಆಗಿಲ್ಲ. ಇಲ್ಲಿಯ ಪಾತ್ರಗಳನ್ನು ಯಾವುದೇ ಒಂದು ನಿರ್ದಿಷ್ಟ ದೇಶದವು, ಜನಾಂಗದವೂ ಅಂತ ಹೇಳುವುದಕ್ಕೆ ಆಗುವುದಿಲ್ಲ.














ಹಾಗಾಗಿಯೇ ಇಲ್ಲಿ ಬರುವ ನೀಲೂ, ಅಫಿಯಾ, ಬಿಬಿರ್, ಊಲಾ, ನೆಸೊ, ನಾಜೆ ಇತ್ಯಾದಿ ಪಾತ್ರಗಳು ಭಾರತದ್ದೋ, ಕೆನ್ಯಾ ಅಥವಾ ವಿಯೆಟ್ನಾಂ ಅಥವಾ ಯಾವುದೇ ದೇಶದವರೂ ಆಗಿರಬಹುದು. ಬಹುಶಃ ಈ ಉದ್ದೇಶಕ್ಕಾಗಿಯೇ ಇಲ್ಲಿಯ ಚಿತ್ರಗಳು, ಬಣ್ಣ ಎಲ್ಲವೂ ಸ್ಟೈಲೈಸ್ ಆಗಿವೆ. ಮರಗಳು, ಬೆಟ್ಟಗಳು, ಪ್ರಾಣಿಗಳು ಎಲ್ಲಾ ಚಿತ್ರಗಳನ್ನು ಸರಳವಾದ ಜ್ಯಾಮಿತಿಯ ಆಕಾರಗಳನ್ನು ಬಳಸಿಕೊಂಡು ರಚಿಸಿದ್ದಾರೆ. ಅರ್ಥಶಾಸ್ತ್ರದಲ್ಲಿ ಬಡತನವನ್ನು ತೋರಿಸಲು ಬಳಸುವ **S** ಮತ್ತು **L** ಆಕಾರದ ರೇಖೆಗಳನ್ನು ಪುಸ್ತಕದುದ್ದಕ್ಕೂ ಬಳಸಿಕೊಂಡಿದ್ದಾರೆ. ಇವೆಲ್ಲಾ ಬಡವರ ಬದುಕಿನ ಏರಿಳಿತವನ್ನು ತೋರಿಸುತ್ತದೆ.


ಮಕ್ಕಳಿಗೆ ಏಕೆ?

ಮಕ್ಕಳು ಹೊಸ ಚಿಂತನೆಗಳಿಗೆ ಹೆಚ್ಚು ಮುಕ್ತವಾಗಿ ತೆರೆದುಕೊಳ್ಳುತ್ತಾರೆ. ಜೊತೆಗೆ ಅವರು ಜಾಣರೂ ಕೂಡ. ಏನು ಹೇಳಿದರೂ ಗ್ರಹಿಸಿಕೊಳ್ಳುತ್ತಾರೆ. ಜೊತೆಯ ಅರ್ಥಶಾಸ್ತ್ರಜ್ಞರ ಜೊತೆ ಚರ್ಚಿಸುವಂತೆಯೇ ಮಕ್ಕಳೊಂದಿಗೂ ಸಂಶೋಧನೆಗಳನ್ನು ಕುರಿತು ಮಾತನಾಡಬೇಕು. ಅವರಿಗೂ ಬಡತನ, ನಿರುದ್ಯೋಗ ಇತ್ಯಾದಿ ವಿಷಯಗಳು ತಿಳಿದಿರಬೇಕು. ಮಕ್ಕಳೂ ಆ ಬಗ್ಗೆ ಯೋಚಿಸಬೇಕು. ಪರಿಹಾರವನ್ನು ಕುರಿತು ಚಿಂತಿಸಬೇಕು. ಅವರು ಇಂತಹ ಗಂಭೀರ ವಿಷಯಗಳ ಚರ್ಚೆಯ ಭಾಗವಾಗಬೇಕು ಅನ್ನುವುದು ಡುಫ್ಲೊ ಅವರ ಮುಖ್ಯ ಕಾಳಜಿ. ಮಕ್ಕಳನ್ನು ಬೌದ್ಧಿಕವಾಗಿ ಪ್ರೇರೇಪಿಸಬಲ್ಲ ಸಾಮರ್ಥ್ಯ ಈ ಪುಸ್ತಕಗಳಿಗಿದೆ. ಡಫ್ಲೋ ಹಾಗೂ ಬ್ಯಾನರ್ಜಿಯವರು ಬಡತನದ ಸಮಸ್ಯೆಯನ್ನು ಹಲವು ಸಣ್ಣ ಸಣ್ಣ ಸಮಸ್ಯೆಗಳ ಗುಚ್ಚವಾಗಿ ನೋಡುವ ಕ್ರಮದಿಂದಾಗಿ ಬಡತನದ ಚಿತ್ರವನ್ನು ಹತ್ತು ಚಿಕ್ಕ ಚಿಕ್ಕ ಕಥೆಗಳಾಗಿ ಒಡೆಯುವುದಕ್ಕೆ ಸಾಧ್ಯವಾಗಿದೆ.

ಇದು ಮೊದಲು ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಗಿದ್ದು. ಅಲ್ಲಿ ಪ್ರಕಾಶಕರ ಒತ್ತಾಯದ ಮೇರೆಗೆ ಪ್ರತಿ ಕಥೆಗೂ ಒಂದು ವಿವರವಾದ ಟಿಪ್ಪಣೆ ಬರೆಯಲಾಗಿದೆ. ಬಡತನಕ್ಕೆ ತಮ್ಮನ್ನು ಹೊಣೆ ಮಾಡಲಾಗುತ್ತಿದೆ ಅನ್ನುವ ಭಾವನೆ ತಂದೆ ತಾಯಿಗಳಿಗೆ ಬಾರದಿರಲಿ ಅನ್ನುವ ಕಾರಣಕ್ಕೆ ಈ ವಿವರಣೆಯನ್ನು ಸೇರಿಸಲಾಗಿದೆಯಂತೆ. ಇಂಗ್ಲಿಷ್ ಅವತರಣಿಕೆಯಲ್ಲೂ ಈ ಟಿಪ್ಪಣಿಗಳಿವೆ. ಕನ್ನಡದಲ್ಲಿ ಪ್ರಥಮ್ ಐದು ಕಥೆಗಳನ್ನು ಆರಿಸಿಕೊಂಡು ಐದು ಪ್ರತ್ಯೇಕ ಪುಸ್ತಕಗಳನ್ನಾಗಿ ಪ್ರಕಟಿಸಿದೆ. "ಆರ್ಥಿಕ ವಿಕಾಸ ಮತ್ತು ಮೂಲಭೂತ ಅಧಿಕಾರಗಳನ್ನು ಪಡೆಯುವ ಬಗೆಗಿನ ಐದು ಪುಸ್ತಕಗಳ ಸರಣಿ"ಯಾಗಿ ಪ್ರಕಟಿಸಿದೆ. ಕನ್ನಡದ ಅನುವಾದವನ್ನು ಎಚ್ ಎಸ್ ರಾಘವೇಂದ್ರ ರಾವ್, ಓ ಎಲ್ ನಾಗಭೂಷಣಸ್ವಾಮಿ, ಎಸ್ ದಿವಾಕರ್, ಜೆ ವಿ ಕಾರ್ಲೊ ಹಾಗೂ ಎಲ್ ಸಿ ನಾಗರಾಜ್ ಮಾಡಿದ್ದಾರೆ.

ಮೊದಲ ಕಥೆ 'ನೀಲೂ ಇನ್ನು ಶಾಲೆ ತಪ್ಪಿಸಿಕೊಳ್ಳುವುದಿಲ್ಲ'. ನೀಲೂಗೆ ಶಾಲೆಯಲ್ಲಿ ಮಾಡುವ ಪಾಠ ಅರ್ಥವಾಗದೆ ಕಲಿಕೆಯಲ್ಲಿ ಆಸಕ್ತಿ ಹೋಗಿ ಶಾಲೆಗೆ ತಪ್ಪಿಸಿಕೊಳ್ಳುವುದಕ್ಕೆ ಪ್ರಾರಂಭಿಸುತ್ತಾಳೆ. ಕೊನೆಗೆ ಅದು ನೀಲೂ ಒಬ್ಬಳ ಸಮಸ್ಯೆ ಅಲ್ಲ ಶಾಲೆಯ ಬಹುತೇಕ ಮಕ್ಕಳ ಸಮಸ್ಯೆ ಅಂತ ತಿಳಿಯುತ್ತದೆ. ಅಷ್ಟೇ ಅಲ್ಲ ಭಾರತದ ಶೇಕಡ ೫೦ರಷ್ಟು ಐದನೇ ತರಗತಿ ಮುಗಿಸಿದ ಮಕ್ಕಳಿಗೆ ಓದುವ ಸಾಮರ್ಥ್ಯ ಇರುವುದಿಲ್ಲ. ಹಾಗಾಗಿ ಅವರಿಗೆ ಆಧುನಿಕ ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಅಂದರೆ ಮಕ್ಕಳ ತಿಳುವಳಿಕೆಯ ಮಟ್ಟದಿಂದ ಶಿಕ್ಷಣ ಪ್ರಾರಂಭವಾಗುವುದಿಲ್ಲ. ತಿಳುವಳಿಕೆಯ ಮಟ್ಟ ಹಾಗೂ ಕಲಿಸುವ ಮಟ್ಟದ ನಡುವಿನ ಈ ಅಂತರ ಕ್ರಮೇಣ ಹೆಚ್ಚುತ್ತಾ ಹೋಗುತ್ತದೆ. ಕಥೆಯಲ್ಲಿ ಅದಕ್ಕೆ ಪರಿಹಾರವಾಗಿ ಊರಿನ ಹಿರಿಯ ಮಕ್ಕಳ ನೆರವಿನಿಂದ ಮಕ್ಕಳಿಗೆ ಮೂಲಪಾಠವನ್ನು ಕಲಿಸುವ ಪ್ರಯತ್ನ ಮಾಡಲಾಗುತ್ತದೆ. ಇದಕ್ಕೆ ಪ್ರೇರಣೆ ಪ್ರಥಮ್ ಸಂಸ್ಥೆಯ 'ಬಾಲಸಖಿ' ಯೋಜನೆ. ಆ ಬಗ್ಗೆ ವಿಶೇಷವಾದ ಉಲ್ಲೇಖವನ್ನು ಅವರು ತಮ್ಮ ಪುಸ್ತಕದಲ್ಲೂ ಮಾಡಿದ್ದಾರೆ.

ಇನ್ನೊಂದು ಕಥೆಯಲ್ಲಿ ಅಫಿಯಾಗೆ ಆರೋಗ್ಯ ಚೆನ್ನಾಗಿಲ್ಲ. ನಿದ್ದೆ ಇಲ್ಲ. ಹಳ್ಳಿ ಡಾಕ್ಟ್ರು, ಮಂತ್ರವಾದಿ ಎಲ್ಲರನ್ನೂ ನೋಡಿಯಾಗುತ್ತದೆ. ಕೊನೆಗೆ ಮಲೇರಿಯಾ ಅಂತ ಗೊತ್ತಾಗುತ್ತದೆ. ಮಲೇರಿಯ ಜನರನ್ನು ಸೊರಗಿಸಿಬಿಡುತ್ತದೆ. ಖಾಯಿಲೆ ಇದ್ದಾಗಷ್ಟೇ ಅಲ್ಲ, ಆಮೇಲೂ ಅವರು ದುರ್ಬಲರಾಗಿಬಿಡುತ್ತಾರೆ. ದುಡಿಮೆ ಶೇಕಡ ೫೦ರಷ್ಟು ಕುಗ್ಗಿಬಿಡುತ್ತದೆ. ಔಷಧಿಗಳೂ ತಂಬಾ ದುಬಾರಿ. ಸರ್ಕಾರ ಆರೋಗ್ಯ ಸೇವೆಗೆ ಅಂತಹ ಮಹತ್ವ ನೀಡುತ್ತಿಲ್ಲ. ಅದು ಪರಿಣಾಮಕಾರಿಯಾಗಿಲ್ಲ. ಔಷಧಿಗಳು ಅಗ್ಗದಲ್ಲಿ ಎಲ್ಲರಿಗೂ ಸಿಗುವಂತೆ ಆಗಬೇಕು. ಇವೆಲ್ಲವೂ ನಿಜ. ಆದರೆ ಇಂತಹ ಕೆಲವು ಖಾಯಿಲೆಗಳು ಬಾರದಂತೆ ನೋಡಿಕೊಳ್ಳುವುದಕ್ಕೆ ಜನರಿಗೆ ಸಾಧ್ಯವಿದೆ. ಸೊಳ್ಳೆ ಪರದೆ ಬಳಸುವುದರಿಂದ ಸೊಳ್ಳೆ ಕಡಿತದಿಂದ ತಪ್ಪಿಸಿಕೊಳ್ಳಬಹುದಿತ್ತು. ಹಾಗೆಯೇ ಲಸಿಕೆಯಿಂದ ಎಷ್ಟೋ ಖಾಯಿಲೆಗಳಿಂದ ತಪ್ಪಿಸಿಕೊಳ್ಳಬಹುದು. ಹಾಗೆಯೇ ಕ್ಲೋರಿನ್ ಹಾಕಿ ಕುಡಿಯುವ ನೀರನ್ನು ಶುದ್ಧಗೊಳಿಸಿಕೊಳ್ಳಬಹುದು. ಹೀಗೆ ಹಲವು ರೀತಿಯ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬಹುದು. ಆದರೆ ಜನ ಏಕೆ ಆ ನಿಟ್ಟಿನಲ್ಲಿ ಯೋಚಿಸುವುದಿಲ್ಲ ಅನ್ನುವುದು



ಒಂದು ಒಗಟು. ಅಭಿಜಿತ್ ಹಾಗೂ ದುಫ್ಲೋ ಈ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಜನ ತಕ್ಷಣದ ಅನುಕೂಲವನ್ನಷ್ಟೇ ಸಾಮಾನ್ಯವಾಗಿ ನೋಡುತ್ತಾರೆ. ಎಂದೋ ಬರಬಹುದಾದ ಖಾಯಿಲೆಯ ಬಗ್ಗೆ ಉದಾಸೀನ ತೋರುತ್ತಾರೆ ಅನ್ನುವುದೂ ಒಂದು ಕಾರಣ. ಹಾಗಾಗಿ ಮುಂಜಾಗರೂಕತಾ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಜನರನ್ನು ಒಲೈಸುವುದಕ್ಕೆ, ಮನವೊಲಿಸುವುದಕ್ಕೆ ಪ್ರಯತ್ನಿಸಬೇಕು ಅನ್ನುತ್ತಾರೆ ಇವರು. ಪ್ರಾಯೋಗಿಕವಾಗಿ ಲಸಿಕೆ ಹಾಕಿಸಿಕೊಂಡರೆ ಒಂದು ಕೆಜಿ ಬೇಳೆ ಕೊಡುವುದಾಗಿ ಘೋಷಿಸಲಾಯಿತು. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿತು. ಲಸಿಕೆ ಹಾಕಿಸಿಕೊಳ್ಳಲು ಹೆಚ್ಚು ಜನ ಬಂದರೆ ಸಂಘಟಕರಿಗೂ ಖರ್ಚು ಕಡಿಮೆಯಾಗುತ್ತದೆ. ಯಾಕೆಂದರೆ ಲಸಿಕೆಗೆ ಹಾಕುವುದಕ್ಕೆ ಅಂತ ಹಣ ಖರ್ಚು ಮಾಡಿ ಕ್ಯಾಂಪನ್ನು ಸಂಘಟಿಸಲಾಗಿರುತ್ತದೆ. ಒಟ್ಟಿಗೆ ಹೆಚ್ಚು ಜನ ಬಂದರೆ ಅದೇ ಖರ್ಚಿನಲ್ಲಿ ಹೆಚ್ಚು ಜನರಿಗೆ ಲಸಿಕೆ ಹಾಕಿಬಿಡಬಹುದು. ನೀವು ತಲಾ ಒಂದು ಕೆಜಿ ಬೇಳೆಯನ್ನು ಪುಕ್ಕಟೆ ಹಂಚಿದರೂ ದುಬಾರಿಯೇನಾಗುವುದಿಲ್ಲ. ಜೊತೆಗೆ ಒಟ್ಟಾರೆ ಆರೋಗ್ಯದ ಮೇಲಿನ ಪರಿಣಾಮ ನೋಡಿದರೆ ಇದು ಒಳ್ಳೆಯ ಹೂಡಿಕೆ. ಹಾಗಾಗಿ ಜನರನ್ನು ಈ ನಿಟ್ಟಿನಲ್ಲಿ ಪ್ರೇರೇಪಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಬಡತನವನ್ನು ಪರಿಹರಿಸುವ ನಿಟ್ಟಿನಲ್ಲಿ ಒಂದು ಮುಖ್ಯ ಕ್ರಮವನ್ನಾಗಿ ಇವರು ಸೂಚಿಸುತ್ತಾರೆ.

ಬಿಬಿರ್ ಅನ್ನೋದು ಕೊನವು ಎಂಬ ಮಾಟಗಾತಿಯೊಬ್ಬಳ ಕಥೆ. ಆಕೆಯನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. ಊರಾಚೆ ಗುಡಿಸಲೊಂದರಲ್ಲಿ ವಾಸ ಮಾಡುತ್ತಿರುತ್ತಾಳೆ. ಎಲ್ಲರೂ ಅವಳನ್ನು ಮಾಟಗಾತಿಯೆಂದು ದೂರ ಇಟ್ಟಿರುತ್ತಾಳೆ. ಗೆಳೆಯರೊಂದಿಗೆ ಓಟದ ಪಂದ್ಯದಲ್ಲಿ ಸೋತ ಬಿಬಿರ್ ಮಾಟಗಾತಿಯನ್ನು ಮಾತನಾಡಿಸಬೇಕಾಗಿ ಬರುತ್ತದೆ. ಹಾಗೆ ಮಾತನಾಡಿದಾಗ ಅವಳು ಉಳಿದವರಂತೆ ಸಾಮಾನ್ಯ ಹೆಂಗಸು ಅನ್ನೋದು ಅವನಿಗೆ ಅರ್ಥವಾಗುತ್ತದೆ. ಒಮ್ಮೆ ಮಿಡತೆಗಳ ಹಿಂಡು ಬಂದು ಊರಿನ ಫಸಲನ್ನೆಲ್ಲಾ ತಿಂದು ಹಾಕಿಬಿಡುತ್ತದೆ. ಜನ ಅದಕ್ಕೆ ಮಾಟಗಾತಿ ಕೊನವುಳ ದುಷ್ಟ ಮಂತ್ರಗಳೇ ಕಾರಣ ಅಂತ ಅವಳನ್ನು ಹೊರದಬ್ಬಬೇಕು ಅಂತ ನಿರ್ಧರಿಸುತ್ತಾರೆ. ಬಿಬಿರ್ ಅವಳು ಮಾಟಗಾತಿಯಲ್ಲ ಅಂತ ಜನರನ್ನು ಸಮಾಧಾನಪಡಿಸುತ್ತಾನೆ. ಅವಳಿಗೆ ನೆರವಾಗುತ್ತಾನೆ. ಕೊನೆಗೆ ಸರ್ಕಾರದ ಯೋಜನೆಯಿಂದ ಸಿಕ್ಕ ಹೊಲಿಗೆ ಯಂತ್ರದಿಂದ ಅವಳು ಬಟ್ಟೆ ಹೊಲಿಯುವ ಕೆಲಸ ಮಾಡುತ್ತಾಳೆ. ಜೊತೆಗೆ ಕೊರೊನ ಸಮಯದಲ್ಲಿ ಮಾಸ್ಕ್ ಹೊಲಿಯುವುದಕ್ಕೆ ಊರಿನವರನ್ನೂ ಪ್ರೇರೇಪಿಸಿ, ಅವರಿಗೂ ಉದ್ಯೋಗ ಸಿಗುವಲ್ಲಿ ನೆರವಾಗುತ್ತಾಳೆ. ಇಂದಿಗೂ ವಯಸ್ಸಾದ ಹೆಂಗಸರನ್ನು ಮಾಟಗಾತಿಯರೆಂದು ಕರೆದು ಹೊರಗೆ ಹಾಕುವ ವ್ಯವಸ್ಥೆ ಇದೆ. ಇವರಲ್ಲಿ ಹೆಚ್ಚಿನವರು ನಿರ್ಗತಿಕ ವಿಧವೆಯರಾಗಿರುತ್ತಾರೆ. ಕ್ಷಾಮದ ಸಮಯದಲ್ಲಿ ಅಂತಹವರನ್ನು ಕೊಲ್ಲುವ ಪ್ರಕರಣಗಳು ಹಲವು ಕಡೆ ನಡೆದಿವೆ. ಯುರೋಪಿನಲ್ಲಿ ೧೮೦೦ರ ಸುಮಾರಿನಲ್ಲಿ ಫಸಲು ಕೈಕೊಟ್ಟಾಗ, ಆಹಾರದ ಕೊರತೆಯುಂಟಾದಾಗ "ಮಾಟಗಾತಿ"ಯರನ್ನು ಕೊಲ್ಲುವ ಪ್ರಕರಣಗಳು ವಿಪರೀತವಾಗಿತ್ತಂತೆ. ತಾಂಜೇನಿಯಾದಲ್ಲೂ ಇಂತಹದೇ ಪ್ರಕರಣಗಳು ನಡೆದಿವೆ. ಒಂದಿಷ್ಟು ಜನರನ್ನು ಕೊಂದುಬಿಟ್ಟರೆ ಉಳಿದವರಿಗೆ ಆಹಾರ ಸಾಕಾಗಬಹುದು ಅನ್ನುವ ಲೆಕ್ಕಾಚಾರ ಇದರ ಹಿಂದಿರಬಹುದು. ಬರಗಾಲ ಬಂದಾಗ ಇದ್ದಕ್ಕಿದ್ದ ಹಾಗೆ ಮನೆಯಲ್ಲಿದ್ದ ವಯಸ್ಸಾದ ಹೆಂಗಸು ಮಾಟಗಾತಿಯಾಗಿ ಕಾಣತೊಡಗುತ್ತಾಳೆ. ಬರಗಾಲದ ಸಮಯದಲ್ಲಿ ಗ್ರಾಮೀಣ ಭೂರಹಿತ ರೈತರ ಮನೆಗಳಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳು ಸಾಯುವ ಸಂಖ್ಯೆಯೇ ಹೆಚ್ಚು. ಅಮರ್ತ್ಯಸೇನ್ ಗುರುತಿಸುವಂತೆ ಬರಗಾಲದಲ್ಲಿ ಜನರ ಹಸಿವಿಗೆ ಆಹಾರದ ಕೊರತೆ ಕಾರಣವಲ್ಲ. ಲಭ್ಯವಿರುವ ಆಹಾರವನ್ನು ಸರಿಯಾಗಿ ವಿತರಿಸದೇ ಇದ್ದುದು ಬಹುಮಟ್ಟಿಗೆ ಕಾರಣ. ಈ ಕಥೆಯಲ್ಲಿ ಬಿಬಿರ್ ಬಡ ಅಸಾಹಾಯಕ ಕೊನವುಳ ಪರವಾಗಿ ನಿಲ್ಲುತ್ತಾನೆ. ಈ ಕಥೆ ಓದುವ ಮಕ್ಕಳನ್ನು ಇಂತಹ ಅಸಹಾಯಕ ಹೆಂಗಸರ ಪರವಾಗಿ ನಿಲ್ಲುವುದಕ್ಕೆ ಕರೆ ನೀಡುತ್ತದೆ.

ಬಡತನದೊಂದಿಗೆ ತಕ್ಕೆ ಹಾಕಿಕೊಂಡಿರುವ ಇನ್ನೊಂದು ಸಮಸ್ಯೆ ಲಿಂಗತಾರತಮ್ಯ. ಮಹಿಳೆಯರ ಬಗ್ಗೆ ಇರುವ ಪೂರ್ವಗ್ರಹ. ಮಹಿಳೆಯರಿಗೆ ಹಾಗೂ ಹೆಣ್ಣು ಮಕ್ಕಳಿಗೆ ನಾಯಕರಾಗುವುದಕ್ಕೆ ಸಾಧ್ಯವಿಲ್ಲ ಅನ್ನೋದು ಜಗತ್ತಿನಾದ್ಯಂತ ಇರುವ ನಂಬಿಕೆ. ಅವರು ಮನೆ ನಿರ್ವಹಿಸಿಕೊಂಡು ಮನೆಯೊಳಗೆ ಇರಬೇಕಾದವರು. ಅವರಿಗೆ ನಾಯಕತ್ವ ಸಾಧ್ಯವಿಲ್ಲ ಅನ್ನೋದು ಸಾಮಾನ್ಯ ಭಾವನೆ. ಭಾರತದಲ್ಲಿ ಮಹಿಳೆಯರಿಗೆ ಪಂಚಾಯತಿಗಳಲ್ಲಿ ಸ್ಪರ್ಧಿಸುವ ಅವಕಾಶ ಕಲ್ಪಿಸಲಾಯಿತು. ಹಾಗಾಗಿ ಮಹಿಳೆಯರಿಗೆ ಅವಕಾಶ ಕೊಡುವುದು ಅನಿವಾರ್ಯವಾಯಿತು. ಹಾಗೆ ಊಲಾಳ ಅಮ್ಮ ನೂರ್ ಮಹಿಳೆಯರಿಗೆ ಮೀಸಲಿದ್ದ ಕ್ಷೇತ್ರದಿಂದ ಗೆದ್ದು ಪಂಚಾಯಿತಿ ಅಧ್ಯಕ್ಷೆಯಾಗಿ ಕೆಲಸ ನಿರ್ವಹಿಸುತ್ತಿದ್ದಳು. ಮೊದಲು ಊಲಾಳ ಅಪ್ಪ ಮಾಗೂ ಅಧ್ಯಕ್ಷನಾಗಿದ್ದ. ಈಗ ಆ ಕ್ಷೇತ್ರ ಸಾಮಾನ್ಯ ಕ್ಷೇತ್ರವಾಗಿದೆ. ನೂರ್ ಈ ಬಾರಿ ಸ್ಪರ್ಧಿಸುವುದಿಲ್ಲ ಅಂತ ನಿರ್ಧರಿಸುತ್ತಾಳೆ. "ನಿಜವಾಗಿ ಆಡಳಿತ ನಡೆಸುವವನು ಗಂಡ. ಹೆಂಗಸು ಸುಮ್ಮನೆ ಹೆಸರಿಗೆ" ಅನ್ನುವುದು ಸಾಮಾನ್ಯ ನಂಬಿಕೆ. ಇದನ್ನು ಪರೀಕ್ಷಿಸಲು ಊಲಾ ಮತ್ತು ಬಿಬಿರ್ ಜನರ ಅಭಿಪ್ರಾಯವನ್ನು ಕೇಳಲು ನಿರ್ಧರಿಸುತ್ತಾರೆ. ಅಗ ಅವರಿಗೆ ನೂರ್ ಮಾಡಿದ್ದ ಕೆಲಸಗಳ ತಿಳಿಯುತ್ತದೆ. ಹತ್ತು ವರ್ಷದಿಂದ ಕೆಟ್ಟು ಕೂತಿದ್ದ ಬೋರ್‌ವೆಲ್ಲನ್ನು ರಿಪೇರಿ ಮಾಡಿಸಿರುತ್ತಾಳೆ. ಮಹಿಳೆಯರಿಗೆ ಕೆಲಸ ಕೊಡಿಸಿರುತ್ತಾಳೆ. ಮಹಿಳೆಯರು ಕೆಲಸ ಮಾಡುತ್ತಿದ್ದಾಗ ಮಕ್ಕಳನ್ನು ನೋಡಿಕೊಳ್ಳಲು ಯಾರನ್ನಾದರೂ ನೇಮಿಸುತ್ತಿದ್ದಳು. ಸೋರುತ್ತಿದ್ದ ಸ್ಕೂಲಿನ ಮಾಡು ರಿಪೇರಿ ಮಾಡಿಸಿದ್ದಳು. ಗ್ರಾಮಕ್ಕಾಗಿ ತನ್ನ ಅಮ್ಮ ತುಂಬಾ ಒಳ್ಳೆ ಕೆಲಸ ಮಾಡಿದ್ದಾಳೆ ಅಂತ ಗೊತ್ತಾಗುತ್ತದೆ. ಆದರೆ ಗಂಡನ ವಿರುದ್ಧ ಅವಳು ಚುನಾವಣೆಗೆ ನಿಲ್ಲುವುದಕ್ಕೆ ಒಪ್ಪುವುದಿಲ್ಲ. ಕೊನೆಗೆ ಮಕ್ಕಳು ನೀಲೂಳ ಅಮ್ಮ ಶೋನಾಳನ್ನು ಒಪ್ಪಿಸಿ ನಿಲ್ಲಿಸುತ್ತಾರೆ. ಮಾಗೂಗೆ ಗೆದ್ದೆ ಗೆಲ್ಲುತ್ತೇನೆ ಅನ್ನುವ ವಿಶ್ವಾಸ ಇರುತ್ತದೆ. ಸಾರಾಯಿ ಹಂಚುತ್ತಾನೆ. ಟಿ ಶರ್ಟ್ ಹಂಚುತ್ತಾನೆ. ಗೆಲ್ಲುವುದಿಲ್ಲ ಅನಿಸಿ ಶೋನಾಳನ್ನು ಬೆದರಿಸುತ್ತಾನೆ. ಕೊನೆಗೆ ನೂರ್ ಗಂಡನಿಗೆ ಒಳ್ಳೆ ಕೆಲಸವನ್ನು ಮಾಡುವವರನ್ನು ಬೆಂಬಲಿಸಿ ವರ್ಚಸ್ಸನ್ನು ಹೆಚ್ಚಿಸಿಕೊಳ್ಳಲು ಸಲಹೆ ನೀಡುತ್ತಾಳೆ. ಶೋನಾ ಗೆಲ್ಲುತ್ತಾಳೆ.

ಇದು ಎಸ್ಥರ್ ಪಶ್ಚಿಮ ಬಂಗಾಳದಲ್ಲಿ ಅಧ್ಯಯನ ಮಾಡಿದಾಗ ಗಮನಿಸಿದ್ದ ಸಂಗತಿ. ಅಲ್ಲಿ ಇವರು ನಡೆಸಿದ ಸಮೀಕ್ಷೆಯ ಪ್ರಕಾರ ಮಹಿಳಾ ಪ್ರತಿನಿಧಿಗಳು ಹಳ್ಳಿಯ ಬೇರೆ ಹೆಣ್ಣು ಮಕ್ಕಳ ಅವಶ್ಯಕತೆಗೆ ಗಮನಕೊಟ್ಟಿದ್ದರು. ಹೊಸ ಬಾವಿಗಳನ್ನು ತೋಡಿಸಿದ್ದರು. ಹಾಳಾಗಿದ್ದ ಬಾವಿಗಳನ್ನು ದುರಸ್ತಿ ಮಾಡಿಸಿದ್ದರು. ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿದ್ದರು. ಇರುವ ಬಜೆಟ್ಟಿನಲ್ಲೇ ಪುರುಷರಿಗಿಂತ ಹೆಚ್ಚು

ಕೆಲಸ ಮಾಡಿದ್ದೂ ಕಂಡು ಬರುತ್ತದೆ. ಗಂಡಸರಿಗೆ ಹೋಲಿಸಿದರೆ ಮಹಿಳೆಯರ ಶಿಕ್ಷಣ ಮಟ್ಟ ಕಡಿಮೆ. ರಾಜಕೀಯವಾಗಿ ಅನುಭವ ಕಡಿಮೆ. ಅವರ ವಿರುದ್ಧ ಪೂರ್ವಗ್ರಹಗಳು ಹೆಚ್ಚು ತೀವ್ರವಾಗಿದ್ದವು. ಇವೆಲ್ಲವುಗಳ ನಡುವೆಯೂ ಅವರು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದು ಕಾಣಿಸುತ್ತದೆ. ನಿಜ ನೂರ್ ತರಹದ ಕೆಲವರು ಗಂಡನನ್ನು ವಿರೋಧಿಸಿಕೊಂಡು ಮುಂದೆ ಬರಲು ಹಿಂದೇಟು ಹಾಕಿದ್ದರು. ಆದರೆ ಹೊಸಬರು ಮುಂದೆ ಬಂದಿದ್ದಾರೆ. ಮೊದಲಿಗೆ ಜನರು ಬೇರೆ ದಾರಿಯಿಲ್ಲದೆ ಅನಿವಾರ್ಯವಾಗಿ ಮಹಿಳೆಯರಿಗೆ ಮತ ನೀಡಬೇಕಿತ್ತು. ನಂತರದಲ್ಲಿ ಬೇರೆ ಆಯ್ಕೆಯಿದ್ದಾಗಲೂ ಮಹಿಳೆಯರಿಗೆ ಮತನೀಡಿದ್ದು ಕಂಡುಬರುತ್ತದೆ.

ವಲಸೆ ಇಂದು ತುಂಬಾ ದೊಡ್ಡ ಸಮಸ್ಯೆಯಾಗಿ ನಮ್ಮ ಮುಂದಿದೆ. ಉದ್ಯೋಗದ ಕೊರತೆಯಿಂದ ಬೇರೆ ಕಡೆಗೆ ಕೆಲಸ ಹುಡುಕಿಕೊಂಡು ಹೋಗುವುದು ಸ್ವಾಭಾವಿಕ ಪ್ರಕ್ರಿಯೆ. ನೆಸೊ ಅನ್ನುವ ಹುಡುಗ ಕೂಡ ಹಾಗೆ ಕೆಲಸ ಹುಡುಕುತ್ತಾ ಸಿಟಿಗೆ ಹೋಗುತ್ತಾನೆ. ಅಲ್ಲಿ ಇವನಿಗಿಂತ ಮೊದಲೇ ಹೋಗಿದ್ದ ಇವನ ನೆಂಟರು ಇವನಿಗೆ ಕೆಲಸ ಕೊಡಿಸುತ್ತಾರೆ. ಮಲಗಲು ಜಾಗ ಇಲ್ಲ. ಕೆಲಸ ನಡೆಯುತ್ತಿದ್ದ ಜಾಗದಲ್ಲೇ ರಾತ್ರಿ ಕಳೆಯುತ್ತಿದ್ದ. ದುಡಿದ ಹಣದಲ್ಲಿ ಅಮ್ಮ ಅಪ್ಪನಿಗೆ ದುಡ್ಡು ಕಳಿಸಿದ. ಮಧ್ಯದಲ್ಲಿ ಊರಿಗೆ ಹೋಗಿದ್ದಾಗ ಕಸ ಹೆಕ್ಕುತ್ತಿದ್ದ ಗೆಳೆಯ ನಾಜೆಯನ್ನು ಕಂಡ. ನಾಜೆಯದ್ದು ತುಂಬಾ ಬಡತನದ ಬದುಕು. ಬೇರೆ ದಾರಿ ಇಲ್ಲದೆ ಅವನೂ ನೆಸೊನ ಜೊತೆ ಸಿಟಿಗೆ ಹೋಗುತ್ತಾನೆ. ಬಲು ಬೇಗ ದುಡ್ಡು ಉಳಿಸಿ ಮನೆಯವರಿಗೆ ಕಳುಹಿಸುವುದಕ್ಕೆ ಅವನಿಗೆ ಸಾಧ್ಯವಾಗುತ್ತದೆ. ಪಟ್ಟಣದ ಬದುಕಿನಲ್ಲೂ ಏಳು ಬೀಳು ಇರುತ್ತದೆ. ಕೊರೋನಾ ಸಮಯದಲ್ಲಿ ಇಡೀ ಊರನ್ನು ಲಾಕ್‌ಡೌನ್ ಮಾಡಲಾಯಿತು. ಬಸ್ಸಿಲ್ಲದೆ ನೆಸೊ ನಾಜೆ ಇಬ್ಬರು ನಡೆದುಕೊಂಡು ಊರಿಗೆ ಬರಬೇಕಾಯಿತು. ಆ ಅನುಭವ ನೆಸೊವನ್ನು ಧೃತಿಗೆಡಿಸಿರುತ್ತದೆ. ಕೋವಿಡ್ ನಿಂತ ಮೇಲೆ ಅವನು ಮತ್ತೆ ವಲಸೆ ಹೋಗುವುದಿಲ್ಲ. ಊರಲ್ಲೇ ಉಳಿಯುತ್ತಾನೆ. ನಾಜೆ ಮಾತ್ರ ವಲಸೆ ಹೋಗುತ್ತಾನೆ. ವಲಸೆ ಹೋಗುವುದು ಸುಲಭದ ಅನುಭವವಲ್ಲ. ಗೊತ್ತಿಲ್ಲದ ಜಾಗಕ್ಕೆ, ಗೊತ್ತಿಲ್ಲದವರ ನಡುವೆ ಕೆಲಸ ಮಾಡುವುದು ಆತಂಕದ ವಿಷಯ. ತಮ್ಮ ಊರಿನಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲ ಅನಿಸಿದಾಗ ವಲಸೆ ಹೋಗುತ್ತಾರೆ. ಮೊದಲು ಧೈರ್ಯದಿಂದ ಹೋದ ನೆಸೊ ಅಂತಹವರು ಕೂಡ ನಂತರದ ಕೋವಿಡ್ ಕೋವಿಡ್ ಭೀತಿಯ ನಂತರ ವಲಸೆ ಹೋಗದೆ ಊರಲ್ಲೇ ನಿಂತರು. ನಿಜ ಬೇರೆ ಕಡೆ ಕೆಲಸ ಮಾಡಿ ಹೆಚ್ಚಿನ ಹಣ ಸಂಪಾದಿಸಬಹುದು ಅಂತ ತಿಳಿದಿದ್ದರೂ ಹೋಗುವುದಕ್ಕೆ ಧೈರ್ಯ ಮಾಡಲಿಲ್ಲ. ವಲಸೆಯ ಬಗ್ಗೆ ದುಫ್ಲೋ ಹಾಗೂ ಬ್ಯಾನರ್ಜಿಯವರು ಒಂದು ವಿವರವಾದ ಲೇಖನವನ್ನು ತಮ್ಮ ಗುಡ್ ಎಕನಾಮಿಕ್ಸ್ ಫಾರ್ ಹಾರ್ಡ್ ಟೈಮ್ಸ್ ಪುಸ್ತಕದಲ್ಲಿ ಬರೆದಿದ್ದಾರೆ.

ಬಡವರು ಉಳಿದವರಂತೆಯೇ ಸಾಮಾನ್ಯ ಮನುಷ್ಯರು. ಬಡತನ ಒಂದಿಷ್ಟು ರಿಸ್ಕ್ ತೆಗೆದುಕೊಳ್ಳಲು ಒತ್ತಾಯಿಸುತ್ತದೆ. ಆದರೆ ಎಲ್ಲರೂ ಹಾಗೆ ರಿಸ್ಕ್ ತೆಗೆದುಕೊಳ್ಳಲು ಬಯಸುವುದಿಲ್ಲ. ತೀರಾ ದಾರಿಯಿಲ್ಲವಾದಾಗ ಅನಿವಾರ್ಯವಾಗಿ ಕೆಲವು ಕೆಲಸವನ್ನು ಮಾಡುತ್ತಾರೆ. ಅದರಲ್ಲಿ ಅವರು ಪರಿಣತರೂ ಆಗಿರುವುದಿಲ್ಲ. ಅದನ್ನು ಮಾಡುವ ಇಷ್ಟವೂ ಅವರಿಗಿರುವುದಿಲ್ಲ, ಅನಿವಾರ್ಯವಾಗಿ ಮಾಡುತ್ತಾರೆ. ಇದರಲ್ಲಿ ಉದ್ದಿಮೆದಾರಳಾಗಲೂ ಬಯಸುವ ಇಮ್ಯುನಿಯ ಕಥೆ ಇದೆ. ಇದು ಕನ್ನಡಕ್ಕೆ ಅನುವಾದವಾಗಿಲ್ಲ. ಅವಳು ಸಾಲ ಸಿಗುತ್ತದೆ ಅನ್ನುವ ಕಾರಣಕ್ಕೆ ಉದ್ದಿಮೆ ನಡೆಸಲು ಮುಂದಾಗುತ್ತಾಳೆ. ಆದರೆ ಏನೂ ಮಾಡಬೇಕು ಅಂತ ಗೊತ್ತಿಲ್ಲ. ಆ ಬಗ್ಗೆ ಅವಳು ಯೋಚಿಸಿಯೇ ಇಲ್ಲ. ಹಲವು ಪ್ರಯತ್ನಗಳು ವಿಫಲವಾಗುತ್ತದೆ. ಕೊನೆಗೆ ದೊಡ್ಡ ಸಂಘಟನೆಯೊಂದಿಗೆ ಸೇರಿಕೊಂಡು ಕೆಲಸ ಮಾಡುವ ಆಲೋಚನೆ ಬರುತ್ತದೆ. ಕೆಲವು ಪಾಠಗಳನ್ನು ಟ್ಯಾಬ್ಲೆಟ್ಟುಗಳಲ್ಲಿ ಹಾಕಿ ಶಾಲೆಗಳಲ್ಲಿ ಮಕ್ಕಳೊಂದಿಗೆ ಹಂಚಿಕೊಳ್ಳಲು ಪ್ರಾರಂಭಿಸುತ್ತಾಳೆ. ಪ್ರಥಮ್ ಅಂತಹ ಸಂಸ್ಥೆಯ ಮಾರ್ಗದರ್ಶನ, ತರಬೇತಿಯಲ್ಲಿ ಅವಳು ಕೆಲಸ ಕಂಡುಕೊಳ್ಳುತ್ತಾಳೆ. ಹುಟ್ಟುತ್ತಲೇ ಎಲ್ಲರಿಗೂ ಉದ್ದಿಮೆದಾರರಾಗುವ ಸಾಮರ್ಥ್ಯವಿರುವುದಿಲ್ಲ. ಅದಕ್ಕೆ ತರಬೇತಿ, ಮಾರ್ಗದರ್ಶನ ಎಲ್ಲವೂ ಬೇಕಾಗುತ್ತದೆ. ಕೆಲವರಿಗೆ ಸಾಧ್ಯವೇ ಅಗದೇ ಇರಬಹುದು. ಹೀಗೆ ಹಲವು ಸಮಸ್ಯೆಗಳನ್ನು ಇವರು ಚರ್ಚಿಸಿದ್ದಾರೆ.

ನೀಲೂ ಮತ್ತು ಅವಳ ಗೆಳೆಯರು ತಮ್ಮ ಕಥೆಗಳ ಮೂಲಕ ನಮ್ಮ ಮುಂದೆ ಜೀವಂತ ನಿಲ್ಲುತ್ತಾರೆ. ಅಭಿಜಿತ್ ಬ್ಯಾನರ್ಜಿಯವರು ಮೊದಲ ಮಾತಿನಲ್ಲಿ ಹೇಳುವಂತೆ ಕೆಲವೊಮ್ಮೆ ಬೇಸರಿಸಿಕೊಂಡಿರುತ್ತಾರೆ. ಕೆಲವೊಮ್ಮೆ ಭರವಸೆ ಮೂಡಿಸುತ್ತಾರೆ. ಕಷ್ಟಪಟ್ಟು ಪ್ರಯತ್ನಿಸುತ್ತಿರುತ್ತಾರೆ. ಕೆಲವೊಮ್ಮೆ ಯಶಸ್ವಿಯಾಗುತ್ತಾರೆ. ಕೆಲವೊಮ್ಮೆ ಹತಾಶರಾಗಿರುತ್ತಾರೆ. ಕೆಲವೊಮ್ಮೆ ಸಂತೋಷದಿಂದ ಇರುತ್ತಾರೆ. ಅವರ ಬದುಕು ಕೆಲವೊಮ್ಮ ನಮಗೆ ತುಂಬಾ ಹತ್ತಿರದ್ದು ಅನಿಸುತ್ತದೆ. ಕೆಲವೊಮ್ಮೆ ದೂರ ಅನಿಸುತ್ತದೆ. ಅವು ನಮಗಿಂತ ಭಿನ್ನವಾಗಿಯೂ ತೋರುತ್ತದೆ. ಕೆಲವೊಮ್ಮೆ ನಮ್ಮದೇ ಬದುಕು ಅನಿಸುತ್ತದೆ. ಒಟ್ಟಾರೆಯಾಗಿ ಮಾನವೀಯತೆಗೆ ನಮ್ಮನ್ನು ತೆರೆದುಕೊಳ್ಳುವಂತೆ ಒತ್ತಾಯಿಸುತ್ತದೆ. ಮಾನವೀಯತೆಯಿಂದ ಸ್ಪಂದಿಸುವಂತೆ ಹೇಳುತ್ತದೆ. ನಮ್ಮ ಬಹುತೇಕ ಮಕ್ಕಳು ಆ ಜಗತ್ತನ್ನು ನೋಡಿರಲಿಲ್ಲ. ಅಥವಾ ಜಗತ್ತನ್ನು ಹಾಗೆ ನೋಡಿರಲಿಲ್ಲ. ದುಫ್ಲೊ ಹಾಗೂ ಶಾಯೇನ್ ಒಲೀವ್ಹಿಯೆ ಅವರ ಪ್ರಯತ್ನದಿಂದ ನಮ್ಮ ಮಕ್ಕಳಿಗೆ ಜಗತ್ತನ್ನು ಬೇರೆ ರೀತಿಯಲ್ಲಿ ನೋಡುವುದಕ್ಕೆ ಅವಕಾಶ ಸಿಕ್ಕಿದೆ. ಹೊಸ ನೋಟದಿಂದ, ಹೊಸ ಮನಸ್ಸುಗಳಿಂದ ಉತ್ತಮ ಪರಿಹಾರಗಳು ಸಿಗಬಹುದು





ಟ್ರಂಪ್‌ನ ಸುಂಕದ ಪರಿಣಾಮ ಹಲವು ದೇಶಗಳ ಮೇಲೆ ಹಲವು ರೀತಿ ಆಗುತ್ತಿದೆ. ಇಡೀ ಜಾಗತಿಕ ಆರ್ಥಿಕತೆಯ ಮೇಲೆ ಅದರ ಪ್ರಭಾವ ಇರುವುದರಿಂದ ಅದನ್ನು ಕುರಿತು ಚರ್ಚಿಸುವುದು, ಅರ್ಥಮಾಡಿಕೊಳ್ಳುವುದು ಅವಶ್ಯಕ. ಆ ದೃಷ್ಟಿಯಿಂದ ಇದಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಕೆಲವು ಪ್ರಮುಖ ಲೇಖನಗಳನ್ನು ಅನುವಾದಿಸಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

ಟ್ರಂಪ್‌ನ ಸುಂಕ– ಹಲವು ಅಭಿಪ್ರಾ:ಯಗಳು

ಟ್ರಂಪ್‌ನ ಸುಂಕಗಳ ನಿಜವಾದ ಅರ್ಥ


ಆಗಸ್ಟ್ ೧೪, ೨೦೨೫

ಕಾರ್ಲ್ ನಾರ್ಲೋಫ್

ಈ ಬೇಸಿಗೆಯಲ್ಲಿ, ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಮಾರು ೧೦೦ ದೇಶಗಳ ಮೇಲೆ ಸುಂಕವನ್ನು ಹೇರಿದ್ದಾರೆ. ಈ ಹೊಡೆತಕ್ಕೆ ಮಾರುಕಟ್ಟೆ ತಲ್ಲಣಗೊಂಡಿದೆ. ಮಿತ್ರ ರಾಷ್ಟ್ರಗಳ ರಾಜಧಾನಿಗಳಲ್ಲಿ ಪ್ರತಿಭಟನೆಗಳಿಗೆ ಕಾರಣವಾಗಿದೆ. ವ್ಯಾಪಾರ ವಕೀಲರಲ್ಲಿ ಗೊಂದಲವನ್ನು ಸೃಷ್ಟಿಸಿದೆ. ಶ್ವೇತಭವನದ ಪ್ರಕಾರ ವ್ಯಾಪಾರ ಕೊರತೆಯನ್ನು ಸರಿಪಡಿಸಲು ಅದು ಸುಂಕವನ್ನು ಒತ್ತಡವಾಗಿ (ಬೇರೆ ಕಾರಣಗಳೂ ಇವೆ) ಬಳಸಿಕೊಳ್ಳುತ್ತಿದೆ. ಆದರೆ ಅಂಕಿಅಂಶಗಳು ಬೇರೆಯದೇ ಕಥೆಯನ್ನು ಹೇಳುತ್ತವೆ.

ನಿಜವಾಗಿ ಸುಂಕಗಳ ಉದ್ದೇಶ ವ್ಯಾಪಾರದ ಕೊರತೆಯನ್ನು ಸರಿಪಡಿಸುವುದೇ ಆಗಿದ್ದರೆ, ತರ್ಕವು ಅದಕ್ಕೆ ಸರಿಹೊಂದುವಂತೆ ಇರಬೇಕಿತ್ತು. ವ್ಯಾಪಾರದ ಕೊರತೆ ಅತಿಹೆಚ್ಚಿರುವ ದೇಶಗಳ ಮೇಲೆ ಅತ್ಯಧಿಕ ಸುಂಕ ವಿಧಿಸಬೇಕು. ಅಂದರೆ ಅಮೇರಿಕೆಯ ರಫ್ತಿಗಿಂತ ಆಮದು ಅತಿಹೆಚ್ಚಿರುವ ದೇಶಗಳ ಮೇಲೆ ಅತ್ಯಧಿಕ ಸುಂಕ ವಿಧಿಸಬೇಕು. ಈ ಮಾನದಂಡದ ಪ್ರಕಾರ, ಚೀನಾವನ್ನು ಹೊರತುಪಡಿಸಿದರೆ, ಅಮೇರಿಕೆಯ ಅತ್ಯಧಿಕ ದ್ವಿಪಕ್ಷೀಯ ಸರಕು–ವ್ಯಾಪಾರ ಕೊರತೆಗಳನ್ನು ಯುರೋಪಿಯನ್ ಯೂನಿಯನ್ (–೦.೮೫% ಯುಎಸ್ ಜಿಡಿಪಿ), ಮೆಕ್ಸಿಕೊ (–೦.೬೨%), ವಿಯೆಟ್ನಾಂ (–೦.೪೫%), ಮತ್ತು ಜಪಾನ್ (–೦.೨೫%) ನಲ್ಲಿ ನೋಡುತ್ತೇವೆ.

ಕೊರತೆಯನ್ನು ಆಧರಿಸಿ ಸುಂಕ ನಿರ್ಧರಿಸಿದ್ದರೆ, ಈ ಆರ್ಥಿಕತೆಗಳು






ಕಾರ್ಲಾ ನಾರ್ಲೋಫ್

ಗ್ರಾಫ್‌ನ ಮೇಲ್ಭಾಗದಲ್ಲಿರಬೇಕಿತ್ತು. ಬದಲಿಗೆ, ಯುರೋಪಿಯನ್ ಯೂನಿಯನ್‌ಗೆ ಕೇವಲ ೧೫% ಸುಂಕ, ಮೆಕ್ಸಿಕೊಗೆ ೨೫%, ವಿಯೆಟ್ನಾಮ್‌ಗೆ ೨೦%, ಮತ್ತು ಜಪಾನ್‌ಗೆ ೧೫% ಸುಂಕವನ್ನು ವಿಧಿಸಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ತೀರಾ ಕಡಿಮೆ ಮಿಗುತಾಯ ಅಥವಾ ಕೊರತೆಯ ವ್ಯಾಪಾರವಿರುವ ದೇಶಗಳ ಮೇಲೆ ಅತ್ಯಧಿಕ ಸುಂಕ ವಿಧಿಸಲಾಗಿದೆ. ಬ್ರೆಜಿಲ್‌ನಲ್ಲಿ ಅಮೇರಿಕೆಯಿಂದ ಆಮದು ಮಾಡಿಕೊಳ್ಳುವುದಕ್ಕಿಂತ ಅಮೇರಿಕೆಗೆ ರಫ್ತು ಮಾಡುವುದು ಕೇವಲ +೦.೦೩% ಅಷ್ಟು ಹೆಚ್ಚು. ಆದರೆ ಬ್ರೆಜಿಲ್ ಮೇಲೆ ಎಲ್ಲಾ ದೇಶಗಳಿಗಿಂತ ಅತ್ಯಧಿಕ ೫೦% ಸುಂಕ ವಿಧಿಸಲಾಗಿದೆ. ದ್ವಿಪಕ್ಷೀಯ ಕೊರತೆ ಅಮೇರಿಕೆಯ ಜಿಡಿಪಿಯ -೦.೦೦೩% ಇರುವ ಲಾವೋಸ್ ಮೇಲೆ ೪೦% ಸುಂಕ ವಿಧಿಸಲಾಗಿದೆ.

ಮೇಲಿನ ಗ್ರಾಫ್‌ನಲ್ಲಿ, ಗಾಢ ಹಸಿರು ಗುಳ್ಳೆಗಳು ಅಮೇರಿಕೆಯೊಂದಿಗೆ ಅತ್ಯಧಿಕ ವ್ಯಾಪಾರ ಕೊರತೆಯಿರುವ ದೇಶಗಳನ್ನು ಸೂಚಿಸುತ್ತವೆ.



ಸುಂಕಗಳ ಉದ್ದೇಶ ನಿಜವಾಗಿಯೂ ವ್ಯಾಪಾರದ ಕೊರತೆಯನ್ನು ಸರಿಪಡಿಸುವುದೇ ಆಗಿದ್ದರೆ, ಗ್ರಾಫ್‌ನ ಕೆಳಗಿನ ಎಡ ಮೂಲೆಯಲ್ಲಿ (ಗಾಢ ಛಾಯೆಗಳೊಂದಿಗೆ) ಅತಿದೊಡ್ಡ ಗುಳ್ಳೆಗಳು ಇರಬೇಕಿತ್ತು. ಅದು ಅತಿ ದೊಡ್ಡ ಕೊರತೆಯಿರುವ ದೇಶಗಳಿಗೆ ಅತ್ಯಧಿಕ ದಂಡವನ್ನು ವಿಧಿಸಿದಂತೆ ಆಗುತ್ತದೆ. ಬದಲಿಗೆ, ಆ ಪ್ರದೇಶ ಬಹುತೇಕ ಖಾಲಿಯಿದೆ. ಕೇವಲ ಒಂದು ಸಣ್ಣ ಗುಳ್ಳೆ ಮತ್ತು ಕೆಲವು ಮಧ್ಯಮ ಗಾತ್ರದ ಗುಳ್ಳೆಗಳಿವೆ. ಅತಿದೊಡ್ಡ ಗುಳ್ಳೆಗಳು ತಿಳಿಯಾಗಿವೆ, ಶೂನ್ಯ ರೇಖೆಯ ಸುತ್ತಲೂ ಗುಂಪಾಗಿವೆ ಮತ್ತು ಕೆಲವು ಮಿಗುತಾಯವಿರುವ ಪ್ರದೇಶಗಳಿಗೂ ವಿಸ್ತರಿಸಿವೆ. ಈ ಅಂಕಿಅಂಶಗಳನ್ನು ನೋಡಿದರೆ ಅಮೇರಿಕೆ ಅತ್ಯಧಿಕ ಸುಂಕವನ್ನು ಕೊರತೆಯೇ ಇಲ್ಲದ ಅಥವಾ ಕೆಲವೊಮ್ಮೆ ಮಿಗುತಾಯವಿರುವ ದೇಶಗಳ ಮೇಲೆ ವಿಧಿಸುತ್ತಿದೆ ಎಂಬುದು ತಿಳಿಯುತ್ತದೆ.

ಒಂದು ವೇಳೆ ಸುಂಕವನ್ನು ಪ್ರಭಾವ ಹೇರುವುದಕ್ಕೆ ಬಳಸುತ್ತಿದ್ದರೆ, ತರ್ಕವು ಬೇರೆಯಾಗಿರಬೇಕಿತ್ತು. ಇಲ್ಲಿ ಪ್ರಶ್ನೆ ಅಮೇರಿಕೆ ಯಾರನ್ನು ಹೆಚ್ಚು ಅವಲಂಬಿಸಿದೆ ಎಂಬುದಕ್ಕಿಂತ, ಯಾವ ದೇಶಗಳು ಅಮೇರಿಕೆಯ ಮಾರುಕಟ್ಟೆಯನ್ನು ಹೆಚ್ಚು ಅವಲಂಬಿಸಿವೆ ಎಂಬುದು ಮುಖ್ಯ ಪ್ರಶ್ನೆಯಾಗುತ್ತದೆ. ತನ್ನ ಜಿಡಿಪಿಯ ದೊಡ್ಡ ಭಾಗವನ್ನು ಅಮೇರಿಕೆಗೆ ರಫ್ತು ಮಾಡುವ ಮತ್ತು ಅಮೇರಿಕೆಯಿಂದ ಸಾಪೇಕ್ಷವಾಗಿ ಕಡಿಮೆ ಖರೀದಿಸುವ ದೇಶಕ್ಕೆ ಚೌಕಾಸಿಯ ಸಾಮರ್ಥ್ಯವಿರುವುದಿಲ್ಲ. ಈ ಮಾನದಂಡದ ಪ್ರಕಾರ, ಅತ್ಯಧಿಕ ಅವಲಂಬನೆಯ ಕೊರತೆ ಇರುವ ದೇಶಗಳಿಗೆ (ಎರಡನೇ ಗ್ರಾಫ್‌ನ ಕರ್ಣೀಯ ರೇಖೆಗಿಂತ ಮೇಲಿರುವವರಿಗೆ) ಅತ್ಯಧಿಕ ದರವನ್ನು ವಿಧಿಸಬೇಕಿತ್ತು. ಅದರಂತೆ, ವಿಯೆಟ್ನಾಂ (ತನ್ನ ಜಿಡಿಪಿಯ ೩೨% ಅಮೇರಿಕೆಗೆ ರಫ್ತು ಮಾಡುತ್ತದೆ), ಗಯಾನ (೩೧%), ಕಾಂಬೋಡಿಯಾ (೩೦%), ಮೆಕ್ಸಿಕೊ (೨೮%), ಮತ್ತು ನಿಕರಾಗುವಾ (೨೬%) ಗಳನ್ನು ನೇರವಾಗಿ ಗುರಿಯಾಗಿಸಬೇಕಿತ್ತು.

ಆದರೆ, ಮೆಕ್ಸಿಕೊಗೆ ಮಾತ್ರ ೨೫% ಸುಂಕವನ್ನು ವಿಧಿಸಲಾಗಿದೆ. ಉಳಿದ ದೇಶಗಳಿಗೆ ೨೦% ಅಥವಾ ಕಡಿಮೆ ಸುಂಕವನ್ನು ವಿಧಿಸಲಾಗಿದೆ. ಬದಲಿಗೆ, ಅತ್ಯಧಿಕ ಸುಂಕವನ್ನು ಕಡಿಮೆ ಅವಲಂಬಿತ ದೇಶಗಳ ಮೇಲೆ ವಿಧಿಸಲಾಗಿದೆ. ಬ್ರೆಜಿಲ್ (ಅಮೇರಿಕೆಗೆ ತನ್ನ ಸರಕುಗಳನ್ನು ರಫ್ತು ಮಾಡುವ ಮೂಲಕ ಜಿಡಿಪಿಯ ೨% ಪಡೆಯುತ್ತಿದೆ) ಮತ್ತು ಭಾರತ (ಜಿಡಿಪಿಯ ೨.೫% ಮೌಲ್ಯದ ಸರಕುಗಳನ್ನು ರಫ್ತು ಮಾಡುತ್ತಿದೆ). ಈ ಗ್ರಾಫ್‌ನಲ್ಲಿ, ಅತಿದೊಡ್ಡ ಗುಳ್ಳೆಗಳು ಕರ್ಣೀಯ ರೇಖೆಗಿಂತ ಮೇಲೆ ಎಡಭಾಗದಲ್ಲಿ ಇರಬೇಕಿತ್ತು. ಅದು ಅಮೇರಿಕೆಯ ಮಾರುಕಟ್ಟೆಯನ್ನು ಹೆಚ್ಚು ಅವಲಂಬಿಸಿರುವ ಮತ್ತು ಅಮೇರಿಕೆ ಕಡಿಮೆ ಅವಲಂಬಿತವಾಗಿರುವ ದೇಶಗಳನ್ನು ಸೂಚಿಸುತ್ತದೆ. ಬದಲಿಗೆ, ಆ ಪ್ರದೇಶದಲ್ಲಿ ಸಣ್ಣ ಮತ್ತು ಮಧ್ಯಮ ಗಾತ್ರದ ಗುಳ್ಳೆಗಳನ್ನು ಕಾಣಬಹುದು. ಆದರೆ ಅತಿದೊಡ್ಡ ಗುಳ್ಳೆಗಳು ಕೆಳಗಿವೆ, ಕೆಲವು ಬಲಕ್ಕೆ ವಾಲಿವೆ

ಹಾಗಾಗಿ ವ್ಯಾಪಾರದ ಕೊರತೆಯಾಗಲಿ ಅಥವಾ ಪ್ರಭಾವ ಹೇರುವ ತಂತ್ರವಾಗಲಿ ಈ ಗ್ರಾಫ್‌ಅನ್ನು ವಿವರಿಸುವುದಿಲ್ಲ. ಬದಲಿಗೆ, ಇದಕ್ಕೆ ರಾಜಕೀಯ ಕಾರಣವೇ ಮುಖ್ಯವೆಂದು ತೋರುತ್ತದೆ. ಟ್ರಂಪ್‌ರ ಶ್ವೇತಭವನ ತನ್ನ ಕಡೆಗಿರುವವರಿಗೆ ಒಲವು ತೋರುತ್ತದೆ, ಸ್ವತಂತ್ರ ನಿಲುವಿನವರನ್ನು ಶಿಕ್ಷಿಸುತ್ತದೆ, ಮತ್ತು ತನ್ನ ವೈರಿಗಳನ್ನು ಗುರಿಯಾಗಿಸುತ್ತಿದೆ. ಬೋಸ್ನಿಯಾ ಮತ್ತು ಹರ್ಜೆಗೋವಿನಾವನ್ನು ಪರಿಗಣಿಸಿ. ಇವು ಅಮೇರಿಕೆಯೊಂದಿಗೆ ತೀರಾ ಕಡಿಮೆ ಕೊರತೆಯನ್ನು ಹೊಂದಿವೆ ಮತ್ತು ಅಮೇರಿಕೆಯನ್ನು ತೀರಾ ಕಡಿಮೆ ಅವಲಂಬಿಸಿವೆ. ಆದರೆ ಚೀನಾ ಅಲ್ಲಿ ಮೂಲಸೌಕರ್ಯಕ್ಕೆ (ಚೀನಾದ ಬೆಲ್ಟ್ ಆಂಡ್ ರೋಡ್ ಇನಿಶಿಯೇಟಿವ್ ಅಡಿಯಲ್ಲಿ ಜಲವಿದ್ಯುತ್ ಯೋಜನೆಗಳು ಮತ್ತು ಹೆದ್ದಾರಿಗಳು ಸೇರಿದಂತೆ) ಬಂಡವಾಳ ಹೂಡಿದೆ. ಹಾಗಾಗಿ ಅದು ರಾಜಕೀಯವಾಗಿ ಟ್ರಂಪಿಗೆ ಸಮ್ಮತವಲ್ಲ.

ಹಾಗೆಯೇ, ೪೦% ಸುಂಕವನ್ನು ಎದುರಿಸುತ್ತಿರುವ ಮಯನ್ಮಾರ್



ಅಮೇರಿಕೆಯೊಂದಿಗೆ ತೀರಾ ಕಡಿಮೆ ವ್ಯಾಪಾರ ಕೊರತೆಯನ್ನು ಹೊಂದಿದೆ ಮತ್ತು ಅಮೇರಿಕೆಯನ್ನು ತೀರಾ ಕಡಿಮೆ ಅವಲಂಬಿಸಿದೆ. ಆದರೆ ಚೀನಾದ ಮೇಲೆ ಆರ್ಥಿಕವಾಗಿ ಬಹಳವಾಗಿ ಅವಲಂಬಿಸಿದೆ ಮತ್ತು ೨೦೨೧ರ ದಂಗೆಯ ನಂತರ ರಷ್ಯಾದೊಂದಿಗೆ ರಕ್ಷಣಾ ಸಂಬಂಧವನ್ನು ಬಲಪಡಿಸಿಕೊಂಡಿದೆ. ೩೫% ಸುಂಕವನ್ನು ಎದುರಿಸುತ್ತಿರುವ ಸರ್ಬಿಯಾದ ಅಮೇರಿಕೆಯೊಂದಿಗಿನ ವ್ಯಾಪಾರ ಕೊರತೆಯೂ ತೀರಾ ಕಡಿಮೆ. ಆದರೆ ರಷ್ಯಾದೊಂದಿಗೆ ಕಾರ್ಯತಂತ್ರದ ಇಂಧನ ಸಂಬಂಧವನ್ನು ಹೊಂದಿದೆ ಮತ್ತು ರಕ್ಷಣೆಗೂ ರಷ್ಯಾವನ್ನು ಅವಲಂಬಿಸಿದೆ (ರಷ್ಯಾದ ಅನಿಲವನ್ನು ಅವಲಂಬಿಸಿದೆ ಮತ್ತು ರಷ್ಯಾದ ತೈಲ ಕಂಪನಿಗಳಿಗೆ ಸಂಬಂಧಿಸಿದ ಅಮೇರಿಕೆಯ ನಿರ್ಬಂಧಗಳಿಂದ ವಿನಾಯಿತಿ ಪಡೆದಿದೆ). ಅಮೇರಿಕೆಯ ಸುಂಕಕ್ಕೆ ಗುರಿಯಾದ, ತೀರಾ ಕಡಿಮೆ ಮಿಗುತಾಯವಿರುವ ದೇಶಗಳಲ್ಲಿ ಬ್ರೆಜಿಲ್ ಒಂದು. ಆದರೆ ಅದು ಕಬ್ಬಿಣದ ಅದಿರನ್ನು ಪೂರೈಸುವ ಪ್ರಮುಖ ದೇಶವಾಗಿದೆ. ಗಣಿಗಾರಿಕೆಯಲ್ಲಿ ಅದು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತಿದೆ. ಜಾಗತಿಕ ಪೂರೈಕೆ ಸರಪಳಿಯಲ್ಲಿ ಬದಲಾವಣೆಯಾಗುತ್ತಿದ್ದರೂ, ಬ್ರೆಜಿಲ್ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ. ಟ್ರಂಪ್‌ರ ರಾಜಕೀಯ ಒತ್ತಡಕ್ಕೆ ಬ್ರೆಜಿಲ್ ಮಣಿಯುತ್ತಿಲ್ಲ.

ಇತರ ಕೆಲವು ದೇಶಗಳು ಟ್ರಂಪ್ ಜೊತೆಗೆ ಹೆಚ್ಚು ಸಹಕರಿಸುತ್ತಿದೆ. ಯುರೋಪಿಯನ್ ಒಕ್ಕೂಟವು ರಫ್ತು ನಿಯಂತ್ರಿಸಲು ಒಪ್ಪಿಕೊಂಡಿದೆ. ಡೇಟಾ ಹಂಚಿಕೆಗೆ ಸಂಬಂಧಿಸಿದಂತೆಯೂ ಅದು ಅಮೇರಿಕೆಯೊಂದಿಗೆ ಸಹಕರಿಸಲು ಒಪ್ಪಿಕೊಂಡಿದೆ. ಅದರಿಂದ ಅತ್ಯಧಿಕ ಸುಂಕದಿಂದ ತಪ್ಪಿಸಿಕೊಂಡಿದೆ. ಆಸ್ಟ್ರೇಲಿಯಾ ಅಮೇರಿಕೆಯೊಂದಿಗೆ ತನ್ನ ರಕ್ಷಣಾ ಸಂಬಂಧವನ್ನು ಬಲಪಡಿಸಿಕೊಂಡು ೧೦% ಸುಂಕಕ್ಕೆ ಮಿತಗೊಳಿಸಿಕೊಂಡಿದೆ. ಜಪಾನಿನ ಸುಂಕದ ದರ ಏರಿಕೆಯಾಗಿದೆ, ಆದರೆ ತನ್ನ ಸೆಮಿಕಂಡಕ್ಟರ್ ನೀತಿಯನ್ನು ಅಮೇರಿಕೆಯ ಉದ್ದೇಶಕ್ಕೆ ಸರಿಹೊಂದಿಸಿದ ನಂತರ ಸುಂಕ ಗರಿಷ್ಠ ಮಟ್ಟಕ್ಕಿಂತ ಕಡಿಮೆಯಾಗಿದೆ. ಸುಂಕವನ್ನು ಅಮೇರಿಕೆಯ ಉದ್ದೇಶಕ್ಕೆ ಸರಿಹೊಂದುವಂತೆ ದೇಶಗಳು ನಡೆದುಕೊಳ್ಳುವಂತೆ ಮಾಡಲು ಮತ್ತು ಸ್ವಾಯತ್ತತೆಯನ್ನು ಶಿಕ್ಷಿಸಲು ಆಯುಧವಾಗಿ ಬಳಸುವುದು ವ್ಯಾಪಾರ ಮತ್ತು ಸುಂಕಗಳ ಕುರಿತ ಸಾಮಾನ್ಯ ಒಪ್ಪಂದಕ್ಕೆ (GATT) ಮತ್ತು ಅದರ ಉತ್ತರಾಧಿಕಾರಿಯಾದ ವಿಶ್ವ ವ್ಯಾಪಾರ ಸಂಸ್ಥೆ (WTO) ತಂದಿದ್ದ ನಿಯಮ–ಆಧಾರಿತ ವ್ಯವಸ್ಥೆಗೆ ವಿರುದ್ಧವಾಗಿದೆ. ಅಮೇರಿಕೆಯ ಅಧ್ಯಕ್ಷರಾದ ಬಿಲ್ ಕ್ಲಿಂಟನ್, ಜಾರ್ಜ್ ಡಬ್ಲ್ಯೂ. ಬುಷ್, ಮತ್ತು ಬರಾಕ್ ಒಬಾಮಾ ಕೂಡ ವ್ಯಾಪಾರವನ್ನು ಭದ್ರತಾ ಉದ್ದೇಶಗಳಿಗೆ ಸರಿಹೊಂದಿಸಿದ್ದರು. ಆದರೆ ಅವರು ಔಪಚಾರಿಕ ಮತ್ತು ಬಹುಪಕ್ಷೀಯ ಒಪ್ಪಂದಗಳ ಮೂಲಕ ಸೌಹಾರ್ದತೆಯನ್ನು ಕಾಪಾಡಿಕೊಂಡಿದ್ದರು. ಟ್ರಂಪ್‌ರ ವಿಧಾನವು ಹೆಚ್ಚು ಒರಟಾದ, ತಕ್ಷಣದ, ಮತ್ತು ತೀರಾ ಸಾರ್ವಜನಿಕವಾದದ್ದು. ಏಪ್ರಿಲ್ ೨ರಂದು ‘ವಿಮೋಚನೆಯ ದಿನ’ ಪ್ರಕಟಣೆಯಲ್ಲಿ ಪ್ರತೀಕಾರದ ಸುಂಕವನ್ನು ಘೋಷಿಸಿದರು. ಜುಲೈ ೩೧ರಂದು ಸುಂಕದ ನಿಯಮಗಳನ್ನು ಮರುಬರೆದರು. ಆಗಸ್ಟ್‌ನಲ್ಲಿ ತಾಮ್ರದ ಸುಂಕವನ್ನು ಏರಿಸಿದರು. ಸುಂಕ–ಮುಕ್ತ ಮಿತಿಯನ್ನು ರದ್ದುಗೊಳಿಸಲು ನಿರ್ಧರಿಸಿದರು

ಅಮೇರಿಕೆಯ ಮಾರುಕಟ್ಟೆಗೆ ಪ್ರವೇಶ ಈಗ ಮುಕ್ತವಲ್ಲ. ಅದೊಂದು ರಾಜಕೀಯ ವಿಶೇಷಾಧಿಕಾರವಾಯಿತು. ಹಲವು ಷರತ್ತುಗಳಿಗೆ ಒಳಪಟ್ಟಿದೆ. ಅದನ್ನು ಯಾವಾಗ ಬೇಕಾದರೂ ರದ್ದುಗೊಳಿಸಬಹುದು. ಮತ್ತು ಅದನ್ನು ಒಂದು ದೇಶದ ಒಲವನ್ನು ನಿಯಂತ್ರಿಸಲು ಬಳಸಲಾಗುತ್ತಿದೆ. ಇದರಿಂದ ತಾತ್ಕಾಲಿಕವಾಗಿ ಗೆಲವು ಸಾಧ್ಯವಾಗಬಹುದು. ಆದರೆ ಸಂಬಂಧಗಳು ಮತ್ತು ಸಂಸ್ಥೆಗಳು ದುರ್ಬಲಗೊಳ್ಳುವ ಅಪಾಯವಿದೆ. ಹಲವು ದಶಕಗಳಿಂದ ಅಮೇರಿಕೆಯ ಕಾರ್ಯತಂತ್ರ ಅದರ ಆರ್ಥಿಕ ಶಕ್ತಿಯನ್ನು ವೃದ್ಧಿಸಿದ್ದವು. ಸುಂಕದ ಪಟ್ಟಿಯು ಒಂದು ಆರ್ಥಿಕ ಯೋಜನೆಯಲ್ಲ, ಬದಲಿಗೆ ಅದೊಂದು ಸ್ಕೋರ್‌ಕಾರ್ಡ್, ಈ ಆಡಳಿತದ ಕಾರ್ಯತಂತ್ರದ ಆದ್ಯತೆಗಳ ಲೆಡ್ಜರ್.

ಕಾರ್ಲಾ ನಾರ್ಲೊಫ್: ಕಾರ್ಲಾ ನಾರ್ಲೊಫ್ ಟೊರಾಂಟೊ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ವಿಜ್ಞಾನದ ಪ್ರಾಧ್ಯಾಪಕರಾಗಿದ್ದಾರೆ

ಪ್ರಾಜೆಕ್ಟ್ ಸಿಂಡಿಕೇಟ್ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ.

ಭಾರತದ ತೈಲ ಲಾಬಿ ಪುಟಿನ್‌ನ ಯುದ್ಧ ಯಂತ್ರಕ್ಕೆ ಧನಸಹಾಯ ಮಾಡುತ್ತಿದೆ. ಇದು ನಿಲ್ಲಬೇಕು

ಪೀಟರ್ ನವೋರ್ರಾ

[ಲೇಖಕರು ಶ್ವೇತಭವನದ ವಾಣಿಜ್ಯ ಮತ್ತು ಉತ್ಪಾದನೆಯ ಸಲಹೆಗಾರ]


ಭಾರತ ಹಾಗೂ ರಷ್ಯಾ ನಡುವಿನ ತೈಲದ ಲೆಕ್ಕಾಚಾರ ಹೀಗೆ ಕೆಲಸ ಮಾಡುತ್ತದೆ. ಅಮೇರಿಕಾದ ಗ್ರಾಹಕರು ಭಾರತೀಯ ವಸ್ತುಗಳನ್ನು ಖರೀದಿಸುತ್ತಾರೆ. ಭಾರತವು ಆ ಡಾಲರ್‌ಗಳನ್ನು ಬಳಸಿಕೊಂಡು ರಿಯಾಯಿತಿ ದರದಲ್ಲಿ ರಷ್ಯಾದ ಕಚ್ಚಾ ತೈಲವನ್ನು ಖರೀದಿಸುತ್ತದೆ. ಆ ರಷ್ಯಾದ ಕಚ್ಚಾ ತೈಲವನ್ನು ಶುದ್ಧೀಕರಿಸಿ, ಭಾರತೀಯ ಲಾಭಕೋರರು ರಷ್ಯಾದ ಮೌನ ಪಾಲುದಾರರ ಜೊತೆಗೆ ಸೇರಿಕೊಂಡು ವಿಶ್ವದಾದ್ಯಂತ ಮರುಮಾರಾಟ ಮಾಡುತ್ತಾರೆ. ಈ ವ್ಯವಹಾರದಲ್ಲಿ ರಷ್ಯಾ ತನ್ನ ಉಕ್ರೇನಿನ ಯುದ್ಧಕ್ಕೆ ಬೇಕಾದ ಹಣವನ್ನು ಒಟ್ಟುಮಾಡಿಕೊಳ್ಳುತ್ತದೆ. ರಷ್ಯಾ ಭಾರತದ ಆರ್ಥಿಕ ನೆರವನ್ನು ಬಳಸಿಕೊಂಡು ಉಕ್ರೇನಿನ ಮೇಲೆ ನಿರಂತರವಾಗಿ ದಾಳಿ ಮಾಡುತ್ತಿರುವಾಗ ಅಮೆರಿಕಾದ (ಮತ್ತು ಯುರೋಪಿಯನ್) ತೆರಿಗೆದಾರರು ಉಕ್ರೇನಿನ ರಕ್ಷಣೆಗಾಗಿ ಕೋಟ್ಯಾಂತರ ಡಾಲರ್‌ಗಳನ್ನು ಖರ್ಚು ಮಾಡುತ್ತಿದ್ದಾರೆ. ಇದೇ ವೇಳೆ, ಭಾರತವು ಅಮೇರಿಕೆಯ ಸರಕುಗಳ ಮೇಲೆ ಹೆಚ್ಚೆಚ್ಚು ಸುಂಕಗಳನ್ನು ಹಾಕುತ್ತ ಮತ್ತು ವಾಣಿಜ್ಯ ತಡೆಗಳನ್ನು ಒಡ್ಡುತ್ತಾ ಅಮೆರಿಕಾದ ರಫ್ತಿಗೆ ಬಾಗಿಲು ಮುಚ್ಚುತ್ತಿದೆ. ಯುದ್ಧದಲ್ಲಿ ೩೦೦,೦೦೦ಕ್ಕೂ ಹೆಚ್ಚು ಸೈನಿಕರು ಮತ್ತು ನಾಗರಿಕರು ಸತ್ತಿದ್ದಾರೆ. ಇದರಿಂದ ನಾಟೋದ ಪೂರ್ವ ಭಾಗವು ಅಪಾಯಕ್ಕೆ ಹೆಚ್ಚು ತೆರೆದುಕೊಂಡಿದೆ. ಮತ್ತು ಭಾರತದ ತೈಲದ ಅಕ್ರಮ ವ್ಯವಹಾರಕ್ಕೆ (ಲಾಂಡರಿಂಗ್) ಪಾಶ್ಚಿಮಾತ್ಯ ರಾಷ್ಟ್ರಗಳು ಬೆಲೆ ತೆರುತ್ತಿವೆ.


ಭಾರತವು ವಿಶ್ವದಲ್ಲೇ ಅತಿ ಹೆಚ್ಚಿನ ಸರಾಸರಿ ಸುಂಕಗಳನ್ನು ವಿಧಿಸುತ್ತದೆ. ಜೊತೆಗೆ ಸುಂಕೇತರ ತಡೆಗಳ ಪ್ರಬಲವಾದ ಜಾಲವನ್ನೆ ಹೊಂದಿದೆ. ಇದರಿಂದ ಅಮೇರಿಕಾದ ಕಾರ್ಮಿಕರು ಮತ್ತು ವ್ಯಾಪಾರಗಳು ಸಂಕಟಪಡುವಂತಾಗಿದೆ. ಇದರ ಪರಿಣಾಮವಾಗಿ, ಅಮೇರಿಕವು ಭಾರತದೊಂದಿಗೆ ವಾರ್ಷಿಕವಾಗಿ ಸುಮಾರು ೫೦ ಶತಕೋಟಿ ಡಾಲರನಿಷ್ಟು ವಾಣಿಜ್ಯ ಕೊರತೆಯನ್ನು ಅನುಭವಿಸುತ್ತಿದೆ. ಅಘಾತಕಾರಿ ಸಂಗತಿಯೆಂದರೆ, ಅಮೇರಿಕೆಯೊಂದಿಗಿನ ವ್ಯಾಪಾರದಿಂದ ಬಂದ ಡಾಲರನ್ನು ಭಾರತ ರಷ್ಯಾದಿಂದ ತೈಲ ಖರೀದಿಸಲು ಬಳಸುತ್ತಿದೆ.

ಮುಖ್ಯವಾಗಿ, ರಷ್ಯಾವು ಫೆಬ್ರವರಿ ೨೦೨೨ರಲ್ಲಿ ಉಕ್ರೇನ್ ಮೇಲೆ ಆಕ್ರಮಣ ಮಾಡುವ ಮೊದಲು, ಭಾರತದ ತನ್ನ ಒಟ್ಟಾರೆ ಕಚ್ಚಾ ತೈಲದ ಆಮದಿನಲ್ಲಿ ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದ್ದ ಕಚ್ಚಾ ತೈಲದ ಪ್ರಮಾಣ ಶೇಕಡ ೧ಕ್ಕಿಂತ ಕಡಿಮೆ ಇತ್ತು. ಆನಂತರ, ಭಾರತ ದಿನಕ್ಕೆ ೧.೫ ಮಿಲಿಯನ್ ಬ್ಯಾರಲಿಗಿಂತ ಹೆಚ್ಚು ಆಮದು ಮಾಡಿಕೊಳ್ಳುತ್ತಿದೆ. ಅಂದರೆ ತನ್ನ ಒಟ್ಟು ಆಮದಿನ ಶೇಕಡ ೩೦ಕ್ಕಿಂತ ಹೆಚ್ಚನ್ನು ಅದು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದೆ. ಸ್ಪಷ್ಟವಾಗಿ ಹೇಳಬೇಕೆಂದರೆ ಆಮದಿನ ಹೆಚ್ಚಳಕ್ಕೆ ದೇಶದೊಳಗೆ ತೈಲ ಬಳಕೆಯ ಬಳಕೆಯ ಅಗತ್ಯ ಕಾರಣವಲ್ಲ. ಬದಲಿಗೆ, ಭಾರತದ ದೊಡ್ಡ ತೈಲ ಲಾಬಿಯ ಲಾಭಕೋರತನ ಇದಕ್ಕೆ ಕಾರಣ. ಭಾರತವನ್ನು ಈ ಶುದ್ಧೀಕರಣ ಕಂಪೆನಿಗಳು, ರಿಯಾಯಿತಿ ದರದಲ್ಲಿ ಸಿಗುವ ರಷ್ಯಾದ ಕಚ್ಚಾ ತೈಲದ ಒಂದು ಶುದ್ಧೀಕರಣ ಕೇಂದ್ರವನ್ನಾಗಿ ಮಾಡಿವೆ.

ಶುದ್ಧೀಕರಣ ಕಂಪನಿಗಳು ತೈಲವನ್ನು ರಿಯಾಯಿತಿ ದರದಲ್ಲಿ ಖರೀದಿಸುತ್ತವೆ. ನಂತರ ಶುದ್ಧೀಕರಿಸಿ, ಯುರೋಪ್, ಆಫ್ರಿಕಾ ಮತ್ತು ಏಷಿಯಾಕ್ಕೆ ರಫ್ತು ಮಾಡುತ್ತವೆ. ತಟಸ್ಥತೆಯ ಸೋಗಿನಲ್ಲಿ ಭಾರತ ನಿರ್ಬಂಧಗಳಿಂದ ತಪ್ಪಿಸಿಕೊಳ್ಳುತ್ತದೆ. ಶುದ್ಧೀಕರಣ ತುಂಬಾ ದೊಡ್ಡ ವ್ಯವಹಾರ. ಭಾರತವು ದಿನಕ್ಕೆ ಒಂದು ಶತಕೋಟಿ ಬ್ಯಾರೆಲ್‌ಗಿಂತ ಹೆಚ್ಚು ಶುದ್ಧೀಕೃತ ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುತ್ತದೆ. ಅಂದರೆ ರಷ್ಯಾದಿಂದ ಆಮದು ಮಾಡಿಕೊಂಡ ಕಚ್ಚಾ ತೈಲದ ಅರ್ಧಕ್ಕಿಂತ ಹೆಚ್ಚನ್ನು ರಫ್ತು ಮಾಡುತ್ತದೆ. ಈ ವ್ಯವಹಾರದಲ್ಲಿ ಬಂದ ಆದಾಯವು ಭಾರತದ ರಾಜಕೀಯ ಒಡನಾಟ ಇಟ್ಟುಕೊಂಡಿರುವ ಪ್ರಬಲರ ಜೇಬನ್ನು ಸೇರುತ್ತದೆ. ನಂತರ ಅದು ವ್ಲಾಡಿಮಿರ್ ಪುಟಿನ್‌ನ ಯುದ್ಧ ನಿಧಿಗೆ ಸೇರುತ್ತದೆ.

ಭಾರತ ಕಚ್ಚಾ ತೈಲಕ್ಕೆ ರಷ್ಯಾವನ್ನು ಆತುಕೊಂಡಿರುವುದು ಒಂದು ಅವಕಾಶವಾದಿ ಅವಲಂಬನೆ. ಮತ್ತು ಇದು ಪುಟಿನ್‌ನ ಯುದ್ಧ ಆರ್ಥಿಕತೆಯನ್ನು ಪ್ರತ್ಯೇಕಿಸುವ ವಿಶ್ವದ ಪ್ರಯತ್ನಗಳನ್ನು ತೀವ್ರವಾಗಿ ಘಾಸಿಗೊಳಿಸುತ್ತದೆ. ವಾಸ್ತವವಾಗಿ, ಭಾರತವು ರಷ್ಯಾದ ತೈಲಕ್ಕೆ ಜಾಗತಿಕ ಕ್ಲಿಯರಿಂಗ್‌ಹೌಸ್‌ನಂತೆ ಕಾರ್ಯನಿರ್ವಹಿಸುತ್ತದೆ. ನಿರ್ಬಂಧಿತ ಕಚ್ಚಾ





ತೈಲವನ್ನು ಉನ್ನತ–ಮೌಲ್ಯದ ರಫ್ತುಗಳಾಗಿ ಪರಿವರ್ತಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಮಾಸ್ಕೋಗೆ ಬೇಕಾದ ಡಾಲರ್‌ಗಳನ್ನು ಪೂರೈಸುತ್ತದೆ. ಜೊತೆಗೆ, ಭಾರತವು ನಿರಂತರವಾಗಿ ರಷ್ಯಾದ ಸೈನ್ಯ ಯಂತ್ರಾಂಶಗಳನ್ನು ಹೆಚ್ಚೆಚ್ಚು ಅವಲಂಬಿಸುತ್ತಿದೆ. ೨೦೨೦ ಮತ್ತು ೨೦೨೪ರ ನಡುವೆ ಭಾರತದ ಒಟ್ಟು ಶಸ್ತ್ರಾಸ್ತ್ರ ಆಮದಿನಲ್ಲಿ ಸುಮಾರು ಶೇಕಡ ೩೬ರಷ್ಟು ರಷ್ಯಾದಿಂದ ಆಮದಾಗಿದೆ. ಭಾರತ ತನ್ನ ರಕ್ಷಣೆಯ ಅಗತ್ಯಗಳಿಗಾಗಿ ಅಮೆರಿಕ, ಫ್ರಾನ್ಸ್ ಮತ್ತು ಇಸ್ರೇಲ್‌ನತ್ತ ತಿರುಗಿದರೂ, ಅಂತಹ ಒಪ್ಪಂದಗಳಿಗೆ ಸಾಮಾನ್ಯವಾಗಿ ಷರತ್ತುಗಳನ್ನು ಹಾಕಿರುತ್ತವೆ. ಉದಾಹರಣೆಗೆ, ಅಮೆರಿಕಾದ ಕಂಪನಿಗಳು ಸೂಕ್ಷ್ಮ ಮಿಲಿಟರಿ ತಂತ್ರಜ್ಞಾನವನ್ನು ಭಾರತಕ್ಕೆ ವರ್ಗಾಯಿಸಬೇಕು. ಮತ್ತು ಭಾರತದಲ್ಲೇ ಕಾರ್ಖಾನೆಗಳನ್ನು ನಿರ್ಮಿಸಬೇಕು ಇತ್ಯಾದಿ ಷರತ್ತುಗಳನ್ನು ಹಾಕಿರುತ್ತದೆ. ಇದರಿಂದ ಅಮೆರಿಕಾದ ವಾಣಿಜ್ಯ ಕೊರತೆಯನ್ನು ತಗ್ಗಿಸುವ ಪ್ರಯತ್ನಕ್ಕೆ ಅಡ್ಡಿಯಾಗುತ್ತದೆ. ಜೊತೆಗೆ ರಷ್ಯಾ ಮತ್ತು ಚೀನಾದೊಂದಿಗೆ ಮೈತ್ರಿಮಾಡಿಕೊಳ್ಳುತ್ತಿರುವ ಭಾರತಕ್ಕೆ ಅಮೇರಿಕೆಯು ತನ್ನ ಅತ್ಯಾಧುನಿಕ ಮಿಲಿಟರಿ ಸಾಮರ್ಥ್ಯಗಳನ್ನು ಒದಗಿಸುವ ಅಪಾಯಕ್ಕೂ ಒಡ್ಡಿಕೊಳ್ಳಬೇಕಾಗುತ್ತದೆ.

ಬೈಡನ್ ಆಡಳಿತವು ಈ ಕಾರ್ಯತಾಂತ್ರಿಕ ಹಾಗೂ ಭೂರಾಜಕೀಯ ಹುಚ್ಚಾಟವನ್ನು ಬಹುತೇಕ ನಿರ್ಲಕ್ಷಿಸಿತು. ಟ್ರಂಪ್ ಆಡಳಿತವು ಇದನ್ನು ನೇರ ಎದುರಿಸುತ್ತಿದೆ. ಭಾರತದ ರಷ್ಯಾದ ತೈಲ ಆಮದಿನಿಂದ ಉಂಟಾಗುವ ಆಪಾಯವನ್ನು ತಡೆಯಲು ಕ್ರಮ ತೆಗೆದುಕೊಳ್ಳುತ್ತಿದೆ. ಅಧ್ಯಕ್ಷರು ಅದಕ್ಕಾಗಿ ಕಾರ್ಯಕಾರಿ ಅದೇಶವನ್ನು ಹೊರಡಿಸಿದ್ದಾರೆ. ಭಾರತೀಯ ಸರಕುಗಳ ಮೇಲೆ ಶೇಕಡ ೨೫ ರಾಷ್ಟ್ರೀಯ ಭದ್ರತಾ ಸುಂಕವನ್ನು ವಿಧಿಸಲಿದೆ. ಈಗಾಗಲೇ ಜಾರಿಯಲ್ಲಿರುವ ಶೇಕಡ ೨೫ ಪ್ರತಿಕಾರ ಸುಂಕದ ಮೇಲೆ ಇದನ್ನು ಹೊಸದಾಗಿ ವಿಧಿಸಲಾಗಿದೆ. ಈ ಎರಡು–ಮಗ್ಗಲಿನ ನೀತಿಯು ಭಾರತಕ್ಕೆ ಸೂಕ್ತ ಸ್ಥಳಕ್ಕೆ ಹೊಡೆತ ನೀಡುತ್ತದೆ. ಅಮೇರಿಕೆಯ ಮಾರುಕಟ್ಟೆಗೆ ಅದರ ಪ್ರವೇಶಕ್ಕೆ ಹೊಡೆತ ಬೀಳುತ್ತದೆ. ಜೊತೆಗೆ ರಷ್ಯಾದ ಯುದ್ಧ ಪ್ರಯತ್ನಕ್ಕೆ ಭಾರತ ನೀಡುತ್ತಿರುವ ಆರ್ಥಿಕ ನೆರವನ್ನು ಕಡಿತಗೊಳಿಸುವಂತೆ ಮಾಡುವ ಉದ್ದೇಶವೂ ಇದಕ್ಕಿದೆ.

ತನ್ನನ್ನು ಅಮೆರಿಕೆ ತನ್ನ ಕಾರ್ಯತಾಂತ್ರಿಕ ಪಾಲುದಾರನಾಗಿ ಕಾಣಬೇಕೆಂದು ಭಾರತ ಬಯಸಿದರೆ, ಅದು ಅದಕ್ಕೆ ತಕ್ಕಂತೆ ವರ್ತಿಸಲು ಪ್ರಾರಂಭಿಸಬೇಕು.



ಭಾರತದ ನಿಲುವೇನು?

(ಭಾರತದ ಅಧಿಕೃತ ನಿಲುವಿನ ಬಗ್ಗೆ ಮಾಹಿತಿಗಾಗಿ ವಿದೇಶಿ ವ್ಯವಹಾರಗಳ ಮಂತ್ರಿ ಶ್ರೀ ಎಸ್ ಜೈಶಂಕರ್ 'ಎಕನಾಮಿಕ್ ಟೈಮ್ಸ್' ಸಮ್ಮೇಳನದ ಸಂದರ್ಭದಲ್ಲಿ ಮಾಡಿದ ಸಂದರ್ಶನದಲ್ಲಿ ಆಡಿದ ಮಾತುಗಳನ್ನು ಸಂಗ್ರಹಿಸಿ, ಇಲ್ಲಿ ಕೊಡಲಾಗಿದೆ. ಜೈಶಂಕರ್ ಅವರು ಸಂಬಂಧಪಟ್ಟ ಬಹುತೇಕ ಮಾತುಕತೆಗಳಲ್ಲಿ ಭಾರತದ ಪರವಾಗಿ ಪಾಲ್ಗೊಂಡಿದ್ದಾರೆ. ಹಾಗಾಗಿ ಅವರ ನಿಲುವು ನಮಗೆ ವಿಷಯವನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯಕ.)

ಎಸ್ ಜೈಶಂಕರ್ ಮಾತುಗಳು:

ಇಲ್ಲಿಯವರೆಗೆ ಯಾವುದೇ ಅಧ್ಯಕ್ಷರಾಗಲಿ ಒಂದು ದೇಶದ ವಿದೇಶಿ ನೀತಿಯನ್ನು ಇಷ್ಟು ಸಾರ್ವಜನಿಕವಾಗಿ ಘೋಷಿಸಿದ್ದನ್ನು ನಾವು ನೋಡಿಲ್ಲ. ಅಷ್ಟೇ ಅಲ್ಲ ದೇಶದ ನೀತಿಯನ್ನು ಯಾವ ಅಧ್ಯಕ್ಷರು ಇಷ್ಟು ಸಾರ್ವಜನಿಕವಾಗಿ ಜಾರಿಗೊಳಿಸುತ್ತಿರಲಿಲ್ಲ. ಟ್ರಂಪ್ ಜಗತ್ತನ್ನು ನಿರ್ವಹಿಸುವ ರೀತಿ, ಅಷ್ಟೆ ಅಲ್ಲ ತನ್ನ ದೇಶವನ್ನು ನಿರ್ವಹಿಸುವ ರೀತಿ ಸಾಂಪ್ರದಾಯಿಕ ಕ್ರಮಕ್ಕಿಂತ ತುಂಬಾ ಭಿನ್ನ. ವ್ಯಾಪಾರದ ಸುಂಕದ ಮೊದಲ ಪ್ರಕಟಣೆಯೇ ಸಾರ್ವಜನಿಕವಾಗಿ ಆಯಿತು.

ಇನ್ನು ಭಾರತದ ವಿಷಯಕ್ಕೆ ಬರುವುದಾದರೆ ಮೂರು ಸಮಸ್ಯೆಗಳಿವೆ. ಮೊದಲನೆಯದು ವ್ಯಾಪಾರ. ನನ್ನ ದೃಷ್ಟಿಯಲ್ಲಿ ಅದು ನಿಜವಾಗಿ ಮುಖ್ಯವಾದ ವಿಷಯ. ಇದಕ್ಕೆ ಸಂಬಂಧಿಸಿದಂತೆ ಕೆಲವು ಲಕ್ಷ್ಮಣರೇಖೆಗಳು (ಕೆಂಪುರೇಖೆಗಳು) ಅಂದರೆ ಕಾಪಾಡಿಕೊಂಡು, ರಕ್ಷಿಸಿಕೊಳ್ಳಬೇಕಾದ ರೇಖೆಗಳು. ಇಲ್ಲಿ ಲಕ್ಷ್ಮಣರೇಖೆಗಳು ಅಂದರೆ ಮುಖ್ಯವಾಗಿ ನಮ್ಮ ರೈತರ ಹಾಗು ಸ್ವಲ್ಪ ಮಟ್ಟಿಗೆ ನಮ್ಮ ಸಣ್ಣ ಉತ್ಪಾದಕರ ಹಿತಾಸಕ್ತಿ. ನಾವು ಅವರ ಹಿತಾಸಕ್ತಿಯನ್ನು ಕಾಪಾಡಬೇಕು. ಅದಕ್ಕೆ ನಾವು ಬದ್ಧರು. ಆ ವಿಷಯದಲ್ಲಿ ರಾಜಿ ಸಾಧ್ಯವಿಲ್ಲ.

ಎರಡನೆಯದು ತೈಲದ ಸಮಸ್ಯೆ. ಅದನ್ನು ಸಮಸ್ಯೆಯನ್ನಾಗಿ ಮುಂದಿಡಲಾಗಿದೆ. ಯಾಕೆ ಮುಂದು ಮಾಡಲಾಗಿದೆ ಅಂತ ಹೇಳುತ್ತಿದ್ದೇನೆಂದರೆ ಅಲ್ಲಿ ಸಂದಿಗ್ಧತೆ ಇದೆ. ನಮಗಿಂತ ಚೀನಾ ಹೆಚ್ಚು ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಆದರೆ ನಮ್ಮನ್ನಷ್ಟೆ ಗುರಿ ಮಾಡಲಾಗುತ್ತಿದೆ. ಚೀನಾಕ್ಕೆ ಈ ತರ್ಕವನ್ನು ಅನ್ವಯಿಸುತ್ತಿಲ್ಲ. ಅತಿ ಹೆಚ್ಚು ಇಂಧನವನ್ನು ಆಮದು ಮಾಡಿಕೊಳ್ಳುತ್ತಿರುವ ಐರೋಪ್ಯ ಒಕ್ಕೂಟಕ್ಕೆ ಅನ್ವಯ ಮಾಡುತ್ತಿಲ್ಲ.

ಜನ ನಾವು ಯುದ್ದಕ್ಕೆ ಹಣ ಒದಗಿಸುತ್ತಿದ್ದೇವೆ, ಪುಟಿನ್ ಬೊಕ್ಕಸಕ್ಕೆ ಹಣ ತುಂಬುತ್ತಿದ್ದೇವೆ ಎಂದು ನಮ್ಮ ಮೇಲೆ ಆರೋಪ ಮಾಡುವಾಗ, ಅವರು ಯೋಚಿಸಬೇಕು. ಯುರೋಪಿಯನ್ನರು ಪುಟಿನ್ ಬೊಕ್ಕಸಕ್ಕೆ ಹಣ ಹಾಕುತ್ತಿಲ್ಲವೆ? ರಷ್ಯಾ ಹಾಗೂ ಯುರೋಪ್ ವ್ಯವಹಾರ ರಷ್ಯಾ ಹಾಗೂ ಭಾರತದ ನಡುವಿನ ವ್ಯಾಪಾರಕ್ಕಿಂತ ಹೆಚ್ಚಿದೆ. ಇಂಧನದ ವಿಷಯಕ್ಕೆ ಬಂದರೆ, ನಮಗಿಂತ ಹೆಚ್ಚು ಕೊಳ್ಳುತ್ತಿರುವವರು ಇದ್ದಾರೆ. ಯಾರು ಹೆಚ್ಚು ವ್ಯಾಪಾರ ಮಾಡುತ್ತಿದ್ದರೆ ಅನ್ನುವುದೇ ಪ್ರಶ್ನೆಯಾದರೆ, ನಮಗಿಂತ ಹೆಚ್ಚು ವ್ಯಾಪಾರ ಮಾಡುತ್ತಿರುವವರು ಇದ್ದಾರೆ. ವ್ಯಾಪಾರದ ಶೇಕಡವಾರು ಹೆಚ್ಚಳವನ್ನು ತೆಗೆದುಕೊಂಡರೆ, ಕೆಲವು ದೇಶಗಳ ಶೇಕಡ ಹೆಚ್ಚಾಗಿಲ್ಲ. ಅದಕ್ಕೆ ಕಾರಣ ಅವರು ಇರಾನಿಂದ ತೈಲವನ್ನು ಕೊಳ್ಳುತ್ತಿದ್ದಾರೆ. ಅದಕ್ಕೂ ಅವರಿಗೆ ಆಕ್ಷೇಪಣೆ ಇರಬಹುದು. ಅಂದರೆ ಇಲ್ಲಿ ಒಂದಿಷ್ಟು ಅಸಮಂಜಸತೆ ಇದೆ. ಭಾರತ ರಷ್ಯಾಕ್ಕೆ ಮಾಡುತ್ತಿರುವ ರಫ್ತಿನಲ್ಲಿ ಸ್ವಲ್ಪ ಹೆಚ್ಚಳವಾಗಿದೆ ಅನ್ನುವುದು ನಿಜ. ಆದರೆ ಕೆಲವು ದೇಶಗಳ ರಫ್ತು ವಿಪರೀತ ಹೆಚ್ಚಿದೆ. ನಾವು ನಮ್ಮ ದೇಶದ ಆಸಕ್ತಿಗೆ ಅನುಗುಣವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ನನ್ನ ದೃಷ್ಟಿಯಲ್ಲಿ ಸ್ಟ್ರಾಟೆಜಿಕ್ ಸ್ವಾಯತ್ತತೆ ಅಂದರೆ ಅದು.

ಮೂರನೆಯದು ಮಧ್ಯಸ್ಥಿಕೆಯ ವಿಷಯ. ಕಳೆದ ೫೦ ವರ್ಷಗಳಿಂದ ನಮ್ಮ ದೇಶದಲ್ಲಿ ಒಂದು ರಾಷ್ಟ್ರೀಯ ಒಮ್ಮತ ಮೂಡಿದೆ. ನಮ್ಮ ಹಾಗೂ ಪಾಕಿಸ್ತಾನದ ನಡುವಿನ ಸಂಬಂಧದಲ್ಲಿ ಇನ್ನೊಬ್ಬರು ಮಧ್ಯಸ್ಥಿಕೆ ವಹಿಸುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ.

ಒಟ್ಟಾರೆಯಾಗಿ ನಮ್ಮ ರೈತರ ಹಿತಾಸಕ್ತಿಯ ವಿಷಯದಲ್ಲಿ ನಮ್ಮ ಸ್ಟ್ರಾಟಜಿಕ್ ಸ್ವಾಯತ್ತತೆಯ ವಿಷಯದಲ್ಲಿ ಹಾಗೂ ಪಾಕಿಸ್ತಾನದ ಸಂಬಂಧದ ಬಗೆಗಿನ ಮಧ್ಯಸ್ಥಿಕೆಗೆ ಸಂಬಂಧಿಸಿದಂತೆ ನಮ್ಮ ಸರ್ಕಾರದ ನಿಲುವು ಸ್ಪಷ್ಟ. ಯಾರಾದರೂ ನಮ್ಮ ನಿಲುವನ್ನು ಒಪ್ಪಿಕೊಳ್ಳದೇ ಹೋದರೆ ನಾವು ಅವರಿಗೆ ಹೇಳುವುದಿಷ್ಟೆ: "ದಯವಿಟ್ಟು ಭಾರತದ ಜನತೆಗೆ ಹೇಳಿ, ನಾವು ರೈತರ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ತಯಾರಿಲ್ಲ ಅಂತ. ಜನತೆಗೆ ಹೇಳಿ, ನಾವು ನಮ್ಮ ಸ್ಟ್ರಾಟೆಜಿಕ್ ಅಟಾನಮಿಗೆ ಬೆಲೆ ಕೊಡುವುದಿಲ್ಲ ಅಂತ ಹೇಳಿ." ಆದರೆ ನಾವು ಅದಕ್ಕೆ ಬೆಲೆ ಕೊಡುತ್ತೇವೆ.

ಭಾರತದ ಮೇಲಿನ ಇನ್ನೊಂದು ಆರೋಪವೆಂದರೆ ಇಲ್ಲಿಯ ವ್ಯಾಪಾರಸ್ಥರು ತೈಲದ ವ್ಯಾಪಾರದಿಂದ ಲಾಭ ಮಾಡಿಕೊಳ್ಳುತ್ತಿದ್ದಾರೆ ಅಂತ. ಇದು ತಮಾಷೆ ಅನಿಸುತ್ತದೆ. ಬಿಸಿನೆಸ್ ಪರವಾಗಿ ಅಮೇರಿಕೆಯ ಆಡಳಿತದಲ್ಲಿ ಕೆಲಸ ಮಾಡುವವರು ಬೇರೆಯವರು ವ್ಯಾಪಾರ ಮಾಡುತ್ತಾರೆ ಅಂತ ಆರೋಪಿಸುತ್ತಿದ್ದಾರೆ. ಇಂಡಿಯಾದಿಂದ ನಿಮಗೆ ತೈಲವನ್ನು, ಪರಿಷ್ಕರಿಸಿದ ಉತ್ಪನ್ನಗಳನ್ನು ಕೊಳ್ಳುವುದಕ್ಕೆ ಸಮಸ್ಯೆ ಇದ್ದರೆ ಕೊಳ್ಳಬೇಡಿ. ಯಾರೂ ನಿಮ್ಮನ್ನು ಕೊಳ್ಳಲು ಒತ್ತಾಯಿಸುತ್ತಿಲ್ಲ.

ಈ ಬಗ್ಗೆ ಬೈಡೆನ್ ಕಾಲದಲ್ಲಿ ಸ್ಪಷ್ಟವಾದ ಮಾತುಕತೆ ನಡೆದಿತ್ತು.






೨೦೨೨ರಲ್ಲಿ ತೈಲದ ಬೆಲೆ ವಿಪರೀತ ಏರಿತ್ತು. ತೈಲದ ಬೆಲೆಯನ್ನು ಕುರಿತಂತೆ ಅಂತರರಾಷ್ಟ್ರೀಯವಾಗಿ ಆತಂಕವಿತ್ತು. ಅಮೇರಿಕಾ ಆಡಳಿತದಲ್ಲಿದ್ದ ಹಲವು ಪ್ರಮುಖರ ಜೊತೆ ಈ ಬಗ್ಗೆ ಹಲವು ಬಾರಿ ಚರ್ಚೆಗಳು ನಡೆದಿವೆ. "ಇಂಡಿಯಾ ರಷ್ಯಾದಿಂದ ತೈಲವನ್ನು ಕೊಳ್ಳಬೇಕು ಅಂತ ಬಯಸಿದರೆ, ನಮಗೆ ಸಮಸ್ಯೆ ಇಲ್ಲ. ಅದರಿಂದ ತೈಲದ ಬೆಲೆ ಸ್ಥಿರವಾಗುತ್ತದೆ." ಅಂತ ಅವರು ಹೇಳಿದ್ದರು. ನಂತರ ಈ ಸರ್ಕಾರವೂ ತೈಲ ಕೊಳ್ಳಬೇಡಿ ಅಂತೇನೂ ಹೇಳಿರಲಿಲ್ಲ. ಇತ್ತೀಚೆಗೆ ಈ ವಿಷಯವನ್ನು ಸಾರ್ವಜನಿಗೊಳಿಸುವ ಮೊದಲು ಈ ಬಗ್ಗೆ ಚರ್ಚೆಯಾಗಿರಲಿಲ್ಲ. ನೋಡಿ, ರಷ್ಯಾದ ತೈಲಕ್ಕೆ ಬೆಲೆ ಮಿತಿಯ ಬಗ್ಗೆ ಮಾತನಾಡುತ್ತಾರೆ. ಬೆಲೆಗೆ ಮಿತಿ ಇರಬೇಕು ಅಂದ ಕೂಡಲೆ ಅಲ್ಲಿ ವ್ಯಾಪಾರ ನಡೆಯುತ್ತಿದೆ ಅಂತಲೇ ಅರ್ಥ. ಇಲ್ಲದೆ ಹೋದರೆ ಬೆಲೆಗೆ ಮಿತಿ ಹೇರುವ ಅವಶ್ಯಕತೆ ಇರಲಿಲ್ಲ. ನಾವು ತೈಲವನ್ನು ನಮ್ಮ ಆಸಕ್ತಿಗೆ ಅನುಗುಣವಾಗಿ ಕೊಳ್ಳುತ್ತಿದ್ದೇವೆ. ಅದರಲ್ಲಿ ಏನೂ ಮುಚ್ಚುಮರೆ ಇಲ್ಲ. ಆದರೆ ಅದರಲ್ಲಿ ಜಾಗತಿಕ ಹಿತಾಸಕ್ತಿಯೂ ಇದೆ. ಬೇರೆ ದೇಶಗಳು ಇದೇ ಕೆಲಸವನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಿದ್ದಾಗ ನಮ್ಮ ಮೇಲೆ ಅದಕ್ಕಾಗಿ ಸುಂಕ ವಿಧಿಸುವುದು ಅನ್ಯಾಯ.

ಭಾರತ ಚೀನಾ ಸಂಬಂಧವನ್ನು ಕುರಿತಂತೆ:

ಚೀನಾದ ಜೊತೆಗೆ ಹಲವು ಸಮಸ್ಯೆಗಳಿವೆ. ಕೆಲವು ತುಂಬಾ ಹಳೆಯದು. ೧೯೬೨ರಿಂದ ಉಳಿದುಕೊಂಡು ಬಂದಿರುವುದು. ಉದಾಹರಣೆಗೆ ಗಡಿಯ ಪ್ರಶ್ನೆ. ಅದು ಇಂದಿಗೂ ಅಷ್ಟೆ ಪ್ರಮುಖ ಸಮಸ್ಯೆ. ಬೇರೆ ಬೇರೆ ಬೆಳವಣಿಗೆಗಳು ಆಗುತ್ತಿವೆ ಅಂದ ಕೂಡಲೆ ಅದು ಪರಿಹಾರವಾಗಿಬಿಟ್ಟಿದೆ ಅಂತ ಅಲ್ಲ. ಅದು ಇಂದಿಗೂ ಕಾಡುತ್ತಿದೆ. ಗಡಿಯಲ್ಲಿ ಶಾಂತಿ ಹಾಗೂ ಸೌಹಾರ್ದವನ್ನು ಕಾಪಾಡಿಕೊಳ್ಳುವುದು, ಸಂಬಂಧವನ್ನು ಬೆಳೆಸಿಕೊಳ್ಳುವುದಕ್ಕೆ ತೀರಾ ಅವಶ್ಯಕ.

ಎರಡನೆಯದು ೨೦೦೦ದ ಪ್ರಾರಂಭದಲ್ಲಿ ಚೀನಾ ಡಬ್ಲ್ಯುಟಿಒ ಪ್ರವೇಶ ಮಾಡಿದ ಮೇಲೆ ಪ್ರಾರಂಭವಾದ ಸಮಸ್ಯೆ. ಚೀನಾದ ಜೊತೆಗಿನ ನಮ್ಮ ವ್ಯಾಪಾರದ ಕೊರತೆ ಹೆಚ್ಚಾಗತೊಡಗಿತು. ಅದು ಬಲು ಬೇಗ ಆತಂಕದ ವಿಷಯವಾಯಿತು. ಅದು ೨೦೧೪ರ ನಂತರ ಪ್ರಾರಂಭವಾದ ಸಮಸ್ಯೆಯಲ್ಲ. ನಾನು ೨೦೦೯ರಿಂದ ೨೦೧೩ರವರೆಗೆ ಚೀನಾದಲ್ಲಿ ರಾಯಭಾರಿಯಾಗಿದ್ದೆ. ಆಗಲೂ ಚೀನಾ ಜೊತೆ ಹೆಚ್ಚುತ್ತಿದ್ದ ವ್ಯಾಪಾರದ ಕೊರತೆ ಕಾಳಜಿಯ ವಿಷಯವಾಗಿತ್ತು. ಕೆಲವು ಸಮಸ್ಯೆಗಳು ಕೋವಿಡ್ ನಂತರ ಪ್ರಾರಂಭವಾಗಿವೆ. ಉದಾಹರಣೆಗೆ ಎರಡು ದೇಶಗಳ ನಡುವಿನ ವಿಮಾನ ಪ್ರಯಾಣ ಹಾಗೂ ಕೈಲಾಸ ಮಾನಸಸರೋವರ ಯಾತ್ರೆ ನಿಂತಿದ್ದು ಕೋವಿಡ್‌ನಿಂದಾಗಿ. ಹೂಡಿಕೆಗೆ ಸಂಬಂಧಸಿದಂತೆ ಹಾಕಿದ ನಿರ್ಬಂಧಗಳೂ ಕೂಡ ಕೋವಿಡ್ ಸಮಯದಲ್ಲಿ ಉಂಟಾದ ಆರ್ಥಿಕ ಅನಿಶ್ಚತೆಗಳಿಗೆ ಪ್ರತಿಕ್ರಿಯೆಯಾಗಿ ಬಂದವು. ಕೆಲವು ಇತ್ತೀಚಿನ ಸಮಸ್ಯೆಗಳು. ಉದಾಹರಣೆಗೆ ಅಟೊಮೊಬೈಲ್‌ಗಳಿಗೆ ಮ್ಯಾಗ್ನೆಟ್ ಪೂರೈಕೆಯ ಸಮಸ್ಯೆ. ಅದು ಚೀನಾದ ರಫ್ತು ನಿಯಂತ್ರಣ ನೀತಿಯ ಪರಿಣಾಮವಾಗಿ ಆಗಿದ್ದು. ಅಂದರೆ ಇರೋ ಸಮಸ್ಯೆಗಳೆಲ್ಲಾ ಒಂದೇ ಬಗೆಯ ಮತ್ತು ಒಂದೇ ಕಾಲದಲ್ಲಿ ಹುಟ್ಟಿಕೊಂಡ ಸಮಸ್ಯೆಗಳಲ್ಲ. ವಿಭಿನ್ನ ಚಾರಿತ್ರಿಕ ಘಟ್ಟಗಳಲ್ಲಿ ಹುಟ್ಟಿಕೊಂಡ ಸಮಸ್ಯೆಗಳು. ಅವೆಲ್ಲಾ ಪರಿಷ್ಕರಣೆಯ ವಿಭಿನ್ನ ಹಂತಗಳಲ್ಲಿವೆ.

ಈಗ ವಾಂಗ್ ಯಿ ಅವರು ಬಂದಾಗ ಆಗುತ್ತಿರುವ ಸಂಗತಿಗಳು ಈಗ ನಿರ್ಧಾರವಾದುದಲ್ಲ. ಕಳೆದ ಅಕ್ಟೋಬರಿನಲ್ಲಿ ಎರಡು ದೇಶದ ಪ್ರಧಾನಿಗಳು ಭೇಟಿಯಾದಾಗ ನಿರ್ಧಾರವಾದದ್ದು. ಹಾಗಾಗಿ ಯಾವುದನ್ನೂ ಕಪ್ಪು ಬಿಳುಪಾಗಿ ನೋಡಬಾರದು. ಅಮೇರಿಕೆಯೊಂದಿಗೆ ಏನೋ ಆಯಿತು. ಅದಕ್ಕೆ ಈಗ ಚೀನಾ ಜೊತೆ ಏನೋ ಆಗುತ್ತಿದೆ ಅಂತ ನೋಡಬಾರದು. ಎಲ್ಲವೂ ವಿಭಿನ್ನ ನೆಲೆಯಲ್ಲಿ ವಿಭಿನ್ನ ಕಾಲದಲ್ಲಿ ನಡೆಯುತ್ತಿವೆ. ಎಲ್ಲವನ್ನು ಒಟ್ಟಿಗೆ ತಂದು ಒಂದು ನಿರ್ದಿಷ್ಟ ಪರಿಸ್ಥಿತಿಗೆ ಪ್ರಕ್ರಿಯೆಯಾಗಿ ನೋಡುವುದು ತಪ್ಪು. ನಿಜ ಈಗ ಜಾಗತಿಕ ಪರಿಸ್ಥಿತಿ ಇದೆ. ಉದಾಹರಣೆಗೆ ಗಡಿಯ ವಿಷಯವನ್ನೇ ತೆಗೆದುಕೊಳ್ಳಿ. ಈಗ ಆಗುತ್ತಿರುವುದು ಹಲವು ಸುತ್ತಿನ ಮಾತುಕತೆಯ ಫಲ. ಹಲವು ವರ್ಷಗಳ ಮಾತುಕತೆಯಿಂದ ಈ ಘಟ್ಟಕ್ಕೆ ತಲುಪಿದ್ದೇವೆ. ಅವೆಲ್ಲಾ ಇತ್ತೀಚೆಗೆ ಯಾವುದೋ ಘಟನೆ ಆಯಿತು ಅನ್ನುವ ಕಾರಣಕ್ಕೆ ಆಗುತ್ತಿರುವ ಬೆಳವಣಿಗೆಯಲ್ಲ. ಎರಡು ಸಂಬಂಧಗಳನ್ನು ಬೆಸೆದು ಒಂದು ಇನ್ನೊಂದಕ್ಕೆ ಕಾರಣ ಅನ್ನುವುದು ಬೇಡ. ಅದು ವಾಸ್ತವ ಅಲ್ಲ. ಗಡಿಯಲ್ಲಿ ಪರಿಸ್ಥಿತಿ ಸುಸ್ಥಿತಿಯಲ್ಲಿದ್ದರೆ, ಯಾವುದೇ ಅಹಿತಕರ ಘಟನೆಗಳು ನಡೆಯದೇ ಹೋದರೆ ಸಹಜವಾಗಿಯೇ ಉಳಿದ ಸಂಬಂಧಗಳು ಸುಧಾರಿಸುತ್ತವೆ. ಕೆಲಕಾಲದಿಂದ ಗಡಿಯಲ್ಲಿ ಪರಿಸ್ಥಿತಿ ಸ್ಥಿರವಾಗಿದೆ. ಸಂಘರ್ಷ ಕಮ್ಮಿಯಾದರೆ ಬೇರೆ ಕ್ಷೇತ್ರಗಳಲ್ಲೂ ಸಂಬಂಧ ಸುಧಾರಿಸುತ್ತದೆ. ಯು ಟರ್ನ ಆಗಿದೆ. ಎಲ್ಲವೂ ಈಗ ಚೆನ್ನಾಗಿದೆ ಅಂತ ಭಾವಿಸುವದಾಗಲಿ, ಅಥವಾ ಇನ್ನೊಂದು ಅತಿಗೆ ಹೋಗಿ ಕೇವಲ ಸಮಸ್ಯೆಗಳೇ ಇದೆ ಅಂತ ಭಾವಿಸುವುದಾಗಲಿ ಬೇಕಾಗಿಲ್ಲ. ಪರಿಸ್ಥಿತಿ ಎಲ್ಲೋ ಮಧ್ಯದಲ್ಲಿದೆ. ಎರಡು ದೇಶಗಳ ನಡುವೆ ವ್ಯಾಪಾರ ನಡೆಯುತ್ತಿದೆ. ನಮಗೆ ಅವರಿಂದ ಹಲವು ವಸ್ತುಗಳು ಅವಶ್ಯಕವಾಗಿ ಬೇಕು. ರೈತರ ಹಿತದೃಷ್ಟಿಯಿಂದ ನಿರಂತರ ಗೊಬ್ಬರದ ಪೂರೈಕೆಯಾಗಬೇಕು. ಮೂಲಸೌಕರ್ಯದ ನಿರ್ಮಾಣಕ್ಕಾಗಿ ಚೀನಾದ ಯಂತ್ರಗಳು ಬೇಕಾಗುತ್ತದೆ. ಆಟೋ ಕೈಗಾರಿಕೆಗೆ ಮ್ಯಾಗ್ನೆಟ್‌ಗಳ ತಡೆರಹಿತ ಪೂರೈಕೆ ಬೇಕಾಗುತ್ತದೆ. ಇವೆಲ್ಲಾ ನಮ್ಮ ಕೈಗಾರಿಕೆಗಳ ನ್ಯಾಯಯುತ ಸಮಸ್ಯೆಗಳು. ನಾವು ಈ ಬಗ್ಗೆ ಚೀನಾ ಜೊತೆ ಚರ್ಚಿಸಲೇಬೇಕು. ಇದು ನಮ್ಮ



ಜವಾಬ್ದಾರಿ. ಉದ್ದಿಮೆಗಳ ಸಮಸ್ಯೆಯನ್ನು ನಾವು ಪರಿಹರಿಸಬೇಕು.

ಇವೆಲ್ಲಾ ಗಂಭೀರವಾದ ಸಮಸ್ಯೆಗಳು. ಜಾಗತಿಕ ಚರಿತ್ರೆಯಿಂದ ನಾವು ಪಾಠ ಕಲಿಯಬೇಕು. ಯಾವುದೇ ವಸ್ತುವಿನ ಪೂರೈಕೆಗೂ ಒಂದೇ ಮೂಲವನ್ನು ನೆಚ್ಚಿಕೊಳ್ಳಬಾರದು. ಹಾಗೆಯೇ ನಮ್ಮ ಉತ್ಪನ್ನಗಳ ಮಾರಾಟಕ್ಕೆ ಒಂದೇ ಮಾರುಕಟ್ಟೆಯನ್ನು ನೆಚ್ಚಿಕೊಳ್ಳಬಾರದು. ಇದನ್ನು ಚರಿತ್ರೆ ನಮಗೆ ಕಲಿಸಿದೆ. ಅಂದರೆ ನಾವು ವೈವಿಧ್ಯಗೊಳಿಸಬೇಕು. ಆಪಾಯದಿಂದ ರಕ್ಷಿಸಿಕೊಳ್ಳಬೇಕು. ದೇಶದೊಳಗೆ ಹೆಚ್ಚು ಉತ್ಪಾದಿಸುವುದು ಒಳ್ಳೆಯ ಕೆಲಸ. ಇದು ಕಷ್ಟದ ಕೆಲಸ, ಹೆಚ್ಚು ಸಂಕೀರ್ಣವಾದ ಕೆಲಸ, ಇದಕ್ಕೆ ಬೇರೆ ರೀತಿಯ ಪ್ರಯತ್ನ ಬೇಕಾಗುತ್ತದೆ. ಅದಕ್ಕಾಗಿಯೇ ಆತ್ಮನಿರ್ಭರತೆಗೆ ಒತ್ತು ನೀಡುತ್ತಿರುವುದು. ದೇಶದೊಳಗೆ ಹೆಚ್ಚೆಚ್ಚು ಉತ್ಪಾದಿಸಿ. ಇದು ಸರ್ಕಾರ ರವಾನಿಸುತ್ತಿರುವ ಸಂದೇಶ.

ಹಾಗೆಯೇ ಇಂದಿನ ಭೌಗೋಳಿಕ–ರಾಜಕೀಯ ಸ್ಥಿತಿಯಲ್ಲಿ ಪೂರೈಕೆಯ ಹಾಗೂ ಮಾರುಕಟ್ಟೆಯ ಸಮಸ್ಯೆಗಳಿಗೆ ಹಲವು ದಾರಿಗಳನ್ನು ಕಂಡುಕೊಳ್ಳಬೇಕು. ಇಂಡಿಯಾಕ್ಕೆ ಬೇಕಾದ ಉತ್ಪನ್ನಗಳು ಭಾರತಕ್ಕೆ ಹರಿದು ಬರುವುದಕ್ಕೆ ಹಲವು ದಾರಿಗಳನ್ನು ಕಂಡುಕೊಳ್ಳಬೇಕು. ಹಾಗೆಯೇ ಉತ್ಪಾದನೆಯಾದ ಉತ್ಪನ್ನಗಳು ಭಾರತದಿಂದ ಹೊರಗೆ ಹರಿದುಹೋಗುವುದಕ್ಕೆ ಹಲವು ದಾರಿಗಳನ್ನು ಕಂಡುಕೊಳ್ಳುವುದು. ಅದು ಕಷ್ಟ. ಆದರೆ ಸಾಧ್ಯ.



ಇತ್ತೀಚಿನ ದಿನಗಳಲ್ಲಿ ಎಲ್ಲಾ ದೇಶಗಳು ತಮಗಿರುವ ವಾಣಿಜ್ಯ ಅನುಕೂಲಗಳನ್ನು ಗುರಾಣಿಗಳನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಉದಾಹರಣೆಗೆ ಚೀನಾ ತಮ್ಮ ಪೂರೈಕೆಯ ಅನುಕೂಲವನ್ನು ಆಯುಧವನ್ನಾಗಿ ಕೊಳ್ಳುತ್ತಿದೆ. ಟ್ರಂಪ್ ಸುಂಕವನ್ನು ಶಸ್ತ್ರವನ್ನಾಗಿ ಬಳಸುತ್ತಿದ್ದಾರೆ. ಭಾರತಕ್ಕೆ ಆ ದೃಷ್ಟಿಯಲ್ಲಿ ಅಂತಹ ಹತಾರಗಳು ಇಲ್ಲ ಅನ್ನುವ ಪ್ರಶ್ನೆಯಿದೆ. ಇದರ ಅರ್ಥ ಜಗತ್ತಿಗೆ ಭಾರತ ಎಷ್ಟರ ಮಟ್ಟಿಗೆ ಅನಿವಾರ್ಯ ಅನ್ನುವುದು.

ನೀವಷ್ಟೇ ಬಳಸಬಹುದಾದ, ನೀವಷ್ಟೇ ಉತ್ಪಾದಿಸಬಹುದಾದ ಉತ್ಪನ್ನಗಳನ್ನು ತಯಾರಿಸಬೇಕು. ಅದು ಆತ್ಮನಿರ್ಭರದ ಉದ್ದೇಶ. ಅಥವಾ. ನೀವು ಹೆಚ್ಚು ಉತ್ಪಾದಿಸಿದಷ್ಟು, ಹೆಚ್ಚು ವಿಶಿಷ್ಟವಾದ ವಸ್ತುಗಳನ್ನು ತಯಾರಿಸಿದಷ್ಟು ನೀವು ಜಾಗತಿಕ ಪೂರೈಕೆಯ ಸರಪಳಿಯಲ್ಲಿ ಸ್ಥಾನ ಪಡೆದುಕೊಳ್ಳುತ್ತೀರಿ. ಉತ್ಪಾದನೆಯಷ್ಟೆ ಅಲ್ಲ, ಬಳಕೆಯೂ ಶಕ್ತಿಯಾಗಬಹುದು. ಅಂತಿಮವಾಗಿ ಜಗತ್ತಿನಲ್ಲಿ ನಮ್ಮ ಸ್ಥಾನ ನಿರ್ಧಾರವಾಗುವುದು ನಾವು ಎಷ್ಟು ವಿಶಿಷ್ಟವಾಗಿದ್ದೇವೆ, ಜಾಗತಿಕ ಆರ್ಥಿಕತೆಗೆ ನಾವೆಷ್ಟು ಅನಿವಾರ್ಯ ಅನ್ನುವುದನ್ನು ಆಧರಿಸಿ.

ಈಗ ನಾವು ವಿಭಿನ್ನವಾದ ಸ್ಥಿತಿಯಲ್ಲಿದ್ದೇವೆ. ಟ್ರಂಪ್ ವಿಭಿನ್ನವಾದ ರಾಜತಾಂತ್ರಿಕ ಕ್ರಮ ಬಳಸುತ್ತಿದ್ದಾರೆ. ಈಗ ಆ ಸಂಬಂಧವನ್ನು ಬೇರೆ ರೀತಿಯಲ್ಲಿ ಎದುರಿಸಬೇಕಾಗಿದೆ. ಬೇರೆ ದಾರಿಗಳನ್ನು ಕಂಡುಕೊಳ್ಳಬೇಕಾಗಿದೆ.

ಸಾಮ್ರಾಜ್ಯಶಾಹಿ ಮತ್ತು ಭಾರತದ ಮೇಲಿನ ಅದರ ದಬ್ಬಾಳಿಕೆ

ಪ್ರಭಾತ್ ಪಟ್ನಾಯಕ್

ಇದು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಭಾರತೀಯ ಜನತೆಯ ಸಂಗ್ರಾಮ ವಿಜಯ ಸಾಧಿಸಿದ ೭೮ನೇ ವಾರ್ಷಿಕೋತ್ಸವದ ದಿನ. ಆದರೆ ಇಂದು ಅಮೆರಿಕದ ಸಾಮ್ರಾಜ್ಯಶಾಹಿ ತನ್ನ ಆದೇಶವನ್ನು ಪಾಲಿಸುವಂತೆ ಭಾರತವನ್ನು ಬಹಿರಂಗವಾಗಿ ಒತ್ತಾಯಿಸುತ್ತಿದೆ. ಎಂತಹ ವಿಪರ್ಯಾಸದ ಸಂಗತಿ. ಈ ಗುಣ ಸಾಮ್ರಾಜ್ಯಶಾಹಿಯ ಸ್ವಭಾವದಲ್ಲೇ ಇದೆ. ವಾಸ್ತವವಾಗಿ, ಈ ೭೮ ವರ್ಷಗಳಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿ ಭಾರತವನ್ನು ತನ್ನ ಆದೇಶಗಳನ್ನು ಪಾಲಿಸುವಂತೆ ಮಾಡುವುದಕ್ಕೆ ಹಲವು ಪ್ರಯತ್ನಗಳನ್ನು ಮಾಡಿದೆ. ಆದರೆ, ಹಿಂದೆ ಮಾಡಿದ್ದ ಪ್ರಯತ್ನಗಳಿಗೂ ಈಗ ಮಾಡುತ್ತಿರುವ ಪ್ರಯತ್ನಗಳಲ್ಲಿ ಎರಡು ಮೂಲಭೂತ ವ್ಯತ್ಯಾಸಗಳಿವೆ.

ಮೊದಲನೆಯದಾಗಿ, ಈಗ "ನಿಮ್ಮ ಸ್ವಂತ ಒಳಿತಿಗಾಗಿ ನಾವು ಹೇಳಿದಂತೆ ಮಾಡಿದೆ" ಎಂದು ಮರೆಮಾಚಿ ಮಾಡುತ್ತಿಲ್ಲ. ತೀರಾ ನೇರವಾಗಿ ಒತ್ತಾಯಿಸುತ್ತಿದ್ದಾರೆ. "ನಮ್ಮ ಒಳಿತಿಗಾಗಿ ಕೇಳುತ್ತಿದ್ದೇವೆ. ನಾವು ಕೇಳುವುದನ್ನು ಮಾಡಿ, ಇಲ್ಲದಿದ್ದರೆ ಶಿಕ್ಷೆ ಅನುಭವಿಸಬೇಕಾಗುತ್ತದೆ." ಎನ್ನುತ್ತಿದ್ದಾರೆ. ಎರಡನೆಯದಾಗಿ, ಹಿಂದೆ ಇದನ್ನು ಭಾರತ ಸರ್ಕಾರ ನೇರವಾಗಿ ಎದುರಿಸುತ್ತಿತ್ತು. ಈಗ ಹಾಗೆ ನೇರವಾಗಿ ಎದುರಿಸುತ್ತಿಲ್ಲ. ಈ ದಬ್ಬಾಳಿಕೆಗೆ ಸಂಮಿಶ್ರ ಸಂಕೇತಗಳನ್ನು ರವಾನಿಸುತ್ತಿದೆ. ಇದನ್ನು ವಿವರವಾಗಿ ತಿಳಿಸುತ್ತೇನೆ.

ಸೋವಿಯತ್ ಒಕ್ಕೂಟವನ್ನು ಸುತ್ತುವರಿಯಲು ಅಮೆರಿಕದ ಸಾಮ್ರಾಜ್ಯಶಾಹಿ SEATO ಮತ್ತು CENTO ಮಾದರಿಯ ಸೈನಿಕ ಒಕ್ಕೂಟಗಳನ್ನು ರಚಿಸಿಕೊಂಡಿತ್ತು. ಸ್ವತಂತ್ರ ಭಾರತ ಅವಕ್ಕೆ ಸೇರಿಲಿಲ್ಲ. ಬದಲಿಗೆ ಅಲಿಪ್ತತೆಯ ನೀತಿಯನ್ನು ಅನುಸರಿಸಿತು. ಅದಕ್ಕಾಗಿ ಅಮೆರಿಕೆಯ ಕೋಪಕ್ಕೆ ಗುರಿಯಾಗಿತ್ತು. ಆಗಿನ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲ್ಲೆಸ್ "ನೀವು ನಮ್ಮೊಂದಿಗಿಲ್ಲದಿದ್ದರೆ, ನೀವು ನಮಗೆ ವಿರುದ್ಧವಾಗಿದ್ದೀರಿ" ಎಂಬ ತರ್ಕವನ್ನು ಮುಂದಿಟ್ಟು ಭಾರತವನ್ನು ಶತ್ರುವೆಂದೇ ಪರಿಗಣಿಸಿದ್ದರು. ಯೋಜನೆಯ ಮಹತ್ವಾಕಾಂಕ್ಷೆಯ ವರ್ಷಗಳಲ್ಲಿ, ಸ್ವಾವಲಂಬನೆ ಮುಖ್ಯವಾಗಿತ್ತು. ಅದನ್ನು ಸಾರ್ವಜನಿಕ ವಲಯದ ಒಡೆತನದಲ್ಲಿ ಭಾರೀ ಕೈಗಾರಿಕೆಯ ತಳಹದಿಯನ್ನು ನಿರ್ಮಿಸುವ ಉದ್ದೇಶವಿತ್ತು. ಮತ್ತು ಆರ್ಥಿಕತೆಯನ್ನು ಸಾಮ್ರಾಜ್ಯಶಾಹಿ ಕುಣಿಕೆಯಿಂದ ಬಿಡಿಸಿಕೊಳ್ಳುವುದು ಮುಖ್ಯವಾಗಿತ್ತು. ಆಗ ಅಮೆರಿಕದಿಂದ ಅಥವಾ ಅದರ ನಿಯಂತ್ರಣದಲ್ಲಿದ್ದ ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳಿಂದ "ಅಭಿವೃದ್ಧಿ ಸಹಾಯ"ವು ಬಹುತೇಕ ಇರಲಿಲ್ಲ. ಭಾರತಕ್ಕೆ ಭೇಟಿ ನೀಡಿದ ಅಮೆರಿಕೆಯ ಅನುದಾನ ಪಡೆದ "ತಜ್ಞರು" ಮಹಾಲನೋಬಿಸ್ ಕಾರ್ಯತಂತ್ರವನ್ನು ವಿರೋಧಿಸಿದರು. ಅದು ಸ್ವಾವಲಂಬನೆಗೆ ಆದ್ಯತೆ ನೀಡುತ್ತಿತ್ತು. (ಡೇನಿಯಲ್ ಮತ್ತು ಆಲಿಸ್ ಥಾರ್ನರ್‌ರವರ ಲ್ಯಾಂಡ್ ಅಂಡ್ ಲೇಬರ್ ಇನ್ ಇಂಡಿಯಾ ಪುಸ್ತಕದಲ್ಲಿ "ಪ್ಲೌಯಿಂಗ್ ದಿ ಪ್ಲಾನ್ ಅಂಡರ್" ಲೇಖನವನ್ನು ಓದಿ).

ಆದರೆ, ಸೋವಿಯತ್ ಒಕ್ಕೂಟ ಭಾರತವನ್ನು ಬೆಂಬಲಿಸಿತು. ಭಾರತವು ತನ್ನ ಅಲಿಪ್ತತೆಯ ನೀತಿಯನ್ನು ಹಾಗೂ ಸ್ವಾವಲಂಬನೆಯ ನೀತಿಯನ್ನು ಮುಂದುವರಿಸಿಕೊಂಡು ಹೋಯಿತು. ಸಾಮ್ರಾಜ್ಯಶಾಹಿ ಬಂಡವಾಳದ ಪ್ರಾಬಲ್ಯವನ್ನು ಎದುರಿಸುವುದಕ್ಕೆ ಸಾರ್ವಜನಿಕ ಕ್ಷೇತ್ರವನ್ನು ಬಳಸಿಕೊಂಡಿತು. ವಿದೇಶಿ ವಿನಿಮಯವನ್ನು ಮಿತವಾಗಿ ಆದ್ಯತೆಯ ಮೇಲೆ ಬಳಸುವುದು ಅನಿವಾರ್ಯವಾಗಿತ್ತು. ಆದರೂ ಭಾರತ ತನ್ನ ಹಾದಿಯನ್ನು ಬಿಟ್ಟುಕೊಡಲಿಲ್ಲ. ೧೯೫೦ರ ದಶಕದ ಕೊನೆಯಲ್ಲಿ, ಡಲ್ಲೆಸ್‌ರ ಮರಣದ ನಂತರ, ಅಮೆರಿಕೆಯು ತನ್ನ ನಿಲುವನ್ನು ಕ್ರಮೇಣ ಬದಲಿಸಿತು. ಭಾರತವನ್ನು ದೂರವಿಡುವ ನೀತಿಯಿಂದ ತನಗೆ ಸಮಸ್ಯೆಯಾಗುತ್ತದೆ (ಮತ್ತು ಸೋವಿಯತ್ ಒಕ್ಕೂಟಕ್ಕೆ ಸಹಾಯವಾಗುತ್ತದೆ) ಎಂದು ಆತಂಕ ಪಟ್ಟಿತು. ತನಗೆ ಹಾನಿಯಾಗುತ್ತದೆ ಎಂದು ಭಯಪಟ್ಟು ತನ್ನ ನಿಲುವನ್ನು ನಿಧಾನವಾಗಿ ಬದಲಾಯಿಸಿತು. ಐಸನ್‌ಹೋವರ್‌ರ ಭಾರತ ಭೇಟಿಯ ನಂತರ, ಭಾರತಕ್ಕೆ ಒಂದಿಷ್ಟು ವಿಶ್ವಬ್ಯಾಂಕ್ "ನೆರವು' ಬರುವುದಕ್ಕೆ ಆರಂಭವಾಯಿತು. ಆದರೆ ನೆರವು ಕೇವಲ ಮೂಲಸೌಕರ್ಯ ಯೋಜನೆಗಳಿಗೆ ಮಾತ್ರ ಬರುತ್ತಿತ್ತು.

ಮತ್ತೊಮ್ಮೆ, ಬಾಂಗ್ಲಾದೇಶ ಯುದ್ಧದ ಸಮಯದಲ್ಲಿ, ಭಾರತದ ಮಧ್ಯಪ್ರವೇಶ ಅಮೇರಿಕಾಕ್ಕೆ ಸುವರ್ಣಾವಕಾಶವನ್ನು ತಪ್ಪಿಸಿಬಿಟ್ಟಿತು. ಗೊಂದಲದ ಪರಿಸ್ಥಿತಿಯನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳುವುದಕ್ಕೆ ಅಮೇರಿಕೆಗೆ ಸಾಧ್ಯವಾಗಲಿಲ್ಲ. ಇದರಿಂದ ಸಹಜವಾಗಿಯೆ ಅಮೆರಿಕ ಕೋಪಗೊಂಡಿತು. ಅಮೆರಿಕ ಸರ್ಕಾರವು ಭಾರತವನ್ನು ಹೆದರಿಸಲು ತನ್ನ USS ಎಂಟರ್‌ಪ್ರೈಸ್ ಏರ್‌ಕ್ರಾಫ್ಟ್ ನೌಕೆಯ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ೭೪ ಅನ್ನು ಬಂಗಾಳ ಕೊಲ್ಲಿಗೆ ಕಳುಹಿಸಿತು. ಆದರೆ, ಅಮೆರಿಕದ ಬೆದರಿಕೆಗಳಿಗೆ ತಲೆಕೆಡಿಸಿಕೊಳ್ಳದ ಭಾರತ ತನ್ನ ಹಾದಿಯಲ್ಲೆ ಮುಂದುವರಿಯಿತು. ಮತ್ತು ಬಾಂಗ್ಲಾದೇಶದ ರಚನೆಯ ಪ್ರಕ್ರಿಯೆಗೆ ಸಹಾಯ ಮಾಡಿತು.

ಅಮೆರಿಕದ ಸಾಮ್ರಾಜ್ಯಶಾಹಿಗೆ ಹೀಗೆ ಹೆದರಿಸುವುದರ ಹಿಂದೆ ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಸ್ಥಾಪಿಸುವ ಉದ್ದೇಶ ಇರುತ್ತದೆ. ಆದರೆ ಅದು ಅಷ್ಟಕ್ಕೆ ಸೀಮಿತವಲ್ಲ. ಆ ಮೂಲಕ ನಿರ್ದಿಷ್ಟ ದೇಶಗಳನ್ನು ತನ್ನ ಅಜೆಂಡಾಗೆ ತಕ್ಕಂತೆ ನಡೆದುಕೊಳ್ಳುವಂತೆ ಮಾಡಲು ಪ್ರಯತ್ನಿಸುತ್ತಿರುತ್ತದೆ ಕೂಡ. ಇದು ಹಳೆಯ ವಿದ್ಯಾಮಾನ. ಆದರೆ ಆಗ ಸ್ವತಂತ್ರ ಭಾರತ ಇದನ್ನು ಯಶಸ್ವಿಯಾಗಿ ಎದುರಿಸಿತ್ತು. ಈಗ ಅಮೇರಿಕೆ ನಡೆಸುತ್ತಿರುವ ದಬ್ಬಾಳಿಕೆಯೂ ಹೊಸದೇನಲ್ಲ. ಆದರೆ ಅದು ಸಂಪೂರ್ಣ ವಿಭಿನ್ನ ಸಂದರ್ಭದಲ್ಲಿ ನಡೆಯುತ್ತಿದೆ. ಈಗ ಈ ದೇಶಗಳು ನವ–ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿವೆ. ಹಾಗಾಗಿ ಈಗ ಜಾಗತಿಕ ಹಣಕಾಸು ಬಂಡವಾಳ ಹೆಚ್ಚು ಪ್ರಬಲವಾಗಿದೆ.

ಡೊನಾಲ್ಡ್ ಟ್ರಂಪ್‌ರ ಈಗಿನ ದಬ್ಬಾಳಿಕೆ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಭಾರತಕ್ಕೆ ಸಂಬಂಧಿಸಿದಂತೆ ಅದು ಎರಡು ಕಾರಣಗಳಿಗೆ ಸುಂಕವನ್ನು ವಿಧಿಸುತ್ತಿದೆ. ಮೊದಲನೆಯದು ಆಗಸ್ಟ್ ೧ರೊಳಗೆ ಭಾರತ ಅಮೇರಿಕೆಯೊಂದಿಗೆ ಒಪ್ಪಂದಕ್ಕೆ ಬಂದಿಲ್ಲ. ಹಾಗಾಗಿ ಭಾರತೀಯ ಸರಕುಗಳ ಮೇಲೆ ಅಮೆರಿಕದ ಮಾರುಕಟ್ಟೆಯಲ್ಲಿ ಶೇಕಡ ೨೫ರಷ್ಟು ಸುಂಕವನ್ನು ವಿಧಿಸಿದೆ. ಎರಡನೆಯದು, ರಷ್ಯಾದಿಂದ ತೈಲ ಖರೀದಿಸಿದೆ. ಅದಕ್ಕಾಗಿ ಭಾರತೀಯ ಸರಕುಗಳ ಮೇಲೆ ದಂಡವಾಗಿ ಅಮೇರಿಕೆಯು ಹೆಚ್ಚಿನ ೨೫% ಸುಂಕವನ್ನು ವಿಧಿಸುವ ಬೆದರಿಕೆಯನ್ನು ಹಾಕಿದೆ. ಏಕೆಂದರೆ ರಷ್ಯಾದ ಮೇಲೆ ಪಾಶ್ಚಿಮಾತ್ಯ ದೇಶಗಳು ವಿಧಿಸಿರುವ ನಿರ್ಬಂಧಗಳನ್ನು ಉಲ್ಲಂಘಿಸಿ ಭಾರತ ತೈಲವನ್ನು ಖರೀದಿಸಿದೆ. ಜೊತೆಗೆ, ಟ್ರಂಪ್ BRICS ಬಗ್ಗೆ ಮಾಡಿರುವ ಟೀಕೆಗಳನ್ನು ಗಮನಿಸಿದರೆ, ಟ್ರಂಪ್ ಭಾರತವನ್ನು ಆ ಸಂಸ್ಥೆಯಿಂದ ಹೊರಗೆ ಬರುವಂತೆ ಬೆದರಿಕೆ ಒಡ್ಡಬಹುದು. ಅಥವಾ, ಬಹುಶಃ, ಅಮೆರಿಕದ ಟ್ರೋಜನ್ ಹಾರ್ಸ್‌ನಂತೆ ಕಾರ್ಯನಿರ್ವಹಿಸುವಂತೆ ಒತ್ತಾಯಿಸಬಹುದು. ಆದರೆ ಇದು ತಕ್ಷಣಕ್ಕೆ ಅದು ಪ್ರಸ್ತುತವಲ್ಲ. ತಕ್ಷಣದ ಹಾಗೂ ಮೂಲಭೂತ ವಿಷಯ ಅಂದರೆ ರಷ್ಯಾದಿಂದ ತೈಲ ಖರೀದಿಸುವುದು. ಭಾರತ ಈ ವಿಷಯದಲ್ಲಿ, ವಿರೋಧಾತ್ಮಕ ಹೇಳಿಕೆಗಳನ್ನು ನೀಡುತ್ತಿದೆ, ಇದು ಅಮೆರಿಕವನ್ನು ಓಲಿಸುವುದಕ್ಕೆ ಹೆಣಗಾಡುತ್ತಿರುವಂತೆ ಕಾಣುತ್ತಿದೆ.

ಭಾರತಕ್ಕೆ ಲಭ್ಯವಿರುವ ಅಮೆರಿಕ–ಅನುಮೋದಿತ ಯಾವುದೇ ಇತರ ಮೂಲಕ್ಕೆ ಹೋಲಿಸಿದರೆ ರಷ್ಯಾದ ತೈಲ ಅಗ್ಗ. ಆದ್ದರಿಂದ ರಷ್ಯಾದ ತೈಲ ಖರೀದಿಯನ್ನು ನಿಲ್ಲಿಸಲು ಒತ್ತಾಯಿಸುವುದು ಭಾರತವನ್ನು ತನ್ನ ಸ್ವಂತ ಹಿತಾಸಕ್ತಿಗೆ ವಿರುದ್ಧ ಕಾರ್ಯನಿರ್ವಹಿಸುವಂತೆ ಒತ್ತಾಯಿಸಿದಂತೆ ಆಗುತ್ತದೆ. ಇವು ದಕ್ಷಿಣ ಆಫ್ರಿಕಾದ ಜನಾಂಗೀಯ ತಾರತಮ್ಯದ ವಿರುದ್ಧ ವಿಧಿಸಲಾದಂತಹ ಸಂಯುಕ್ತ ರಾಷ್ಟ್ರಗಳ ನಿರ್ದೇಶಿತ ನಿರ್ಬಂಧಗಳಲ್ಲ;

ಅಮೇರಿಕೆ ಹಾಗೂ ಇತರ ಸಾಮ್ರಾಜ್ಯಶಾಹಿ ದೇಶಗಳು ತಮ್ಮ ನಿರ್ದೇಶನವನ್ನು ಉಲ್ಲಂಘಿಸುತ್ತವೆ ಅನ್ನುವ ಕಾರಣಕ್ಕೆ ಕ್ಯೂಬಾ, ಇರಾನ್ ಅಥವಾ ವೆನೆಜುವೆಲಾದಂತಹ ದೇಶಗಳ ವಿರುದ್ಧ ಏಕಪಕ್ಷೀಯವಾಗಿ ವಿಧಿಸಿರುವ ನಿರ್ಬಂಧಗಳಂತಹ ನಿರ್ಬಂಧಗಳು. ಆದ್ದರಿಂದ, ಇಂತಹ ನಿರ್ಬಂಧಗಳನ್ನು ಒಪ್ಪಿಕೊಳ್ಳುವಂತೆ ದೇಶಗಳನ್ನು ಒತ್ತಾಯಿಸುವುದು ಅಂದರೆ, ಸಾಮ್ರಾಜ್ಯಶಾಹಿಯ ಉದ್ದೇಶವನ್ನು ಮುಂದುವರೆಸಲು ಅವರ ಸ್ವಂತ ಹಿತಾಸಕ್ತಿಗಳ ವಿರುದ್ಧ ಹೋಗುವಂತೆ ಮಾಡುವುದಕ್ಕೆ ಒತ್ತಾಯಿಸಿದಂತೆ ಆಗುತ್ತದೆ. ಇದರ ಹಿಂದೆ ಯಾವುದೇ ಘನವಾದ ತತ್ತ್ವವೂ ಇಲ್ಲ. ಇದೆಯೆಂಬ ಸೋಗನ್ನೂ ಅವು ಹಾಕುತ್ತಿಲ್ಲ. ನೇರವಾಗಿ, ಬಹಿರಂಗವಾಗಿ ಸಾಮ್ರಾಜ್ಯಶಾಹಿಯ ಸ್ಟ್ರಾಟಜಿಕ್ ಹಿತಾಸಕ್ತಿಗಳನ್ನು ರಕ್ಷಿಸಲು ತಮ್ಮ ಸ್ವಂತದ ಹಿತಾಸಕ್ತಿಯನ್ನು ಬದಿಗೊತ್ತಿ ಒಪ್ಪಿಕೊಳ್ಳಲು ಒತ್ತಾಯಿಸಲಾಗುತ್ತಿದೆ.

ಮೋದಿ ಸರ್ಕಾರವು ಈ ವಿಷಯದಲ್ಲಿ ಟ್ರಂಪ್‌ರನ್ನು ಧೈರ್ಯವಾಗಿ ಮತ್ತು ನಿರ್ಣಾಯಕವಾಗಿ ಏಕೆ ತಿರಸ್ಕರಿಸುತ್ತಿಲ್ಲ? ಚೀನಾವನ್ನು ಬಿಡಿ. ಬ್ರೆಜಿಲ್‌ನಂತಹ ಬಂಡವಾಳಶಾಹಿ ದೇಶದ ಸರ್ಕಾರವು ಕೂಡ ಟ್ರಂಪ್ ಅವರನ್ನು ಧೈರ್ಯವಾಗಿ ಎದುರಿಸಿದೆ. ಅಧ್ಯಕ್ಷ ಲೂಲಾ ಟ್ರಂಪ್ ಬ್ರೆಜಿಲಿಯನ್ ಸರಕುಗಳ ಮೇಲೆ ಶೇಕಡ ೫೦ರಷ್ಟು ಸುಂಕವನ್ನು ವಿಧಿಸಿದರೆ, ಬ್ರೆಜಿಲ್ ಕೂಡ ಅಮೆರಿಕನ್ ಸರಕುಗಳ ಮೇಲೆ ಶೇಕಡ ೫೦ರಷ್ಟು ಸುಂಕವನ್ನು ವಿಧಿಸುವುದಾಗಿ ಘೋಷಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಮೋದಿಯವರ ಪುಕ್ಕಲುತನವನ್ನು ಸರಿಯಾಗಿ ಎತ್ತಿ ತೋರಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ ಬಾಂಗ್ಲಾದೇಶ ಯುದ್ಧದ ಸಮಯದಲ್ಲಿ ಇಂದಿರಾ ಗಾಂಧಿಯವರು ನಿಕ್ಸನ್‌ರನ್ನು ಧೈರ್ಯದಿಂದ ಎದುರಿಸಿದ್ದನ್ನು ಉಲ್ಲೇಖಿಸಿದ್ದಾರೆ (ಇಂದಿರಾ ಗಾಂಧಿಯವರ ಕಣ್ಣುಗಳನ್ನು ನೋಡಲು ಭಯಪಟ್ಟಿದ್ದೇನೆ ಎಂದು ನಿಕ್ಸನ್ ಒಮ್ಮೆ ಒಪ್ಪಿಕೊಂಡಿದ್ದರು).

ಒಬ್ಬ ನಾಯಕನ ಧೈರ್ಯ ಅಥವಾ ಪುಕ್ಕಲುತನ ಅವನ ಬೆಂಬಲಿಗರ ವರ್ಗ ಸ್ವಭಾವವನ್ನು ಅವಲಂಬಿಸಿರುತ್ತದೆ. ಈ ವಿಷಯದಲ್ಲಿ ಲೂಲಾ ಮತ್ತು ಮೋದಿಯವರ ನಡುವೆ ವ್ಯತ್ಯಾಸವಿದೆ. ಲೂಲಾ ಕಾರ್ಮಿಕ ವರ್ಗದ ಬೇರಿನಿಂದ ಬಂದವರು. ಮೋದಿಯವರಿಗೆ ಕೆಲವು ಕಾರ್ಮಿಕರು ಮತ ಚಲಾಯಿಸಿದ್ದರೂ, ಮೂಲತಃ ದೊಡ್ಡ ಬಂಡವಾಳಿಗರ ಬೆಂಬಲದಿಂದ ಅಧಿಕಾರದಲ್ಲಿದ್ದಾರೆ. ಆಗ ಅಮೆರಿಕದ ಸಾಮ್ರಾಜ್ಯಶಾಹಿಯ ದಬ್ಬಾಳಿಕೆ ತಂತ್ರಗಳ ವಿರುದ್ಧ ಭಾರತದ ಆಗಿನ ನಿಲುವಿಗೂ ಈಗಿನ ನಿಲುವಿಗೂ ನಡುವೆ ಅಪಾರ ವ್ಯತ್ಯಾಸವಿದೆ. ಅದಕ್ಕೆ ನೆಹರೂ/ಇಂದಿರಾ ಗಾಂಧಿಯವರ ವೈಯಕ್ತಿಕ ಗುಣಲಕ್ಷಣಗಳು ಮತ್ತು ಮೋದಿಯವರ ವೈಯಕ್ತಿಕ ಸ್ವಭಾವದ ನಡುವಿನ ವ್ಯತ್ಯಾಸ(ವ್ಯತ್ಯಾಸವಿರುವುದು ಹೌದಾದರೂ) ಕಾರಣವಲ್ಲ. ಬದಲಿಗೆ ಎರಡೂ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಆರ್ಥಿಕ ವ್ಯವಸ್ಥೆಗಳ ನಡುವಿನ ವ್ಯತ್ಯಾಸ ಕಾರಣ. ಆಗ ವಸಾಹತು-ವಿರೋಧಿ ಸರ್ಕಾರದ ನಿಯಂತ್ರಿತ ಆರ್ಥಿಕ ವ್ಯವಸ್ಥೆ ಜಾರಿಯಲ್ಲಿತ್ತು. ಈಗ ನವ-ಉದಾರವಾದಿ ಆರ್ಥಿಕ ವ್ಯವಸ್ಥೆ ಅಸ್ತಿತ್ವದಲ್ಲಿದೆ.

ಒಂದು ದೇಶದ ವಿದೇಶಾಂಗ ನೀತಿ ಮತ್ತು ಆರ್ಥಿಕ ನೀತಿಯ ನಡುವೆ ನಿಕಟವಾದ ಸಂಬಂಧವಿರುತ್ತೆ ಅನ್ನುವುದು ಸ್ಪಷ್ಟ. ಆಗ ಸ್ವಾವಲಂಬನೆಗೆ ಆದ್ಯತೆ ನೀಡಿದ್ದ ಸರ್ಕಾರ ನಿರ್ದೇಶಿತ ಆರ್ಥಿಕ ನೀತಿ ರೂಢಿಯಲ್ಲಿತ್ತು. ಅದು ಭಾರತದ ಅಲಿಪ್ತತೆಯ ವಿದೇಶಾಂಗ ನೀತಿಯೊಂದಿಗೆ ಚೆನ್ನಾಗಿ ಮಿಳಿತವಾಗಿತ್ತು. ಆದ್ದರಿಂದ ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯನ್ನು ಎದುರಿಸುವ ಇಚ್ಛೆ ಮತ್ತು ಸಾಮರ್ಥ್ಯ ಅದಕ್ಕಿತ್ತು. ಆದರೆ, ನವ-ಉದಾರವಾದಿ ಆರ್ಥಿಕ ವ್ಯವಸ್ಥೆಗೆ, ಸ್ವಾವಲಂಬನೆಯ ಎಲ್ಲಾ ಪ್ರಯತ್ನಗಳನ್ನು ಹತ್ತಿಕ್ಕುವುದೇ ಹೆಮ್ಮೆಯ ವಿಷಯವಾಗಿದೆ. "ಮೇಕ್ ಇನ್ ಇಂಡಿಯಾ" ಎನ್ನುವುದು ವಿದೇಶಿ ಬಂಡವಾಳಕ್ಕೆ ಭಾರತದಲ್ಲಿ ಉತ್ಪಾದಿಸುವುದಕ್ಕೆ ನೀಡುತ್ತಿರುವ ಆಹ್ವಾನ. ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಸ್ವಾವಲಂಬನೆಯ ಪ್ರಯತ್ನಗಳಿಂದ ದೂರವಿಡುವಂತೆ ನೋಡಿಕೊಳ್ಳುವುದರಲ್ಲೆ ಉದಾರವಾದಿ ಆರ್ಥಿಕತೆಯ ಅಸ್ತಿತ್ವ ಇರುವುದು. ಸ್ವಾವಲಂಬನೆಯಿಂದ ದೂರ ಸರಿದಷ್ಟೂ ಆ ದೇಶಗಳು ಸಾಮ್ರಾಜ್ಯಶಾಹಿ ಒತ್ತಡಕ್ಕೆ ಸಿಕ್ಕಿಬೀಳುವ ಸಾಧ್ಯತೆ ಹೆಚ್ಚು.

ನವ-ಉದಾರವಾದಿ ಆರ್ಥಿಕ ವ್ಯವಸ್ಥೆಯನ್ನು ಭಾರತದಲ್ಲಿ ತರುವಾಗ ಒಂದಿಷ್ಟು ಭರವಸೆಗಳನ್ನು ನೀಡಲಾಗಿತ್ತು. ಅದು ಒಂದು ಶಾಶ್ವತವಾದ ಹೊಸ ವ್ಯವಸ್ಥೆಯನ್ನು ತರುತ್ತದೆ. ಅದರಲ್ಲಿ ಬಂಡವಾಳವು ಜಾಗತಿಕವಾಗಿ ಚಲನಶೀಲವಾಗಿರುತ್ತದೆ. ಮೊದಲು ಜಗತ್ತಿನ ಉತ್ತರದ ದೇಶಗಳಲ್ಲಷ್ಟೇ ನಡೆಯುತ್ತಿದ್ದ ಎಲ್ಲಾ ಬಗೆಯ ಚಟುವಟಿಕೆಗಳು ಇನ್ನು ಮುಂದೆ ದಕ್ಷಿಣದ ಕಡಿಮೆ-ಕೂಲಿಯ ದೇಶಗಳಲ್ಲಿ ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಆರ್ಥಿಕ ಚಟುವಟಿಕೆಗಳು ಉತ್ತರದಿಂದ ದಕ್ಷಿಣಕ್ಕೆ ಸ್ಥಳಾಂತರಗೊಳ್ಳುತ್ತವೆ. ಇದರಿಂದ ದಕ್ಷಿಣದ ದೇಶಗಳಲ್ಲಿ ಹೆಚ್ಚಿನ ಅಭಿವೃದ್ಧಿಯಾಗುತ್ತದೆ. ಬಡತನದ ನಿರ್ಮೂಲನ ಸಾಧ್ಯವಾಗುತ್ತದೆ. ಈ ವಾದದಲ್ಲಿ ಒಂದು ಸಮಸ್ಯೆ ಇದೆ. ಯಾವುದೇ ಜಾಗತಿಕ ವ್ಯವಸ್ಥೆಯು ಶಾಶ್ವತವಲ್ಲ. ಇಂತಹ ವ್ಯವಸ್ಥೆಗಳನ್ನು ರೂಪಿಸಿರುವುದೇ ಸಾಮ್ರಾಜ್ಯಶಾಹಿಗಳು. ಹಾಗಾಗಿ ಸಾಮ್ರಾಜ್ಯಶಾಹಿಯ ಇಚ್ಛೆಗೆ ಅನುಗುಣವಾಗಿ ಅವು ಮುಂದೆ ಬದಲೂ ಆಗಬಹುದು. ಈಗ ಅದನ್ನು ಸ್ಪಷ್ಟವಾಗಿ ನೋಡಬಹುದು. ಆದರೆ, ಸಾಮ್ರಾಜ್ಯಶಾಹಿಯು ಅಸ್ತಿತ್ವದಲ್ಲಿರುವ ವ್ಯವಸ್ಥೆಯಿಂದ ಹಿಂದೆ ಸರಿದುಕೊಂಡಾಗ, ಅದರಲ್ಲಿ ಸಿಕ್ಕಿಬಿದ್ದಿರುವ ಭಾರತದಂತಹ ದಕ್ಷಿಣದ ದೇಶಗಳಿಗೆ ಅದರಿಂದ ಬಿಡಿಸಿಕೊಂಡು ಹೊರಬರುವುದಕ್ಕೆ ಕಷ್ಟವಾಗುತ್ತದೆ.


ಒಮ್ಮೆ ಒಂದು ದೇಶವು ವಾಣಿಜ್ಯವನ್ನು ಅವಲಂಬಿಸಿಕೊಂಡುಬಿಟ್ಟರೆ ವಾಣಿಜ್ಯದಲ್ಲಿ ಯಾವುದೇ ಏರುಪೇರಾದರೂ ಅದರ ಆರ್ಥಿಕತೆಗೆ ಪೆಟ್ಟು ಬೀಳುತ್ತದೆ. ಅದು ತನ್ನ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಮರುಹೊಂದಾಣಿಕೆ ಮಾಡಿಕೊಳ್ಳಲು ತಯಾರಿರಬೇಕು. ಇಲ್ಲದೆ ಹೋದರೆ ಅದು ಸಾಮ್ರಾಜ್ಯಶಾಹಿಯ ಒತ್ತಡಕ್ಕೆ ಮಣಿಯಬೇಕಾಗುತ್ತದೆ. ಆದರೆ, ಇಂತಹ ಮೂಲಭೂತ ಬದಲಾವಣೆಯ ಪ್ರಯತ್ನವನ್ನು ನಗರದ ಮೇಲ್ಮಧ್ಯಮ ವರ್ಗವು ವಿರೋಧಿಸುತ್ತದೆ. ಈ ಮೇಲ್ಮಧ್ಯಮ ವರ್ಗವು ದೊಡ್ಡ ಬೂರ್ಜ್ವಾಸಿ ಮತ್ತು ನವಉದಾರವಾದಿ ಆರ್ಥಿಕ ವ್ಯವಸ್ಥೆಯಿಂದ ಲಾಭ ಪಡೆದುಕೊಂಡಿರುತ್ತದೆ. ವಿಶೇಷವಾಗಿ ಈ ವರ್ಗದ ಜನರ ಹಿತಾಸಕ್ತಿಗೆ ಬದ್ಧವಾದ ಸರ್ಕಾರ ಬಹುತೇಕ ಸಾಮ್ರಾಜ್ಯಶಾಹಿಯ ಬೇಡಿಕೆಗಳಿಗೆ ಮಣಿಯುತ್ತದೆ.

ಇದನ್ನು ಸ್ಪಷ್ಟಪಡಿಸುವುದಕ್ಕೆ ಒಂದು ಉದಾಹರಣೆಯನ್ನು ಗಮನಿಸೋಣ. ಟ್ರಂಪ್‌ರ ಸುಂಕದ ಬೆದರಿಕೆಯಿಂದ ರೂಪಾಯಿಯ ಮೌಲ್ಯ ಕುಸಿಯುವುದಕ್ಕೆ ಪ್ರಾರಂಭವಾಗಿದೆ. ಸುಂಕದ ದರ ಇನ್ನೂ ಹೆಚ್ಚ ತೊಡಗಿದರೆ, ಸರ್ಕಾರ ಬಂಡವಾಳ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳದೇ ಹೋದರೆ ರೂಪಾಯಿಯ ಮೌಲ್ಯ ಇನ್ನೂ ಕುಸಿಯುತ್ತದೆ. ಬಂಡವಾಳದ ನಿಯಂತ್ರಣದ ಜೊತೆಗೆ ವಾಣಿಜ್ಯ ನಿಯಂತ್ರಣಗಳನ್ನು ತರಬೇಕಾಗುತ್ತದೆ. ಇಲ್ಲದೇ ಹೋದರೆ ವಿದೇಶಿ ವಿನಿಮಯವನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇವೆಲ್ಲಾ ಮಾಡಬೇಕಾದರೆ ನವಉದಾರವಾದಿ ಆರ್ಥಿಕ ನೀತಿಯಿಂದ ಹೊರಬರಬೇಕಾಗುತ್ತದೆ. ಬೇರೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ಆದರೆ, ಜಾಗತಿಕ ಹಣಕಾಸು ಬಂಡವಾಳದೊಂದಿಗೆ ತೆಕ್ಕೆಹಾಕಿಕೊಂಡಿರುವ ದೊಡ್ಡ ಬಂಡವಾಳಿಗರು ಇದನ್ನು ವಿರೋಧಿಸುತ್ತಾರೆ. ಇವರ ಹಿತಾಸಕ್ತಿಗಳಿಗೆ ಬದ್ಧವಾದ ಸರ್ಕಾರವು ಬೇರೆ ಯಾವುದೇ ಪರ್ಯಾಯವನ್ನು ಕುರಿತು ಯೋಚಿಸುವುದಿಲ್ಲ. ಬದಲಿಗೆ, ಸಾಮ್ರಾಜ್ಯಶಾಹಿಯ ಬೆದರಿಕೆಗೆ ಮಣಿದು ಅವರ ಬೇಡಿಕೆಗಳೊಂದಿಗೆ ರಾಜಿ ಮಾಡಿಕೊಳ್ಳುತ್ತದೆ.


ಸಾಮ್ರಾಜ್ಯಶಾಹಿಯಿಂದ ಬಿಡುಗಡೆ ಹೊಂದುವುದು ನವ ಉದಾರವಾದಿ ವಿಧಾನಕ್ಕೆ ಹೊಂದಿಕೆಯಾಗುವುದಿಲ್ಲ. ಇದನ್ನು ೧೯೯೦ರ ಹಿಂದಿನ ಸರ್ಕಾರಗಳು ಗುರುತಿಸಿದ್ದವು. ನವಉದಾರವಾದಿ ಮಾದರಿಯನ್ನು ಒಪ್ಪಿಕೊಂಡಿರುವುದರಿಂದ ದೇಶದ ಸ್ವಾತಂತ್ರ್ಯ ಸೀಮಿತಗೊಂಡಿದೆ. ಡೊನಾಲ್ಡ್ ಟ್ರಂಪ್‌ರ ದಬ್ಬಾಳಿಕೆ ಇದನ್ನು ಇನ್ನೂ ಸ್ಪಷ್ಟವಾಗಿ ತೆರೆದಿಟ್ಟಿದೆ.

ಅಮರ್ತ್ಯ ಸೇನ್– ಬದುಕು ಹಾಗು ಆಲೋಚನೆಗಳು–೨

ಅಮರ್ತ್ಯ ಸೇನ್ ನಮ್ಮ ನಡುವಿನ ಅಪರೂಪದ ಅರ್ಥಶಾಸ್ತ್ರಜ್ಞ, ತತ್ತ್ವಶಾಸ್ತ್ರಜ್ಞ, ಚಿಂತಕ. ಅವರ ಅಧ್ಯಯನದ ಹರವು ತೀರಾ ವಿಶಾಲವಾದದ್ದು. ಅವರ ಬಗ್ಗೆ ಕನ್ನಡದಲ್ಲಿ ಬರಹಗಳು ತುಂಬಾ ಕಡಿಮೆ. ಅವರ ಬದುಕು ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಪ್ರಾರಂಭವಾಗಿರುವ ಸರಣಿಯ ಎರಡನೆಯ ಭಾಗ ಇದು. ಇದರಲ್ಲಿ ಅವರ ಅಭಿವೃದ್ಧಿಯನ್ನು ಕುರಿತ ಚಿಂತನೆಯನ್ನು ಪರಿಚಯಿಸಲಾಗಿದೆ.



ಅಭಿವೃದ್ಧಿ ಅಂದರೆ ಸ್ವಾತಂತ್ರ್ಯದ ವಿಸ್ತರಣೆ



ಸಾಮಾನ್ಯವಾಗಿ ಅಭಿವೃದ್ಧಿ ಅಂದರೆ ನಿವ್ವಳ ರಾಷ್ಟ್ರೀಯ ಉತ್ಪನ್ನ ಅಥವಾ ವೈಯಕ್ತಿಕ ವರಮಾನದ ಹೆಚ್ಚಳ ಅಂತಲೋ ಅಥವಾ ಕೈಗಾರಿಕೀಕರಣ, ಅಥವಾ ತಾಂತ್ರಿಕ ಬೆಳವಣಿಗೆ, ಇಲ್ಲವೇ ಸಾಮಾಜಿಕ ಆಧುನೀಕರಣ ಅಂತಲೋ ಭಾವಿಸಲಾಗುತ್ತದೆ. ಅಭಿವೃದ್ಧಿಗಾಗಿ ನೀತಿಗಳನ್ನು ಹಾಗೂ ಯೋಜನೆಗಳನ್ನು ರೂಪಿಸುವಾಗ "ಉತ್ಪಾದನೆ ಹಾಗೂ ಸಂಪತ್ತನ್ನು" ಹೆಚ್ಚಿಸುವುದನ್ನು ಗುರಿಯನ್ನಾಗಿ ಮಾಡಿಕೊಳ್ಳಲಾಗುತ್ತದೆ. ಅರ್ಥಾತ್ ಅವುಗಳನ್ನು ಪ್ರಗತಿಯ ಮೂಲವನ್ನಾಗಿ ನೋಡಲಾಗುತ್ತದೆ. ಆರ್ಥಿಕ ಪ್ರಗತಿಯಾಯಿತು ಅಂದರೆ ಅಭಿವೃದ್ಧಿ ಆಯಿತು ಅಂತ ಸಂಭ್ರಮಿಸಲಾಗುತ್ತದೆ. ಜನರಿಂದಾಗಿ ದೇಶದ ಬೆಳವಣಿಗೆಯಾಗುತ್ತದೆ ಹಾಗೂ ಸಂಪತ್ತು ಹೆಚ್ಚುತ್ತದೆ ಅನ್ನುವ ಕಾರಣಕ್ಕಷ್ಟೇ ಇಡೀ ಪ್ರಕ್ರಿಯೆಯಲ್ಲಿ ಜನರು ಮುಖ್ಯವಾಗುತ್ತಾರೆ. ಅಂದರೆ ಮನಷ್ಯನನ್ನು ಕೇವಲ ಅಭಿವೃದ್ಧಿಯ ಸಾಧನವನ್ನಾಗಿ ನೋಡಲಾಗುತ್ತದೆ.

ಅಮರ್ತ್ಯ ಸೇನ್ ಅವರದ್ದು ಇದಕ್ಕೆ ತೀರಾ ವಿರುದ್ಧವಾದ ನಿಲುವು. ಅವರಿಗೆ ಆರ್ಥಿಕ ಬೆಳವಣಿಗೆ ಹಾಗೂ ನೈಜ ವರಮಾನದ ಹೆಚ್ಚಳ ಕೇವಲ ಒಂದು ಸಾಧನ. ಅದು ಗುರಿಯಲ್ಲ. ಅವರು ಅರಿಸ್ಟಾಟಲನನ್ನು ಉಲ್ಲೇಖಿಸುತ್ತಾರೆ. "ಸಂಪತ್ತು ಖಂಡಿತವಾಗಿ ನಾವು ಅರಸುತ್ತಿರುವ ಸರಕಲ್ಲ. ಅವು ನಮ್ಮ ಇತರ ಅವಶ್ಯಕತೆಗಳನ್ನು ಪಡೆದುಕೊಳ್ಳುವುದಕ್ಕೆ ಬೇಕು ಅಷ್ಟೆ." ಸೇನ್ ಹೇಳುವುದು ನಮ್ಮ ಗುರಿ ಕೇವಲ ಆರ್ಥಿಕ ಪ್ರಗತಿ, ಮಾರುಕಟ್ಟೆಯನ್ನು ವಿಸ್ತರಿಸುವುದು ಅಥವಾ ಸಂಪತ್ತನ್ನು ಹೆಚ್ಚಿಸುವುದು ಆಗಬಾರದು. ಬದಲಿಗೆ ಜನರ ಸ್ವಾತಂತ್ರ್ಯವನ್ನು ಹಾಗೂ ಸಾಮರ್ಥ್ಯವನ್ನು ಹೆಚ್ಚಿಸುವುದು ನಮ್ಮ ಗುರಿಯಾಗಬೇಕು. ಅಭಿವೃದ್ಧಿಯ ಉದ್ದೇಶವೂ ಅದೇ ಆಗಬೇಕು ಅನ್ನುತ್ತಾರೆ. ಹಾಗಾಗಿ ಸೇನ್ ಅಂತಹವರು ಅಭಿವೃದ್ಧಿಯನ್ನು "ಮಾನವ ಅಭಿವೃದ್ಧಿ"ಯಾಗಿ ನೋಡುತ್ತಾರೆ.

ವ್ಯಕ್ತಿಯ ಸಾಮರ್ಥ್ಯವನ್ನು ಸೇನ್ ಒಬ್ಬ ವ್ಯಕ್ತಿಯ ಸ್ಥಿತಿ ಮತ್ತು ಕ್ರಿಯೆಯ ಮೂಲಕ ವ್ಯಾಖ್ಯಾನಿಸುತ್ತಾರೆ. ಇಲ್ಲಿ ಸ್ಥಿತಿ ಅಂದರೆ 'ಬೀಯಿಂಗ್' ಅಂದರೆ ಅವನು ಏನಾಗಿದ್ದಾನೆ ಅನ್ನುವುದು. ಉದಾಹರಣೆಗೆ ಆರೋಗ್ಯವಾಗಿದ್ದಾನೆ, ಓದಿದ್ದಾನೆ, ಇತ್ಯಾದಿ. ಮತ್ತು ಕ್ರಿಯೆ ಅಂದರೆ ಅವನು ಏನು ಮಾಡಬಲ್ಲ ಅಂದರೆ 'ಡೂಯಿಂಗ್' ಅನ್ನು ಸೂಚಿಸುತ್ತದೆ. ಉದಾಹರಣೆಗೆ ಓದಬಲ್ಲ, ಕೆಲಸ ಮಾಡಬಲ್ಲ, ಇತ್ಯಾದಿ. ಒಬ್ಬ ವ್ಯಕ್ತಿಗೆ ಸಾಧ್ಯವಾಗುವ ಸ್ಥಿತಿ ಹಾಗೂ ಕ್ರಿಯೆ ಅವನ ಕಾರ್ಯನಿರ್ವಹಣೆಯನ್ನು (functionings) ಸೂಚಿಸುತ್ತದೆ. ಒಬ್ಬ ವ್ಯಕ್ತಿಯ ಸಾಮರ್ಥ್ಯ ಅವನು ಮುಖ್ಯವೆಂದು ಭಾವಿಸುವ ವಿಭಿನ್ನ ಬಗೆಯ ಸ್ಥಿತಿ ಹಾಗೂ ಕ್ರಿಯೆಯನ್ನು ಸಾಧಿಸುವುದಕ್ಕೆ ಇರುವ ಸ್ವಾತಂತ್ರ್ಯವನ್ನು ಸೂಚಿಸುತ್ತದೆ.

ಅಂದರೆ ಸಂಪನ್ಮೂಲವಷ್ಟೇ ಜನರ ಒಳಿತಿಗೆ ಸಾಲುವುದಿಲ್ಲ. ವೈಯಕ್ತಿಕ ಅಥವಾ ಸಾಮಾಜಿಕ ಕಾರಣಗಳಿಂದ ಅದರ ಬಳಕೆ ಸಾಧ್ಯವಾಗದೆ ಇರಬಹುದು. ಜನರಿಗೆ ಸೈಕಲ್ ಕೊಟ್ಟರೆ ಸಾಲುವುದಿಲ್ಲ. ಅದನ್ನು ಬಳಸುವ ಸಾಮರ್ಥ್ಯವೂ ಅವರಿಗೆ ಇರಬೇಕು. ಹಾಗಾಗಿಯೇ ಅಭಿವೃದ್ಧಿ ಅನ್ನುವುದು ಜನರ ಸಾಮರ್ಥ್ಯವನ್ನು ಹೆಚ್ಚಿಸುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಬದಲಾವಣೆಗೆ ಸಂಬಂಧಿಸಿದ್ದು. ಅಭಿವೃದ್ಧಿಯ ನಿಜವಾದ ಉದ್ದೇಶ ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಬೇಕು. ಅವರು ಅತ್ಯಂತ ಮೌಲಿಕವೆಂದು ಭಾವಿಸುವ ಅವರ ಸ್ಥಿತಿಯನ್ನು ಸಾಧಿಸುವುದಕ್ಕೆ ಇರುವ ನಿಜವಾದ ಸ್ವಾತಂತ್ರವನ್ನು, ಅವಕಾಶಗಳನ್ನು ಹೆಚ್ಚಿಸುವುದು ಅಭಿವೃದ್ಧಿಯ ಉದ್ದೇಶವಾಗಬೇಕು.

ನಿವ್ವಳ ರಾಷ್ಟ್ರೀಯ ಬಂಡವಾಳದ ಹೆಚ್ಚಳ, ವೈಯಕ್ತಿಕ ವರಮಾನದ ಹೆಚ್ಚಳ, ಕೈಗಾರಿಕೀಕರಣ, ತಾಂತ್ರಿಕ ಅಭಿವೃದ್ಧಿ ಅಥವಾ ಸಾಮಾಜಿಕ ಆಧುನೀಕರಣ ಇವುಗಳಿಂದ ಸಮಾಜದಲ್ಲಿ ಮನುಷ್ಯನಿಗಿರುವ ಸ್ವಾತಂತ್ರ್ಯ ಇನ್ನಷ್ಟು ಹೆಚ್ಚುತ್ತದೆ ಅನ್ನುವುದು ನಿಜ. ಆದರೆ ಸ್ವಾತಂತ್ರ್ಯವೆಂದರೆ ಇಷ್ಟೇ ಅಲ್ಲ. ಇವುಗಳ ಜೊತೆಗೆ ಇನ್ನೂ ಹಲವಾರು ಅಂಶಗಳು ಸೇರಿರುತ್ತವೆ. ಉದಾಹರಣೆಗೆ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳು (ಉದಾಹರಣೆಗೆ ಶಿಕ್ಷಣ ಹಾಗೂ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಇರುವ ಸೌಲಭ್ಯಗಳು), ಜನರಿಗಿರುವ ರಾಜಕೀಯ ಹಾಗೂ ನಾಗರಿಕ ಸ್ವಾತಂತ್ರ್ಯ (ಉದಾಹರಣೆಗೆ ಸಾರ್ವಜನಿಕ ಚರ್ಚೆ ಇತ್ಯಾದಿ ವಿಷಯಗಳಲ್ಲಿ ಪಾಲ್ಗೊಳ್ಳಲು ಜನರಿಗಿರುವ ಸ್ವಾತಂತ್ರ್ಯ) ಇತ್ಯಾದಿಗಳು ಸೇರಿರುತ್ತವೆ. ಅಭಿವೃದ್ಧಿಯ ಗುರಿ ಎನ್ನುವುದು ಒಂದು ಕ್ರೋಡೀಕರಿಸಬಹುದಾದ, ಅಳೆಯಬಹುದಾದ (ವರಮಾನ) ಮಾಪನಕ್ಕೆ ಸೀಮಿತವಾಗಿತ್ತು. ಸೇನ್ ಅದರ ವ್ಯಾಪ್ತಿಯನ್ನು ಹಿಗ್ಗಿಸಿದರು. ಅಭಿವೃದ್ಧಿಯನ್ನು ವೈವಿಧ್ಯಪೂರ್ಣವಾದ ಮಾನವ ಸಾಮರ್ಥ್ಯವನ್ನಾಗಿ ನೋಡಿದರು. ಆ ಮೂಲಕ ಅಭಿವೃದ್ಧಿಯ ಉದ್ದೇಶವನ್ನೇ ಬದಲಿಸಿಬಿಟ್ಟರು. ಒಂದರ್ಥದಲ್ಲಿ ಸೇನ್ ಅಭಿವೃದ್ಧಿಯನ್ನು ನೈತಿಕ ನೆಲೆಯಲ್ಲಿ ನಿಲ್ಲಿಸಿದರು. ಈಗ ಅಭಿವೃದ್ಧಿ ಅಂದರೆ ಕೇವಲ ಆರ್ಥಿಕ

ಅಭಿವೃದ್ಧಿಯಲ್ಲ. ಅದು "ಮಾನವ ಅಭಿವೃದ್ಧಿ" ಆಗಿದೆ. ಈಗ ಅದರ ಉದ್ದೇಶ "ನಾವೆಂತಹ ಬದುಕನ್ನು ಬದುಕುತ್ತಿದ್ದೇವೆ ಅಥವಾ ಎಂತಹ ಬದುಕನ್ನು ಬದುಕಬಹುದು, ನಾವೇನು ಮಾಡಬಹುದು ಅಥವಾ ಮಾಡುವುದಕ್ಕಾಗುವುದಿಲ್ಲ, ನಾವೇನಾಗಬಹುದು ಅಥವಾ ಆಗುವುದಕ್ಕೆ ಸಾಧ್ಯವಿಲ್ಲ" ಅನ್ನುವುದಕ್ಕೆ ಸಂಬಂಧಿಸಿರುತ್ತದೆ.

ಜಗತ್ತು ಹಿಂದೆಂದಿಗಿಂತಲೂ ಒಟ್ಟಾರೆಯಾಗಿ ಈಗ ಹೆಚ್ಚು ಸಮೃದ್ಧವಾಗಿದೆ. ಆದರೆ ಜಗತ್ತಿನಲ್ಲಿ ಬಹುತೇಕ ಜನರಿಗೆ ಮೂಲಭೂತ ಸ್ವಾತಂತ್ರ್ಯವೂ ಇಲ್ಲ. ಬಹುಮಟ್ಟಿಗೆ ಅದಕ್ಕೆ ಅವರ ಬಡತನವೂ ಕಾರಣ. ಬಡತನದಿಂದಾಗಿ ಬಹುತೇಕ ಜನರಿಗೆ ಕನಿಷ್ಠ ಆಹಾರ, ಪೌಷ್ಟಿಕತೆ, ಔಷಧೋಪಚಾರ, ಬಟ್ಟೆ, ವಸತಿ, ಕುಡಿಯುವ ನೀರು, ಶೌಚಾಲಯ ಇವುಗಳ ವ್ಯವಸ್ಥೆಯೂ ಸಾಧ್ಯವಾಗುವುದಿಲ್ಲ. ಹಾಗೆಯೇ ಸಾರ್ವಜನಿಕ ಸೌಲಭ್ಯಗಳು, ಆರೋಗ್ಯ ಸೇವೆ, ಶಿಕ್ಷಣ ಸೌಲಭ್ಯ, ಶಾಂತಿ ಹಾಗೂ ಕಾನೂನು ವ್ಯವಸ್ಥೆ ಇತ್ಯಾದಿಗಳು ಇಲ್ಲದಿರುವುದು ಕೂಡ ಜನರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿವೆ. ಸರ್ವಾಧಿಕಾರಿ ಪ್ರಭುತ್ವಗಳಿಂದಾಗಿ ಜನರಿಗೆ ರಾಜಕೀಯ ಮತ್ತು ನಾಗರಿಕ ಸ್ವಾತಂತ್ರ್ಯದ ಹರಣ ಮತ್ತು ಸಮುದಾಯದ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಬದುಕಿನಲ್ಲಿ ಪಾಲ್ಗೊಳ್ಳುವ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳು ಇವೆಲ್ಲವೂ ನೇರವಾಗಿ ಮನುಷ್ಯನ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುತ್ತವೆ. ಸೇನ್ ಹೇಳುತ್ತಿರುವುದು ನೇರ ಹಾಗೂ ಸರಳ. ಅಭಿವೃದ್ಧಿಯ ಉದ್ದೇಶ ಸ್ವಾತಂತ್ರವನ್ನು ವಿಸ್ತರಿಸುವುದು ಅಂತಾದರೆ, ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಮಾರ್ಗಗಳು ಹಾಗೂ ಸಾಧನಗಳಿಗಾಗಿ ತಡಕಾಡುವುದಕ್ಕಿಂತ, ಸ್ವಾತಂತ್ರ್ಯವನ್ನೇ ವಿಸ್ತರಿಸುವ ಕಡೆಗೆ ನೇರವಾಗಿ ಗಮನಕೊಡೋಣ. ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಸ್ವಾತಂತ್ರ್ಯಕ್ಕಿರುವ ಅಡ್ಡಿಗಳನ್ನು ತೆಗೆಯುತ್ತಾ ಹೋದರೆ ಅಭಿವೃದ್ಧಿಯೂ ಸಾಧ್ಯವಾಗುತ್ತದೆ.

ಸೇನ್ ಅವರ ಅಭಿವೃದ್ಧಿ ಚಿಂತನೆಯಲ್ಲಿ ಸ್ವಾತಂತ್ರ್ಯ ಎರಡು ಕಾರಣಕ್ಕೆ ಮುಖ್ಯವಾಗುತ್ತದೆ. ಮೊದಲನೆಯದಾಗಿ ಅಭಿವೃದ್ಧಿಯ ಪ್ರಮಾಣವನ್ನು ಅಳೆಯುವುದಕ್ಕೆ ಸ್ವಾತಂತ್ರ್ಯವನ್ನು ಅವರು ಒಂದು ಅಳತೆಗೋಲನ್ನಾಗಿ ಬಳಸುತ್ತಾರೆ. ಅಂದರೆ ಜನರಿಗೆ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ಹೆಚ್ಚಾಗಿದೆ ಅನ್ನುವುದನ್ನು ಆಧರಿಸಿ ಅವರು ಸಮಾಜದ ಬೆಳವಣಿಗೆಯನ್ನು ಅಳೆಯುವ ಪ್ರಯತ್ನ ಮಾಡುತ್ತಾರೆ. ಎರಡನೆಯದಾಗಿ ಏಜೆನ್ಸಿಗೆ ಇರುವ ಸ್ವಾತಂತ್ರ್ಯ ಅಭಿವೃದ್ಧಿಯ ಪರಿಣಾಮಕಾರಿತ್ವವನ್ನು ನಿರ್ಧರಿಸುತ್ತದೆ. ಇಲ್ಲಿ ಏಜೆನ್ಸಿ ಅಂದರೆ "ಬದಲಾವಣೆಗಾಗಿ ಕೆಲಸ ಮಾಡುವ, ಬದಲಾವಣೆಯನ್ನು ತರಬಲ್ಲ ಜನ". ಏಜೆನ್ಸಿಗೆ, ಅಂದರೆ ಬದಲಾವಣೆ ತರಬಲ್ಲ ಜನರಿಗೆ ಇರುವ ಸ್ವಾತಂತ್ರ್ಯ ಹೆಚ್ಚಿದಷ್ಟೂ ಅಭಿವೃದ್ಧಿಯೂ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಸೇನ್ ಜನರನ್ನು ಕೇವಲ ತಮ್ಮ ಅನುಕೂಲವನ್ನಷ್ಟೇ ನೋಡಿಕೊಳ್ಳುವ ಸ್ವಾರ್ಥಿಗಳನ್ನಾಗಿ ನೋಡುವುದಿಲ್ಲ. ಅವರ ದೃಷ್ಟಿಯಲ್ಲಿ ಸಾಮಾಜಿಕ ಆಯ್ಕೆ ಹಾಗೂ ಅಭಿವೃದ್ಧಿಯ ಚಟುವಟಿಕೆಗಳಲ್ಲಿ ಏಜೆಂಟರುಗಳಾಗಿ ಅವರಿಗೆ ಮಹತ್ವದ ಪಾತ್ರವಿದೆ. ಇಲ್ಲಿ ಏಜೆಂಟ್ ಸಕಾರಾತ್ಮಕವಾಗಿ ಏನನ್ನು ಸಾಧಿಸಬಹುದು ಎನ್ನುವುದು ಅವರಿಗಿರುವ ಆರ್ಥಿಕ ಅವಕಾಶಗಳು, ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ಅಧಿಕಾರ, ಆರೋಗ್ಯ ಹಾಗೂ ಮೂಲಭೂತ ಶಿಕ್ಷಣಕ್ಕೆ ಅವರಿಗಿರುವ ಅವಕಾಶಗಳು, ಇತ್ಯಾದಿಗಳಿಂದ ಪ್ರಭಾವಿತವಾಗಿರುತ್ತದೆ. ಸೇನ್ ಅವರದ್ದು ಜನಕೇಂದ್ರಿತ ಮಾರ್ಗ. ಅದರಲ್ಲಿ ಮಾನವ ಏಜೆನ್ಸಿಯ ಪಾತ್ರ ಮಹತ್ವದ್ದಾಗಿರುತ್ತದೆ.

ಆದರೆ ಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ ಮನುಷ್ಯನ ನಡತೆಯನ್ನು ಅವರ ಸ್ವ-ಹಿತಾಸಕ್ತಿ ನಿರ್ಧರಿಸುತ್ತದೆ ಎಂದು ಭಾವಿಸಲಾಗುತ್ತದೆ. ಆದರೆ ಸೇನ್ ಮನುಷ್ಯರು ಕೇವಲ ತಮ್ಮ ಸ್ವಂತದ ಒಳಿತನ್ನು ಮಾತ್ರ ಗಮನಿಸುತ್ತಾರೆ ಎಂದು ಭಾವಿಸುವುದಿಲ್ಲ. ಅವರು ತಮ್ಮ ಚಟುವಟಿಕೆಗಳ ಮೂಲಕ ಬೆಳವಣಿಗೆಗೆ ನೆರವಾಗಬಲ್ಲರು, ಕೆಲವೊಮ್ಮೆ ಅಡ್ಡಿಯೂ ಆಗಬಲ್ಲರು ಎಂಬುದನ್ನು ಗುರುತಿಸುತ್ತಾರೆ. ಮನುಷ್ಯರನ್ನು ಬದಲಾವಣೆಯ ಏಜೆನ್ಸಿಗಳನ್ನಾಗಿ ಸೇನ್ ನೋಡುತ್ತಾರೆ. ಜನರು ತಮ್ಮ ಬಡತನವನ್ನು ತಗ್ಗಿಸಿಕೊಳ್ಳುವುದರ ಜೊತೆಗೆ ಸಮಾಜದಲ್ಲಿನ ಬಡತನವನ್ನು ನೀಗಿಸುವ ಪ್ರಯತ್ನಕ್ಕೂ ನೆರವಾಗಬಲ್ಲರು. ಸಮಾಜದಲ್ಲಿರುವ ಕೊರತೆಗಳನ್ನು ಎದುರಿಸುವಲ್ಲಿ ಈ ಏಜೆನ್ಸಿಗಳ ಪಾತ್ರವೂ ಮಹತ್ವದ್ದು. ಅದಕ್ಕೆ ಅವರಿಗೆ ಹೆಚ್ಚಿನ ಸ್ವಾತಂತ್ರ್ಯ ಬೇಕು. ಈ ಸ್ವಾತಂತ್ರ್ಯ ಹೆಚ್ಚಬೇಕಾದರೆ ಅವರಿಗಿರುವ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಅವಕಾಶಗಳು ಹೆಚ್ಚಬೇಕು. ಹಾಗಾಗಿ ಅಭಿವೃದ್ಧಿಯ ಉದ್ದೇಶ ಸಾಮರ್ಥ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಏಜೆನ್ಸಿಗಿರುವ ಅವಕಾಶಗಳನ್ನು ಹೆಚ್ಚಿಸುವುದೂ ಆಗಬೇಕು. ಅವರನ್ನು ಬೆಳೆಸಿ ಬೆಂಬಲಿಸುವುದಕ್ಕೂ ಗಮನಕೊಡಬೇಕು.

ಜನರಿಗೆ ಹೆಚ್ಚಿನ ಸ್ವಾತಂತ್ರ ಸಿಕ್ಕಿದಷ್ಟೂ ಅವರಿಗೆ ತಮ್ಮ ಹಾಗೂ ತಮ್ಮ ಸುತ್ತಲಿನ ಜಗತ್ತಿನ ಬೆಳವಣಿಗೆಗೆ ಹೆಚ್ಚೆಚ್ಚು ನೆರವಾಗಲೂ ಸಾಧ್ಯವಾಗುತ್ತದೆ. ಜನರ ಸ್ವಾತಂತ್ರ್ಯ ಹಾಗು ಸಾಮರ್ಥ್ಯವನ್ನು ಸಾರ್ವಜನಿಕ ನೀತಿಗಳ ಮೂಲಕ ಹೆಚ್ಚಿಸಬಹುದು. ಈ ಏಜೆನ್ಸಿಗಳಿಗೆ ಸಾರ್ವಜನಿಕ ನೀತಿಗಳನ್ನು ಪ್ರಭಾವಿಸುವುದಕ್ಕೂ ಸಾಧ್ಯ. ಆದರೆ ಅದಕ್ಕೆ ಸಾರ್ವಜನಿಕರಿಗೆ ಸಮಾಜದ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸಾಮರ್ಥ್ಯವಿರಬೇಕು. ಇಂತಹ ನೀತಿಗಳಿಂದ ಜನರ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯ ಹೆಚ್ಚುತ್ತದೆ. ಹೆಚ್ಚಾದ ಸ್ವಾತಂತ್ರ್ಯ ಮತ್ತೆ ಅಭಿವೃದ್ಧಿಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೀಗೆ ಅಭಿವೃದ್ಧಿ ಹಾಗೂ ಸ್ವಾತಂತ್ರಗಳು ಪರಸ್ಪರ ಒಂದನ್ನೊಂದು ಬೆಳೆಸುತ್ತಾ, ಬೆಳೆಯುತ್ತಾ ಹೋಗುತ್ತವೆ. ಅಭಿವೃದ್ಧಿಯ ಉದ್ದೇಶವನ್ನು ಸಾಧಿಸುವಲ್ಲಿ ಮಾನವ ಏಜೆನ್ಸಿಗೆ ಸೇನ್ ಅವರ ಅಧ್ಯಯನದಲ್ಲಿ ಮಹತ್ವದ ಪಾತ್ರವಿದೆ. ಇದು ಅಭಿವೃದ್ಧಿ ಅಧ್ಯಯನಕ್ಕೆ ಸೇನ್ ನೀಡಿದ ಮಹತ್ವದ ಕೊಡುಗೆಗಳಲ್ಲಿ ಒಂದು. ಅವರ ಅಭಿವೃದ್ಧಿ ಮಾದರಿಯಲ್ಲಿ ಮಾನವ ಏಜೆನ್ಸಿ, ಪ್ರಜಾಸತ್ತೆ, ಸಮಾನತೆ, ಮಾನವ ಹಕ್ಕುಗಳು ಸಾರ್ವಜನಿಕ ಚರ್ಚೆ, ಸಾಮಾಜಿಕ ಆಂದೋಲನಗಳು ಇತ್ಯಾದಿಗಳಿಗೆಲ್ಲಾ ಮಹತ್ವದ ಸ್ಥಾನವಿದೆ. ಇದನ್ನು ಅವರ ಬಹುತೇಕ ಬರಹಗಳಲ್ಲಿ ಕಾಣಬಹುದು.

ಒಟ್ಟಾರೆಯಾಗಿ ಸೇನ್ ಅಭಿವೃದ್ಧಿಯನ್ನು ನೋಡುವ ನೆಲೆಯನ್ನು, ಅದರ ಕೇಂದ್ರವನ್ನು, ಉದ್ದೇಶವನ್ನು ಬದಲಿಸಿಬಿಟ್ಟರು. ಪರಿಣಾಮವಾಗಿ ಅಭಿವೃದ್ಧಿಯ ಲಕ್ಷಣಗಳೇ ಬದಲಾಗಿಬಿಟ್ಟವು. ಅಭಿವೃದ್ಧಿಯನ್ನು ಆರ್ಥಿಕ ಪರಿಕಲ್ಪನೆಯಾಗಿ ನೋಡುವಾಗ ವರಮಾನ ಅಥವಾ ಅನುಭೋಗ ಅಭಿವೃದ್ಧಿಯ ಕೇಂದ್ರದಲ್ಲಿರುತ್ತದೆ. ಮಾನವ ಅಭಿವೃದ್ಧಿ, ಅಭಿವೃದ್ಧಿಯ ಉದ್ದೇಶವಾದಾಗ ಜನರ ಸಾಮರ್ಥ್ಯ ಕೇಂದ್ರಕ್ಕೆ ಬರುತ್ತದೆ.

ಅಭಿವೃದ್ಧಿಯನ್ನು ಆರ್ಥಿಕ ಬೆಳವಣಿಗೆಯ ಕಣ್ಣಲ್ಲಿ ನೋಡುವಾಗ ಆರ್ಥಿಕತೆ ಕೇಂದ್ರವಾಗಿಬಿಡುತ್ತದೆ. ಅದನ್ನು ಬೆಳಸುವುದೇ ಪ್ರಗತಿಯೆನಿಸಿಕೊಳ್ಳುತ್ತದೆ. ಆರ್ಥಿಕತೆ ಇಡೀ ಆರ್ಥಿಕ ವಿಶ್ಲೇಷಣೆಯ ಕೇಂದ್ರ ಘಟಕವಾಗುತ್ತದೆ. ಅದು ರಾಷ್ಟ್ರದ, ರಾಜ್ಯದ ಅಥವಾ ಯಾವುದೋ ಒಂದು ಪ್ರಾಂತ್ಯದ ಆರ್ಥಿಕತೆಯಾಗಿರಬಹುದು. ತಲಾವರಮಾನವೊ, ನಿವ್ವಳ ರಾಷ್ಟ್ರೀಯ ಉತ್ಪನ್ನವೋ ಅದರ ಬೆಳವಣಿಗೆಯ ಅಳತೆಗೋಲಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಅಭಿವೃದ್ಧಿಯನ್ನು ಜನರಿಗಿರುವ ಸ್ವಾತಂತ್ರ್ಯವೆಂದು ನೋಡಿದರೆ, ಜನರ ವಿಭಿನ್ನ ಸ್ವಾತಂತ್ರದ ಹೆಚ್ಚಳವೇ ಒಂದು ಆರೋಗ್ಯವಂತ ಆರ್ಥಿಕತೆಯ ಲಕ್ಷಣವಾಗಿ ಕಾಣುತ್ತದೆ. ಆಗ ಆರ್ಥಿಕತೆಯ ಪರಿಣಾಮವನ್ನು ಅನುಭವಿಸುತ್ತಿರುವ ಮನುಷ್ಯ ಆರ್ಥಿಕತೆಯ ಕೇಂದ್ರವಾಗುತ್ತಾನೆ. ಜನರ ಸಾಮರ್ಥ್ಯ ಬೆಳವಣಿಗೆಯ ಅಳತೆಗೋಲಾಗುತ್ತದೆ. ಆಗ ಸಾಮರ್ಥ್ಯಗಳನ್ನು ಅಳೆಯುವುದಕ್ಕೆ, ಕ್ರೋಡೀಕರಿಸುವುದಕ್ಕೆ



ಇತ್ಯಾದಿಗಳಿಗೆ ಸ್ಪಷ್ಟವಾದ ಕ್ರಮಗಳನ್ನು ಕಂಡುಕೊಳ್ಳಬೇಕಾಗುತ್ತದೆ.


ಬೆಳವಣಿಗೆಯನ್ನು ಸ್ವಾತಂತ್ರ್ಯವೆಂದು ನೋಡುವ ಚಿಂತನೆಯೇ ಹಲವು ಕಾರಣಕ್ಕೆ ಕ್ರಾಂತಿಕಾರವಾದದ್ದು. ಹೀಗೆ ನೋಡುವುದರಿಂದ ಮೊದಲನೆಯದಾಗಿ ಸ್ವಾತಂತ್ರ ಅನ್ನುವುದು ರಾಷ್ಟ್ರೀಯ ಉತ್ಪನ್ನದ ಹೆಚ್ಚಳಕ್ಕೆ ಅವಶ್ಯಕವಾದ ಸಾಧನವಷ್ಟೇ ಆಗುವುದಿಲ್ಲ. ಅದು ಬೆಳವಣಿಗೆಯ ಅವಿಭಾಜ್ಯ ಭಾಗವಾಗುತ್ತದೆ. ಶಿಕ್ಷಣ, ಆರೋಗ್ಯ, ರಾಜಕೀಯ ಸ್ವಾತಂತ್ರ್ಯ ಇವೆಲ್ಲವೂ ನಿವ್ವಳ ರಾಷ್ಟ್ರೀಯ ಉತ್ಪನ್ನದ ಬೆಳವಣಿಗೆಗೆ, ಕೈಗಾರಿಕೀಕರಣಕ್ಕೆ ನೆರವಾಗುತ್ತವೆ ಅನ್ನುವುದು ನಿಜ. ಆದರೆ ಅಷ್ಟೇ ಅಲ್ಲ ಅವು ಬೆಳವಣಿಗೆಯ ಭಾಗವೂ ಹೌದು. ಅಂದರೆ ಸೇನ್ ಅವರ ದೃಷ್ಟಿಯಲ್ಲಿ ಈ ಸ್ವಾತಂತ್ರ್ಯಗಳು ಬೆಳವಣಿಗೆಯ ಸಾಧನಗಳಲ್ಲ, ಬೆಳವಣಿಗೆಯ ಅವಶ್ಯಕ ಭಾಗ.

ಬೆಳವಣಿಗೆಯನ್ನು ಸ್ವಾತಂತ್ರ್ಯದ ವಿಸ್ತರಣೆಯಾಗಿ ನೋಡುವುದರಿಂದ ನಾವು ಕೇಳುವ ಪ್ರಶ್ನೆಗಳೇ ಬದಲಾಗಿಬಿಡುತ್ತವೆ. ಬೆಳವಣಿಗೆಯನ್ನು ನಿವ್ವಳ ರಾಷ್ಟೀಯ ಉತ್ಪನ್ನದ ಹೆಚ್ಚಳ ಅಥವಾ ಕೈಗಾರಿಕೀರಣ ಎನ್ನುವ ಸಂಕುಚಿತ ನೆಲೆಯಿಂದ ನೋಡಿದಾಗ ನಮಗೆ ಈಗಿರುವ ಕೆಲವು ರಾಜಕೀಯ ಅಥವಾ ಸಾಮಾಜಿಕ ಸ್ವಾತಂತ್ರ್ಯಗಳು ಬೆಳವಣಿಗೆಗೆ ಪೂರಕವಾಗಿದೆಯೋ, ಇಲ್ಲವೋ ಎನ್ನುವಂತಹ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಿರುತ್ತೇವೆ. ಉದಾಹರಣೆಗೆ ರಾಜಕೀಯದಲ್ಲಿ ಪಾಲ್ಗೊಳ್ಳಲು ಅಥವಾ ನಮ್ಮ ವಿರೋಧವನ್ನು ವ್ಯಕ್ತಪಡಿಸಲು ಇರುವ ಸ್ವಾತಂತ್ರ್ಯ, ಅಥವಾ ಮೂಲಭೂತ ಶಿಕ್ಷಣ ಪಡೆಯಲು ಇರುವ ಅವಕಾಶ, ಇತ್ಯಾದಿ ಸ್ವಾತಂತ್ರ್ಯಗಳು ಬೆಳವಣಿಗೆಗೆ ಪೂರಕವಾಗಿವೆಯೇ ಎನ್ನುವಂತಹ ಪ್ರಶ್ನೆಗಳು ಬರುತ್ತವೆ. ಬದಲಿಗೆ ಸ್ವಾತಂತ್ರ್ಯವೇ ಬೆಳವಣಿಗೆ ಎಂದು ನೋಡತೊಡಗಿದಾಗ ಈ ಸ್ವಾತಂತ್ರ್ಯಗಳು ಪೂರಕವೋ ಅಲ್ಲವೋ ಅನ್ನುವುದು ಪ್ರಶ್ನೆಯೇ ಆಗುವುದಿಲ್ಲ. ಅವು ಬೆಳವಣಿಗೆಯ ಅವಶ್ಯ ಭಾಗವಾಗಿ ಕಾಣಿಸತೊಡಗುತ್ತವೆ.
ಆರ್ಥಿಕ ಬೆಳವಣಿಗೆ ಆದ ಕೂಡಲೆ ಈ ಸ್ವಾತಂತ್ರಗಳು ಹೆಚ್ಚಿಬಿಡುತ್ತವೆ ಅಂತ ಭಾವಿಸಬಾರದು. ನಿವ್ವಳ ರಾಷ್ಟ್ರೀಯ ಉತ್ಪನ್ನ ಅಥವಾ ತಲಾ ವರಮಾನ ಹೆಚ್ಚಾದರೆ ಆರೋಗ್ಯವಾಗಲಿ, ಜೀವಿತಾವಧಿಯಾಗಲಿ ಸುಧಾರಿಸುತ್ತದೆ ಅನ್ನುವ ಖಾತರಿಯೇನಿಲ್ಲ. ಉದಾಹರಣೆಗೆ ತಲಾ ನಿವ್ವಳ ರಾಷ್ಟ್ರೀಯ ಉತ್ಪನ್ನ ಗಾಬನ್, ದಕ್ಷಿಣ ಆಫ್ರಿಕಾ, ನಮೀಬಿಯಾ, ಬ್ರೆಜಿಲ್ ದೇಶದಲ್ಲಿ ಹೆಚ್ಚಿಗೆ ಇದೆ. ಆದರೆ ಈ ದೇಶಗಳಿಗಿಂತ ಕಡಿಮೆ ರಾಷ್ಟ್ರೀಯ ಉತ್ಪನ್ನ ಇರುವ ಶ್ರೀಲಂಕಾ, ಚೀನಾದ ಜನರ ಜೀವಿತಾವಧಿ ಇವರಿಗಿಂತ ಹೆಚ್ಚಿಗೆ ಇದೆ. ಅದೇ ರೀತಿಯಲ್ಲಿ ಅಮೇರಿಕೆಯಲ್ಲಿರುವ ಆಫ್ರಿಕನ್ನರು ತೃತೀಯ ಜಗತ್ತಿನ ಜನರಿಗೆ ಹೋಲಿಸಿದರೆ ಸಾಕಷ್ಟು ಸಿರಿವಂತರು. ಆದರೆ ತೃತೀಯ ಜಗತ್ತಿನ ಎಷ್ಟೋ ದೇಶಗಳಿಗೆ ಹೋಲಿಸಿದರೆ ಇವರ ಜೀವಿತಾವಧಿ ಕಡಿಮೆ. ಅಂದರೆ ಆರ್ಥಿಕ ಅಭಿವೃದ್ಧಿಯಾದರಷ್ಟೇ ಸಾಲದು, ಆರೋಗ್ಯ, ಶಿಕ್ಷಣ ಇತ್ಯಾದಿ ಸ್ವಾತಂತ್ರಗಳನ್ನು ವಿಸ್ತರಿಸುವುದಕ್ಕೆ ಪ್ರತ್ಯೇಕ ಯೋಜನೆಗಳನ್ನು ರೂಪಿಸಬೇಕು.

ಹಾಗೆಯೇ ಸೇನ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಶಿಕ್ಷಣ, ಆರೋಗ್ಯ, ಮಾರುಕಟ್ಟೆ, ಲಿಂಗ ತಾರತಮ್ಯ, ಬಡತನ, ಬಡತನದ ಮಾಪನ ಹೀಗೆ ಹಲವು ವಿಷಯಗಳನ್ನು ಚರ್ಚಿಸಿದ್ದಾರೆ. ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಮಾರುಕಟ್ಟೆ: ಅಭಿವೃದ್ಧಿಯನ್ನು ಸ್ವಾತಂತ್ರ್ಯದ ವಿಸ್ತರಣೆಯಾಗಿ ನೋಡುವುದರಿಂದ ಮಾರುಕಟ್ಟೆ ವ್ಯವಸ್ಥೆಯನ್ನು ನೋಡುವ ನಮ್ಮ ದೃಷ್ಟಿಯೂ ಬದಲಾಗುತ್ತದೆ. ಸೇನ್ ಮಾರುಕಟ್ಟೆಯನ್ನು "ಜನ ಪರಸ್ಪರ ಅನುಕೂಲಕರವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದಾದ ಒಂದು ಮೂಲಭೂತ ವ್ಯವಸ್ಥೆ"ಯನ್ನಾಗಿ ನೋಡುತ್ತಾರೆ. ಅವರು ಮಾರುಕಟ್ಟೆಯ ಮೇಲೆ ಯಾವುದೇ ನಿರ್ಬಂಧಗಳನ್ನು ಹೇರದೆ ಅದರ ವಿಸ್ತರಣೆಗೆ ಪ್ರೋತ್ಸಾಹಿಸಬೇಕು ಅನ್ನುವ ಗುಂಪಿಗೆ ಸೇರಿದವರಲ್ಲ. ಅವರದು ಭಿನ್ನವಾದ ನಿಲುವು. ಮಾರುಕಟ್ಟೆ ಒಂದು ಉಪಯುಕ್ತ ವ್ಯವಸ್ಥೆ ಅನ್ನುವುದನ್ನು ಸೇನ್ ಒಪ್ಪಿಕೊಳ್ಳುತ್ತಾರೆ. ಆದರೆ ಯಾಕೆ ಉಪಯುಕ್ತ ಅನ್ನುವುದರಲ್ಲಿ ಬೇರೆಯವರಿಗಿಂತ ಭಿನ್ನವಾಗುತ್ತಾರೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಒಂದು ಉಪಯುಕ್ತ ಸಾಧನ ಅನ್ನುವ ಕಾರಣಕ್ಕಾಗಿ ಸಾಂಪ್ರದಾಯಿಕ ನಿಲುವು ಮಾರುಕಟ್ಟೆಯನ್ನು ಮೆಚ್ಚಿಕೊಳ್ಳುತ್ತದೆ. ಅಂದರೆ ಅದರ ಪರಿಣಾಮಕ್ಕಾಗಿ ಅದನ್ನು ಮೆಚ್ಚಿಕೊಳ್ಳುತ್ತದೆ. ಸೇನ್ ಅದರಾಚೆಗೆ ಅದರಿಂದ ಕೊಳ್ಳಲು, ಮಾರಲು, ವಿನಿಮಯ ಮಾಡಿಕೊಳ್ಳಲು, ಉದ್ಯೋಗ ಕಂಡುಕೊಳ್ಳಲು ಜನರಿಗೆ ದೊರೆಯುವ ಸ್ವಾತಂತ್ರ್ಯಕ್ಕಾಗಿ ಮೆಚ್ಚಿಕೊಳ್ಳುತ್ತಾರೆ. ಈ ಎಲ್ಲಾ ಸ್ವಾತಂತ್ರ್ಯಗಳು ಕೂಡ ಮಾತನಾಡಲು ಇರುವ ಸ್ವಾತಂತ್ರ್ಯದಂತೆ ಮೂಲಭೂತ ಸ್ವಾತಂತ್ರ್ಯಗಳೇ ಆಗಿವೆ. ಮಾತುಗಳನ್ನು, ಸರಕುಗಳನ್ನು ಅಥವಾ ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವುದು ಇವೆಲ್ಲಾ ಸಮಾಜದಲ್ಲಿ ಮನುಷ್ಯ ಬದುಕುವ, ಪರಸ್ಪರ ವ್ಯವಹರಿಸುವ ವಿಧಾನದ ಒಂದು ಭಾಗ. ಮಾರುಕಟ್ಟೆ ಆರ್ಥಿಕ ಬೆಳವಣಿಗೆಯಲ್ಲಿ ನೆರವಾಗುವುದರೊಂದಿಗೆ ಮಾರುಕಟ್ಟೆ ವ್ಯವಸ್ಥೆ ಇಂತಹ ಮಹತ್ವದ ಸ್ವಾತಂತ್ರಗಳನ್ನೂ ಮನುಷ್ಯನಿಗೆ ಒದಗಿಸುತ್ತವೆ. ಇದು ತುಂಬಾ ಮುಖ್ಯ.

ಸೇನ್ ದೃಷ್ಟಿಯಲ್ಲಿ ಮಾರುಕಟ್ಟೆಯ ಪರಿಣಾಮವನ್ನು ಸಮಾನತೆಯ ದೃಷ್ಟಿಯಿಂದಲೂ ನೋಡಬೇಕು. ಇಲ್ಲದೆ ಹೋದರೆ ಪಟ್ಟಭದ್ರ ಹಿತಾಸಕ್ತಿಗಳು ಮಾರುಕಟ್ಟೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆರ್ಥಿಕ ಲಾಭಕ್ಕಾಗಿ ರಾಜಕೀಯ ಪ್ರಭಾವವನ್ನು ಬಳಸಿಕೊಳ್ಳುವುದು ಇಂದಿನ ಕಟುವಾಸ್ತವ. ಅಧಿಕಾರದ ಅಸಮತೋಲನ ತೀವ್ರವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಅಸಮಾನತೆ ಮತ್ತು ಇತರ ಮಾರುಕಟ್ಟೆಯ ನ್ಯೂನತೆಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗಬೇಕು. ಮಾರುಕಟ್ಟೆಯ ಮೇಲೆ ಒಂದಿಷ್ಟು ನಿಯಂತ್ರಣ ಸಾಧ್ಯವಾಗಬೇಕು. ಇವೆಲ್ಲಾ ಮಾರುಕಟ್ಟೆ ಸರಿಯಾಗಿ ಕೆಲಸ ಮಾಡುವ ದೃಷ್ಟಿಯಿಂದ ಅವಶ್ಯಕ. ಮಾರುಕಟ್ಟೆಯನ್ನು ಪಟ್ಟಭದ್ರಾಹಿತಾಸಕ್ತಿಗಳಿಂದ ರಕ್ಷಿಸಲು ಸಾರ್ವಜನಿಕ ಚರ್ಚೆ,



ಸಾರ್ವಜನಿಕ ಪಾಲ್ಗೊಳ್ಳುವಿಕೆ ಮುಂತಾದವು ಅಷ್ಟೇ ಮುಖ್ಯ. ಹಲವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾರುಕಟ್ಟೆಯಲ್ಲಿ ಕಾರ್ಮಿಕರಿಗೆ ಮುಕ್ತ ಅವಕಾಶವಿಲ್ಲ. ಅವರನ್ನು ಹೊರಗಿಡುವ ಪ್ರಯತ್ನ ನಡೆದಿದೆ. ಅದನ್ನು ವಿರೋಧಿಸಬೇಕು. ಹೆಚ್ಚಿನ ಸಣ್ಣ ರೈತರಿಗೆ, ಸಣ್ಣ ಉತ್ಪಾದಕರಿಗೆ ಮಾರುಕಟ್ಟೆಗೆ ಪ್ರವೇಶ ಸಾಧ್ಯವಾಗಿಲ್ಲ. ಅಂದರೆ ಮಾರುಕಟ್ಟೆ ವ್ಯವಸ್ಥೆಯ ಅನುಕೂಲಗಳು ಹಲವು ಗುಂಪಿನ ಜನರಿಗೆ, ಹಲವು ಸಮುದಾಯಗಳಿಗೆ ತಲುಪಿಲ್ಲ. ಅವು ಅದರಿಂದ ವಂಚಿತವಾಗಿಯೇ ಉಳಿದಿವೆ. ಮಾರುಕಟ್ಟೆಯ ವ್ಯವಸ್ಥೆಯ ಅನುಕೂಲ ಎಲ್ಲರಿಗೂ ಸಿಗುವಂತಾಗಬೇಕು. ಇಲ್ಲದೇ ಹೋದರೆ ಬೆಳವಣಿಗೆ ಗಣನೀಯ ಪ್ರಮಾಣದಲ್ಲಿ ಆಗುವುದಿಲ್ಲ. ಸೇನ್ ಮಾರುಕಟ್ಟೆ ವ್ಯವಸ್ಥೆಯನ್ನು ಪೂರ್ತಿಯಾಗಿ ಸಮರ್ಥಿಸುವ ಅಥವಾ ಕೇವಲ ಟೀಕಿಸುವ ಕೆಲಸ ಮಾಡದೆ ಎರಡೂ ಮಗ್ಗುಲನ್ನು ನೋಡುತ್ತಾರೆ.

ಶಿಕ್ಷಣ: ಶಿಕ್ಷಣ ಉಪಯುಕ್ತವಷ್ಟೇ ಅಲ್ಲ, ಅದಕ್ಕೆ ಅದರದೇ ಆದ ಆಂತರಿಕ ಮಹತ್ವವೂ ಇದೆ. ಅದು ಜನರಿಗೆ ಒಂದು ಪದ್ಯವನ್ನೋ ಕಥೆಯನ್ನೋ ಓದುವ, ತಮಗೆ ಕುತೂಹಲಕಾರಿಯಾದ ವಿಷಯವನ್ನು ತಿಳಿಯುವ, ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವ ಸಾಮರ್ಥ್ಯವನ್ನು ಕೊಡುತ್ತದೆ. ಜನರಿಗೆ ಸಮಾಜದಲ್ಲಿ ವ್ಯವಹರಿಸಲು ಸಾಕ್ಷರತೆ ಅನುಕೂಲ ಮಾಡಿಕೊಡುತ್ತದೆ. ಉದಾಹರಣೆಗೆ ತಮ್ಮ ಕಾನೂನಾತ್ಮಕ ಹಕ್ಕುಗಳನ್ನು ತಿಳಿಯಲು, ಬ್ಯಾಂಕಿನಿಂದ ಸಾಲ ಪಡೆಯಲು, ಉತ್ತಮ ಉದ್ಯೋಗ ಪಡೆಯಲು, ತಮಗೆ ಬೇಕಾದವರಿಗೆ ಪತ್ರ ಬರೆಯಲು ಹೀಗೆ ಹಲವು ಪ್ರಯೋಜನಗಳೂ ಇವೆ. ಶಿಕ್ಷಣದಿಂದ ವರ್ಗ, ಲಿಂಗ, ಜಾತಿ, ಕುಲ ಇತ್ಯಾದಿ ಚಾರಿತ್ರಿಕ ಅಸಮಾನತೆಗಳನ್ನು ತಗ್ಗಿಸಿಕೊಳ್ಳುವ ಮೂಲಕ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದಕ್ಕೆ ಸಾಧ್ಯ. ಅವಕಾಶವಂಚಿತ ಸಮುದಾಯ ಭಾರತದಲ್ಲಿ "ತಮ್ಮ ಮಕ್ಕಳ ಮೇಲ್ಚನೆಗೆ ಶಿಕ್ಷಣವನ್ನು ಹೆಚ್ಚು ಭರವಸೆಯ ಮಾರ್ಗವಾಗಿ" ನೋಡುತ್ತಾರೆ.

ಭಾರತದಲ್ಲಿ ಅರ್ಧದಷ್ಟು ಜನರಿಗೆ ಓದಲು ಬರೆಯಲು ಸಾಧ್ಯವಿಲ್ಲ. ಜೊತೆಗೆ ಅದರಲ್ಲೂ ಮಹಿಳೆಯರು, ಗ್ರಾಮೀಣ ಪ್ರದೇಶದ ಜನ, ಕೆಲವು ಜಾತಿ ಹಾಗೂ ಪಂಗಡದ ಜನ, ಕೆಲವು ಪ್ರಾಂತ್ಯಗಳ ಜನ ಶಿಕ್ಷಣದಿಂದ ಹೆಚ್ಚು ವಂಚಿತಾಗಿದ್ದಾರೆ. ಶಿಕ್ಷಣದ ಕಳಪೆ ಗುಣಮಟ್ಟ ಇದಕ್ಕೊಂದು ಪ್ರಮುಖ ಕಾರಣ. ಅಧ್ಯಾಪಕರ ಕೊರತೆ, ಹಾಲಿ ಇರುವ ಅಧ್ಯಾಪಕರಲ್ಲಿ ಆಸಕ್ತಿಯ ಕೊರತೆ, ಕಟ್ಟಡ ಇತ್ಯಾದಿ ಮೂಲಸೌಕರ್ಯದ ಕೊರತೆ ಇವೆಲ್ಲವೂ ಒಟ್ಟಾಗಿ ಸಮಸ್ಯೆಯನ್ನು ಇನ್ನಷ್ಟು ಗಂಭೀರಗೊಳಿಸಿವೆ. ಭಾರತದ ಸಂವಿಧಾನದ ಪ್ರಕಾರ ಹದಿನಾಲ್ಕು ವರ್ಷದ ತನಕ ಸರ್ಕಾರ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಒದಗಿಸಬೇಕು. ಆದರೆ ಸರ್ಕಾರ ಶಿಕ್ಷಣಕ್ಕೆ ಮಾಡುತ್ತಿರುವ ಖರ್ಚು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. 1989ರಲ್ಲಿ ಶಿಕ್ಷಣಕ್ಕೆ ಜಿಡಿಪಿಯ ಶೇಕಡ 4.4ರಷ್ಟು ಖರ್ಚು ಮಾಡಿತ್ತು. 1997ರಲ್ಲಿ ಅದು ಶೇಕಡ 3.6ಕ್ಕೆ ಇಳಿದಿದೆ. ಸಾರ್ವಜನಿಕ ಸಹಕಾರ ಹಾಗೂ ಒತ್ತಡದ ಕೊರತೆಯೂ ಇದಕ್ಕೆ ಕಾರಣ. ಅಂತಹ ಒತ್ತಡ ಇರುವ ಕಡೆಗಳಲ್ಲಿ ಶಿಕ್ಷಣದಲ್ಲಿ ಸುಧಾರಣೆಯಾಗಿರುವುದನ್ನು ಇವರ ಅಧ್ಯಯನ ತೋರಿಸಿದೆ. ಮಹಿಳೆಯ ಮನೆಯ ಹೊರಗೆ ಕೆಲಸ ಮಾಡುತ್ತಿರುವ ಸಂಖ್ಯೆ ಹೆಚ್ಚಿರುವ ಕಡೆಗಳಲ್ಲಿ, ಹೆಚ್ಚು ಆರ್ಥಿಕ ಸಮಾನತೆ ಇರುವ ಕಡೆಗಳಲ್ಲಿ ಶಿಕ್ಷಣದಲ್ಲಿ ಹೆಚ್ಚಿನ ಸುಧಾರಣೆಯಾಗಿದೆ. ಶಿಕ್ಷಣ ಕ್ಷೇತ್ರವನ್ನು ಸರ್ಕಾರ ಮಾತ್ರವಲ್ಲ ಸಾಮಾಜಿಕ ಹಾಗೂ ರಾಜಕೀಯ ಚಳುವಳಿಗಳೂ ಕಡೆಗಣಿಸಿವೆ. ಜನರು ಅಂದರೆ ಪೋಷಕರು, ವಿದ್ಯಾರ್ಥಿಗಳು, ಸಾರ್ವಜನಿಕ ಸಂಸ್ಥೆಗಳ ಏಜನ್ಸಿ ಹೆಚ್ಚು ಸಕ್ರಿಯವಾದರೆ ಪರಿಸ್ಥಿತಿಯನ್ನು ಬದಲಿಸಬಹುದು.

ಆರೋಗ್ಯ: ಆರೋಗ್ಯ ಜನತೆಯ ಸ್ವಾತಂತ್ರ್ಯವನ್ನು ಹೆಚ್ಚಿಸಬಹುದಾದ ಮತ್ತೊಂದು ಸಾಮರ್ಥ್ಯ. ಎಲ್ಲ ಸಂಸ್ಕೃತಿಯ ಹಾಗೂ ಎಲ್ಲ ತಲೆಮಾರಿನ ಜನ ಆರೋಗ್ಯಕ್ಕೆ ತುಂಬಾ ಮಹತ್ವ ನೀಡುತ್ತಾರೆ. ಅಭಿವೃದ್ಧಿಯನ್ನು ಹೆಚ್ಚಿಸುವುದಕ್ಕೆ ಇದೊಂದು ಪ್ರಬಲ ಅಸ್ತ್ರ. ಅಷ್ಟೇ ಅಲ್ಲ ಉಳಿದೆಲ್ಲಾ ಸಾಮರ್ಥ್ಯಗಳಂತೆ ಅದು ಅಭಿವೃದ್ಧಿಯ ಅವಿಭಾಜ್ಯ ಭಾಗವೂ ಹೌದು. ಜೊತೆಗೆ ಆರೋಗ್ಯಕ್ಕೆ ಮತ್ತು ಶಿಕ್ಷಣ, ಉದ್ಯೋಗ, ಪ್ರಜಾಸತ್ತಾತ್ಮಕ ಪಾಲ್ಗೊಳ್ಳುವಿಕೆ ಇತ್ಯಾದಿ ಇತರ ಹಲವು ಸ್ವಾತಂತ್ರ್ಯಕ್ಕೂ ನಿಕಟವಾದ ಸಂಬಂಧವಿದೆ. ವರಮಾನ ಕಡಿಮೆ ಇರುವ ದೇಶಗಳಲ್ಲೂ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕೆ ಸಾಧ್ಯ. ಯಾಕೆಂದರೆ ಅಲ್ಲಿ ಆರೋಗ್ಯ ಸೇವೆ ಶ್ರೀಮಂತ ರಾಷ್ಟ್ರಗಳಿಗೆ ಹೋಲಿಸಿದರೆ ಹೆಚ್ಚು ಅಗ್ಗವಾಗಿರುತ್ತದೆ. ಅದೇ ಶ್ರೀಮಂತ ದೇಶಗಳಲ್ಲಿ ಈ ಸೇವೆಗಳು ಹೆಚ್ಚು ದುಬಾರಿ. ಜನರ ಆರೋಗ್ಯ ಸುಧಾರಿಸಿದರೆ ಉಳಿದ ಸಾಮರ್ಥ್ಯಗಳು ಸುಧಾರಿಸುತ್ತವೆ. ಹಾಗಾಗಿ ಇದಕ್ಕೆ ಹೆಚ್ಚಿನ

ಮಟ್ಟದ ಸಾರ್ವಜನಿಕ ಹೂಡಿಕೆ ಅನಿವಾರ್ಯ. ಸೇನ್ ಎಲ್ಲಾ ಸಾಮರ್ಥ್ಯಗಳ ವಿಷಯಗಳಲ್ಲೂ ಹೇಳುವಂತೆ ಆರೋಗ್ಯವನ್ನು ಸುಧಾರಿಸುವಲ್ಲಿ ಜನತೆಯು ಏಜೆನ್ಸಿಗಳಾಗಿ ತೊಡಗಿಸಬೇಕೆನ್ನುತ್ತಾರೆ. ಜನ ಕೇವಲ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದ ಅನುಕೂಲ ಪಡೆದುಕೊಳ್ಳುವುದಕ್ಕಷ್ಟೆ ಸೀಮಿತವಾಗುವುದಿಲ್ಲ. ಆರೋಗ್ಯ ಸೇವೆಯ ಸುಧಾರಣೆಗೂ ನೆರವಾಗಬಲ್ಲರು. ಹಿಂದೆ ಚೀನಾದಲ್ಲಿ ಬರಿಗಾಲಿನ ವೈದ್ಯರು, ಸಾಮೂಹಿಕ ಆರೋಗ್ಯ ವಿಮೆ, ಆರೋಗ್ಯ ಮೂಲಸೌಕರ್ಯ ಇತ್ಯಾದಿ ಉತ್ತಮವಾದ ಸಾರ್ವಜನಿಕ ಆರೋಗ್ಯ ಸೇವೆಯ ವ್ಯವಸ್ಥೆಯಿತ್ತು. ಆದರೆ 1979ರಲ್ಲಿ ಉದಾರೀಕರಣದ ಉತ್ಸಾಹದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ನಿಲ್ಲಿಸಲಾಯಿತು. ಇದರಿಂದ ಶೇಕಡ 70ರಷ್ಟು ಜನ ಆರೋಗ್ಯ ವಿಮೆಯಿಂದ ವಂಚಿತರಾದರು. ಆದರೆ ಅಲ್ಲಿ ಪ್ರಜಾಸತ್ತೆ ಇಲ್ಲದ್ದರಿಂದ ಅದರ ವಿರುದ್ಧ ನೇರ ಪ್ರತಿಭಟನೆ ತೀವ್ರವಾಗಿರಲಿಲ್ಲ. ನಂತರದ ದಿನಗಳಲ್ಲಿ ಚೀನಾದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ನಿಧಾನವಾಯಿತು. ಶಿಶು ಮರಣ ಸಂಖ್ಯೆ ಹೆಚ್ಚಿತು. ಹಾಗೆಯೇ ಜೀವಿತಾವಧಿಯ ಹೆಚ್ಚಳದ ದರ ನಿಧಾನವಾಗತೊಡಗಿತು. ಅಲ್ಲಿ ಪ್ರಜಾಸತ್ತೆ ಇಲ್ಲದ್ದರಿಂದ ಅತ್ಯಂತ ಪರಿಣಾಮಕಾರಿಯಾಗಿದ್ದ ಆರೋಗ್ಯ ವ್ಯವಸ್ಥೆ ಕುಸಿಯತೊಡಗಿತ್ತು.

ಸೇನ್ ಹೇಳುವಂತೆ "ತಮ್ಮ ಬದುಕನ್ನು ಹಾಗು ಸ್ವಾತಂತ್ರವನ್ನು ರಕ್ಷಿಸುವುದಕ್ಕೆ ಬದಲಾವಣೆಗೆ ಒತ್ತಾಯಿಸುವುದಕ್ಕೆ ಸಾರ್ವಜನಿಕ ಚರ್ಚೆ ಹಾಗು ಜನರ ಪಾಲ್ಗೊಳ್ಳುವಿಕೆ ಅತ್ಯಂತ ಮುಖ್ಯ. ಜನ ಕೇವಲ ತಮ್ಮನ್ನು ತಾವು ರೋಗಿ ಎಂಬುದಾಗಿ ನೋಡಬಾರದು. ಬದಲಾವಣೆಯ ಏಜೆಂಟರಾಗಿ ತೊಡಗಿಸಿಕೊಳ್ಳಬೇಕು. ಅವರು ಸಕ್ರಿಯರಾಗದಿದ್ದರೆ ಅನಾರೋಗ್ಯ ಹಾಗೂ ಸಾವು ಬೆನ್ನತ್ತಿ ಬರುತ್ತವೆ."

ಜನರ ಸ್ವಾತಂತ್ರ್ಯಕ್ಕೆ ಹಾಗೂ ಸಾಮರ್ಥ್ಯದ ಹೆಚ್ಚಳಕ್ಕೆ ಅಡ್ಡಿಯಾಗಿರುವ ಇನ್ನೊಂದು ಅಂಶ ಲಿಂಗತಾರತಮ್ಯ. ತನ್ನನ್ನು ಭಾಗಶಃ ಸ್ತ್ರೀವಾದಿ ಅರ್ಥಶಾಸ್ತ್ರಜ್ಞ ಎಂದು ಕರೆದುಕೊಳ್ಳುವ ಸೇನ್ ಅವರ ಬಹುತೇಕ ಬರಹಗಳಲ್ಲಿ ಲಿಂಗತಾರತಮ್ಯ ಚರ್ಚಿತವಾಗಿದೆ. ಹೆಂಗಸರು ಅದರಲ್ಲೂ ಹೆಣ್ಣುಮಕ್ಕಳು ಪೌಷ್ಟಿಕ ಆಹಾರ ಹಾಗೂ ಆರೋಗ್ಯ ಸೇವೆಯಿಂದ ವ್ಯವಸ್ಥಿತವಾಗಿ ವಂಚಿತರಾಗುತ್ತಿದ್ದಾರೆ. ಪರಿಣಾಮವಾಗಿ ಅವರ ಸಾವಿನ ಸಂಖ್ಯೆ ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲಿ ಇದು ಕಮ್ಮಿಯಾಗಿದ್ದರೂ ಹೆಣ್ಣು ಭ್ರೂಣಹತ್ಯೆಯ ಪ್ರಮಾಣ ಹೆಚ್ಚಾಗಿದೆ. ಹೆಣ್ಣು ಹಾಗೂ ಗಂಡು ಮಕ್ಕಳ ಅನುಪಾತ ಇದನ್ನು ಸ್ಪಷ್ಟಪಡಿಸುತ್ತದೆ. ಹಾಗಾಗಿ ಅಭಿವೃದ್ಧಿಯ ಬಗ್ಗೆ ಮಾತನಾಡುವಾಗ ಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಸಮಾನತೆ ಅಭಿವೃದ್ಧಿಯನ್ನು ಅಳೆಯುವುದಕ್ಕೆ ಹೆಚ್ಚು ಸಮತೋಲಿತ ಚೌಕಟ್ಟನ್ನು ನೀಡುತ್ತದೆ. ಮಹಿಳೆಯರು ಬದಲಾವಣೆಯಲ್ಲಿ ಸಕ್ರಿಯ ಪಾತ್ರವಹಿಸಿದಾಗ ಅದರ ಪರಿಣಾಮ ಕುಟುಂಬದ ಸದಸ್ಯರ ಮೇಲೆ ಪರಿಣಾಮ ಬೀರುತ್ತದೆ. ಅಷ್ಟೇ ಅಲ್ಲ ಸಾರ್ವಜನಿಕವಾಗಿಯೂ ಅದು ಪರಿಣಾಮ ಬೀರುತ್ತದೆ. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಹಾಗೂ ಆಸ್ತಿಯ ಹಕ್ಕು ಸಿಕ್ಕಾಗ ಹೆಚ್ಚಿನ ಸಂದರ್ಭದಲ್ಲಿ ಮಹಿಳೆಯರು ಹೆಚ್ಚು ಸಬಲೀಕರಣಗೊಂಡಿದ್ದಾರೆ. ಅದು ಹಲವು ಪ್ರಮುಖ ಬದಲಾವಣೆಗಳಿಗೆ ಕಾರಣವಾಗಿದೆ. ಉದಾಹರಣೆಗೆ ಕುಟುಂಬದೊಳಗೆ ಹೆಚ್ಚಿನ ಸಂಪನ್ಮೂಲ ಮಹಿಳೆಯರ ನಿಯಂತ್ರಣದೊಳಗೆ ಬರುತ್ತದೆ. ಮಕ್ಕಳು ಕಡಿಮೆಯಾಗುತ್ತಾರೆ. ಮಕ್ಕಳಲ್ಲಿ ಅದರಲ್ಲೂ ಹೆಣ್ಣು ಮಕ್ಕಳಲ್ಲಿ ಅಪೌಷ್ಟಿಕತೆ ಕಡಿಮೆಯಾಗುತ್ತದೆ. ಆರೋಗ್ಯವೂ ಸುಧಾರಿಸುತ್ತದೆ. ಕುಟುಂಬದಲ್ಲಿ ಪರಸ್ಪರ ಸಹಕಾರದಿಂದ ಜೀವನ ನಡೆಸಿದಾಗ ಜೀವನ ಮಟ್ಟ ಸುಧಾರಿಸುತ್ತದೆ.

ಸ್ವಾತಂತ್ರ್ಯವನ್ನು ಪ್ರಭಾವಿಸುವ ಈ ಅಂಶಗಳು ಒಂದಕ್ಕೊಂದು ತೆಕ್ಕೆಹಾಕಿಕೊಂಡಿರುತ್ತವೆ. ಒಂದು ಸ್ವಾತಂತ್ರ್ಯದಿಂದ ವಂಚಿತರಾದಾಗ ಇನ್ನೊಂದು ಸ್ವಾತಂತ್ರವನ್ನು ಎಷ್ಟೋ ಬಾರಿ ಕಳೆದುಕೊಳ್ಳುತ್ತಿರುತ್ತೇವೆ. ಇದನ್ನು ವಿವರಿಸುವುದಕ್ಕೆ ಸೇನ್ ತಮ್ಮ ಬಾಲ್ಯದಲ್ಲಿ ನಡೆದ ಘಟಣೆಯೊಂದನ್ನು ನೀಡುತ್ತಾರೆ.

"ನಾನು ಢಾಕಾದಲ್ಲಿ ನಮ್ಮ ಮನೆಯ ತೋಟದಲ್ಲಿ ಒಂದು ಮಧ್ಯಾಹ್ನ ಆಡುತ್ತಿದ್ದೆ. ಈಗ ಢಾಕಾ ಬಾಂಗ್ಲಾದೇಶದ ರಾಜಧಾನಿ. ನನಗಾಗ ಹತ್ತು ವರ್ಷವಿದ್ದಿರಬಹುದು. ಒಬ್ಬ ಮನುಷ್ಯ ಕರುಣಾಜನಕವಾಗಿ ಅಳುತ್ತಾ ಓಡಿಬಂದ. ಮೈಯೆಲ್ಲಾ ರಕ್ತಮಯವಾಗಿತ್ತು. ಯಾರೋ ಅವನ ಬೆನ್ನನ್ನು ಚಾಕುವಿನಿಂದ ಇರಿದಿದ್ದರು. ಅದು ಕೋಮುಗಲಭೆಗಳ ಕಾಲ. ಈ ಘಟನೆ ನಡೆದದ್ದು ಸ್ವಾತಂತ್ರ್ಯಪೂರ್ವದಲ್ಲಿ. ಭಾರತ ಪಾಕಿಸ್ತಾನ ವಿಭಜನೆಗೆ ಮೊದಲು. ಇರಿತಕ್ಕೆ ಒಳಗಾದ ಮನುಷ್ಯನ ಹೆಸರು ಖಾದರ್ ಮಿಯಾ. ದಿನಗೂಲಿ ಮಾಡಿ ಜೀವನ ನಡೆಸುತ್ತಿದ್ದ ಒಬ್ಬ ಮುಸಲ್ಮಾನ. ಅತ್ಯಲ್ಪ ಕೂಲಿಗೂ ನೆರೆಹೊರೆಯ ಮನೆಗಳಲ್ಲಿ ಕೆಲಸಮಾಡಲು ಬರಲೇ ಬೇಕಾಗಿದ್ದ ಪರಿಸ್ಥಿತಿ. ಹೀಗೆ ಕೆಲಸ ಹುಡುಕಿ ಬರುತ್ತಿದ್ದಾಗ ಹಿಂದುಗಳೇ ಹೆಚ್ಚಾಗಿದ್ದ ನಮ್ಮ ಬಡಾವಣೆಯಲ್ಲಿ ಯಾರೋ ಕೋಮುವಾದಿ ದುರುಳರು ಅವನನ್ನು ಇರಿದಿದ್ದರು. ನಾನು ಅವನಿಗೆ ನೀರು ಕೊಟ್ಟೆ. ಹಾಗೇ ಸಹಾಯಕ್ಕಾಗಿ ಮನೆಯೊಳಗಿದ್ದ ದೊಡ್ಡವರನ್ನು ಕೂಗಿ ಕರೆದೆ. ನಮ್ಮ ತಂದೆ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಗಲಭೆಯ ಸಮಯದಲ್ಲಿ ನಮ್ಮನ್ನು ದ್ವೇಷಿಸುವವರೇ ಹೆಚ್ಚಾಗಿ ಇರುವ ಬಡಾವಣೆಗೆ ಹೋಗಬೇಡ ಎಂದು ಅವನ ಹೆಂಡತಿ ಹೇಳುತ್ತಿದ್ದಳಂತೆ. ಇದನ್ನು ಅವನು ಆಸ್ಪತ್ರೆಗೆ ಹೋಗುವಾಗ ನಮ್ಮ ತಂದೆಗೆ ಪದೇ ಪದೇ ಹೇಳುತ್ತಿದ್ದನಂತೆ. ಆದರೆ ಖಾದಿರ್ ಮಿಯಾ ಕೆಲಸ ಹುಡುಕಿಕೊಂಡು ಹೊರಗೆ ಹೋಗಲೇ ಬೇಕಿತ್ತು. ಒಂದಿಷ್ಟು ಸಂಪಾದಿಸಲೇ ಬೇಕಿತ್ತು. ಮನೆಯಲ್ಲಿ ತಿನ್ನಲು ಏನೂ ಇರಲಿಲ್ಲ. ಇಂತಹ ಆರ್ಥಿಕ ಅ–ಸ್ವಾತಂತ್ರ್ಯದಿಂದಾಗಿ ಅವನ ಜೀವವೇ ಹೋಯಿತು. ಅವನು ಆಸ್ಪತ್ರೆಯಲ್ಲಿ ಅಸುನೀಗಿದ."

ಈ ಘಟನೆ ಸೇನ್ ಅವರನ್ನು ತುಂಬಾ ಕಲಕಿಬಿಟ್ಟಿತ್ತು. ಧರ್ಮ, ಜಾತಿ ಇತ್ಯಾದಿ ಹಲವು ಸಂಕುಚಿತ ಅಸ್ಮಿತೆಗಳು ನಮಗೆ ದೊಡ್ಡ ಹೊರೆಯಾಗಿಬಿಡುತ್ತವೆ. ಈ ಘಟನೆಯ ಬಗ್ಗೆ ಸೇನ್ ಹಲವು ಬರಹಗಳಲ್ಲಿ ಪ್ರಸ್ತಾಪಿಸಿದ್ದಾರೆ. ಬಡತನದಿಂದಾಗಿ ಅವನು ಆರ್ಥಿಕ ಸ್ವಾತಂತ್ರ್ಯ ಕಳೆದುಕೊಂಡ. ಅದರಿಂದ ಎಷ್ಟೋ ಉಳಿದ ಬಗೆಯ ಸ್ವಾತಂತ್ರ್ಯಗಳಿಂದಲೂ ವಂಚಿತನಾಗಿದ್ದ ಖಾದಿರ್ ಮಿಯಾನ ಕುಟುಂಬಕ್ಕೆ ಕೂಲಿಗೆ ಹೋಗದೆ, ಹಾಗೇ ಬದುಕಲು ಸಾಧ್ಯವಾಗಿದ್ದಲ್ಲಿ, ಅಂತಹ ಭಯಾನಕ ಹೊತ್ತಿನಲ್ಲಿ ಚೂರುಪಾರು ಸಂಪಾದಿಸಲು ತಮ್ಮನ್ನು ದ್ವೇಷಿಸುವಂತಹ ಜನರಿರುವ ಬಡಾವಣೆಗೆ ಹೋಗಬೇಕಾಗುತ್ತಿರಲಿಲ್ಲ. ಆರ್ಥಿಕ ಅ–ಸ್ವಾತಂತ್ರ್ಯವು ಸಾಮಾಜಿಕ ಅ–ಸ್ವಾತಂತ್ರ್ಯವನ್ನು ಸೃಷ್ಟಿಸುತ್ತದೆ. ಹಾಗೆಯೇ ಸಾಮಾಜಿಕ ಅಥವಾ ರಾಜಕೀಯ ಅ–ಸ್ವಾತಂತ್ರ್ಯಗಳು ಕೂಡ ಆರ್ಥಿಕ ಅ–ಸ್ವಾತಂತ್ರ್ಯಕ್ಕೆ ಕಾರಣವಾಗುತ್ತವೆ.

ಪರಸ್ಪರ ತೆಕ್ಕೆಹಾಕಿಕೊಂಡಿರುವ ಆದರೆ ಸ್ವತಂತ್ರ ಅಸ್ತಿತ್ವವುಳ್ಳ ಈ ಸ್ವಾತಂತ್ರ್ಯಗಳನ್ನು ಹಿಗ್ಗಿಸುವ ಪ್ರಕ್ರಿಯೆಯಾಗಿ ಬೆಳವಣಿಗೆಯನ್ನು ಗ್ರಹಿಸಿಕೊಂಡರೆ ಬೆಳವಣಿಗೆಯನ್ನು ನೋಡುವ ನೋಟವೇ ಬದಲಾಗಿಬಿಡುತ್ತದೆ. ಅಭಿವೃದ್ಧಿಯನ್ನು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳನ್ನು ಒಳಗೊಳ್ಳುವಂತಹ ಒಂದು ಸಮಗ್ರ ಪ್ರಕ್ರಿಯೆಯಾಗಿ ಸೇನ್ ನೋಡುತ್ತಾರೆ. ಇಂತಹ ವಿಶಾಲ ದೃಷ್ಟಿಕೋನದಿಂದ ನೋಡಿದಾಗ ಮಾರುಕಟ್ಟೆಗಳು ಮತ್ತು ಮಾರುಕಟ್ಟೆ ಸಂಬಂಧಿ ಸಂಘಟನೆಗಳು, ಸರ್ಕಾರಗಳು ಮತ್ತು ಸ್ಥಳೀಯ ಅಧಿಕಾರಿಗಳು, ರಾಜಕೀಯ ಪಕ್ಷಗಳು ಮತ್ತಿತರ ನಾಗರಿಕ ಸಂಸ್ಥೆಗಳು, ಶೈಕ್ಷಣಿಕ ವ್ಯವಸ್ಥೆಗಳು ಮತ್ತು ಮುಕ್ತ ಚರ್ಚೆ, ಸಂವಾದದ ಅವಕಾಶಗಳು ಇತ್ಯಾದಿ ಹಲವು ವಿಭಿನ್ನ ಸಂಸ್ಥೆಗಳು ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಏಕಕಾಲದಲ್ಲಿ

ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಬೆಳವಣಿಗೆಯಲ್ಲಿ ಸ್ವಾತಂತ್ರ್ಯದ ಮಹತ್ವದ ಬಗ್ಗೆ ಪರ ವಿರೋಧದ ಚರ್ಚೆಗಳು ಹಲವು ಶತಮಾನಗಳಿಂದ ನಡೆಯುತ್ತಿವೆ. ಜನಸಂಖ್ಯಾ ಸಮಸ್ಯೆ ಇದಕ್ಕೊಂದು ಒಳ್ಳೆಯ ಉದಾಹರಣೆ. ಹದಿನೆಂಟನೇ ಶತಮಾನದ ಮಹಾನ್ ಫ್ರೆಂಚ್ ವಿಚಾರವಾದಿ ಚಿಂತಕ ಕಾಂಡೊರೊಸೆಟ್ ವೈಚಾರಿಕತೆ ಬೆಳೆದಂತೆ ಫಲವತ್ತತೆಯ ಪ್ರಮಾಣ ಕಡಿಮೆಯಾಗುತ್ತದೆ ಎಂದು ನಿರೀಕ್ಷಿಸಿದ್ದ. ಹೆಚ್ಚಿನ ಭದ್ರತೆ, ಶಿಕ್ಷಣ ಹಾಗೂ ವೈಚಾರಿಕತೆಗೆ ಸಂಬಂಧಿಸಿದಂತೆ ಹೆಚ್ಚಿನ ಜನರಿಗೆ ಹೆಚ್ಚಿನ ಸ್ವಾತಂತ್ರ್ಯವಿದ್ದರೆ ಜನಸಂಖ್ಯಾ ಹೆಚ್ಚಳವನ್ನು ನಿಯಂತ್ರಿಸಬಹುದು ಎಂದು ಭಾವಿಸಿದ್ದ. ಅವನ ಸಮಕಾಲೀನನಾದ ಥಾಮಸ್ ರಾಬರ್ಟ ಮಾಲ್ಥಸ್ ಇದಕ್ಕೆ ವಿರುದ್ಧವಾದ ನಿಲುವನ್ನು ತಾಳಿದ್ದ. ಜನರಿಗೆ ಆರ್ಥಿಕ ಒತ್ತಾಯ ಬಂದಾಗ, ಬದುಕುವುದಕ್ಕೆ ಬೇಕಾದ ಅವಶ್ಯಕತೆಗಳನ್ನು ಕೊಳ್ಳುವುದಕ್ಕೆ ಸಾಧ್ಯವಾಗದೇ ಹೋದಾಗ ಅವರಿಗೆ ದೊಡ್ಡ ಕುಟಂಬಗಳನ್ನು ಪೋಷಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ಜನಸಂಖ್ಯೆ ಕಡಿಮೆಯಾಗುತ್ತದೆ ಎಂದು ಭಾವಿಸಿದ್ದ. ಸ್ವಾತಂತ್ರ್ಯ ಹಾಗೂ ಆರ್ಥಿಕ ಒತ್ತಾಯ ಇವೆರಡರ ನಡುವಿನ ವಿವಾದ ಹಳೆಯದು. ಸೆನ್ ಕಾಂಡೊರೊಸೆಟ್ ಅವರ ನಿಲುವನ್ನು ಸಮರ್ಥಿಸುತ್ತಾರೆ. ಈ ಚರ್ಚೆ ಈಗಲೂ ಇನ್ನೂ ಹಲವು ರೂಪಗಳಲ್ಲಿ ನಡೆಯುತ್ತಲೇ ಇದೆ.

ಸೇನ್ ಐದು ಬಗೆಯ ಸ್ವಾತಂತ್ರ್ಯಗಳನ್ನು ಚರ್ಚಿಸುತ್ತಾರೆ. ಅವು: 1) ರಾಜಕೀಯ ಸ್ವಾತಂತ್ರ್ಯ 2) ಆರ್ಥಿಕ ಸೌಲಭ್ಯಗಳು 3) ಸಾಮಾಜಿಕ ಅವಕಾಶಗಳು 4) ಪಾರದರ್ಶಕತೆಯ ಖಾತ್ರಿ ಹಾಗೂ 5) ಸುರಕ್ಷಾ ಭದ್ರತೆಗಳು. ಈ ಎಲ್ಲಾ ವಿಭಿನ್ನ ಬಗೆಯ ಹಕ್ಕುಗಳು ಹಾಗೂ ಅವಕಾಶಗಳು ವ್ಯಕ್ತಿಯೊಬ್ಬನ ಸಾಮಾನ್ಯ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯಕವಾಗುತ್ತವೆ. ಅವು ಪರಸ್ಪರ ಪೂರಕವಾಗಿಯೂ ಕೆಲಸ ಮಾಡಬಲ್ಲವು. ಜನ ತಮ್ಮದೇ ಆದ ರೀತಿಯಲ್ಲಿ ಬದುಕಲು ಬಯಸುತ್ತಾರೆ. ಅದು ಹೆಚ್ಚು ಮೌಲಿಕವಾದ ಬದುಕು ಎಂದು ಭಾವಿಸುತ್ತಾರೆ. ಆ ರೀತಿ ಬದುಕಲು ಬೇಕಾದ ಸ್ವಾತಂತ್ರ್ಯಗಳನ್ನು ಈ ಸ್ವಾತಂತ್ರ್ಯಗಳು ಪೋಷಿಸುತ್ತವೆ. ಬೆಳವಣಿಗೆಯ ಸಾಧನಗಳಾದ ಈ ವಿವಿಧ ಸ್ವಾತಂತ್ರ್ಯಗಳ ನಡುವೆ ಪರಸ್ಪರ ಸಂಬಂಧವಿರುತ್ತದೆ. ಅವು ಪರಸ್ಪರ ಒಂದನ್ನೊಂದು ಬಲಗೊಳಿಸುತ್ತವೆ. ರಾಜಕೀಯ ಸ್ವಾತಂತ್ರ್ಯಗಳು (ವಾಕ್ ಸ್ವಾತಂತ್ರ್ಯ ಹಾಗು ಚುನಾವಣೆಯ ರೂಪದಲ್ಲಿ ನಮಗೆ ಲಭ್ಯವಿರುವ ಸ್ವಾತಂತ್ರ್ಯಗಳು) ಆರ್ಥಿಕ ಭದ್ರತೆಯನ್ನು ಒದಗಿಸುತ್ತವೆ. ಸಾಮಾಜಿಕ ಅವಕಾಶಗಳು (ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳು ರೂಪದಲ್ಲಿ ಸಿಗುತ್ತಿರುವ ಅವಕಾಶಗಳು) ಆರ್ಥಿಕ ಪಾಲ್ಗೊಳ್ಳುವಿಕೆಗೆ ನೆರವಾಗುತ್ತವೆ. ಆರ್ಥಿಕ ಸೌಲಭ್ಯಗಳು (ವಾಣಿಜ್ಯ ಹಾಗೂ ಉತ್ಪಾದನೆಯಲ್ಲಿ ಪಾಲ್ಗೊಳ್ಳಲು ನಮಗಿರುವ ಅವಕಾಶಗಳ ರೂಪದಲ್ಲಿ ಸಿಗುವ ಸೌಲಭ್ಯಗಳು) ವೈಯಕ್ತಿಕ ಶ್ರೀಮಂತಿಕೆಯನ್ನು ಹಾಗೂ ಸಾಮಾಜಿಕ ಸೌಕರ್ಯಗಳನ್ನು ಪಡೆಯಲು ಬೇಕಾದ ಸಾರ್ವಜನಿಕ ಸಂಪನ್ಮೂಲಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತವೆ. ಹೀಗೆ ವಿವಿಧ ಬಗೆಯ ಸ್ವಾತಂತ್ರ್ಯಗಳು ಪರಸ್ಪರ ಒಂದನ್ನೊಂದು ಬಲಗೊಳಿಸಬಲ್ಲವು.

ಸೇನ್ ಅವರದ್ದು ಆಳವಾದ, ಹೆಚ್ಚು ವಿಸ್ತಾರವಾದ ವಿಶ್ಲೇಷಣೆ. ಜೊತೆಗೆ ಅವರು ಜನರನ್ನು ಏಜೆಂಟರನ್ನಾಗಿ ಬಳಸಿಕೊಳ್ಳುವುದಕ್ಕೆ ವಿಶೇಷವಾಗಿ ಮನವಿ ಮಾಡಿಕೊಳ್ಳುತ್ತಾರೆ. ಸಾರ್ವಜನಿಕ ಚರ್ಚೆ, ಸಂವಾದ, ಪ್ರತಿಭಟನೆ, ಸಾಮಾಜಿಕ ಚಳುವಳಿ, ಪ್ರಜಾಸತ್ತಾತ್ಮಕ ಕ್ರಮಗಳು ಹಾಗೂ ಬೇರೆ ಬಗೆಯ ಪಾಲ್ಗೊಳ್ಳುವಿಕೆಯನ್ನು ಬಯಸುತ್ತಾರೆ. ಅದರಿಂದ ಬೆಳವಣಿಗೆ ಹೆಚ್ಚು ಸಮತೋಲಿತವಾಗಿರುತ್ತದೆ. ಹೆಚ್ಚು ಪರಿಪೂರ್ಣವೂ ಆಗುತ್ತದೆ ಎಂದು ಭಾವಿಸುತ್ತಾರೆ. "ಸರ್ಕಾರದ ನೀತಿಗಳಿಂದ ವಾಸ್ತವ ಜಗತ್ತಿನ ಮೇಲೆ ಆಗುವ ಪರಿಣಾಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು ಅನ್ನುವುದು ಸರಿ. ಆದರೆ ಜನರ ಪ್ರತಿಭಟನೆ, ಸಿಟ್ಟು, ಕೂಗಾಟಗಳು ಅಷ್ಟೇ ಮುಖ್ಯ." ಅಭಿವೃದ್ಧಿಯ ದಿಕ್ಕನ್ನು ನಿರ್ಧರಿಸುವಲ್ಲಿ ಜನರೂ ಪಾಲ್ಗೊಳ್ಳಬೇಕು. ಅದರಿಂದ ಅಭಿವೃದ್ಧಿಯ ವ್ಯಾಪ್ತಿ ಸಂಕುಚಿತ ಆರ್ಥಿಕ ಪರಿಧಿಯಿಂದ ಪಲ್ಲಟಗೊಂಡು ರಾಜಕೀಯ ತೊಡಗುವಿಕೆಯ ಅಂಶಗಳನ್ನು ಒಳಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದರಿಂದ ಸಾರ್ವಜನಿಕ ಕ್ರಿಯೆಗೆ ಅವಕಾಶವಾಗುತ್ತದೆ. ಸಾರ್ವಜನಿಕರ ಕಣ್ಗಾವಲು ಹಾಗೂ ಕ್ರಿಯಾಶೀಲತೆ ಇಲ್ಲದೆ ಹೋದರೆ ಸರ್ಕಾರದ ಚಟುವಟಿಕೆ ಪರಿಣಾಮಕಾರಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ.

ಸಾರ್ವಜನಿಕ ಕ್ರಿಯೆ ಅಂದರೆ ಕೇವಲ ಮತಚಲಾಯಿಸುವುದು ಅಂತ ಅಲ್ಲ. ಕುಟುಂಬ, ಸಾಮುದಾಯಿಕ ಗುಂಪುಗಳು, ಅನೌಪಚಾರಿಕ ಸಂಘಟನೆಗಳು, ಪತ್ರಿಕೆ, ಮಾಧ್ಯಮ ಇತ್ಯಾದಿ ವೇದಿಕೆಗಳಲ್ಲಿ ಪಾಲ್ಗೊಳ್ಳುವುದು. ಸೇನ್ ಸಾರ್ವಜನಿಕ ಕ್ರಿಯೆಯನ್ನು ವೈಯಕ್ತಿಕ ಮಟ್ಟದಲ್ಲಿ ಹಾಗೂ ಒಂದು ಸಾಮೂಹಿಕ ಕ್ರಿಯೆಯಾಗಿ ಬೆಂಬಲಿಸುತ್ತಾರೆ. ಮಾನವ ಏಜೆನ್ಸಿ ಅತ್ಯಂತ ಮೌಲಿಕವಾದದ್ದು. ಇವನ್ನು ಬೆಂಬಲಿಸುವ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳನ್ನು ಸೇನ್ ಬೆಂಬಲಿಸುತ್ತಾರೆ. ಬಡವರು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಕ್ಕೆ ಬೆಲೆ ಕೊಡುತ್ತಾರೆ. ಈ ಬಗ್ಗೆ ಸೇನ್ ಅವರಿಗೆ ನಂಬಿಕೆ ಇದೆ. ತುರ್ತುಪರಿಸ್ಥಿತಿಯ ವಿರುದ್ಧ ನಡೆದ ಹೋರಾಟ ಅಥವಾ ದಕ್ಷಿಣ ಕೊರಿಯಾ, ಥೈಲ್ಯಾಂಡ್, ಬಂಗ್ಲಾದೇಶ ಇತ್ಯಾದಿ ಕಡೆಗಳಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ನಡೆದ ಹೋರಾಟಗಳು ಇದನ್ನು ಸಮರ್ಥಿಸುತ್ತದೆ ಅನ್ನುತ್ತಾರೆ. ಜೊತೆಗೆ ನಿರಂಕುಶ ಆಳ್ವಿಕೆ ಪ್ರಜಾಸತ್ತೆಗಿಂತ ಆರ್ಥಿಕ ಬೆಳವಣಿಗೆ ಹಾಗೂ ಸಮೃದ್ಧಿಗೆ ಹೆಚ್ಚು ಪರಿಣಾಮಕಾರಿಯಾದ ದಾರಿಯೆನ್ನುವುದಕ್ಕೆ ಯಾವುದೇ ಪುರಾವೆಯೂ ಇಲ್ಲ. ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರಗಳು ಒಟ್ಟೊಟ್ಟಿಗೆ ಹೋಗಬೇಕು ಅನ್ನುತ್ತಾರೆ ಸೇನ್. ಹೆಚ್ಚು ನಿಖರವಾಗಿ ಹಾಗೂ ನೈಜವಾಗಿ ಮಾನವ ಸ್ವಾತಂತ್ರ್ಯವನ್ನು ಹಾಗೂ ನ್ಯಾಯವನ್ನು ಸಾಧಿಸುವುದಕ್ಕೆ ನೀತಿಗಳನ್ನು ರೂಪಿಸುವುದಕ್ಕೆ ನೀತಿಗಳನ್ನು ರೂಪಿಸುವುದಕ್ಕೆ ಕ್ರಮಗಳನ್ನು ಇವರ ಚಿಂತನೆ ಸೂಚಿಸುತ್ತದೆ.



ಆಫ್ರಿಕೆಯನ್ನು ಇಂದಿಗೂ ವಸಾಹತು ಆಗಿಸಿರುವ ಕರೆನ್ಸಿಯ ಕಥೆ



[ಫ್ಯಾನಿ ಪಿಗಿಯೊ (Fanny Pigeaud) ಮತ್ತು ಎನ್‌ಡೊಂಗೊ ಸಂಬಾ ಸಿಲ್ಲಾ (Ndongo Samba Sylla) ಅವರು ಬರೆದ "Africa's Last Colonial Currency: The CFA Franc" (ಆಫ್ರಿಕಾದ ಕೊನೆಯ ವಸಾಹತುಶಾಹಿ ಕರೆನ್ಸಿ: ಸಿಎಫ್‌ಎ ಫ್ರಾಂಕ್) ಪುಸ್ತಕದಲ್ಲಿ ಚರ್ಚಿಸಿರುವ ವಿಚಾರವನ್ನು ಸಂಗ್ರಹವಾಗಿ ಇಲ್ಲಿ ನೀಡಲಾಗಿದೆ. ಆಫ್ರಿಕಾದ ಆರ್ಥಿಕತೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದು ನೆರವಾಗುತ್ತದೆ ಅನ್ನುವ ಕಾರಣಕ್ಕೆ ಅದನ್ನು ಪರಿಶೀಲಿಸಲಾಗಿದೆ.]

ಯಪ್ಸಿ (Yapsy) ಎನ್ನುವ ಯುವ ವ್ಯಂಗ್ಯಚಿತ್ರಕಾರ ೨೦೧೮ರಲ್ಲಿ ಒಂದು ವ್ಯಂಗ್ಯಚಿತ್ರ ಬರೆದಿದ್ದ. ಅದು ತುಂಬಾ ವೈರಲ್ ಆಗಿತ್ತು. ಚಿತ್ರದಲ್ಲಿ ಎರಡು ಹಡಗುಗಳು ಸಮುದ್ರದಲ್ಲಿ ನಿಂತಿವೆ. ಒಂದು ಆಫ್ರಿಕಾದ ಐವರಿ ಕೋಸ್ಟ್ ದೇಶವನ್ನು ಪ್ರತಿನಿಧಿಸುತ್ತಿತ್ತು. ಇನ್ನೊಂದರಲ್ಲಿ ಐಫೆಲ್ ಟವರ್ ಚಿತ್ರವಿತ್ತು; ಅದರ ಮೇಲೆ ಫ್ರಾನ್ಸಿನ ಬಾವುಟ ಹಾರುತ್ತಿದೆ. ಜನರಲ್ ಡಿ ಗೌಲ್ (De Gaulle) ಕೈಯಲ್ಲಿ ಕತ್ತರಿ ಹಿಡಿದುಕೊಂಡು ಎರಡು ಹಡಗುಗಳನ್ನು ಬಂಧಿಸಿರುವ ಹಗ್ಗವನ್ನು ಕತ್ತರಿಸುತ್ತಾ, "ಇಂದು ಆಗಸ್ಟ್ ೭, ೧೯೬೦. ನಾನು ನಿಮಗೆ ಸ್ವಾತಂತ್ರ್ಯವನ್ನು ಘೋಷಿಸುತ್ತಿದ್ದೇನೆ" ಎಂದು ಹೇಳುತ್ತಿದ್ದಾನೆ. ಐವರಿ ಕೋಸ್ಟ್ ಹಡಗಿನಲ್ಲಿದ್ದ ಜನ ಸಂತೋಷದಿಂದ ಕೂಗುತ್ತಿದ್ದಾರೆ. ಆದರೆ ನೀರಿನ ಒಳಗೆ ಎರಡು ಹಡಗುಗಳನ್ನು ಇನ್ನೂ ಬಂದಿಸಿರುವ ಇನ್ನೊಂದು ಹಗ್ಗವನ್ನು ಯಾರೂ ಗಮನಿಸುತ್ತಿಲ್ಲ. ಆ ಹಗ್ಗದ ಮೇಲೆ 'ಸಿಎಫ್‌ಎ ಫ್ರಾಂಕ್' (CFA Franc) ಎಂದು ಬರೆದಿದೆ. ಇದು ಕೇವಲ ಕಲಾವಿದನ ಕಲ್ಪನೆಯಲ್ಲ. ವಸಾಹತುಶಾಹಿ ಕಾಲದಲ್ಲಿ ಪ್ರಾರಂಭವಾದ ಸಂಕೋಲೆ ಇಂದಿಗೂ ಮುಂದುವರಿದಿದೆ.

ಸಿಎಫ್‌ಎ ಫ್ರಾಂಕ್ (CFA Franc)

ಸಿಎಫ್‌ಎ ಫ್ರಾಂಕ್ ಫ್ರಾನ್ಸಿನ ನಿಯಂತ್ರಣದಲ್ಲಿರುವ ಆಫ್ರಿಕಾದ ವಸಾಹತುಗಳಲ್ಲಿ ಚಾಲ್ತಿಯಲ್ಲಿರುವ ಕರೆನ್ಸಿ. ಅದು ಸೃಷ್ಟಿಯಾಗಿದ್ದು ೧೯೪೫ರಲ್ಲಿ. ಅದು ಕೇವಲ ಐವರಿ ಕೋಸ್ಟನ್ನು ಮಾತ್ರ ನಿಯಂತ್ರಿಸುತ್ತಿಲ್ಲ; ೧೫ ಆಫ್ರಿಕಾದ ದೇಶಗಳನ್ನು ಸಿಎಫ್‌ಎ ಬಳಸಿಕೊಂಡು ಫ್ರಾನ್ಸ್ ಆಳುತ್ತಿದೆ. ಅದರಲ್ಲಿ ೧೪ ದೇಶಗಳನ್ನು ಎರಡು ಹಣಕಾಸು ವಲಯಗಳನ್ನಾಗಿ ವಿಭಜಿಸಲಾಗಿದೆ. ಸಿಎಫ್‌ಎ ಬಳಸುತ್ತಿರುವ ಇನ್ನೊಂದು ದೇಶ ಕೊಮೊರೊಸ್.

೧. ಮೊದಲನೆಯದು ಪಶ್ಚಿಮ ಆಫ್ರಿಕಾದ ಆರ್ಥಿಕ ಹಾಗೂ




ಹಣಕಾಸು ಸಂಘಟನೆ (UEMOA/WAEMU): ಇದರಲ್ಲಿ ಬೆನಿನ್, ಬುರ್ಕಿನಾ ಫಾಸೊ, ಐವರಿಕೋಸ್ಟ್, ಗಿನಿ–ಬಿಸಾವು, ಮಾಲಿ, ನೈಜರ್, ಸೆನೆಗಲ್ ಮತ್ತು ಟೋಗೊ ಸೇರಿವೆ.

೨. ಇನ್ನೊಂದು ಕೇಂದ್ರ ಆಫ್ರಿಕಾದ ಆರ್ಥಿಕ ಹಾಗೂ ಹಣಕಾಸು ಸಮುದಾಯ (CEMAC): ಇದರಲ್ಲಿ ಕ್ಯಾಮರೂನ್, ಗಬಾನ್, ಚಾಡ್, ಇಕ್ವೆಟೋರಿಯಲ್ ಗಿನಿ, ಕೇಂದ್ರ ಆಫ್ರಿಕಾ ಗಣರಾಜ್ಯ ಮತ್ತು ಕಾಂಗೋ ಗಣರಾಜ್ಯಗಳು ಸೇರಿವೆ.

ಈ ಎರಡು ಹಣಕಾಸು ಸಂಘಟನೆಗೂ ಅದರದ್ದೇ ಆದ ಕೇಂದ್ರ ಬ್ಯಾಂಕುಗಳು ಇವೆ. ಎರಡೂ ವಲಯಗಳು ಬೇರೆ ಬೇರೆ ಸಿಎಫ್‌ಎ ಫ್ರಾಂಕನ್ನು ಬಳಸುತ್ತವೆ. ಆದರೆ ಎರಡನ್ನೂ ಸಿಎಫ್‌ಎ ಫ್ರಾಂಕ್ ಅಂತಲೇ ಕರೆಯುತ್ತಾರೆ. ೧. ಫೈನಾನ್ಸಿಯಲ್ ಕೋ–ಆಪರೇಷನ್ ಇನ್ ಸೆಂಟ್ರಲ್ ಆಫ್ರಿಕಾ. ೨. ಆಫ್ರಿಕನ್ ಫೈನಾನ್ಸಿಯಲ್ ಕಮ್ಯೂನಿಟಿ. ಇವೆರಡೂ ಯೂರೋ (Euro) ಕರೆನ್ಸಿಯ ಜೊತೆಯಲ್ಲಿ ತಳಕು ಹಾಕಿಕೊಂಡಿವೆ. ಯೂರೋ ಮೂಲಕವೇ ಎರಡನ್ನೂ ಪರಸ್ಪರ ಬದಲಿಸಿಕೊಳ್ಳಬೇಕು. ೩. ಫ್ರಾಂಕ್ ಬಳಸುತ್ತಿದ್ದ ಮತ್ತೊಂದು ದೇಶ ಕೊಮೊರೊಸ್. ಅದೂ ಕೂಡ ಫ್ರಾನ್ಸಿನ ಯೂರೋ ಜೊತೆಗೆ ಜೋಡಿಸಲ್ಪಟ್ಟಿದೆ.

ಈ ೧೫ ದೇಶಗಳನ್ನು 'ಫ್ರಾಂಕ್ ವಲಯ' ಎಂದು ಕರೆಯಲಾಗುತ್ತದೆ. ಇಡೀ ಫ್ರಾಂಕ್ ವಲಯದಲ್ಲಿ ಒಂದೇ ಹಣಕಾಸು ನೀತಿ ಕೆಲಸ ಮಾಡುತ್ತದೆ. ಒಟ್ಟು ೧೬೨ ಮಿಲಿಯನ್ ಜನ ಸಿಎಫ್‌ಎ ಫ್ರಾಂಕ್ ಬಳಸುತ್ತಾರೆ.

ಆದರೆ ಇಂದಿಗೂ ಸಿಎಫ್‌ಎ ಫ್ರಾಂಕಿನ ಚರಿತ್ರೆಯಾಗಲಿ, ಅದರ ಕಾರ್ಯವಿಧಾನವಾಗಲಿ, ಅದರ ಪರಿಣಾಮವಾಗಲಿ ಅದನ್ನು ಬಳಸುತ್ತಿರುವ ಬಹುತೇಕರಿಗೆ ಗೊತ್ತಿಲ್ಲ. ಅಷ್ಟೇ ಅಲ್ಲ, ಅದನ್ನು ಆಫ್ರಿಕಾದ ದೇಶಗಳನ್ನು ನಿಯಂತ್ರಿಸಲು ಅಸ್ತವನ್ನಾಗಿಸಿಕೊಂಡಿರುವ ಫ್ರಾನ್ಸಿನ ಜನರಿಗೂ ಗೊತ್ತಿಲ್ಲ. ಈ ಬಗ್ಗೆ ಚರ್ಚೆಯಾಗುತ್ತಿರುವುದು ಕಡಿಮೆ. ಇತ್ತೀಚೆಗೆ ಹಲವು ಆಫ್ರಿಕಾದ ಅರ್ಥಶಾಸ್ತ್ರಜ್ಞರು ಈ ಬಗ್ಗೆ ವಿಶ್ಲೇಷಿಸುತ್ತಿದ್ದಾರೆ. ಆದರೆ ಅದು ಅಷ್ಟಾಗಿ ವಿದ್ವಾಂಸರ ಗಮನ ಸೆಳೆದಿಲ್ಲ. ಅದನ್ನು ಜನರ ಗಮನಕ್ಕೆ ಬಾರದಂತೆ ನೋಡಿಕೊಳ್ಳಲಾಗುತ್ತಿದೆ ಅನ್ನುವ ಟೀಕೆಯೂ ಸುಳ್ಳಲ್ಲ. ಅದರ ಹಿಂದಿನ ರಾಜಕೀಯ, ನೀರಿನಲ್ಲಿ ಮರೆಯಾಗಿರುವ ವ್ಯಂಗ್ಯಚಿತ್ರದಲ್ಲಿನ ಹಗ್ಗದಂತೆ ನಿಗೂಢವಾಗಿಯೇ ಇದೆ. ಫ್ರಾನ್ಸ್ ಮಾತ್ರ ಸಿಎಫ್‌ಎಯನ್ನು ಆಫ್ರಿಕಾದ ಹಿತರಕ್ಷಣೆಗೆ ಇರುವ ಆಫ್ರಿಕಾದ ಸ್ವತಂತ್ರ ಕರೆನ್ಸಿ ಎಂದು ಚಿತ್ರಿಸುವ ಪ್ರಯತ್ನ ಮಾಡಿಕೊಂಡೇ ಬಂದಿದೆ. ಜೊತೆಗೆ ತಾವು



ಆಫ್ರಿಕನ್ನರ ರಕ್ಷಣೆಗಾಗಿ ಶ್ರಮಿಸುತ್ತಿದ್ದೇವೆ, ತಮ್ಮಿಂದಾಗಿಯೇ ಆಫ್ರಿಕಾಕ್ಕೆ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿದೆ ಎಂದು ಜನರನ್ನು ನಂಬಿಸುವ ಕೆಲಸ ನಡೆಯುತ್ತಲೇ ಇದೆ.

ಆದರೆ ಎಲ್ಲಾ ಕಾರುಬಾರುಗಳು ನಡೆಯುತ್ತಿರುವುದು ಫ್ರಾನ್ಸಿನಲ್ಲಿ. ಇಂದಿಗೂ ಸಿಎಫ್‌ಎ ಫ್ರಾಂಕುಗಳ ಮುದ್ರಣ ನಡೆಯುತ್ತಿರುವುದು ಫ್ರಾನ್ಸಿನಲ್ಲಿ. ಸಿಎಫ್‌ಎ ಫ್ರಾಂಕಿಗೆ ಸಂಬಂಧಿಸಿದ ನಿರ್ಧಾರಗಳೆಲ್ಲಾ ಆಗುತ್ತಿರುವುದು ಪ್ಯಾರಿಸಿನಲ್ಲಿ. ಅವೆಲ್ಲಾ ನಡೆಯುವುದು ಫ್ರೆಂಚ್ ಟ್ರೆಷರಿಯ (Treasury) ಮೇಲ್ವಿಚಾರಣೆಯಲ್ಲಿ. ಫ್ರಾಂಕಿನ ವಿನಿಮಯ ದರ ನಿರ್ಧರಿಸುವುದು ಅವರು. ಫ್ರಾಂಕನ್ನು ಕೊಳ್ಳುವ ಅಥವಾ ಮಾರುವ ವ್ಯವಹಾರ ನಡೆಯುವುದು ಫ್ರೆಂಚ್ ಟ್ರೆಷರಿಯ ಮೂಲಕ. ಬಹುಶಃ ಬೇರೆ ದೇಶದ ಕರೆನ್ಸಿಯನ್ನು ನಿರ್ಧರಿಸುತ್ತಿರುವ ಜಗತ್ತಿನಲ್ಲೇ ಏಕೈಕ ದೇಶ ಅಂದರೆ ಫ್ರಾನ್ಸ್ ಇರಬೇಕು.

೧೯೫೦ರಲ್ಲಿ ೫೦೦೦ ಸಿಎಫ್‌ಎ ಫ್ರಾಂಕ್ ಮೇಲೆ ಆಫ್ರಿಕನ್ನರ ಚಿತ್ರ ಕಾಣಿಸಿಕೊಂಡಿದೆ. ಆಫ್ರಿಕೀಕರಣಗೊಂಡಿರುವುದು ಕೇವಲ ವಿನ್ಯಾಸ ಮಾತ್ರ. ಇಂದಿಗೂ ಅದರ ಹಿಂದಿನ ಎಲ್ಲಾ ನಿಯಂತ್ರಣಗಳು ಫ್ರಾನ್ಸಿನ ಕೈಯಲ್ಲೇ ಇದೆ. ಫ್ರಾನ್ಸ್‌ಗೆ ಸಿಎಫ್‌ಎ ಕೇವಲ ಒಂದು ಕರೆನ್ಸಿಯಲ್ಲ. ಅದಕ್ಕೆ ತನ್ನ ವಸಾಹತುಗಳು ತನ್ನ ಆರ್ಥಿಕ, ಹಣಕಾಸು ಹಾಗೂ ರಾಜಕೀಯ ಹಿತಾಸಕ್ತಿಗೆ ಪೂರಕವಾಗಿ ನಡೆದುಕೊಳ್ಳುವಂತೆ ಮಾಡುವುದಕ್ಕೆ ಬೇಕಾದ ಒಂದು ಸಾಧನವಾಗಿದೆ. ಅಷ್ಟೇ ಅಲ್ಲ, ವಸಾಹತುಗಳು ಸ್ವತಂತ್ರಗೊಂಡ ಮೇಲೂ ತನ್ನ ಅಧಿಪತ್ಯ ನಡೆಯುವಂತೆ ನೋಡಿಕೊಳ್ಳುವುದಕ್ಕೆ 'ಫ್ರಾನ್ಸಾಫ್ರಿಕ್' (Françafrique) ಅನ್ನುವುದು ಸೊಗಸಾದ ವ್ಯವಸ್ಥೆಯಾಗಿದೆ. ಹಾಗಾಗಿ ಸಿಎಫ್‌ಎ ಫ್ರಾಂಕಿನ ಚರಿತ್ರೆ ಅಂದರೆ ತನ್ನ ವಸಾಹತುಶಾಹಿ ಅಧಿಪತ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಫ್ರಾನ್ಸ್ ನಿರಂತರ ಮಾಡುತ್ತಿರುವ ಪ್ರಯತ್ನದ ಕಥನವೂ ಹೌದು.

ವಸಾಹತುಶಾಹಿಗಳ ಸೇವೆಯಲ್ಲಿ ಫ್ರಾಂಕ್

"ಯಾರು ಬೇಕಾದರು ಹಣವನ್ನು ಸೃಷ್ಟಿಸಿಬಿಡಬಹುದು. ಸಮಸ್ಯೆ ಇರುವುದು ಎಲ್ಲರೂ ಅದನ್ನು ಒಪ್ಪಿಕೊಳ್ಳುವಂತೆ ಮಾಡುವುದು". ಇದು ಅಮೆರಿಕದ ಅರ್ಥಶಾಸ್ತ್ರಜ್ಞ ಹೈಮನ್ ಮಿನ್ಸ್ಕಿಯವರ ಮಾತು. ಎಲ್ಲಾ ವಸಾಹತುಶಾಹಿ ದೇಶಗಳು ಮಾಡುವಂತೆ ಫ್ರಾನ್ಸ್ ಕೂಡ ತನ್ನ ವಸಾಹತುಗಳ ಮೇಲೆ ಕರೆನ್ಸಿಯನ್ನು ಹೇರಿತ್ತು. ಆದರೆ ಫ್ರಾನ್ಸಿನ ಹೆಚ್ಚುಗಾರಿಕೆ ಅಂದರೆ ವಸಾಹತುಗಳು ಸ್ವತಂತ್ರಗೊಂಡ ಮೇಲೂ ಅಲ್ಲಿ ಸಿಎಫ್‌ಎ ಫ್ರಾಂಕ್ ಮುಂದುವರಿಯುವಂತೆ ನೋಡಿಕೊಂಡಿತು. ಜೊತೆಗೆ ಅದನ್ನು ಆಧರಿಸಿ ರೂಪುಗೊಂಡಿದ್ದ ಹಣಕಾಸು ಸಾಮ್ರಾಜ್ಯವೂ ವಸಾಹತುಗಳಲ್ಲಿ ಹಾಗೆ ಮುಂದುವರಿಯಿತು.

ಆಫ್ರಿಕಾವನ್ನು ಫ್ರಾನ್ಸ್ ಆಕ್ರಮಿಸಿಕೊಳ್ಳುವ ಮೊದಲು ಅಲ್ಲಿ ಬಗೆಬಗೆಯ ವಸ್ತುಗಳು ಕರೆನ್ಸಿಗಳಾಗಿದ್ದವು. ರಬ್ಬರ್ ಚೆಂಡುಗಳು, ಕಬ್ಬಿನ ಮತ್ತು ತಾಮ್ರದ ತುಂಡುಗಳು, ಗಾಜಿನ ಮಣಿ, ಕವಡೆ, ಪಿಂಗಾಣಿ ಹೀಗೆ ಹಲವು ವಸ್ತುಗಳನ್ನು ಕರೆನ್ಸಿಯಾಗಿ ಬಳಸುತ್ತಿದ್ದರು. ಇವೆಲ್ಲಾ ಕೇವಲ ವಿನಿಮಯದ ಮಾಧ್ಯಮಗಳಾಗಿರಲಿಲ್ಲ; ಸಮುದಾಯಗಳ ನಡುವೆ ಸಂಬಂಧವನ್ನು ಬೆಸೆಯುವ ಸಾಧನವೂ ಆಗಿದ್ದವು. ಹಾಗಾಗಿಯೇ ಈ ಕರೆನ್ಸಿಗಳ ಉಸ್ತುವಾರಿಯ ಕೆಲಸವನ್ನು ಗ್ರಾಮದ ಮುಖ್ಯಸ್ಥರಿಗೆ ವಹಿಸಿದ್ದರು. ನೈಜೀರಿಯಾದಲ್ಲಿ ಕವಡೆಯನ್ನು ನಾಣ್ಯವಾಗಿ ಬಳಸಲಾಗಿತ್ತು. ಅದನ್ನು ಬಳಸುವ ಪ್ರದೇಶಗಳನ್ನು 'ಕ್ವಾರಿ ಜೋನ್' (Cowrie Zone – ಕವಡೆ ವಲಯ) ಅಂತಲೇ ಕರೆಯಲಾಗುತ್ತಿತ್ತು. ೧೮ನೇ ಶತಮಾನದ ಮೊದಲ ಭಾಗದಲ್ಲಿ ಕವಡೆಯನ್ನು ಫ್ರಾನ್ಸಿನ ಕರೆನ್ಸಿಯೊಂದಿಗೆ ವಿನಿಮಯ ಮಾಡಿಕೊಳ್ಳಬಹುದಿತ್ತು. ೧೯೪೫ರಲ್ಲಿ ಫ್ರಾಂಕ್ ಫ್ರಾನ್ಸಿನ ಕರೆನ್ಸಿಯಾಗುವವರೆಗೆ ಈ ವ್ಯವಸ್ಥೆ ಮುಂದುವರೆದಿತ್ತು.

ಕ್ರಮೇಣ ಕವಡೆಯ ಪ್ರಾಮುಖ್ಯತೆ ಕಡಿಮೆಯಾಗುತ್ತಾ ಹೋಯಿತು. ಐರೋಪ್ಯರಿಗೆ ಹಣದ ಉದ್ದೇಶ ಬದಲಾಯಿತು. ಅವರಿಗೆ ವಸಾಹತುಗಳಿಂದ ಸಂಪತ್ತನ್ನು ಸಾಗಿಸಬೇಕಿತ್ತು. ವಸಾಹತುಗಳ ಉತ್ಪಾದನಾ ಹಾಗೂ ವಿನಿಮಯ ವ್ಯವಸ್ಥೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕಿತ್ತು. ಅದು ಸಾಧ್ಯವಾಗಬೇಕಾದರೆ ಅಲ್ಲಿಯ ಕರೆನ್ಸಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕಿತ್ತು. ಆದರೆ ಅದಕ್ಕೆ ಜನ ವಿರೋಧಿಸುತ್ತಿದ್ದರು. ವಿರೋಧವನ್ನು ಹತ್ತಿಕ್ಕುವುದಕ್ಕೆ ಶಕ್ತಿ, ಹಿಂಸೆ, ಕಾನೂನು ಎಲ್ಲವನ್ನು ಬಳಸಿಕೊಂಡರು. ಅವರ ಸಾಮ್ರಾಜ್ಯ ವಿಸ್ತಾರಗೊಳ್ಳುತ್ತಾ ಹೋದಂತೆ ಅವರ ಕರೆನ್ಸಿಯ ಚಲಾವಣೆಯ ವ್ಯಾಪ್ತಿಯೂ ವಿಸ್ತಾರವಾಗುತ್ತಾ ಹೋಯಿತು.

೧೯ನೇ ಶತಮಾನದ ಕೊನೆಯಲ್ಲಿ ಚಾಡ್ ಇತ್ಯಾದಿ ದೇಶಗಳಲ್ಲಿ ಸೈನಿಕರನ್ನು ಕಳುಹಿಸಿ ಸಂತೆಗಳನ್ನು ಸಂಘಟಿಸಿ ತಮ್ಮ ಕರೆನ್ಸಿಯನ್ನು ಚಲಾವಣೆಗೆ ತರಲು ಪ್ರಯತ್ನಿಸಿದರು. ಎಲ್ಲರೂ ಫ್ರಾಂಕನ್ನೇ ಬಳಸಬೇಕೆಂಬ ಒತ್ತಾಯ ಪ್ರಾರಂಭವಾಯಿತು. ಸ್ಥಳೀಯ ಕರೆನ್ಸಿಗಳಾದ ಕವಡೆ ಇತ್ಯಾದಿಗಳು ರದ್ದಾದವು. ಫ್ರಾಂಕ್ ಬಳಸದವರಿಗೆ ದಂಡ ವಿಧಿಸಲಾಯಿತು. ಕೊನೆಗೂ ವಸಾಹತುಗಳು ಫ್ರಾಂಕನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಫ್ರಾಂಕನ್ನು ಚಲಾವಣೆಗೆ ತರುವಲ್ಲಿ ಬ್ಯಾಂಕುಗಳದ್ದೂ ದೊಡ್ಡ ಪಾತ್ರವಿದೆ. ಸೆನೆಗಾಲ್‌ನಲ್ಲಿ ಇವರ ಮೊದಲ 'ಬ್ಯಾಂಕ್ ಆಫ್ ಸೆನೆಗಲ್' ಪ್ರಾರಂಭವಾಯಿತು. ೧೮೪೮ರಲ್ಲಿ ಗುಲಾಮಗಿರಿ ರದ್ದಾಯಿತು. ಗುಲಾಮರಿಗೆ ಸ್ವಾತಂತ್ರ್ಯ ನೀಡಿದ್ದಕ್ಕೆ ಗುಲಾಮರ ಒಡೆಯರಿಗೆ 'ಪರಿಹಾರ'ವನ್ನು ಆಫ್ರಿಕಾದ ಸರ್ಕಾರಗಳು ಕೊಡಬೇಕಿತ್ತು. ಆ ಸರ್ಕಾರಗಳಿಗೆ ಈ ಬ್ಯಾಂಕುಗಳು ಸಾಲದ ರೂಪದಲ್ಲಿ ಹಣ ನೀಡುತ್ತಿದ್ದವು. ಈ ಸಾಲವನ್ನು ನೂರಾರು ವರ್ಷ ತೀರಿಸುವುದರಲ್ಲೆ ಹೈಟಿಯಂತಹ ದೇಶಗಳು ದಿವಾಳಿಯಾಗಿವೆ.

ಫ್ರಾನ್ಸ್ ತನ್ನ "ವ್ಯಾಪಾರಿ ಆರ್ಥಿಕತೆ"ಯ ಭಾಗವಾಗಿ ವಸಾಹತುಗಳ ಜೊತೆಗೆ "ವಸಾಹತು ಒಪ್ಪಂದ"ವನ್ನು ಮಾಡಿಕೊಂಡಿತ್ತು. ಅದರ ಪ್ರಕಾರ ವಸಾಹತುಗಳು ಕೈಗಾರಿಕೆಗಳನ್ನು ಸ್ಥಾಪಿಸುವಂತಿರಲಿಲ್ಲ. ಫ್ರಾನ್ಸಿಗೆ ಕಚ್ಚಾಮಾಲನ್ನು ಒದಗಿಸುವುದರಲ್ಲೇ ತೃಪ್ತರಾಗಬೇಕಿತ್ತು.



ಫ್ರಾನ್ಸ್ ಅದನ್ನು ಸಂಸ್ಕರಿಸಿ ಸಿದ್ಧ ವಸ್ತುಗಳನ್ನು ವಸಾಹತುಗಳಿಗೆ ಹೆಚ್ಚಿನ ಬೆಲೆಗೆ ಮಾರುತ್ತಿತ್ತು. ರಫ್ತು, ಆಮದು, ಸಾರಿಗೆ ವ್ಯವಸ್ಥೆ ಎಲ್ಲವೂ ಫ್ರಾನ್ಸಿನ ಏಕಸ್ವಾಮ್ಯವಾಗಿತ್ತು. ವಸಾಹತುಗಳು ಫ್ರಾನ್ಸಿನ ಅವಶ್ಯಕತೆಗೆ ಹೊಂದಿಕೊಂಡು ಹೋಗಬೇಕಿತ್ತು.

ಇಂಗ್ಲೆಂಡ್ ತನ್ನ ವಸಾಹತುಗಳಲ್ಲಿ ಮಾಡಿದ್ದನ್ನೇ ಫ್ರಾನ್ಸ್ ತನ್ನ ವಸಾಹತುಗಳಲ್ಲಿ ಮಾಡುತ್ತಿತ್ತು. ಇಂಗ್ಲೆಂಡ್ ತನ್ನ ವಸಾಹತುಗಳನ್ನು ಸ್ಟರ್ಲಿಂಗ್ ವಲಯವನ್ನಾಗಿ ಮಾಡಿದ ರೀತಿಯಲ್ಲಿ, ಫ್ರಾನ್ಸ್ ಕೂಡ ತನ್ನ ಕರೆನ್ಸಿಯನ್ನು ಕಾಪಾಡಿಕೊಳ್ಳುವುದಕ್ಕೆ ತನ್ನ ವಸಾಹತುಗಳಲ್ಲಿ ಫ್ರಾಂಕ್ ಬಳಕೆಗೆ ತಂದು ಅವನ್ನು ಫ್ರಾಂಕ್ ವಲಯವನ್ನಾಗಿ ಮಾಡಿಕೊಂಡಿತು. ಆದರೆ ಫ್ರಾನ್ಸಿನ ವಸಾಹತುಗಳು ಪುಟ್ಟದಾಗಿದ್ದವು, ಅಂತಹ ಶ್ರೀಮಂತ ದೇಶಗಳೂ ಆಗಿರಲಿಲ್ಲ. ಬ್ರಿಟಿಷ್ ಪೌಂಡ್ ಸ್ಟರ್ಲಿಂಗಿಗೆ ಹೋಲಿಸಿದರೆ ಫ್ರಾನ್ಸಿನ ಫ್ರಾಂಕ್ ಪ್ರಮುಖ ಅಂತರರಾಷ್ಟ್ರೀಯ ಕರೆನ್ಸಿಯೂ ಆಗಿರಲಿಲ್ಲ. ಆದರೂ ಫ್ರಾನ್ಸ್ ಸ್ಟರ್ಲಿಂಗ್ ವಲಯದ ಮಾದರಿಯಲ್ಲೇ ಮುಂದುವರಿಯಿತು. ಕರೆನ್ಸಿ ಪೂರ್ಣ ಕೇಂದ್ರೀಕೃತವಾಗಿತ್ತು; ಪೂರ್ಣ ಫ್ರಾನ್ಸಿನ ನಿಯಂತ್ರಣದಲ್ಲಿತ್ತು. ವಸಾಹತುಗಳು ತಮ್ಮೆಲ್ಲಾ ವಿದೇಶಿ ವಿನಿಮಯದ ಮೀಸಲನ್ನು ಫ್ರಾನ್ಸಿನ ಟ್ರೆಷರಿಯಲ್ಲಿ ಇಡಬೇಕಿತ್ತು. ಇದರಿಂದಾಗಿ ವಸಾಹತುಗಳ ವಿದೇಶಿ ವ್ಯಾಪಾರದ ವ್ಯವಹಾರಗಳನ್ನು ನಿಯಂತ್ರಿಸುವುದು ಫ್ರಾನ್ಸಿಗೆ ಸಲೀಸಾಯಿತು. ಫ್ರಾನ್ಸಿನ ವಿದೇಶಿ ವಿನಿಮಯ ನೀತಿಗೆ ಎರಡು ಉದ್ದೇಶಗಳಿದ್ದವು:

೧. ಒಂದು, ವಸಾಹತುಗಳನ್ನು ಜಾಗತಿಕ ಮಾರುಕಟ್ಟೆಯಿಂದ ಪ್ರತ್ಯೇಕವಾಗಿಸುವುದು. ೨. ಎರಡನೆಯದಾಗಿ, ತನ್ನ ಸಾಮ್ರಾಜ್ಯದೊಳಗೆ ತನಗೆ ಅನುಕೂಲವಾಗುವ ರೀತಿಯ ವಾಣಿಜ್ಯ ಸಂಬಂಧವನ್ನು ಇಟ್ಟುಕೊಳ್ಳುವುದು. ತನ್ನ ಸಾಮ್ರಾಜ್ಯದ ವ್ಯಾಪಾರ ಹಾಗೂ ಕರೆನ್ಸಿ ವ್ಯವಸ್ಥೆ ಅದರ ನಿಯಂತ್ರಣದಲ್ಲೇ ಇದ್ದುದರಿಂದ ಫ್ರಾನ್ಸಿಗೆ ಇವೆರಡೂ ಸಾಧ್ಯವಾಗಿತ್ತು.

ಎರಡು ಜಾಗತಿಕ ಯುದ್ಧಗಳು ಜಗತ್ತಿನ ಹಲವು ದೇಶಗಳನ್ನು ಅಲ್ಲಾಡಿಸಿಬಿಟ್ಟಿದ್ದವು. ಫ್ರಾನ್ಸ್ ನಜ್ಜಿಗುಜ್ಜಿ ಆಗಿತ್ತು. ಬಜೆಟ್ ಕೊರತೆ ಹಾಗೂ ಹಣದುಬ್ಬರ ಅದನ್ನು ವಿಪರೀತವಾಗಿ ಕಾಡುತ್ತಿತ್ತು. ಹಣದುಬ್ಬರದ ದರ ಶೇಕಡ ೧೫೦ ಮುಟ್ಟಿತು. ಅಮೆರಿಕದಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಅದು ಶೇಕಡ ೩೦ರಷ್ಟು ಇತ್ತು. ವಿದೇಶಿ ಸಾಲ ನಿರ್ವಹಿಸುವುದು ಕಷ್ಟವಿತ್ತು. ವಿದೇಶಿ ವಿನಿಮಯ ಮೀಸಲು ಅದರ ಆಮದಿಗೆ ಸಾಲುತ್ತಿರಲಿಲ್ಲ. ಹಾಗಾಗಿ ಡಾಲರ್ ಹಾಗೂ ಪೌಂಡ್ ಎದುರು ಫ್ರಾಂಕಿನ ಅಪಮೌಲ್ಯ ಅನಿವಾರ್ಯವಾಗಿತ್ತು. ಬಹುತೇಕ ವಸಾಹತುಗಳಲ್ಲಿ ಫ್ರಾಂಕ್ ಬಳಕೆಯಲ್ಲಿತ್ತು. ಸಹಜವಾಗಿಯೇ ಫ್ರಾಂಕಿನ ಅಪಮೌಲ್ಯದ ಪರಿಣಾಮ ವಸಾಹತುಗಳ ಮೇಲೂ ಆಗುತ್ತಿತ್ತು.

ಆ ಸಮಯದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಲವು ಬದಲಾವಣೆಗಳಾದವು. ಹೊಸ ಅಂತರರಾಷ್ಟ್ರೀಯ ಹಣಕಾಸಿನ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ಐಎಂಎಫ್ (IMF) ಹಾಗೂ ಅಂತರರಾಷ್ಟ್ರೀಯ ಬ್ಯಾಂಕ್ ಫಾರ್ ರಿಕನ್‌ಸ್ಟ್ರಕ್ಷನ್ ಅಂಡ್ ಡೆವಲಪ್‌ಮೆಂಟ್ (ನಂತರದ ಜಾಗತಿಕ ಬ್ಯಾಂಕ್) ಸೃಷ್ಟಿಯಾಯಿತು. ಐರೋಪ್ಯ ರಾಷ್ಟ್ರಗಳು ಆರ್ಥಿಕವಾಗಿ ಕುಸಿದಿದ್ದವು. ಅದು ಅಮೆರಿಕದ ಅಧಿಪತ್ಯದ ಕಾಲ. ಎಲ್ಲಾ ದೇಶಗಳ ಕರೆನ್ಸಿಯ ಮೌಲ್ಯವನ್ನು ಡಾಲರಿಗೆ ಹೋಲಿಸಿ ನಿರ್ಧರಿಸಲಾಗುತ್ತಿತ್ತು. ಚಿನ್ನದ ಪ್ರಮಿತಿ ವ್ಯವಸ್ಥೆ ಹೋಗಿ ನಿರ್ದಿಷ್ಟ ವಿನಿಮಯ ದರದ (Fixed Exchange Rate) ವ್ಯವಸ್ಥೆ ಹುಟ್ಟಿಕೊಂಡ ಸಮಯ ಅದು. ಆಗ ಒಂದು ಡಾಲರಿಗೆ ೧೧೯.೧೦ ಫ್ರಾಂಕ್ ವಿನಿಮಯ ದರ ಇತ್ತು. ಫ್ರಾನ್ಸ್ ಒಂದು ಸಿಎಫ್‌ಎ ಫ್ರಾಂಕ್‌ಗೆ ೧.೭೦ ಫ್ರೆಂಚ್ ಫ್ರಾಂಕ್ಸ್ ಅಂತ ಗೊತ್ತು ಮಾಡಿತು. ಸಿಎಫ್‌ಎ ಫ್ರಾಂಕನ್ನು ಜಾರಿಗೆ ತರುವುದಕ್ಕಾಗಲಿ, ಅದರ ವಿನಿಮಯ ದರವನ್ನು ನಿರ್ಧರಿಸುವುದಕ್ಕಾಗಲಿ ವಸಾಹತುಗಳ ವಿಭಿನ್ನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಎರಡೂ ಫ್ರಾಂಕ್ ವಲಯದ ಪರಿಸ್ಥಿತಿ ಭಿನ್ನವಾಗಿದ್ದರೂ ಒಂದೇ ವಿನಿಮಯ ದರವನ್ನು ನಿರ್ಧರಿಸಲಾಗಿತ್ತು. ಅಷ್ಟೇ ಅಲ್ಲ, ಫ್ರಾಂಕಿಗಿಂತ ಹೆಚ್ಚಿನ ಮೌಲ್ಯವನ್ನು ಗೊತ್ತು ಮಾಡಿದ್ದರು. ಅದು ಅಲ್ಲಿಯ ಆರ್ಥಿಕ ಸಾಮರ್ಥ್ಯಕ್ಕೆ ಹೊಂದಿಕೆಯಾಗುತ್ತಿರಲಿಲ್ಲ. ಆದರೆ ಬ್ರಿಟಿಷರು ತಮ್ಮ ವಸಾಹತುಗಳಲ್ಲಿನ ಕರೆನ್ಸಿಗಳಿಗೆ ಬ್ರಿಟಿಷ್ ಪೌಂಡಿನ ಅರ್ಧದಷ್ಟು ಮೌಲ್ಯ ಗೊತ್ತು ಮಾಡಿದ್ದರು. ಅದು ಅಲ್ಲಿಯ ಜೀವನಮಟ್ಟಕ್ಕೆ ತಕ್ಕಂತೆ ಇತ್ತು.

ಆದರೆ ಫ್ರಾನ್ಸಿನ ಉದ್ದೇಶವೇ ಬೇರೆ. ಅದಕ್ಕೆ ತನ್ನ ಅಧಿಪತ್ಯವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಫ್ರಾಂಕ್ ಸಾಧನವಾಗಿತ್ತು. ವಸಾಹತುಗಳ ಕರೆನ್ಸಿಯ ಮೌಲ್ಯ ಹೆಚ್ಚಿಸಿದ್ದರಿಂದ ಫ್ರಾನ್ಸಿನ ವಸ್ತುಗಳ ಬೆಲೆ ಸಾಪೇಕ್ಷವಾಗಿ ಕಮ್ಮಿಯಾಯಿತು. ಅದರಿಂದ ವಸಾಹತುಗಳಿಗೆ ಫ್ರಾನ್ಸ್ ಇಂದ ಆಮದು ಮಾಡಿಕೊಳ್ಳುವುದೇ ಅಗ್ಗವಾಗುತ್ತಿತ್ತು. ಅಷ್ಟೇ ಅಲ್ಲ, ಸಿಎಫ್‌ಎ ಫ್ರಾಂಕ್ ಮೌಲ್ಯ ಹೆಚ್ಚಿದ್ದರಿಂದ ವಸಾಹತುಗಳ ಸರಕು ದುಬಾರಿಯಾಗುತ್ತಿದ್ದವು. ಅವರ ಸ್ಪರ್ಧಿಗಳಾದ ಏಷ್ಯಾ ಹಾಗೂ ಲ್ಯಾಟಿನ್ ಅಮೆರಿಕಾಗಳಲ್ಲಿ ಸರಕುಗಳು ಇಲ್ಲಿಗಿಂತ ಹೆಚ್ಚು ಅಗ್ಗವಾದವು. ಅವುಗಳೊಂದಿಗೆ ಸ್ಪರ್ಧಿಸುವುದು ಈ ವಸಾಹತುಗಳಿಗೆ

ಕಷ್ಟವಾಯಿತು. ಅದರಿಂದಾಗಿ ಇವು ತಮ್ಮ ಸರಕುಗಳ ಮಾರುಕಟ್ಟೆಗೆ ಫ್ರಾನ್ಸನ್ನೇ ಅವಲಂಬಿಸಬೇಕಾಯಿತು. ರಫ್ತು ಹಾಗೂ ಆಮದು ಎರಡು ದೃಷ್ಟಿಯಿಂದ ಅನುಕೂಲವಾಗಿದ್ದು ಫ್ರಾನ್ಸಿಗೆ. ಜೊತೆಗೆ ಎಲ್ಲಾ ವ್ಯವಹಾರಗಳು ಫ್ರಾಂಕ್ ವಲಯದಲ್ಲೇ ನಡೆಯುತ್ತಿದ್ದುದರಿಂದ ಫ್ರಾನ್ಸಿಗೆ ತನ್ನ ವಿದೇಶಿ ವಿನಿಮಯದ ಮೀಸಲನ್ನು ಬಳಸಿಕೊಳ್ಳುವ ಅವಶ್ಯಕತೆಯೇ ಇರಲಿಲ್ಲ. ಬೇರೆ ದೇಶಗಳು ಈ ದೇಶಗಳೊಂದಿಗೆ ವ್ಯವಹಾರಿಸಬೇಕಾದರೆ ವಿದೇಶಿ ವಿನಿಮಯ ಬಳಸಬೇಕಾಗುತ್ತದೆ. ಉದಾಹರಣೆಗೆ ಜಪಾನ್ ಇಲ್ಲಿಂದ ಹತ್ತಿ ಕೊಳ್ಳಬೇಕಾದರೆ ಡಾಲರಿನಲ್ಲಿ ಪಾವತಿ ಮಾಡಬೇಕು. ಯೆನ್ ಬಳಸುವುದಕ್ಕೆ ಸಾಧ್ಯವಿರಲಿಲ್ಲ. ಆದರೆ ಫ್ರಾನ್ಸ್ ತನ್ನ ಕರೆನ್ಸಿಯಲ್ಲಿ ವ್ಯವಹಾರ ಮಾಡುತ್ತದೆ. ಇದಕ್ಕಾಗಿಯೇ 'ಆಪರೇಷನ್ ಅಕೌಂಟ್' (Operation Account) ಎಂಬ ವ್ಯವಸ್ಥೆಯನ್ನು ರೂಪಿಸಿತ್ತು. ಆ ಖಾತೆಯ ಮೂಲಕವೇ ವಸಾಹತುಗಳ ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಆಫ್ರಿಕನ್ ದೇಶಗಳು ಬೇರೆ ದೇಶಗಳೊಂದಿಗೆ ಹೆಚ್ಚು ವ್ಯಾಪಾರ ಮಾಡಿದರೆ ಫ್ರಾನ್ಸಿಗೆ ಹೆಚ್ಚಿನ ವಿದೇಶೀ ಕರೆನ್ಸಿ ಸಿಗುತ್ತಿತ್ತು. ಇದನ್ನು ಅರ್ಥಶಾಸ್ತ್ರಜ್ಞ ಪೌವೋಮಿ "ಡ್ರೈನೇಜ್ ಬೈ ಅಕೌಂಟಿಂಗ್" ಎಂದು ಕರೆದಿದ್ದ.

ವಸಾಹತುಗಳಿಗೆ ತಮ್ಮ ವಿದೇಶಿ ವಿನಿಮಯದ ಮೀಸಲು ಮಾತ್ರವಲ್ಲ, ತಮ್ಮ ಕರೆನ್ಸಿಯ ಮೇಲೂ ನಿಯಂತ್ರಣವಿರಲಿಲ್ಲ. ಅದರ ವಿನಿಮಯ ದರವನ್ನೂ ಫ್ರಾನ್ಸ್ ಏಕಪಕ್ಷೀಯವಾಗಿ ತನ್ನ ಅವಶ್ಯಕತೆಗೆ ತಕ್ಕಂತೆ ನಿರ್ಧರಿಸುತ್ತಿತ್ತು. ಇವುಗಳ ಕೇಂದ್ರ ಬ್ಯಾಂಕುಗಳ ಕೇಂದ್ರ ಕಛೇರಿಯೂ ಪ್ಯಾರಿಸಿನಲ್ಲಿತ್ತು. ಅದನ್ನು ಫ್ರಾನ್ಸಿನ ಟ್ರೆಷರಿ ನಿಯಂತ್ರಿಸುತ್ತಿತ್ತು. ಸಹಜವಾಗಿಯೇ ಫ್ರಾಂಕ್ ಆರ್ಥಿಕತೆಯ ಅಸ್ಥಿರತೆ ವಸಾಹತುಗಳನ್ನೂ ಬಾಧಿಸುತ್ತಿತ್ತು. ವಿನಿಮಯದ ಮೀಸಲಿನಲ್ಲಿ ಕೊರತೆಯಾದೊಡನೆ ವಸಾಹತುಗಳು ತಮ್ಮ ಅವಶ್ಯಕತೆಗಿಂತ ಹೆಚ್ಚು ಉತ್ಪಾದಿಸಿ, ಅಗ್ಗದ ದರದಲ್ಲಿ ಫ್ರಾನ್ಸಿಗೆ ಒದಗಿಸಬೇಕಾಗುತ್ತಿತ್ತು.

ವಸಾಹತು ವಿರೋಧಿ ಚಳುವಳಿ

೧೯೫೦ರಲ್ಲಿ ಜಗತ್ತಿನ ಎಲ್ಲೆಡೆಯಲ್ಲೂ ವಸಾಹತುಶಾಹಿ ವಿರೋಧಿ ಚಳುವಳಿ ತೀವ್ರಗೊಳ್ಳುತ್ತಿತ್ತು. ೧೯೬೦ರಲ್ಲಿ ಆಫ್ರಿಕಾದ ನಿರ್ವಸಾಹತೀಕರಣ ಪ್ರಕ್ರಿಯೆ ಪ್ರಾರಂಭವಾಯಿತು. ಬ್ರಿಟನ್, ಬೆಲ್ಜಿಯಂ, ಸ್ಪೇನ್ ಹಾಗೂ ಪೋರ್ಚುಗಲ್ ಕ್ರಮೇಣ ಶಿಥಿಲಗೊಳ್ಳತೊಡಗಿದವು. ಸ್ವಾತಂತ್ರ್ಯಗೊಂಡಂತೆ ಆಫ್ರಿಕನ್ ವಸಾಹತುಗಳು ತಮ್ಮದೇ ಆದ ರಾಷ್ಟ್ರೀಯ ಕರೆನ್ಸಿಯನ್ನು ಬಳಸತೊಡಗಿದವು. ಫ್ರಾನ್ಸಿಗೆ ತನ್ನ ವಸಾಹತುಗಳನ್ನು ಕಳೆದುಕೊಳ್ಳುವ ಆತಂಕ ಕಾಡುತ್ತಿತ್ತು. ವಸಾಹತುಗಳನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ದಾರಿಯನ್ನು ಹುಡುಕುತ್ತಲೇ ಇತ್ತು. ಪೂರ್ಣ ಸ್ವಾತಂತ್ರ್ಯವನ್ನು ಕೊಡುವುದಕ್ಕಿಂತ ಒಂದಿಷ್ಟು ರಿಯಾಯಿತಿಗಳನ್ನು ಕೊಟ್ಟು, ಬಂಧನವನ್ನು ಸಡಿಲಿಸಿ ಸಂಘರ್ಷವನ್ನು ಕಡಿಮೆ ಮಾಡಲು ಪ್ರಯತ್ನಿಸಿತು.

"ಇನ್ನು ಮುಂದೆ ಎಲ್ಲಾ ದೇಶಗಳು ಸ್ವತಂತ್ರವಾಗುತ್ತವೆ. ಆದರೆ ಅವುಗಳ ರಕ್ಷಣೆ, ಕರೆನ್ಸಿ, ಉನ್ನತ ಶಿಕ್ಷಣ, ವಿದೇಶಿ ವ್ಯವಹಾರ, ಆರ್ಥಿಕ ಹಾಗೂ ವಿತ್ತೀಯ ನೀತಿಗಳನ್ನು ಒಟ್ಟಾಗಿ ನಿರ್ಧರಿಸಲಾಗುತ್ತದೆ" ಎಂದು ಘೋಷಿಸಲಾಯಿತು. 'ಒಟ್ಟಾಗಿ ನಿರ್ಧರಿಸಲಾಗುತ್ತದೆ' ಅಂದರೆ "ಫ್ರಾನ್ಸ್ ನಿರ್ಧರಿಸುತ್ತದೆ" ಅಂತಲೇ ಅರ್ಥ. ಬಹುತೇಕ ದೇಶಗಳು ಇದನ್ನು ಒಪ್ಪಿಕೊಂಡವು. ಫ್ರಾನ್ಸ್ ತನ್ನ ವಸಾಹತುಗಳ ಆರ್ಥಿಕ ನಿಯಂತ್ರಣವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಸಿಎಫ್ಎ ಫ್ರಾಂಕ್ (CFA Franc) ನಿಯಂತ್ರಣದ ಸಾಧನವಾಯಿತು.

೧೯೩೦ರಲ್ಲಿ ಜಾಗತಿಕವಾಗಿ ಎಲ್ಲೆಡೆ ಆರ್ಥಿಕ ಹಾಗೂ ರಾಜಕೀಯ ಬಿಕ್ಕಟ್ಟಿತ್ತು. ಫ್ರಾನ್ಸಿಗೆ ತನ್ನ ಆರ್ಥಿಕತೆಯನ್ನು ಕಾಪಾಡಿಕೊಳ್ಳಬೇಕಿತ್ತು. ಇದಕ್ಕಾಗಿ ಫ್ರಾಂಕ್ ವಲಯ ಪ್ರಾರಂಭಿಸಿ ತನ್ನೆಲ್ಲಾ ವಸಾಹತುಗಳನ್ನು ಒಟ್ಟಿಗೆ ತರಲಾಯಿತು. ವಸಾಹತುಗಳ ಕರೆನ್ಸಿಯನ್ನು ಬಳಸಿಕೊಂಡು ಫ್ರಾಂಕಿನ ಮೌಲ್ಯದ ಸ್ಥಿರತೆಯನ್ನು ಕಾಪಾಡಿಕೊಳ್ಳಲಾಗುತ್ತಿತ್ತು. ೧೯೪೫ರಲ್ಲಿ ವಸಾಹತುಗಳಲ್ಲಿ ಫ್ರಾಂಕನ್ನು ಚಾಲ್ತಿಗೆ ತಂದಾಗ ಹಲವು ರೀತಿಯ ಫ್ರಾಂಕುಗಳು ಚಾಲ್ತಿಗೆ ಬಂದವು. ಸಿಎಫ್ಎ ಫ್ರಾಂಕ್, ಮೊರೊಕ್ಕಾನ್ ಫ್ರಾಂಕ್, ಅಲ್ಜೀರಿಯನ್ ಫ್ರಾಂಕ್ ಇತ್ಯಾದಿ. ಅವೆಲ್ಲಾ ಫ್ರಾನ್ಸಿನ ಫ್ರಾಂಕಿನೊಂದಿಗೆ ತಳುಕು ಹಾಕಿಕೊಂಡಿದ್ದವು. ಎರಡನೇ ಮಹಾಯುದ್ಧದ ನಂತರ ಸಿರಿಯಾ, ಲೆಬನಾನ್ ಹೊರಬಂದವು. ಹಾಗೆಯೇ ವಿಯೆಟ್ನಾಂ, ಕಾಂಬೋಡಿಯಾ ಮತ್ತು ಲಾವೋಸ್ ೧೯೫೪ರಲ್ಲಿ ಈ ಫ್ರಾಂಕ್ ವಲಯದಿಂದ ಹೊರಬಂದವು. ಕೊನೆಗೆ ಪಶ್ಚಿಮ ಆಫ್ರಿಕಾ, ಮಧ್ಯ ಆಫ್ರಿಕಾ ಹಾಗೂ ಕೊಮೊರೋಸ್ ಮೂರು ಮಾತ್ರ ಉಳಿದುಕೊಂಡವು.

ಫ್ರಾಂಕ್ ವಲಯದ ಕೇಂದ್ರ ಬ್ಯಾಂಕುಗಳು

ಮೂರು ಫ್ರಾಂಕ್ ವಲಯಗಳಲ್ಲೂ ಪ್ರತ್ಯೇಕ ಕೇಂದ್ರ ಬ್ಯಾಂಕುಗಳಿದ್ದವು. ಮೂರು ವಿಭಿನ್ನವಾದ ಸಿಎಫ್ಎ ಫ್ರಾಂಕುಗಳಿದ್ದವು. ಫ್ರಾನ್ಸ್ ಗ್ಯಾರಂಟರ್ (ಖಾತರಿದಾರ) ಆಗಿ ಕೆಲಸ ಮಾಡಲು ಒಪ್ಪಿಕೊಂಡಿತ್ತು. ಅಂದರೆ ವಿದೇಶಿ ವಿನಿಮಯದ ಕೊರತೆ ಬಿದ್ದರೆ ಅದು ತುಂಬಿಕೊಡಬೇಕಿತ್ತು. ಕೇಂದ್ರ ಬ್ಯಾಂಕುಗಳು ಆಯಾ ದೇಶಗಳ ಸಿಎಫ್ಎ ಫ್ರಾಂಕ್ ಹಾಗೂ ಯೂರೋ ನಡುವಿನ ವಿನಿಮಯ ಮೌಲ್ಯವನ್ನು ಕಾಪಾಡಿಕೊಳ್ಳಬೇಕಿತ್ತು. ಅದಕ್ಕೆ ಬೇಕಾದಷ್ಟು ವಿದೇಶಿ ವಿನಿಮಯದ ಮೀಸಲನ್ನು ಉಳಿಸಿಕೊಳ್ಳಬೇಕು. ಈ ಕೇಂದ್ರ ಬ್ಯಾಂಕುಗಳು ನಡೆಸುವ ಸಭೆಗಳಲ್ಲಿ ಫ್ರಾನ್ಸಿನ ಪ್ರತಿನಿಧಿಗಳು ಇರುತ್ತಿದ್ದರು. ಎಲ್ಲಾ ನಿರ್ಧಾರಗಳಿಗೂ ಅವರ ಒಪ್ಪಿಗೆ ಬೇಕಿತ್ತು. ಬೇರೆಲ್ಲೂ ವಿದೇಶಿ ಪ್ರತಿನಿಧಿಗಳಿಗೆ ಅವಕಾಶವಿರಲಿಲ್ಲ. ಕೇಂದ್ರ ಬ್ಯಾಂಕುಗಳು ಮುದ್ರಿಸಿದ ಕರೆನ್ಸಿ ನೋಟುಗಳು ಹಾಗೂ ನಾಣ್ಯಗಳು ದೇಶದೊಳಗಿನ ವಾಣಿಜ್ಯ ಬ್ಯಾಂಕುಗಳ ಮೂಲಕ ವಿತರಣೆಯಾಗುತ್ತಿದ್ದವು.

ಸಿಎಫ್ಎ ವ್ಯವಸ್ಥೆಯ ನಾಲ್ಕು ತತ್ವಗಳು

ಸಿಎಫ್ಎ ಫ್ರಾಂಕ್ ವ್ಯವಸ್ಥೆ ನಾಲ್ಕು ತತ್ವಗಳನ್ನು ಆಧರಿಸಿ ನಡೆಯುತ್ತಿತ್ತು. ೧. ಸ್ಥಿರ ವಿನಿಮಯ ದರ: ಸಿಎಫ್ಎ ಫ್ರಾನ್ಸಿನ ಕರೆನ್ಸಿಯೊಂದಿಗೆ ತಳುಕು ಹಾಕಿಕೊಂಡಿತ್ತು. ದೇಶದ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ವಿನಿಮಯ ದರ ಬದಲಾಗುತ್ತಿರಲಿಲ್ಲ. ಫ್ರಾನ್ಸಿಗೆ ಮಾತ್ರ ಅದನ್ನು ಬದಲಿಸುವುದಕ್ಕೆ ಸಾಧ್ಯವಿತ್ತು. ೨. ಬಂಡವಾಳ ಚಲನೆಗೆ ಮುಕ್ತ ಅವಕಾಶ: ಫ್ರಾನ್ಸ್ ಹಾಗೂ ವಸಾಹತುಗಳ ನಡುವೆ ಬಂಡವಾಳದ ಚಲನೆಗೆ ಮುಕ್ತ ಅವಕಾಶವಿತ್ತು. ಅಂದರೆ ಆಮದು ರಫ್ತಿಗೆ ಪಾವತಿಸುವುದಕ್ಕೆ, ಲಾಭ ಇತ್ಯಾದಿಗಳನ್ನು ವರ್ಗಾಯಿಸುವುದಕ್ಕೆ, ಬಂಡವಾಳದ ಹೂಡಿಕೆಗೆ ಯಾವುದೇ ಮಿತಿಯಿರಲಿಲ್ಲ. ೩. ಪರಿವರ್ತನೆಗೆ ಮುಕ್ತ ಅವಕಾಶ: ಸಿಎಫ್ಎ ಫ್ರಾಂಕನ್ನು ಫ್ರಾನ್ಸಿನ ಕರೆನ್ಸಿಯೊಂದಿಗೆ ವಿನಿಮಯ ಮಾಡಿಕೊಳ್ಳುವುದಕ್ಕೂ ಮಿತಿಯಿರಲಿಲ್ಲ. ಇದರಿಂದ ಫ್ರಾನ್ಸಿನ ಟ್ರೆಷರಿಗೆ ವಿದೇಶಿ ವಿನಿಮಯದ ಕೊರತೆಯ ಸಮಸ್ಯೆ ಇರಲಿಲ್ಲ. ಆದರೆ ಫ್ರಾಂಕ್ ವಲಯದ ಹೊರಗಿನ ವ್ಯವಹಾರಗಳಿಗೆ ಸಿಎಫ್ಎ ಫ್ರಾಂಕ್ ಬಳಸಲಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ಫ್ರಾಂಕ್ ವಲಯಗಳ ನಡುವೆಯೂ ಸಿಎಫ್ಎಯನ್ನು ನೇರವಾಗಿ ಬಳಸಲಾಗುತ್ತಿರಲಿಲ್ಲ. ಮಾಲಿಯ ಸಿಎಫ್ಎ ಕ್ಯಾಮರೂನಿನಲ್ಲಿ ನಡೆಯುತ್ತಿರಲಿಲ್ಲ. ಮಾಲಿಯ ಸಿಎಫ್ಎಯನ್ನು ಯುರೋಗೆ ಬದಲಿಸಿಕೊಂಡು ಅದರಿಂದ ಕ್ಯಾಮರೂನ್ ಸಿಎಫ್ಎ ಕೊಳ್ಳಬೇಕಿತ್ತು. ಹಾಗಾಗಿ ಯುರೋಗೆ ಬೇಡಿಕೆ ಹಾಗೂ ವಿಶೇಷ ಸ್ಥಾನ ಸಿಕ್ಕಿತ್ತು. ೪. ವಿದೇಶಿ ವಿನಿಮಯದ ಮೀಸಲು ಕೇಂದ್ರೀಕೃತವಾಗಿತ್ತು: ಎಲ್ಲಾ ಆಫ್ರಿಕನ್ ದೇಶಗಳು ತಮ್ಮ ವಿದೇಶಿ ವಿನಿಮಯದ ಮೀಸಲನ್ನು ಫ್ರೆಂಚ್ ಟ್ರೆಷರಿಯಲ್ಲಿ ಇಡಬೇಕಿತ್ತು. ಮೊದಲು ತಮ್ಮ ಇಡೀ ಮೀಸಲನ್ನು ಇಡಬೇಕಿತ್ತು. ನಿರಂತರ ಹೋರಾಟದ ನಂತರ ಅದು ೫೦%ಗೆ ಬಂದಿದೆ. ಆದರೆ ಫ್ರಾನ್ಸ್ ಫ್ರಾಂಕ್ ವಲಯದ ಸದಸ್ಯ ರಾಷ್ಟ್ರವಾದರೂ ಮೀಸಲು ನಿಧಿಯಲ್ಲಿ ತನ್ನ ಯುರೋವನ್ನು ಇಡುವುದಿಲ್ಲ.

ಆಪರೇಷನ್ ಅಕೌಂಟ್: ಕಾರ್ಯಾಚರಣೆಯ ಖಾತೆ

ಈ ನಾಲ್ಕು ನೀತಿಗಳನ್ನು ಜಾರಿಗೆ ತರುವುದಕ್ಕಾಗಿಯೇ ಫ್ರೆಂಚ್

ಟ್ರೆಷರಿಯಲ್ಲಿ ಪ್ರತಿಯೊಂದು ಫ್ರಾಂಕ್ ವಲಯಗಳಿಗೂ ಒಂದೊಂದು ವಿಶೇಷ ‘ಆಪರೇಷನ್ ಖಾತೆ’ಯನ್ನು ತೆರೆಯಲಾಗಿದೆ. ಅದರಲ್ಲಿ ಪ್ರತಿ ದೇಶವೂ ತನ್ನ ನಿಗದಿತ ಪಾಲಿನ ಮೀಸಲನ್ನು ಆ ಖಾತೆಯಲ್ಲಿ ಇಡಬೇಕು. ಫ್ರಾಂಕ್ ವಲಯದ ದೇಶಗಳು ಅದರ ಮೂಲಕವೇ ಎಲ್ಲಾ ವಿದೇಶಿ ವ್ಯವಹಾರಗಳನ್ನು ನಡೆಸಬೇಕಿತ್ತು. ಫ್ರಾಂಕ್ ವಲಯಕ್ಕೆ ಸೇರದ ಆಫ್ರಿಕನ್ ದೇಶಗಳಿಗೆ ಈ ಸಮಸ್ಯೆ ಇರಲಿಲ್ಲ. ಫ್ರಾನ್ಸ್ ನಿರಂತರವಾಗಿ ವಸಾಹತುಗಳಿಂದ ಲೆಡ್, ಜಿಂಕ್, ಮ್ಯಾಂಗನೀಸ್ ಇತ್ಯಾದಿ ಕಚ್ಚಾ ಪದಾರ್ಥಗಳನ್ನು ಅಗ್ಗದ ಬೆಲೆಗೆ ಸಾಗಿಸುತ್ತಿತ್ತು. ಅಷ್ಟೇ ಅಲ್ಲ, ಅದಕ್ಕೆ ಅಪಾರ ವಿದೇಶಿ ವಿನಿಮಯವೂ ಉಳಿಯಿತು. ಈ ವ್ಯವಹಾರದಿಂದ ೧೯೫೫ರಲ್ಲಿ ಒಂದೇ ವರ್ಷ ಫ್ರಾನ್ಸಿಗೆ ೨೫೦ ಮಿಲಿಯನ್ ಡಾಲರ್ ಉಳಿತಾಯವಾಗಿತ್ತು. ೫ ಲಕ್ಷ ಫ್ರೆಂಚರ ಬದುಕಿಗೆ ಫ್ರಾಂಕ್ ವಲಯ ಆಸರೆಯಾಗಿತ್ತು. ಅದರಿಂದಾಗಿಯೇ ತನ್ನ ವಸಾಹತುಗಳು ಸ್ವತಂತ್ರವಾದ ಮೇಲೂ ಈ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಲು ಫ್ರಾನ್ಸ್ ಹೆಣಗುತ್ತಿದೆ.

ಗ್ಯಾರಂಟರ್ ಎಂಬ ನಾಟಕ

ಹಿಂದುಳಿದ ದೇಶಗಳಿಗೆ ತಮಗೆ ಬೇಕಾದ ಯಂತ್ರಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ವಿದೇಶಿ ಕರೆನ್ಸಿ ಬೇಕಾಗುತ್ತದೆ. ಕೊರತೆ ಬಿದ್ದಾಗ ಗ್ಯಾರಂಟರ್ ಆಗುವುದಕ್ಕೆ ಒಪ್ಪಿಕೊಂಡು ಫ್ರಾನ್ಸ್ ಏನೋ ಮಹದುಪಕಾರ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವವಾಗಿ ಗ್ಯಾರಂಟರ್ ಅನ್ನುವುದೇ ಹಲವು ಕಾರಣಕ್ಕೆ ಒಂದು ದೊಡ್ಡ ನಾಟಕ.
೧. ತಾಂತ್ರಿಕವಾಗಿ ವಸಾಹತುಗಳಿಗೆ ಬೇಕಾದಾಗ ಹಣವನ್ನು ಒದಗಿಸುವುದಕ್ಕೆ ಫ್ರೆಂಚ್ ಸರ್ಕಾರಕ್ಕೆ ಸಾಧ್ಯವಿಲ್ಲ. ಫ್ರೆಂಚ್ ಟ್ರೆಷರಿಗೆ ಹಣ ಠಂಕಿಸುವ ಅಧಿಕಾರ ಇಲ್ಲ. ಹಣ ಸೃಷ್ಟಿಸುವುದು ಕೇಂದ್ರ ಬ್ಯಾಂಕ್. ಅದೊಂದು ಸ್ವಾಯತ್ತ ಸಂಸ್ಥೆಯಾದ್ದರಿಂದ ಅದರಿಂದ ಬೇಕಾದಾಗ ಹಣವನ್ನು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ.

೨. ಎರಡನೆಯದಾಗಿ ಯಾವುದೇ ದೇಶಕ್ಕೂ “ಅನಿಯಮಿತ” ಬಜೆಟ್ ಸಾಧ್ಯವಿಲ್ಲ. ಪ್ರತಿಯೊಂದು ದೇಶದ ಬಜೆಟ್ ವರ್ಷದ ಮೊದಲಲ್ಲೇ ನಿರ್ಧಾರವಾಗಿರುತ್ತದೆ. ಹಾಗಾಗಿ ಅದು ಕೊಡಬಹುದಾದ ಗ್ಯಾರಂಟಿಗೂ ಒಂದು ಮಿತಿಯಿರುತ್ತದೆ. ಎಷ್ಟು ಬೇಕಾದರೂ ಕೊಡುತ್ತೀನಿ ಅಂತ ಖಾತ್ರಿ ಕೊಡುವುದಕ್ಕೆ ಆಗುವುದಿಲ್ಲ.

೩. ಜೊತೆಗೆ ಫ್ರಾಂಕ್ ವಲಯದ ಕೇಂದ್ರ ಬ್ಯಾಂಕುಗಳಲ್ಲಿ ಹಣಕಾಸನ್ನು ನಿರ್ವಹಿಸುವುದಕ್ಕೆ ಫ್ರಾನ್ಸಿನ ಪ್ರತಿನಿಧಿಗಳು ಇರುತ್ತಾರೆ. ಕೊರತೆಯ ಸೂಚನೆ ಸಿಕ್ಕ ಕೂಡಲೇ ಅದನ್ನು ಸರಿಪಡಿಸುವುದಕ್ಕೆ ಒತ್ತಾಯಿಸುತ್ತಾರೆ. ಹಾಗಾಗಿ ಕೊರತೆ ಬೀಳುವ ಸಾಧ್ಯತೆಗಳು ತುಂಬಾ ವಿರಳ.

ಆಪರೇಷನ್ ಅಕೌಂಟಿನಿಂದ ವಸಾಹತುಗಳಿಗೆ ಅನುಕೂಲವಾಗಿರುವ ಉದಾಹರಣೆಗಳು ಅಪರೂಪ. ಹೆಚ್ಚಿನ ಸಂದರ್ಭದಲ್ಲಿ ಅದರಿಂದ ತೊಂದರೆಯಾಗಿದೆ. ಅದರಿಂದಾಗಿಯೇ ಆಪರೇಷನ್ ಅಕೌಂಟ್ ವ್ಯವಸ್ಥೆಯನ್ನು ರದ್ದುಗೊಳಿಸಲು ವಸಾಹತುಗಳು ಒತ್ತಾಯಿಸುತ್ತಿವೆ.

ಹಣದ ಸೃಷ್ಟಿ ಹಾಗೂ ಅಭಿವೃದ್ಧಿ

ಬ್ಯಾಂಕುಗಳು ಕುಟುಂಬದ ಉಳಿತಾಯವನ್ನು ಕ್ರೋಡೀಕರಿಸಿ ಉದ್ದಿಮೆಗಳಿಗೆ ಕೊಡುತ್ತವೆ ಅನ್ನುವುದು ಸಾಮಾನ್ಯ ನಂಬಿಕೆ. ಬ್ಯಾಂಕ್ ಒಂದು ಮಿಲಿಯನ್ ಹಣವನ್ನು ಒಂದು ಕಂಪೆನಿಗೆ ಕೊಟ್ಟರೆ, ಅದಕ್ಕೆ ಒಂದು ಮಿಲಿಯನ್ ಕೊಳ್ಳುವ ಶಕ್ತಿ ಬರುತ್ತದೆ. ಆದರೆ ಸಾಲ ಮಂಜೂರು ಮಾಡಿದಾಗ ಅದರ ಬಳಿ ಹಣ ಇರಬೇಕಾಗಿಲ್ಲ. ನಂತರದಲ್ಲಿ ಅದನ್ನು ಕ್ರೋಡೀಕರಿಸಬಹುದು. ಸಾಲ ಕೊಡುವುದಕ್ಕಾಗಿ ಉಳಿತಾಯವನ್ನು ಸೃಷ್ಟಿಸಲಾಗುತ್ತದೆ.

ನಮ್ಮ ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಕುಟುಂಬಗಳ ಉಳಿತಾಯದಿಂದ ಈ ಬಂಡವಾಳ ಸೃಷ್ಟಿಯಾಗುತ್ತದೆ. ಇಲ್ಲವೆಂದರೆ ವಿದೇಶಿ ಸಾಲ, ಹೂಡಿಕೆ ಅಥವಾ ಇನ್ಯಾವುದೋ ರೂಪದಲ್ಲಿ ಬರಬೇಕು. ಕುಟುಂಬದ ಉಳಿತಾಯಕ್ಕೆ ಒಂದು ಮಿತಿ ಇರುತ್ತದೆ. ಬಡವರಿಗೆ ಉಳಿತಾಯ ಸಾಧ್ಯವಿಲ್ಲ. ಹಾಗಾಗಿ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಇರುವ ಇನ್ನೊಂದು ಮಾರ್ಗ ಅಂದರೆ ವಿದೇಶದಿಂದ ಬಂಡವಾಳ ಬರಬೇಕು. ಬಡರಾಷ್ಟ್ರಗಳಿಗೆ ಅದೂ ಕಷ್ಟ. ಬಡರಾಷ್ಟ್ರಗಳಿಗೆ ಇನ್ನೊಂದು ಸರಳ ಮಾರ್ಗ ಇದೆ. ಬೇಕಾದ ಹಣವನ್ನು ಸೃಷ್ಟಿಸಿಕೊಳ್ಳಬಹುದು. ಜರ್ಮನಿ ಹಾಗೂ ಚೀನಾ ಈ ಕೆಲಸವನ್ನು ಮಾಡಿವೆ. ಅವು ಸಾಧಿಸಿರುವ ಆರ್ಥಿಕ ಪ್ರಗತಿಯನ್ನು ನೋಡಿದರೆ ಹಣದ ಸೃಷ್ಟಿಯ ಸಾಮರ್ಥ್ಯ ಗೊತ್ತಾಗುತ್ತದೆ. ಜರ್ಮನಿ ಮಹಾಯುದ್ಧದ ನಂತರ ಆರ್ಥಿಕತೆಯ ಪುನರ್‌ನಿರ್ಮಾಣಕ್ಕೆ ಬೇಕಾದ ಸಂಪನ್ಮೂಲವನ್ನು ಆಂತರಿಕವಾಗಿಯೇ ಕ್ರೋಡೀಕರಿಸಿತು. ೧೯೫೦ರಲ್ಲಿ ಅದರ ಕೌಟುಂಬಿಕ ದರ ಉಳಿತಾಯ ಜಿಡಿಪಿಯ ಕೇವಲ ೪% ಇತ್ತು. ಆದರೆ ಹೂಡಿಕೆಯ ದರ ೨೦%ಕ್ಕಿಂತ ಹೆಚ್ಚಿತ್ತು. ಹೆಚ್ಚುವರಿ ಹಣವನ್ನು ಅದು ಹಣವನ್ನು ಮುದ್ರಿಸುವ ಮೂಲಕ ಹಾಗೂ ಕಾರ್ಪೊರೇಟ್ ಲಾಭದ ಮರುಹೂಡಿಕೆಯಿಂದ ತುಂಬಿಕೊಂಡಿತು. ಚೀನಾದಲ್ಲೂ ಇದೇ ಪರಿಸ್ಥಿತಿಯನ್ನು ನೋಡಬಹುದು. ಅಲ್ಲೂ ಕೂಡ ಹೂಡಿಕೆಯಿಂದ ರಾಷ್ಟ್ರೀಯ ಉಳಿತಾಯ ಹೆಚ್ಚಾಗಿದ್ದನ್ನು ನೋಡಬಹುದು.





ಹಣದ ಸೃಷ್ಟಿಯಿಂದ ಹಣದುಬ್ಬರ ಹೆಚ್ಚುತ್ತದೆ ಎನ್ನಲಾಗುತ್ತದೆ. ಆದರೆ ಸಾಲವನ್ನು ಉತ್ಪಾದಕ ಚಟುವಟಿಕೆಯಲ್ಲಿ ತೊಡಗಿಸಿದರೆ ಹಣದುಬ್ಬರ ಹೆಚ್ಚುವುದಿಲ್ಲ ಅನ್ನುವುದನ್ನು ಹಲವು ಅಧ್ಯಯನಗಳು ತೋರಿಸಿವೆ. ಬಹುತೇಕ ಆಫ್ರಿಕಾದ ದೇಶಗಳು ತಮ್ಮ ವಿದೇಶಿ ವಿನಿಮಯವನ್ನು ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳಲು ಬಳಸಿಕೊಳ್ಳುತ್ತಿವೆ. ಅವನ್ನು ಸ್ಥಳೀಯವಾಗಿ ಉತ್ಪಾದಿಸಬಹುದು. ಅದಕ್ಕೆ ಬೇಕಾದ ಭೂಮಿ, ಜ್ಞಾನ, ಮಾನವ ಸಂಪನ್ಮೂಲ ಎಲ್ಲವೂ ಅಲ್ಲಿವೆ. ಆದರೆ ಕೃಷಿ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಬಂಡವಾಳ ಬೇಕು. ಜೊತೆಗೆ ವಿದೇಶಿ ಉತ್ಪನ್ನಗಳ ಆಮದನ್ನು ತಡೆದು ದೇಶೀಯ ಉತ್ಪಾದನೆಯನ್ನು ರಕ್ಷಿಸಬೇಕು. ಇದು ಆಫ್ರಿಕಾದ ದೇಶಗಳಿಗೆ ಕಷ್ಟವಾಗಿದೆ. ಒಮ್ಮೆ ಸ್ಥಳೀಯವಾಗಿ ಇವುಗಳನ್ನು ಉತ್ಪಾದಿಸಿ ಪೂರೈಸುವುದಕ್ಕೆ ಸಾಧ್ಯವಾದರೆ ವಿದೇಶಿ ವಿನಿಮಯವನ್ನು ಉಳಿಸಬಹುದು.

ಸಿಎಫ್‌ಎ ವ್ಯವಸ್ಥೆಯೇ ಆಂತರಿಕವಾಗಿ ಬಂಡವಾಳವನ್ನು ಕ್ರೋಡೀಕರಿಸುವುದಕ್ಕೆ ದೊಡ್ಡ ಅಡ್ಡಿಯಾಗಿದೆ. ತನಗೆ ಬೇಕಾದ ಹಣವನ್ನು ಸೃಷ್ಟಿಸುವುದಕ್ಕೆ ಅದಕ್ಕೆ ಸಾಧ್ಯವಿಲ್ಲ. ಅದರಿಂದ ಆರ್ಥಿಕ ಚಟುವಟಿಕೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಉಳಿತಾಯದ ಮೇಲೆ ಪರಿಣಾಮ ಬೀರುತ್ತದೆ. ಜೊತೆಗೆ ಬಂಡವಾಳ ಚಲನೆಗೆ ಮುಕ್ತ ಅವಕಾಶ ಇರುವುದರಿಂದ ರಾಷ್ಟ್ರೀಯ ಉಳಿತಾಯ, ಲಾಭ ಇವೆಲ್ಲಾ ಹೊರಗೆ ಹರಿದು ಹೋಗುತ್ತದೆ. ಅದರಿಂದಾಗಿಯೇ ಹಲವು ಆಫ್ರಿಕಾದ ದೇಶಗಳು ಸಿಎಫ್‌ಎ ಫ್ರಾಂಕ್ ಅನ್ನು ವಿರೋಧಿಸುತ್ತಿವೆ.

ವಿರೋಧವನ್ನು ಹತ್ತಿಕ್ಕುವ ಪ್ರಯತ್ನ

ಆದರೆ ಈ ವಿರೋಧವನ್ನು ತೀವ್ರವಾಗಿ ಹತ್ತಿಕ್ಕಲಾಗುತ್ತಿದೆ. ಗಿನಿ, ಮಾಲಿ, ಟೋಗೊ, ಮಡಗಾಸ್ಕರ್ ಇತ್ಯಾದಿ ದೇಶಗಳು ಸಿಎಫ್‌ಎ ಇಂದ ಹೊರಬರಲು ಪ್ರಯತ್ನಿಸಿದವು. ಕೆಲವು ಹೊರಬಂದವು. ಆದರೆ ಇಂತಹ ಪ್ರತಿಯೊಂದು ಪ್ರಯತ್ನವನ್ನು ಕ್ರೂರವಾಗಿ ಹತ್ತಿಕ್ಕಲಾಯಿತು. ಹತ್ತಿಕ್ಕುವುದಕ್ಕಾಗಿ ಎಲ್ಲಾ ಕ್ರಮಗಳನ್ನು ಬಳಸಲಾಗಿದೆ. ಆಂದೋಲನದ ನಾಯಕರನ್ನು ಕೊಲ್ಲುವ ಕೆಲಸವನ್ನೂ ಮಾಡಿದ್ದಾರೆ. ಅಂತಹ ಸರ್ಕಾರಗಳ ವಿರುದ್ಧ ಮಿಲಿಟರಿ ದಂಗೆಗಳನ್ನು ಸಂಘಟಿಸಿದ ಉದಾಹರಣೆಗಳೂ ಇವೆ.

ಸವಾಲೊಡ್ಡಿದ ಗಿನಿ (Guinea)

ಗಿನಿ ಫ್ರಾನ್ಸಿಗೆ ಸವಾಲೊಡ್ಡಿದ ಮೊದಲ ದೇಶ. ಫ್ರಾನ್ಸ್ ಅದಕ್ಕೆ ತೀರಾ ಹಿಂಸಾತ್ಮಕವಾಗಿ ಪ್ರತಿಕ್ರಿಯಿಸಿತು. ಬೆದರಿಕೆಯಿಂದ ಪ್ರಾರಂಭವಾಯಿತು. “ಫ್ರಾನ್ಸಿನ ಸಹಕಾರ ಕಳೆದುಕೊಳ್ಳುತ್ತೀರಿ. ಜಗತ್ತನ್ನು ಒಂಟಿಯಾಗಿ ಎದುರಿಸಬೇಕಾಗುತ್ತದೆ. ಬರಬಹುದಾದ ಎಲ್ಲಾ ತೊಂದರೆಗೆ ನೀವೇ ಜವಾಬ್ದಾರರು” ಇತ್ಯಾದಿ ಬೆದರಿಕೆಗಳು ಪ್ರಾರಂಭವಾದವು. ಒಪ್ಪಂದದ ಪ್ರಕಾರ ಸ್ವಾತಂತ್ರ್ಯ ಬೇಕಾದರೆ ಬಹುಸಂಖ್ಯಾತರ ಒಪ್ಪಿಗೆ ಬೇಕಿತ್ತು.

ಗಿನಿಯ ನಾಯಕ ಸೆಕೌ ಟೋರೆ ಅಚಲನಾಗಿದ್ದ. “ಸ್ವಾತಂತ್ರ್ಯ ನಮ್ಮ ನ್ಯಾಯಬದ್ಧ ಹಾಗೂ ಸ್ವಾಭಾವಿಕ ಹಕ್ಕು. ಅದನ್ನು ಬಿಟ್ಟುಕೊಡುವುದಿಲ್ಲ. ನಾವು ಶ್ರೀಮಂತ ದೇಶದಲ್ಲಿ ಗುಲಾಮರಾಗಿ ಬದುಕುವುದಕ್ಕಿಂತ ಬಡದೇಶದಲ್ಲಿ ಸ್ವಾತಂತ್ರ್ಯವನ್ನು ಬಯಸುತ್ತೇವೆ” ಎಂದು ಘೋಷಿಸಿದ್ದ. ಚುನಾವಣೆಯಲ್ಲಿ ಬಹುಪಾಲು ಜನ ಸ್ವಾತಂತ್ರ್ಯವನ್ನು ಬಯಸುತ್ತಾರೆ ಅನ್ನುವುದು ಫ್ರಾನ್ಸಿಗೆ ಖಾತರಿಯಾಗಿತ್ತು. ಜನಮತಗಣನೆ (Referendum) ದಿನದ ರಾತ್ರಿಯೇ ಸೈನ್ಯವನ್ನು ಕಳುಹಿಸಿ ಕೇಂದ್ರ ಬ್ಯಾಂಕಿನಲ್ಲಿದ್ದ ಹಣಕಾಸು ಮೀಸಲನ್ನು ಫ್ರಾನ್ಸಿಗೆ ಸಾಗಿಸಿಬಿಟ್ಟರು. ೯೫% ಜನ ಸ್ವತಂತ್ರ ಬಯಸಿದರು. ಫ್ರಾನ್ಸ್ ಹೊಸ ಸರ್ಕಾರಕ್ಕೆ ಸಾಕಷ್ಟು ತೊಂದರೆ ಕೊಟ್ಟಿತು. ತನ್ನ ಪರವಾಗಿ ಹೋರಾಡಿದ್ದ ಗಿನಿ ಸೈನಿಕರ ಪಿಂಚಣಿಯ ವಿತರಣೆಗೂ ಅಡ್ಡಿಮಾಡಿತು. ಸಂಯುಕ್ತ ರಾಷ್ಟ್ರಗಳಿಗೆ ಪ್ರವೇಶಕ್ಕೆ ಅಡ್ಡಿಪಡಿಸಿತು. ಬೇರೆ ಯಾವ ದೇಶವೂ ಗಿನಿಯನ್ನು ಅನುಸರಿಸುವುದು ಫ್ರಾನ್ಸಿಗೆ ಬೇಕಿರಲಿಲ್ಲ.

ಸೆಕೌ ಟೋರೆ ಸೋವಿಯತ್ ಯೂನಿಯನ್ ಸೇರಿದಂತೆ ಹೊಸ ಗೆಳೆಯರ ಕಡೆ ನೋಡಿದ. ಟೋರೆಗೆ ರಾಷ್ಟ್ರೀಯ ಕರೆನ್ಸಿಯನ್ನು ಸೃಷ್ಟಿಸಬೇಕಿತ್ತು. ಫ್ರಾಂಕ್ ವಲಯದಲ್ಲಿ ಇರುವುದಕ್ಕೆ ಅವನಿಗೆ ಸಮಸ್ಯೆ ಇರಲಿಲ್ಲ. ಆದರೆ ಫ್ರಾನ್ಸಿನ ಅಧಿಪತ್ಯದ ನಿಯಮಗಳು ಒಪ್ಪಿಗೆಯಿರಲಿಲ್ಲ. ಗಿನಿ ತನ್ನದೇ ಕೇಂದ್ರ ಬ್ಯಾಂಕನ್ನು, ಕರೆನ್ಸಿಯನ್ನು ಪ್ರಾರಂಭಿಸಿತು. ವಿದೇಶಿ ವಿನಿಮಯ ಮೀಸಲನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಫ್ರಾನ್ಸ್ ದ್ವೇಷ ತೀವ್ರವಾಯಿತು. ಸರ್ಕಾರದ ವಿರುದ್ಧ ಜನರನ್ನು, ನೆರೆಯ ರಾಷ್ಟ್ರಗಳನ್ನು ಎತ್ತಿಕಟ್ಟಲಾಯಿತು. ಅಂತಿಮವಾಗಿ ನಕಲಿ



ನೋಟನ್ನು ವಿತರಿಸಲಾಯಿತು. ಅದು ಗಿನಿ ಆರ್ಥಿಕತೆಗೆ ದೊಡ್ಡ ಪೆಟ್ಟನ್ನು ನೀಡಿತು. ಆರ್ಥಿಕವಾಗಿ ದುರ್ಬಲವಾಗಿದ್ದರೂ ತನ್ನ ಕರೆನ್ಸಿಯನ್ನು ಗಿನಿ ಉಳಿಸಿಕೊಂಡಿದೆ.

ಮಾಲಿ, ಟೋಗೊಗಳಲ್ಲಿ ಹೋರಾಟ:

ಗಿನಿಯ ಅನುಭವದಿಂದ ಪ್ರೇರಣೆಗೊಂಡ ಮಾಲಿ ೧೯೬೦ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು. ಘಾನಾ, ಗಿನಿ ಹಾಗೂ ಸೋವಿಯತ್ ಒಕ್ಕೂಟದ ಜೊತೆ ಸಹಕಾರದ ಒಪ್ಪಂದ ಮಾಡಿಕೊಂಡಿತು. ತನ್ನಲ್ಲಿ ಇಟ್ಟಿದ್ದ ಸೈನ್ಯವನ್ನು ಹಿಂತೆಗೆದುಕೊಳ್ಳಲು ಫ್ರಾನ್ಸಿಗೆ ಹೇಳಿತು. ತನ್ನದೇ ಆದ ಕರೆನ್ಸಿಯನ್ನು ಪ್ರಾರಂಭಿಸಿತು. ಆದರೆ ನಿಭಾಯಿಸಲಾಗಲಿಲ್ಲ. ಟೋಗೋದಲ್ಲೂ ಹೊಸದಾಗಿ ಬಂದ ಅಧ್ಯಕ್ಷನ ಕೊಲೆಯಾಯಿತು. ತಮ್ಮನ್ನು ಒಪ್ಪದ ಸರ್ಕಾರವನ್ನು ಬೀಳಿಸುವುದಕ್ಕೆ ಏನೂ ಬೇಕಾದರೂ ಮಾಡುತ್ತಾರೆ. ಐವರಿಕೋಸ್ಟಿನಲ್ಲಿ ಚುನಾವಣೆಯಲ್ಲಿ ಗೆದ್ದ ಅಧ್ಯಕ್ಷನ ಸ್ಥಳದಲ್ಲಿ ಇನ್ನೊಬ್ಬನನ್ನು ನೇಮಿಸಿದ್ದರು. ೨೦೧೦ರಲ್ಲಿ ಅಲ್ಲಿ ಇಬ್ಬರು ಅಧ್ಯಕ್ಷರಿದ್ದರು. ಚುನಾಯಿತ ಅಧ್ಯಕ್ಷ ಅಧಿಕಾರ ಬಿಟ್ಟುಕೊಡಲು ಒಪ್ಪದೇ ಇದ್ದಾಗ ಆಪರೇಷನ್ ಅಕೌಂಟನ್ನು ಸ್ಥಗಿತಗೊಳಿಸಿದರು. ಕರೆನ್ಸಿ ಪೂರೈಕೆಯನ್ನು ನಿಲ್ಲಿಸಿದರು. ಕೊನೆಗೆ ಮಿಲಿಟರಿ ಆಕ್ರಮಣ ಮಾಡಿ ಅಧ್ಯಕ್ಷನನ್ನು ಬಂಧಿಸಿದರು. ಪ್ಯಾರಿಸ್ ಆಫ್ರಿಕಾದ ೧೪ ದೇಶಗಳಲ್ಲಿ ೪೦ ಮಿಲಿಟರಿ ದಂಗೆಯನ್ನು ಆಯೋಜಿಸಿದೆ. ಇಂದಿಗೂ ಹಲವು ದೇಶಗಳಲ್ಲಿ ಮಿಲಿಟರಿ ನೆಲೆಗಳಿವೆ.

ಬುರ್ಕಿನಾ ಫಾಸೊದಲ್ಲಿ ಮಿಲಿಟರಿ ದಂಗೆಯಿಂದ ಅಧಿಕಾರಕ್ಕೆ ಬಂದ ಥಾಮಸ್ ಸಂಕಾರ ಪರ್ಯಾಯ ಸರ್ಕಾರ ರೂಪಿಸಲು ಪ್ರಯತ್ನಿಸಿದವರಲ್ಲಿ ಪ್ರಮುಖ ನಾಯಕ. ಆಫ್ರಿಕಾದ ಆರ್ಥಿಕ ಬಿಕ್ಕಟ್ಟಿನ ಹಾಗೂ ಅದರ ಅನಭಿವೃದ್ಧಿಯ ಮೂಲ ಇರುವುದು ಹಣಕಾಸಿನ ವ್ಯವಸ್ಥೆಯಲ್ಲಿ. ಹಣಕಾಸಿನ ಸಾರ್ವಭೌಮತ್ವ ಇಲ್ಲದೆ ಹೋದರೆ ಬಂಡವಾಳ ಕ್ರೋಢೀಕರಣಕ್ಕೆ ಹಾಗೂ ಪೂರ್ಣ ಉದ್ಯೋಗಕ್ಕೆ ಬೇಕಾದ ಆರ್ಥಿಕ ನೀತಿಗಳನ್ನು ರೂಪಿಸುವುದಕ್ಕೆ ಆಗುವುದಿಲ್ಲ. ಹಣ ಸೃಷ್ಟಿಸುವುದಕ್ಕೆ ಸಾಧ್ಯವಾಗದೇ ಹೋದರೆ ಬಂಡವಾಳದ ಕ್ರೋಢೀಕರಣ ಸಾಧ್ಯವಿಲ್ಲ ಎಂದು ವಾದಿಸಿದ್ದ. ಅದಕ್ಕಾಗಿ ಪ್ರಯತ್ನಿಸಿದ್ದ. ಸಾಕಷ್ಟು ನಿರೀಕ್ಷೆಯನ್ನು ಹುಟ್ಟುಹಾಕಿದ್ದ. ಆದರೆ ಅವನ ಜೊತೆಯವರನ್ನು ಬಳಸಿಕೊಂಡೇ ಅವನನ್ನು ಕೊಲೆ ಮಾಡಲಾಯಿತು.

ಈ ಎಲ್ಲಾ ಒತ್ತಡಗಳಿಂದ ಆಫ್ರಿಕಾದ ಪರಿಸ್ಥಿತಿಯಲ್ಲಿ ಒಂದಿಷ್ಟು ಬದಲಾವಣೆಗಳಾದರೂ ಇಂದಿಗೂ ಆ ರಾಷ್ಟ್ರಗಳಿಗೂ ಆರ್ಥಿಕವಾಗಿ, ರಾಜಕೀಯವಾಗಿ ಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲ. ಅಲ್ಲಿಯ ಜನತೆಗೆ, ಹಲವು ಬಾರಿ ಸರ್ಕಾರಗಳಿಗೂ ಬಹುತೇಕ ಹಣಕಾಸಿನ ವಿವರಗಳು ತಿಳಿದಿರುವುದಿಲ್ಲ. ಎಷ್ಟೋ ಅಕ್ರಮಗಳು ನಡೆಯುತ್ತಲೇ ಇವೆ. ಎಲ್ಲವೂ ದೇಶದ ಹೊರಗೆ ನಿರ್ಧಾರವಾಗುತ್ತಿತ್ತು. ಐಎಂಎಫ್‌ನಲ್ಲೂ ಪ್ರಮುಖ ಹುದ್ದೆಗಳಲ್ಲಿ ಫ್ರೆಂಚಿನವರೇ ಇರುವುದರಿಂದ ಅಲ್ಲಿ ನಡೆಯುವ ಎಷ್ಟೋ ವ್ಯವಹಾರಗಳು ಇವರ ಗಮನಕ್ಕೆ ಬರುತ್ತಿರಲಿಲ್ಲ. ಎಷ್ಟೋ ನಿರ್ಧಾರಗಳಿಗೆ ಇವರ ವಿರೋಧವೂ ಇರುತ್ತದೆ.

೧೯೯೪ರಲ್ಲಿ ಸಿಎಫ್ಎ ಫ್ರಾಂಕಿನ ೫೦% ಮೌಲ್ಯ ಇಳಿಸಿತು. ಅದು ಫ್ರಾಂಕ್ ಜೋನ್ ದೇಶಗಳ ಆರ್ಥಿಕತೆಯನ್ನು ಅಲ್ಲಾಡಿಸಿಬಿಟ್ಟಿತು. ಆಂತರಿಕ ಖರ್ಚನ್ನು ಹಾಗೂ ಆಮದನ್ನು ಕಡಿತ ಮಾಡಿಕೊಳ್ಳಲು ಈ ರಾಷ್ಟ್ರಗಳ ಮೇಲೆ ಐಎಂಎಫ್ ಒತ್ತಾಯ ಹೇರತೊಡಗಿತು. ಇವೆಲ್ಲಾ ನವ–ಉದಾರವಾದಿ ನೀತಿಗಳೇ. ಈ ರಾಷ್ಟ್ರಗಳು ಕೃಷಿ ಸಬ್ಸಿಡಿಯನ್ನು, ಸಾಮಾಜಿಕ ಖರ್ಚನ್ನು, ಹೂಡಿಕೆಯನ್ನು ಕಡಿತ ಮಾಡಬೇಕಾಯಿತು; ಸಹಜವಾಗಿಯೇ ಸಾಲದ ಮರುಪಾವತಿಯೂ ಕಷ್ಟವಾಯಿತು. ವಿದೇಶಿ ಸಾಲದ ಹೊರೆ ವಿಪರೀತವಾಯಿತು. ಕೆಲವು ದೇಶಗಳಲ್ಲಿ ಅದು ೬೦೦% ಅಷ್ಟು ಹೆಚ್ಚಾಯಿತು. ವಿದೇಶಿ ಕಂಪೆನಿಗಳು ತಮ್ಮ ಲಾಭವನ್ನು ತಮ್ಮ ದೇಶಗಳಿಗೆ ಸಾಗಿಸಿದರು. ಆಫ್ರಿಕಾದ ನಾಯಕರಿಗೆ ತಮ್ಮ ಕರೆನ್ಸಿಯ ಅಪಮೌಲ್ಯ ಬೇಕಾಗಿರಲಿಲ್ಲ. ಅದರಿಂದ ಕೊಳ್ಳುವ ಶಕ್ತಿ ಕಮ್ಮಿಯಾಗುತ್ತಿತ್ತು. ಸರ್ಕಾರ ಅಸ್ಥಿರವಾಗುತ್ತಿತ್ತು. ಆದರೂ ಫ್ರಾನ್ಸಿನ ಒತ್ತಾಯಕ್ಕೆ ಮಣಿದು ಐಎಂಎಫ್ ಹಾಗೂ ಜಾಗತಿಕ ಬ್ಯಾಂಕಿನ ಷರತ್ತುಗಳಿಗೆ ಮಣಿಯಬೇಕಾಯಿತು. ಕರೆನ್ಸಿಯ ಅಪಮೌಲ್ಯದಿಂದ ರಫ್ತು ಹೆಚ್ಚುತ್ತದೆ ಎನ್ನುವುದು ಅವರ ವಾದವಾಗಿತ್ತು. ಆದರೆ ಅವರು ರಫ್ತು ಮಾಡುತ್ತಿದ್ದುದು ಹೆಚ್ಚಾಗಿ ಕಚ್ಚಾ ಪದಾರ್ಥಗಳು. ಅವೆಲ್ಲಾ ಅಗ್ಗದ ಸರಕುಗಳು. ಆಮದು ಮಾಡಿಕೊಳ್ಳುತ್ತಿದ್ದುದು ಆಹಾರ ಪದಾರ್ಥಗಳು, ಎಣ್ಣೆ, ಔಷಧಿ, ಯಂತ್ರಗಳು. ಇವಕ್ಕೆ ದುಬಾರಿ ಬೆಲೆ ತೆರಬೇಕಾಯಿತು. ವ್ಯಾಪಾರದ ಕೊರತೆ ಹೆಚ್ಚುತ್ತಾ ಹೋಯಿತು. ಜೊತೆಗೆ ಹದಿನಾಲ್ಕೂ ದೇಶಗಳಿಗೂ ಒಂದೇ ನಿಯಮವನ್ನು ಅನ್ವಯಿಸುವುದಕ್ಕೆ ಯಾವುದೇ ಆರ್ಥಿಕ ಸಮರ್ಥನೆಯೂ ಇಲ್ಲ. ಅದು ಪ್ರಜಾಸತ್ತಾತ್ಮಕವೂ ಅಲ್ಲ. ಅದರಿಂದ ಅನುಕೂಲವಾಗಿದ್ದು ಫ್ರಾನ್ಸಿಗೆ ಮಾತ್ರ. ಫ್ರಾನ್ಸಿನ ಹಣಕಾಸಿನ ಸಾಮರ್ಥ್ಯ ದುಪ್ಪಟ್ಟಾಯಿತು.

ಐಎಂಎಫ್ ತನ್ನ ಹಟವನ್ನು ತೀರಿಸಿಕೊಂಡಿತು. ತನ್ನ ಉದಾರವಾದಿ ನೀತಿಯನ್ನು ಫ್ರಾಂಕ್ ವಲಯದಲ್ಲಿ ಜಾರಿಗೆ ತರುವುದು ಸುಲಭವಾಯಿತು. ಆಫ್ರಿಕಾದ ಪದಾರ್ಥಗಳು ಪಾಶ್ಚಾತ್ಯ ದೇಶಗಳಿಗೆ ಅಗ್ಗವಾದವು. ಅಪಮೌಲ್ಯದಿಂದ ಆಫ್ರಿಕಾದ ಜನರ ಕೊಳ್ಳುವ ಶಕ್ತಿ ಕಡಿಮೆಯಾಯಿತು. ಆಮದು ಪದಾರ್ಥಗಳ ಬೆಲೆ ವಿಪರೀತವಾಯಿತು. ಅದರಿಂದಾಗಿ ಅವರ ಬದುಕು ಹೈರಾಣವಾಯಿತು. ಅಸಮಾನತೆ, ನಿರುದ್ಯೋಗ ಎಲ್ಲವೂ ವಿಪರೀತವಾಯಿತು.

ಯೂರೊ ಯುಗ

ಫ್ರಾನ್ಸ್‌ನಲ್ಲಿ ಯೂರೋ ಜಾರಿಗೆ ಬಂತು. ಯೂರೋ ಬಂದ ನಂತರವೂ ಫ್ರಾಂಕ್ ವಲಯ ಉಳಿದುಕೊಂಡಿತು. ಸಿಎಫ್ಎ ಫ್ರಾಂಕ್, ಸಿಎಫ್ಎ ಯೂರೋ ಆಯಿತು. ಇವೆಲ್ಲವೂ ಫ್ರಾನ್ಸಿನ ನಿರ್ಧಾರ. ಹಣಕಾಸು ಹಾಗೂ ವಿನಿಮಯ ದರಕ್ಕೆ ಸಂಬಂಧಿಸಿದ ನಿರ್ಧಾರಗಳನ್ನು 'ಯುರೋಪಿಯನ್ ಎಕನಾಮಿಕ್ ಹಾಗೂ ಮಾನಿಟರಿ ಯೂನಿಯನ್' ತೆಗೆದುಕೊಳ್ಳುತ್ತಿತ್ತು. ಆದರೆ ಫ್ರಾಂಕ್ ಜೋನ್ ಮೇಲಿನ ನಿಯಂತ್ರಣವನ್ನು ಫ್ರಾನ್ಸ್ ಬಿಟ್ಟುಕೊಡಲಿಲ್ಲ. ಫ್ರಾಂಕ್ ವಲಯ ಯುರೋ–ಆಫ್ರಿಕನ್ ವಲಯ ಆಯಿತು. ಅದರ ನಿಯಂತ್ರಣ ಫ್ರಾನ್ಸ್ ಕೈಯಲ್ಲೇ ಉಳಿಯಿತು.

ಯೂರೋ ಬಂದಿದ್ದರಿಂದ ಫ್ರಾಂಕ್ ವಲಯಕ್ಕೆ ಹೆಚ್ಚಿನ ಅವಕಾಶಗಳು ತೆರೆದುಕೊಳ್ಳುತ್ತವೆ ಎಂದು ಫ್ರೆಂಚ್ ಪ್ರತಿಪಾದಕರು ವಾದಿಸಿದರು. ಆದರೆ ಆಫ್ರಿಕಾದ ಅರ್ಥಶಾಸ್ತ್ರಜ್ಞರಿಗೆ ಇದು ಸರಿ ಎನಿಸಲಿಲ್ಲ. ಈಗ ಆಫ್ರಿಕಾದ ಕರೆನ್ಸಿ ಯೂರೋ ಜೊತೆಗೆ ತಳುಕು ಹಾಕಿಕೊಂಡಿದೆ. ಅದರ ವಿನಿಮಯ ದರವನ್ನು ಹೆಚ್ಚು ಕಮ್ಮಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದರಿಂದ ಆಫ್ರಿಕಾದ ದೇಶಗಳಿಗೆ ಸ್ವತಂತ್ರ ಹಣಕಾಸು ನೀತಿಗಳನ್ನು ರೂಪಿಸುವುದಕ್ಕೆ ಆಗುವುದಿಲ್ಲ. ಯೂರೋ ವಲಯದ ಆರ್ಥಿಕ ನೀತಿಗೆ ಹೊಂದಿಕೊಂಡೇ ಹೋಗಬೇಕಾಗುತ್ತದೆ ಎಂದು ವಾದಿಸಿದರು. ಆದರೆ ಇವರ ಅಭಿಪ್ರಾಯಕ್ಕೆ ಆಫ್ರಿಕಾದ ಬಹುತೇಕ ನಾಯಕರು ಕಿವಿಗೊಡಲಿಲ್ಲ.

೨೦೧೪ರಲ್ಲಿ ತೈಲದ ಬೆಲೆ ಅರ್ಧಕ್ಕೆ ಕುಸಿಯಿತು. ತೈಲ ಉತ್ಪಾದಿಸುವ ಆಫ್ರಿಕಾದ ದೇಶಗಳಲ್ಲಿ ಬಿಕ್ಕಟ್ಟು ಪ್ರಾರಂಭವಾಯಿತು. ಈ ದೇಶಗಳ ಬಜೆಟ್ಟಿನ ಅರ್ಧ ಆದಾಯ ತೈಲದ ರಫ್ತಿನಿಂದ ಬರುತ್ತಿತ್ತು. ಸರ್ಕಾರಗಳು ಹೂಡಿಕೆಯನ್ನು ಅರ್ಧಕ್ಕೆ ಇಳಿಸಿಕೊಳ್ಳಬೇಕಾಯಿತು. ಜಿಡಿಪಿ ಕುಸಿಯಿತು. ಬಜೆಟ್ ಕೊರತೆ ವಿಪರೀತವಾಯಿತು. ಭಯೋತ್ಪಾದಕರ ದಾಳಿಯನ್ನು ಎದುರಿಸುವುದಕ್ಕೂ ಕಷ್ಟವಾಯಿತು. ಆಪರೇಷನ್ ಅಕೌಂಟಿನಲ್ಲಿ ವಿದೇಶಿ ವಿನಿಮಯದ ಮೀಸಲು ವಿಪರೀತ ಕುಸಿಯಿತು. ವಿದೇಶಿ ವಿನಿಮಯದ ಕೊರತೆಯುಂಟಾದಾಗ ಫ್ರಾನ್ಸ್ ನೆರವು ನೀಡಬೇಕಿತ್ತು. ಆದರೆ ಅದು ವಿದೇಶಿ ಪಾವತಿ ಕೊರತೆಯನ್ನು ತುಂಬಿಕೊಡಲಿಲ್ಲ. ಕೊರತೆ ಬೀಳುವುದೇ ಅಪರೂಪ. ಜೊತೆಗೆ ಫ್ರಾನ್ಸಿಗೆ ಹೋಲಿಸಿದರೆ ಈ ರಾಷ್ಟ್ರಗಳ ಆರ್ಥಿಕತೆ ತುಂಬಾ ಪುಟ್ಟದಾಗಿದ್ದವು. ಜನಸಂಖ್ಯೆ ಫ್ರಾನ್ಸಿಗಿಂತ ಎರಡು–ಮೂರು ಪಟ್ಟು ಹೆಚ್ಚಿದ್ದರೂ ಈ ರಾಷ್ಟ್ರಗಳ ಜಿಡಿಪಿ ಫ್ರಾನ್ಸಿನ ಜಿಡಿಪಿಯ ಶೇಕಡ ೭ರಷ್ಟಿತ್ತು. ಹಾಗಾಗಿ ಫ್ರಾನ್ಸಿಗೆ ಹೊರೆಯಾಗುತ್ತಿರಲಿಲ್ಲ. ಆದರೂ ಫ್ರಾನ್ಸ್ ವಿದೇಶಿ ಕರೆನ್ಸಿಯನ್ನು ಪಾವತಿಸಲಿಲ್ಲ. ಐಎಂಎಫ್ (IMF) ಇಂದ ಸಾಲ ಪಡೆಯುವುದಕ್ಕೆ ಈ ರಾಷ್ಟ್ರಗಳಿಗೆ ಇಷ್ಟವಿರಲಿಲ್ಲ. ಅವುಗಳ ಷರತ್ತುಗಳ ಸಮಸ್ಯೆ ಇವುಗಳಿಗೆ ಅನುಭವವಾಗಿತ್ತು. ಆಫ್ರಿಕನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ನೆರವು ಪಡೆಯಲು ಪ್ರಯತ್ನಿಸಿದವು. ಆದರೆ ಅಲ್ಲೂ ಫ್ರಾನ್ಸಿನ ಪ್ರಾತಿನಿಧ್ಯ ಇದ್ದುದರಿಂದ ಫ್ರಾನ್ಸ್ ಅಡ್ಡಿಪಡಿಸಿತು. ಕೊನೆಗೆ ಫ್ರಾನ್ಸ್ ಒತ್ತಾಯಕ್ಕೆ ತಲೆಬಾಗಬೇಕಾಯಿತು. ಮತ್ತೆ ಐಎಂಎಫ್ ಇಂದ ಸಾಲ ಪಡೆಯಬೇಕಾಯಿತು. ಇದನ್ನು ಗಮನಿಸಿದರೆ ಇಂದಿಗೂ ಇವರ ಆರ್ಥಿಕ ನಿರ್ಧಾರಗಳನ್ನು ಫ್ರಾನ್ಸ್ ಪ್ರಭಾವಿಸುತ್ತಿರುವುದು ತಿಳಿಯುತ್ತದೆ. ಜೊತೆಗೆ ಬಹುತೇಕ ಆಫ್ರಿಕಾದ ನಾಯಕರು ಒಂದಲ್ಲ ಒಂದು ಅಕ್ರಮಗಳಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರ ಆಡಳಿತದಲ್ಲಿ ಪಾರದರ್ಶಕತೆಯೂ ಇಲ್ಲ. ಹಾಗಾಗಿ ಫ್ರಾನ್ಸಿನ ಒತ್ತಡಕ್ಕೆ ಮಣಿಯಬೇಕಾಗುತ್ತದೆ.

ಹಣಕಾಸಿನ ಸ್ವಾತಂತ್ರ್ಯ ಇದ್ದಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ. ಉದಾಹರಣೆಗೆ ನೈಜೀರಿಯಾ ಆಫ್ರಿಕನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಪಡೆದುಕೊಂಡಿತು. ನಂತರ ಫ್ರಾನ್ಸ್ ಅಡ್ಡಿಬಂದಾಗ ಚೀನಾದಿಂದ ಸಾಲ ಪಡೆದುಕೊಂಡಿತು.

ಫ್ರಾನ್ಸ್ ಕೂಡ ಆಫ್ರಿಕಾದ ದೇಶಗಳಿಗೆ ಸಾಲ ಕೊಟ್ಟಿದೆ. ಆ ದೇಶಗಳ ಮೇಲೆ ತನ್ನ ನಿಯಂತ್ರಣವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಲವನ್ನು ಬಳಸಿಕೊಳ್ಳುತ್ತದೆ. ಹಾಗೆ ಸಾಲ ಕೊಡುವಾಗ ಷರತ್ತುಗಳನ್ನು ಹಾಕುತ್ತದೆ. ಉದಾಹರಣೆಗೆ ಕ್ಯಾಮರೂನ್ ಫ್ರಾನ್ಸಿನಿಂದ ಸರಕು ಹಾಗೂ ಸೇವೆಯನ್ನು ಕೊಳ್ಳಬೇಕಿತ್ತು; ಕಂಟ್ರಾಕ್ಟುಗಳನ್ನು ಫ್ರಾನ್ಸಿನ ಕಂಪೆನಿಗಳಿಗೆ ಕೊಡಬೇಕು, ಇತ್ಯಾದಿ. ಅಂತಿಮವಾಗಿ ಫ್ರಾನ್ಸ್ ನೀಡುವ ಸಾಲದ ಬಹುಭಾಗ ಫ್ರಾನ್ಸಿನ ಬಹುರಾಷ್ಟ್ರೀಯ ಕಂಪೆನಿಗಳಿಗೆ ಹೋಗುತ್ತಿತ್ತು. ಸ್ಥಳೀಯ ಕಂಪೆನಿಗಳಿಗೆ ಅನುಕೂಲವೇ ಆಗುತ್ತಿರಲಿಲ್ಲ. ಐಎಂಎಫ್ ಸಾಲವೂ ಹೀಗೆ ಆಗುತ್ತಿತ್ತು. ಜೊತೆಗೆ ಈ ಕಂಪೆನಿಗಳು ಲಾಭವನ್ನು ಫ್ರಾನ್ಸಿಗೆ ಸಾಗಿಸಿ ಬಿಡುತ್ತಿದ್ದವು. ಆಫ್ರಿಕಾದಲ್ಲಿ ಕೈಗಾರಿಕೀಕರಣ ಸಾಧ್ಯವೇ ಆಗುತ್ತಿರಲಿಲ್ಲ. ಫ್ರಾನ್ಸಿನ ಸರಕು ಹಾಗೂ ಸೇವೆಗೆ ಶಾಶ್ವತ ಮಾರುಕಟ್ಟೆಯಾಗಿಬಿಟ್ಟವು. ಇದೊಂದು ವಿಷವೃತ್ತ. ಮಾರುಕಟ್ಟೆ ಇಲ್ಲದೆ ಸ್ಥಳೀಯ ಉತ್ಪಾದನೆ ಹೆಚ್ಚೆಚ್ಚು ಸೊರಗುತ್ತಾ ಹೋಯಿತು.

ಫ್ರೆಂಚ್ ಕಂಪೆನಿಗಳು ಏಕಸ್ವಾಮ್ಯ ಕಂಪೆನಿಗಳಾಗಿಬಿಟ್ಟಿವೆ. ಆಫ್ರಿಕನ್ ದೇಶಗಳು ಫ್ರಾನ್ಸಿನಿಂದ ಆಮದು ಮಾಡಿಕೊಳ್ಳುವ ಪದಾರ್ಥಗಳಿಗೆ ಬೇರೆಯವರಿಗಿಂತ ೨೦ ರಿಂದ ೩೦% ಹೆಚ್ಚು ಬೆಲೆ ತೆರುತ್ತವೆ. ಹಾಗೆಯೇ ಫ್ರಾನ್ಸ್ ಆಫ್ರಿಕಾದ ಪದಾರ್ಥಗಳಿಗೆ ಜಾಗತಿಕ ಬೆಲೆಗಿಂತ ಕಡಿಮೆ ಕೊಡುತ್ತದೆ. ಇಲ್ಲಿಯ ಸಂಪನ್ಮೂಲವನ್ನು ಸಾಗಿಸುತ್ತಿರುವ ಫ್ರಾನ್ಸಿನ ಕಂಪೆನಿಗಳು ಕೊಡುತ್ತಿರುವ ರಾಯಲ್ಟಿಯೂ ತುಂಬಾ ಕಡಿಮೆ. ನೈಜರ್ ಕಳೆದ ನಲವತ್ತು ವರ್ಷದಲ್ಲಿ ಯುರೇನಿಯಂ ರಫ್ತಿನಿಂದ ಪಡೆದಿರುವುದು ಈರುಳ್ಳಿ ವ್ಯಾಪಾರದಿಂದ ಪಡೆದಿರುವುದಕ್ಕಿಂತ ಹೆಚ್ಚೇನಲ್ಲ. ನೈಜರ್ ಹೆಚ್ಚಿನ ಬೆಲೆಗೆ ಒತ್ತಾಯಿಸಿದಾಗೆಲ್ಲಾ ಮಿಲಿಟರಿ ದಂಗೆಯ ಮೂಲಕ ಸರ್ಕಾರವನ್ನು ಬೀಳಿಸುವ ಪ್ರಯತ್ನಗಳು ನಡೆದಿವೆ. ಫ್ರಾನ್ಸಿನ ಮುಕ್ಕಾಲು ವಿದ್ಯುತ್ ತಯಾರಾಗುವುದು ನೈಜರ್‌ನ ಯುರೇನಿಯಂನಿಂದ. ಆಫ್ರಿಕಾದ ಸಂಪತ್ತಿಲ್ಲದಿದ್ದರೆ ಫ್ರಾನ್ಸ್ ಅಷ್ಟೊಂದು ಪ್ರಬಲವಾಗುತ್ತಿರಲಿಲ್ಲ.

ಚೀನಾ ಆಫ್ರಿಕಾವನ್ನು ಪ್ರವೇಶಿಸಿದ ಮೇಲೆ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಯಾಗುತ್ತಿದೆ. ಮಾರುಕಟ್ಟೆಯಲ್ಲಿ ಅದರಲ್ಲೂ ವಿಶೇಷವಾಗಿ ಫ್ರಾಂಕ್ ವಲಯದಲ್ಲಿ ಚೀನಾ ಹೆಚ್ಚು ಸಕ್ರಿಯವಾಗುತ್ತಿದೆ. ಫ್ರಾನ್ಸಿನ ಪಾಲು ಕಡಿಮೆಯಾಗುತ್ತಿದೆ. ಚೀನಾ ಕೊಡುತ್ತಿರುವ ಸಾಲದ ಪ್ರಮಾಣವೂ ಹೆಚ್ಚುತ್ತಿದೆ. ಆಫ್ರಿಕಾದ ಒಟ್ಟು ಸಾಲದಲ್ಲಿ ಚೀನಾದ ಪಾಲು ಶೇಕಡ ೫೫ಕ್ಕಿಂತ ಹೆಚ್ಚಿದೆ.

ಕೆಲವು ಮಿಥ್ಯಗಳು:

ಸಿಎಫ್ಎ ಫ್ರಾಂಕಿನಿಂದ ಆಫ್ರಿಕಾದ ದೇಶಗಳ ಬೆಳವಣಿಗೆ ಸಾಧ್ಯವಾಗಿದೆ ಅನ್ನುವುದು ಒಂದು ಮಿಥ್ಯೆ. ಹೆಚ್ಚಿನ ದೇಶಗಳ ಬೆಳವಣಿಗೆಯ ದರ ೧%ಗಿಂದ ಕಡಿಮೆ ಇದೆ. ಕೇವಲ ಐದು ದೇಶಗಳಲ್ಲಿ ಶೇಕಡ ೧% ದಾಟಿದೆ. ಫ್ರಾಂಕ್ ವಲಯದ ೧೦ ದೇಶಗಳನ್ನು ಯುನೈಟೆಡ್ ನೇಷನ್ಸ್ "ತೀರಾ ಹಿಂದುಳಿದ ದೇಶಗಳು" ಎಂದು ಗುರುತಿಸಿದೆ. ಅಂದರೆ ಅಲ್ಲಿ ಜನಸಂಖ್ಯೆ ೭೫ ಮಿಲಿಯನ್‌ಗಿಂತ ಕಡಿಮೆ ಇದೆ. ತಲಾ ವರಮಾನ, ಮಾನವ ಅಭಿವೃದ್ಧಿ ಸೂಚಿ ಇತ್ಯಾದಿ ಸೂಚಿಗಳೆಲ್ಲವೂ ತೀರಾ ಕಡಿಮೆ ಇದೆ. ೪೭ ತೀರಾ ಹಿಂದುಳಿದ ದೇಶಗಳಲ್ಲಿ ೩೩ ಸಬ್–ಸಹರನ್ ಆಫ್ರಿಕಾದಲ್ಲಿವೆ. ಸಿಎಫ್ಎ ಫ್ರಾಂಕಿನಿಂದಲೇ ಇವೆಲ್ಲಾ ಹಿಂದಿವೆ ಅಂತಲ್ಲ. ಆದರೆ ಅದರಿಂದ ಬೆಳವಣಿಗೆಯಾಗಿದೆ ಅನ್ನುವ ವಾದಕ್ಕೆ ಅರ್ಥವಿಲ್ಲ.

ಇದರಿಂದ ಪ್ರಾದೇಶಿಕ (ಪ್ರಾಂತೀಯ) ಐಕ್ಯತೆ ಸಾಧ್ಯವಾಗಿದೆ ಹಾಗೂ ಅದರಿಂದ ವ್ಯಾಪಾರ ಹೆಚ್ಚಿದೆ ಅನ್ನುವುದು ಇನ್ನೊಂದು ಮಿಥ್ಯೆ. ಫ್ರಾಂಕ್ ವಲಯದಲ್ಲಿ ದೇಶಗಳು ಒಟ್ಟಾಗಿ ಒಂದು ಆರ್ಥಿಕ ಪ್ರದೇಶ



ಬುರ್ಕಿನಾ ಫಾಸೊ, ಮಾಲಿ ಹಾಗೂ ನೈಜರ್ ಮೂರು ದೇಶಗಳು ಸೇರಿಕೊಂಡು 'ಸಹೆಲಿಯನ್ ರಾಷ್ಟ್ರಗಳ ಒಕ್ಕೂಟ' (Alliance of Sahel States - AES)ವನ್ನು ರಚಿಸಿಕೊಂಡಿವೆ

ರೂಪುಗೊಂಡಿದೆ ಅನ್ನುವುದು ನಿಜವಾದರೂ ಅದರಿಂದ ವ್ಯಾಪಾರ ಬೆಳೆಯುತ್ತಿದೆ ಅನ್ನುವುದು ನಿಜವಲ್ಲ. ಇಂದಿಗೂ ಈ ದೇಶಗಳು ಕಚ್ಚಾ ಮಾಲನ್ನು ಮಾರುತ್ತಿರುವುದು ಯುರೋಪಿಗಷ್ಟೆ. ಫ್ರಾಂಕ್ ವಲಯದಲ್ಲಿ ಸ್ಥಿರ ವಿನಿಮಯ ದರ, ಹಣದುಬ್ಬರದ ನಿಯಂತ್ರಣ, ಬಜೆಟ್ ಶಿಸ್ತು ಇವೆಲ್ಲಾ ಸಿಎಫ್ಎ ಫ್ರಾಂಕಿನಿಂದ ಸಾಧ್ಯವಾಗಿದೆ, ಅದರಿಂದಾಗಿ ವಿದೇಶಿ ಹೂಡಿಕೆ ಹರಿದು ಬರುತ್ತಿದೆ ಅನ್ನುವುದು ಇನ್ನೊಂದು ಮಿಥ್ಯೆ. ವಿದೇಶಿ ಹೂಡಿಕೆ ಹೆಚ್ಚಾಗಿ ಹೋಗುತ್ತಿರುವುದು ಹೈಡ್ರೋಕಾರ್ಬನ್, ಖನಿಜ ಸಂಪತ್ತು ಇರುವ ದೇಶಗಳಿಗೆ. ಅತಿ ಹೆಚ್ಚು ವಿದೇಶಿ ಹೂಡಿಕೆ ಇರುವ ಘಾನಾ ತನ್ನದೇ ಆದ ಕರೆನ್ಸಿಯನ್ನು ಹೊಂದಿದೆ. ಹಾಗಾಗಿ ವಿದೇಶಿ ಹೂಡಿಕೆಗೆ ಸಿಎಫ್ಎ ಫ್ರಾಂಕ್ ಕಾರಣವಾಗಿಲ್ಲ.

ಈ ದೇಶಗಳ ಪ್ರಮುಖ ಆರ್ಥಿಕ ಸಂಪನ್ಮೂಲ ಅಂದರೆ ನೈಸರ್ಗಿಕ ಸಂಪತ್ತು. ಅದು ವಿದೇಶಿ ಬಂಡವಾಳದ ನಿಯಂತ್ರಣದಲ್ಲಿದೆ ಹಾಗೂ ಬಂಡವಾಳದ ಮುಕ್ತ ಹರಿವಿಗೆ ಅವಕಾಶವಿದೆ. ಅಂದರೆ ಲೂಟಿಗೆ ಮುಕ್ತ ಪರವಾನಗಿ ಕೊಟ್ಟ ಹಾಗೆ. ಬಂಡವಾಳದ ಹೊರಹರಿವು ಹಾಗೂ ಒಳಹರಿವಿನ ವ್ಯತ್ಯಾಸ ನೋಡಿದರೆ ಲೂಟಿ ಪ್ರಮಾಣ ತಿಳಿಯುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳು ಆಫ್ರಿಕಾದ ದೇಶಗಳಿಂದ ಹೊರಗೆ ಸಾಗಿಸಿರುವ ಲಾಭದ ಪ್ರಮಾಣ ದೇಶದ ಒಟ್ಟಾರೆ ಉತ್ಪನ್ನಗಳ ಸುಮಾರು ಅರ್ಧದಷ್ಟು ಇತ್ತು. ಎಲ್ಲಾ ಆಫ್ರಿಕಾದ ದೇಶಗಳಂತೆ ಫ್ರಾಂಕ್ ಜೋನಿನ ದೇಶಗಳೂ ಬಂಡವಾಳದ ಹೊರಹರಿವಿನ ಬಲಿಪಶುಗಳೇ. ಇವೆಲ್ಲಾ ಬಹುತೇಕ ಅಕ್ರಮವಾಗಿ ಸಂಪಾದಿಸಿದ ಹಾಗೂ ಅಕ್ರಮವಾಗಿ ಹೊರ ಸಾಗಿಸಿದ ಬಂಡವಾಳ. ಇಡೀ ವ್ಯವಹಾರ ಸುಳ್ಳು ಇನ್‌ವಾಯ್ಸ್, ಸುಳ್ಳು ಲೆಕ್ಕ ಇತ್ಯಾದಿಗಳ ಮೂಲಕ ನಡೆಯುತ್ತವೆ. ಆಫ್ರಿಕಾಕ್ಕೆ ನೀಡಿದ ಒಂದು ಡಾಲರ್ ಸಾಲದಲ್ಲಿ ೬೦ ಸೆಂಟ್ ಹೊರಗೆ ಹೋಗುತ್ತದೆ. ಐವರಿ ಕೋಸ್ಟ್ ಒಂದರಿಂದಲೇ ೧೯೭೦ ಹಾಗೂ ೨೦೦೮ರ ನಡುವೆ ೬೬.೨ ಬಿಲಿಯನ್ ಡಾಲರ್ ಹೊರ ಹರಿದಿದೆ. ವಿದೇಶಿ ಸಾಲಕ್ಕಿಂತ ಹೊರಹರಿವು ಹಲವು ಪಟ್ಟು ಹೆಚ್ಚಿದೆ. ಗಬಾನ್, ಐವರಿ ಕೋಸ್ಟ್ ಹಾಗೂ ಕಾಂಗೊದಲ್ಲಿ ಹೊರಹರಿವು ೯೨೩%, ೫೨೬% ಹಾಗೂ ೪೯೦% ಇತ್ತು.

ಬಂಡವಾಳದ ಹೊರಹರಿವಿನಿಂದಾಗಿ ಈ ದೇಶಗಳ ಬೆಳವಣಿಗೆ ಕುಂಠಿತವಾಗಿದೆ. ಸ್ಥಳೀಯ ಸಂಪನ್ಮೂಲವೆಲ್ಲಾ ಬಹುತೇಕ ಅಕ್ರಮ ಸಾಲವನ್ನು ತೀರಿಸುವುದಕ್ಕೆ ಹೋಗುತ್ತದೆ. ಅಲ್ಪಸ್ವಲ್ಪ ಬೆಳವಣಿಗೆಯ ಫಲವೂ ಕೆಲವರಿಗೆ ಹೋಗುವುದರಿಂದ ಆರ್ಥಿಕ ಅಸಮಾನತೆಯೂ ಹೆಚ್ಚುತ್ತದೆ. ಅಧಿಕಾರವೂ ಕೆಲವರಲ್ಲೇ ಉಳಿಯುತ್ತದೆ. ಇದರಿಂದ ಆಫ್ರಿಕಾದ ಆರ್ಥಿಕತೆಯ ಶೋಷಣೆಯ ಜೊತೆಗೆ ಅಕ್ರಮ ರಾಜಕೀಯ ಆಡಳಿತಕ್ಕೆ ಅವಕಾಶವಾಗುತ್ತದೆ. ಸಾರ್ವಜನಿಕ ಯೋಗಕ್ಷೇಮ ಮರೀಚಿಕೆಯಾಗುತ್ತದೆ. ಆರೋಗ್ಯ ಹಾಗೂ ಶಿಕ್ಷಣಕ್ಕೆ ಖರ್ಚು ಮಾಡಬೇಕಾದ ಹಣ ಸಾಲದ ಮರುಪಾವತಿಗೆ ಬಳಕೆಯಾಗುತ್ತದೆ. ಇವೆಲ್ಲಾ ಸ್ವಂತ ಕರೆನ್ಸಿ ಇಲ್ಲದ್ದರ ಪರಿಣಾಮ.

ಇಷ್ಟು ದಿನ ಮರೆಯಲ್ಲೇ ಇಡಲಾಗಿದ್ದ ಸಿಎಫ್ಎ ಫ್ರಾಂಕ್ ಚರ್ಚೆಗೆ ಬರುತ್ತಿದೆ. ಸಮೀರ್ ಅಮೀನ್ ಹಾಗೂ ಜೋಸೆಫ್ ಚುಂಡಜಾಂಗ್ ಪೌವೋಮಿ (Joseph Tchundjang Pouemi) ಅವರ ವಾದಗಳು ಸ್ವಲ್ಪ ತಾಂತ್ರಿಕವಾಗಿವೆ. ಇವರ ದೃಷ್ಟಿಯಲ್ಲಿ ಕೊಳ್ಳುವ ಶಕ್ತಿ ಹೆಚ್ಚಬೇಕಾದರೆ ಅವರ ಬಳಿ ಹಣ ಇರಬೇಕು. ಅದು ಉತ್ಪಾದನೆಗೆ ಅವಶ್ಯಕ. ಬಂಡವಾಳ ಸಿಗದೆ ಹೋದರೆ ಉತ್ಪಾದನೆಯಲ್ಲಿ ಬೆಳವಣಿಗೆ ಸಾಧ್ಯವಿಲ್ಲ. ಹಾಗಾಗಿ ಹಣವನ್ನು ಕೇವಲ ವಿನಿಮಯದ ಮಾಧ್ಯಮವನ್ನಾಗಿ ನೋಡುವುದಕ್ಕೆ ಆಗುವುದಿಲ್ಲ. ಇದನ್ನು ೨೦೦೭–೦೮ ಆರ್ಥಿಕ ಬಿಕ್ಕಟ್ಟು ಸ್ಪಷ್ಟವಾಗಿ ತೋರಿಸಿದೆ. ಅದಕ್ಕೆ ತಕ್ಕಂತೆ ಸಿಎಫ್ಎ ಫ್ರಾಂಕಿನಲ್ಲೂ ಕೆಲವು ಬದಲಾವಣೆಗಳು ಆಗಬೇಕಾಗಿದೆ. ಕೇಂದ್ರ ಬ್ಯಾಂಕು ಕೇವಲ ಬೆಲೆ ಸ್ಥಿರತೆಯ ಕಡೆಗೆ ಗಮನಿಸುವ ಬದಲು ಬೆಳವಣಿಗೆ ಹಾಗೂ ಅಭಿವೃದ್ಧಿಯ ಕಡೆಗೆ ಗಮನ ಕೊಡಬೇಕು.

ಇತ್ತೀಚಿನ ದಿನಗಳಲ್ಲಿ ಸಿಎಫ್ಎ ಫ್ರಾಂಕ್ ವಿರುದ್ಧ ಧ್ವನಿ ಏಳುತ್ತಿದೆ. ಸ್ವತಂತ್ರ ಕರೆನ್ಸಿಗಾಗಿ ಒತ್ತಾಯ ಹೆಚ್ಚುತ್ತಿದೆ. ಆಪರೇಷನ್ ಖಾತೆಯ ವಿರುದ್ಧವೂ ಧ್ವನಿ ಅಷ್ಟೇ ತೀವ್ರವಾಗುತ್ತಿದೆ. ಆದರೆ ನಿಜವಾದ ಬದಲಾವಣೆಯಾಗಬೇಕಾದರೆ ಫ್ರಾಂಕ್ ವಲಯದ ಬೇರೆ ಬೇರೆ ದೇಶಗಳು ಈ ಹೋರಾಟವನ್ನು ಕೈಗೆ ತೆಗೆದುಕೊಳ್ಳಬೇಕು. ಆದರೆ ಆ ದೇಶಗಳಲ್ಲಿ ಒಮ್ಮತವಿಲ್ಲ. ಅವರಲ್ಲಿ ಹಲವು ದೇಶಗಳು ಇಂದಿಗೂ




ಫ್ರಾನ್ಸನ್ನು ಬೆಂಬಲಿಸುತ್ತಿವೆ. ಫ್ರಾನ್ಸಿನಲ್ಲೂ ಕಮ್ಯುನಿಸ್ಟ್ ಪಕ್ಷವನ್ನು ಹೊರತುಪಡಿಸಿ ಯಾರೂ ಸಿಎಫ್‌ಎ ಫ್ರಾಂಕನ್ನು ವಿರೋಧಿಸುತ್ತಿಲ್ಲ. ಆಫ್ರಿಕಾದ ದೇಶಗಳಲ್ಲಿ ಒಮ್ಮತ ಕಷ್ಟ ಅಂತ ಫ್ರಾನ್ಸಿಗೆ ಸ್ಪಷ್ಟವಾಗಿ ಗೊತ್ತು. ಈ ದೌರ್ಬಲ್ಯವನ್ನು ಫ್ರಾನ್ಸ್ ಆಡಳಿತ ಬಳಸಿಕೊಳ್ಳುತ್ತಿದೆ. ಅದು ತನ್ನ ಹಿಡಿತವನ್ನು ಸಡಿಲಿಸಬೇಕಾದರೆ ಆಫ್ರಿಕಾದಲ್ಲಿ ಸಂಘರ್ಷ ತೀವ್ರವಾಗಬೇಕು. ಎಲ್ಲಾ ಕೈಬಿಟ್ಟು ಹೋಗುತ್ತದೆ ಅನ್ನುವ ಆತಂಕ ಅವರಿಗೆ ಸೃಷ್ಟಿಯಾಗಬೇಕು. ಇಕ್ವೆಟೋರಿಯಲ್ ಗಿನಿ ಅಮೆರಿಕದೊಂದಿಗೆ ತೈಲ ವ್ಯಾಪಾರಕ್ಕೆ ಮುಂದಾದಾಗ ವಿದೇಶಿ ವಿನಿಮಯದ ಮೀಸಲನ್ನು ೫೦%ಗೆ ಇಳಿಸಲು ಫ್ರಾನ್ಸ್ ಒಪ್ಪಿಕೊಂಡಿದ್ದು. ಈಗ ಆಫ್ರಿಕನ್ ಕರೆನ್ಸಿಗೆ ಗ್ಯಾರಂಟಿ ನೀಡುವ ಸಾಮರ್ಥ್ಯವು ಪ್ಯಾರಿಸ್ಸಿಗೆ ಕಮ್ಮಿಯಾಗುತ್ತಿದೆ. ಅದರ ಆರ್ಥಿಕತೆ ಕುಗ್ಗುತ್ತಿದೆ. ಜೊತೆಗೆ ಫ್ರಾಂಕ್ ಜೋನಿನ ತೈಲದ ಲಭ್ಯತೆಯೂ ಕಡಿಮೆಯಾಗುತ್ತಿದೆ. ಅದರಿಂದ ವಿದೇಶಿ ವಿನಿಮಯದ ಮೀಸಲು ಕಮ್ಮಿಯಾಗುತ್ತದೆ. ಜೊತೆಗೆ ಫ್ರೆಂಚ್ ವಿರೋಧ ಭಾವನೆಯೂ ಫ್ರಾಂಕ್ ಜೋನಿನಲ್ಲಿ ಬೆಳೆಯುತ್ತಿದೆ.

ಸಿಎಫ್‌ಎ ಫ್ರಾಂಕ್ ವಲಯದಿಂದ ಹೊರಬರಬೇಕು ಅನ್ನುವುದು ಇಂದಿನ ಕರೆಯಾಗುತ್ತಿದೆ. ನಮ್ಮ ಸಂಪನ್ಮೂಲ ನಮ್ಮ ಬಳಕೆಗೆ ಇರಲಿ ಅನ್ನುವ ಧ್ವನಿ ಜೋರಾಗಿಯೇ ಕೇಳುತ್ತಿದೆ. ಬುರ್ಕಿನಾ ಫಾಸೊದಲ್ಲಿ ಅಧ್ಯಕ್ಷ ಇಬ್ರಾಹಿಂ ಟ್ರವೋರೆ ನಾಯಕತ್ವದಲ್ಲಿ ಈ ಧ್ವನಿ ಒಂದು ರೂಪ ಪಡೆದುಕೊಳ್ಳುತ್ತದೆ. ಮಿಲಿಟರಿ ದಂಗೆಯಿಂದ ಆಡಳಿತಕ್ಕೆ ಬಂದ ಟ್ರವೋರೆ ಜನರ ತಕ್ಷಣದ ಅವಶ್ಯಕತೆಗಳಿಗೆ ಸಕ್ರಿಯವಾಗಿ ಸ್ಪಂದಿಸತೊಡಗಿದ್ದಾನೆ. ಅವನ ಸರ್ಕಾರ ಫ್ರೆಂಚ್ ಮಿಲಿಟರಿ ಸೇನೆಯನ್ನು ಹೊರಹಾಕುವುದರಲ್ಲಿ ಯಶಸ್ವಿಯಾಗಿದೆ. ಗಣಿಗಾರಿಕೆಯನ್ನು ರಾಷ್ಟ್ರೀಕರಣಗೊಳಿಸಿದೆ. ಐಎಂಎಫ್ ಸಾಲವನ್ನು ತಿರಸ್ಕರಿಸಿದೆ. ಬುರ್ಕಿನಾ ಫಾಸೊ ಇಂದು ಸಾಮ್ರಾಜ್ಯಶಾಹಿ ಶಕ್ತಿಯನ್ನು ಎದುರಿಸಿ ನಿಂತ ಉಳಿದ ದೇಶಗಳ ಬೆಂಬಲಕ್ಕೆ ನಿಂತಿದೆ. ಬುರ್ಕಿನಾ ಫಾಸೊ, ಮಾಲಿ ಹಾಗೂ ನೈಜರ್ ಮೂರು ದೇಶಗಳು ಸೇರಿಕೊಂಡು **'ಸಹೆಲಿಯನ್ ರಾಷ್ಟ್ರಗಳ ಒಕ್ಕೂಟ'** ವನ್ನು (Alliance of Sahel States - AES) ರಚಿಸಿಕೊಂಡಿವೆ. ಇದು ಪ್ರಾರಂಭದಲ್ಲಿ ರಕ್ಷಣಾ ಒಪ್ಪಂದವಾಗಿತ್ತು. ನೈಜರ್ ವಿರುದ್ಧದ ದಾಳಿಯ ವಿರುದ್ಧ ಹುಟ್ಟಿಕೊಂಡ ಒಕ್ಕೂಟ ಇದು. ಎಕೋವಾಸ್ (ECOWAS) ಸಂಘಟನೆಯ ಮೂಲಕ ನೈಜರ್ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರುವ ಹಾಗೂ ಬೆದರಿಕೆ ಒಡ್ಡುವ ಕೆಲಸ ಪ್ರಾರಂಭವಾಗಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಈ ತ್ರಿಪಕ್ಷೀಯ ಮೈತ್ರಿ ಹುಟ್ಟಿಕೊಂಡಿತು.

ಆದರೆ ಇಂದು ಅದನ್ನು ಮೀರಿ ಸ್ವತಂತ್ರ ರಾಷ್ಟ್ರವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಅದು ಸಾಗಿದೆ. ತಮ್ಮದೇ ಆದ ಕರೆನ್ಸಿಯಿದ್ದರೆ ದೇಶ ದಿವಾಳಿಯಾಗುವುದಿಲ್ಲ. ವ್ಯವಸ್ಥಿತ ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಸ್ಥೆ ಇದ್ದರೆ ದೇಶದ ಅವಶ್ಯಕ ಯೋಜನೆಗಳನ್ನು ವಿದೇಶಿ ನೆರವಿಲ್ಲದೆ ರೂಪಿಸುವುದಕ್ಕೆ ಸಾಧ್ಯವಾಗುತ್ತದೆ. ಸ್ವಂತ ಕರೆನ್ಸಿ ಇಲ್ಲದೆ ಸ್ವತಂತ್ರ ಹಣಕಾಸು ವ್ಯವಸ್ಥೆ ಹಾಗೂ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಸಿಎಫ್‌ಎ ಇಂದ ಹೊರಬಂದು ಯಶಸ್ವಿಯಾಗಿ ಉಳಿಯಬೇಕಾದರೆ ವ್ಯಾಪಾರ ಒಪ್ಪಂದಗಳು, ಗಣಿ ನಿಯಮಗಳು, ಕೈಗಾರಿಕಾ ಹಾಗೂ ವಾಣಿಜ್ಯ ನೀತಿಗಳು, ಬಂಡವಾಳದ ಹೊರಹರಿವಿನ ಮೇಲಿನ ನಿಯಂತ್ರಣ ಇವೆಲ್ಲಾ ವಿಶಾಲ ಬೆಳವಣಿಗೆಯ ಯೋಜನೆಯ ಭಾಗವಾಗಬೇಕು. ಆಫ್ರಿಕಾಕ್ಕೆ ಹೇರಳವಾದ ನೈಸರ್ಗಿಕ, ಮಾನವ ಸಂಪನ್ಮೂಲ ಎಲ್ಲಾ ಇದೆ. ಈಗ ವಸಾಹತು ಬಂಧನಕ್ಕೆ ಸಂಕೇತವಾಗಿರುವ ಸಿಎಫ್‌ಎ ಕರೆನ್ಸಿಯಿಂದ ಹೊರಬರಬೇಕಾಗಿದೆ.

ಒಂದು ಕರೆನ್ಸಿಯನ್ನು ಬಳಸಿಕೊಂಡು ಫ್ರಾನ್ಸ್ ಆಫ್ರಿಕಾದ ಹಲವು ದೇಶಗಳ ಮೇಲೆ ನಡೆಸಿರುವ ಸಾಮ್ರಾಜ್ಯಶಾಹಿ ದಾಳಿಯನ್ನು ಅತ್ಯಂತ ವಿವರವಾಗಿ ಈ ಪುಸ್ತಕ ಕಟ್ಟಿಕೊಟ್ಟಿದೆ. ಇದು ಎಂದೋ ನಡೆದು ಹೋದ ಘಟನೆಗಳ ಚಿತ್ರಣವಲ್ಲ. ಇಂದಿಗೂ ನಿರಂತರವಾಗಿ ನಡೆಯುತ್ತಿರುವ ಕ್ರೌರ್ಯದ ಚಿತ್ರ. ಗಂಭೀರವಾಗಿ ಓದಿ ಚರ್ಚಿಸಬೇಕಾದ ಪುಸ್ತಕ.



ಪುಸ್ತಕ ಪರಿಚಯ

ಇತ್ತೀಚಿನ ದಿನಗಳಲ್ಲಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ಪ್ರಕಟವಾಗುತ್ತಿವೆ. ಹೊಸ ಹೊಸ ಪುಸ್ತಕಗಳು ಪ್ರಕಟವಾಗುತ್ತಿವೆ. ಹಲವು ಒಳನೋಟಗಳನ್ನು ಕೊಡುತ್ತಿವೆ. ಹಾಗೆ ಕ್ಯಾಲಿಫೋರ್ನಿಯದ ಸ್ಯಾನ್ ಡಿಯಾಗೊ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಕಾರ್ತಿಕ್ ಮುರಳಿಧರನ್ ಅವರ ಪುಸ್ತಕ ಅಕ್ಸೆಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್ ಸಾಕಷ್ಟು ಚರ್ಚೆಯಾಗುತ್ತಿದೆ. ೮೦೦ ಪುಟಗಳ ಬೃಹತ್ ಪುಸ್ತಕ. ರೆಫರೆನ್ಸ್ ಹಾಗೂ ಟಿಪ್ಪಣಿಯೇ ೨೦೦ ಪುಟಕ್ಕೂ ಹೆಚ್ಚಿದೆ. ಕೇಂದ್ರ ಹಾಗೂ ಹಲವು ರಾಜ್ಯ ಸರ್ಕಾರಗಳಲ್ಲಿ ನೀತಿಯನ್ನು ರೂಪಿಸುವಲ್ಲಿ ತೊಡಗಿಸಿಕೊಂಡ ಅನುಭವ ಇದೆ. ಮೊದಲ ಅಧ್ಯಾಯವನ್ನು ಸಂಕ್ಷಿಪ್ತವಾಗಿ ಇಲ್ಲಿ ಪರಿಚಯಿಸಲಾಗಿದೆ. ಮುಂದಿನ ಸಂಚಿಕೆಗಳಲ್ಲಿ ಉಳಿದ ಅಧ್ಯಾಯಗಳನ್ನು ಪರಿಚಯಿಸಲಾಗುತ್ತದೆ.

ಅಕ್ಸೆಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್–ಭಾಗ–೨

ಅಧ್ಯಾಯ–೨

ರಾಜಕಾರಣಿಗಳ ಸಂಕಟ

ಭಾರತ ಒಂದು ಪ್ರಜಾಸತ್ತಾತ್ಮಕ ರಾಷ್ಟ್ರ. ಆದರೆ ಜನರಿಗೆ ಮೂಲಭೂತ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಚುನಾವಣೆಯಲ್ಲಿ ಗೆಲ್ಲಬೇಕಾದರೆ ಜನರ ಹಿತವನ್ನು ನೋಡಿಕೊಳ್ಳಬೇಕು ಅನ್ನುವುದು ಸಾಮಾನ್ಯ ತಿಳುವಳಿಕೆ. ಚಾರಿತ್ರಿಕವಾಗಿ ಭಾರತದ ಪರಿಸ್ಥಿತಿ ಬೇರೆ ದೇಶಗಳಿಗಿಂತ ಭಿನ್ನವಾಗಿದೆ. ಸ್ವಾತಂತ್ರ್ಯ ಬರುತ್ತಿದ್ದಂತೆ ಭಾರತ ಸಾರ್ವತ್ರಿಕ ಮತದಾನವನ್ನು ಆಧರಿಸಿದ ಪ್ರಜಾಸತ್ತೆಯನ್ನು ಆರಿಸಿಕೊಂಡಿತು. ಬೇರೆ ಪ್ರಜಾಸತ್ತಾತ್ಮಕ ರಾಷ್ಟ್ರಗಳಿಗೆ ಹೋಲಿಸಿದರೆ ಆಗ ನಮ್ಮ ತಲಾವರಮಾನ ತುಂಬಾ ಕಡಿಮೆ ಇತ್ತು ಮತ್ತು ಸರ್ಕಾರದ ಸಾಮರ್ಥ್ಯವೂ ಕಡಿಮೆಯಿತ್ತು. ಬಹುತೇಕ ರಾಷ್ಟ್ರಗಳಲ್ಲಿ ಪ್ರಜಾಸತ್ತೆ ಬರುವ ವೇಳೆಗೆ ಆರ್ಥಿಕ ಅಭಿವೃದ್ಧಿಯೂ ಸಾಕಷ್ಟು ಆಗಿರುತ್ತಿತ್ತು. ಆದರೆ ಸರ್ಕಾರ ಬೆಳವಣಿಗೆಗೆ ಕಾಯಲಿಲ್ಲ; ಪ್ರಜಾಸತ್ತೆಯನ್ನು ಒಪ್ಪಿಕೊಂಡಿತು. ಇದರಿಂದ ಅನುಕೂಲಗಳೂ ಇದ್ದವು, ಹಾಗೆಯೇ ತೊಂದರೆಗಳು ಇದ್ದವು.

ಮತದಾರರು ಸರ್ಕಾರದಿಂದ ಕಲ್ಯಾಣ ಕಾರ್ಯಕ್ರಮಗಳನ್ನು ಹಾಗೂ ಸಬ್ಸಿಡಿಗಳನ್ನು ನಿರೀಕ್ಷಿಸುತ್ತಿದ್ದರು ಮತ್ತು ಅದಕ್ಕಾಗಿ ಒತ್ತಾಯಿಸುತ್ತಿದ್ದರು. ಸರ್ಕಾರ ಜನಕಲ್ಯಾಣ ಕಾರ್ಯಕ್ರಮಗಳಿಗಾಗಿ ಸಾಕಷ್ಟು ಹಣ ತೊಡಗಿಸಿತು. ಆದರೆ ಅವು ಪರಿಣಾಮಕಾರಿಯಾಗಿರಲಿಲ್ಲ. ಇದರಿಂದಾಗಿ ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ ಹಣವನ್ನು ತೊಡಗಿಸಲು ಬಂಡವಾಳದ ಕೊರತೆಯಾಯಿತು.

ಎರಡನೆಯದಾಗಿ, ರಾಜಕೀಯ ಪ್ರಭಾವಶಾಲಿಗಳಾದ ಎಲೈಟ್ (ಗಣ್ಯ) ವರ್ಗದ ಅನುಕೂಲಕ್ಕೆ ಬಹುತೇಕ ಸಾರ್ವಜನಿಕ ಸಂಪನ್ಮೂಲದ ಬಳಕೆಯಾಯಿತು. ಅವರಿಗೆ ಸಾರ್ವಜನಿಕ ಅಭಿಪ್ರಾಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಮೂಡಿಸುವ ಸಾಮರ್ಥ್ಯವಿತ್ತು. ಮತದಾರರನ್ನು ಕ್ರೋಡೀಕರಿಸುವುದರಲ್ಲೂ ಅವರು ಹೆಚ್ಚು ಸಮರ್ಥರಾಗಿದ್ದರು. ಹಾಗಾಗಿ ಹೆಚ್ಚಿನ ಅನುಕೂಲವನ್ನು ಅವರು ಪಡೆದುಕೊಂಡರು.

ಮೂರನೆಯದಾಗಿ, ಸರ್ಕಾರಕ್ಕೆ ಎಲ್ಲಾ ಪ್ರಜೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಹೋದಾಗ, ಒಂದು ಸೀಮಿತ ಗುಂಪಿನ ಜನರ ಹಿತಾಸಕ್ತಿಯನ್ನು ನೋಡಿಕೊಂಡು ಅವರ ಮತವನ್ನು ಖಾತ್ರಿ ಮಾಡಿಕೊಳ್ಳುವ 'ಮತ ಬ್ಯಾಂಕಿನ' ರಾಜಕೀಯ ಹೆಚ್ಚು ಅನುಕೂಲವಾಗಿ ಕಂಡಿತು. ಎಲ್ಲರ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದಕ್ಕಿಂತ ಕೆಲವರ ಹಿತಾಸಕ್ತಿಯನ್ನು ನೋಡಿಕೊಳ್ಳುವುದು ರಾಜಕೀಯವಾಗಿ ಉತ್ತಮ ದಾರಿಯಾಗಿ ಕಂಡಿತು. ಇದು ಸರ್ಕಾರದ ಸಾಮರ್ಥ್ಯವನ್ನು ಮತ್ತಷ್ಟು ಕುಗ್ಗಿಸಿತು.

ಹಾಗಾಗಿ ಭಾರತೀಯ ಪ್ರಜಾಸತ್ತೆಯ ನಿಜವಾದ ಸವಾಲೆಂದರೆ ಮತ ಬ್ಯಾಂಕಿನ ರಾಜಕೀಯದಿಂದ ಹೊರಗೆ ಬರುವುದು. ನಿಜವಾದ ಬೆಳವಣಿಗೆಯನ್ನು ಸಾಧಿಸುವ ಹಾಗೂ ಎಲ್ಲಾ ಭಾರತೀಯರಿಗೆ ಸಾರ್ವಜನಿಕ ಸೇವೆಯನ್ನು ಒದಗಿಸುವ ರಾಜಕೀಯದತ್ತ ಅದನ್ನು ಮತ್ತೆ ಒಯ್ಯಬೇಕಾಗಿದೆ. ಸರ್ಕಾರದ ಸಾಮರ್ಥ್ಯದ ಕೊರತೆ ಅದಕ್ಕೆ ಅಡ್ಡಿಯಾಗುತ್ತಿದೆ. ಈ ವಿಷವೃತ್ತವನ್ನು ಮುರಿದುಕೊಂಡು ಆಚೆ ಬರಬೇಕಾಗಿದೆ. ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಒಂದು

ರಾಜಕೀಯ ಸಮರ್ಥನೆಯನ್ನು ಒದಗಿಸಬೇಕಾಗುತ್ತದೆ.


ಭಾರತದ ಪ್ರಜಾಸತ್ತೆಯ ಚಾರಿತ್ರಿಕ ನೋಟ

ಜಾಗತಿಕವಾಗಿ ಪ್ರಭುತ್ವ ಮೂರು ಹಂತಗಳಲ್ಲಿ ಬೆಳೆದು ಬಂದಿದೆ. ಪ್ರಾರಂಭದಲ್ಲಿ ಪ್ರಭುತ್ವವು "ರಕ್ಷಣಾ" ಪ್ರಭುತ್ವವಾಗಿತ್ತು. ಹೊರಗಿನ ದಾಳಿಯಿಂದ ಮತ್ತು ಆಂತರಿಕ ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ಅದರ ಕೇಂದ್ರ ಕರ್ತವ್ಯವಾಗಿತ್ತು. ಚರಿತ್ರೆಯುದ್ದಕ್ಕೂ ದಾಳಿ, ದರೋಡೆ ಇತ್ಯಾದಿಗಳಿಂದ ಪ್ರಜೆಗಳಿಗೆ ರಕ್ಷಣೆ ಕೊಡುವುದು ಪ್ರಾರಂಭದಲ್ಲಿ ಪ್ರಭುತ್ವದ ಉದ್ದೇಶವಾಗಿತ್ತು. ಹಾಗಾಗಿಯೇ ೧೭ನೇ ಶತಮಾನದಲ್ಲಿ ಹಲವು ಐರೋಪ್ಯ ರಾಷ್ಟ್ರಗಳ ಬಜೆಟ್ಟಿನ ಶೇಕಡ ೭೦ರಿಂದ ೯೦ರವರೆಗೆ ಮಿಲಿಟರಿ ಖರ್ಚಿಗೆ ಹೋಗುತ್ತಿತ್ತು. ಸರ್ಕಾರಗಳು ಯುದ್ಧಕ್ಕೆ ಮೊದಲು ಮತ್ತು ಯುದ್ಧದ ಸಮಯದಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದವು.

ಕೈಗಾರಿಕಾ ಕ್ರಾಂತಿ ೧೯ನೇ ಶತಮಾನದಲ್ಲಿ ಪ್ರಭುತ್ವದ ಪಾತ್ರವನ್ನು ಕ್ರಮೇಣ ಬದಲಿಸಿತು. ಕ್ರಮೇಣ ಪ್ರಭುತ್ವದ ಪಾತ್ರ ಯುದ್ಧದಿಂದ ಆರ್ಥಿಕ ಪ್ರಗತಿಯನ್ನು ಬೆಳೆಸುವ ಕಡೆಗೆ ಸಾಗಿತು. ಈ ಹಂತದಲ್ಲಿ ಸರ್ಕಾರಗಳು ರಸ್ತೆ, ರೈಲ್ವೆ, ಬಂದರು, ನೈರ್ಮಲ್ಯ ಇತ್ಯಾದಿ ಮೂಲಸೌಕರ್ಯ ನಿರ್ಮಿಸುವುದಕ್ಕೆ ಹೆಚ್ಚು ಬಂಡವಾಳ ತೊಡಗಿಸುತ್ತಿದ್ದವು. ಉತ್ಪಾದಕತೆ ತೀವ್ರವಾಗಿ ಹೆಚ್ಚಿತು. ಈ ಹಂತದಲ್ಲಿ ಸಂಗ್ರಹವಾದ ತೆರಿಗೆ ಹಣವನ್ನು ಉತ್ಪಾದಕತೆಯನ್ನು ಹೆಚ್ಚಿಸುವ ಮೂಲಭೂತ ಸೌಕರ್ಯವನ್ನು ನಿರ್ಮಿಸುವುದಕ್ಕೆ ಹೂಡತೊಡಗಿದವು. ಅದರಿಂದ ಉತ್ಪಾದನೆ ಹೆಚ್ಚಿತು ಹಾಗೂ ತೆರಿಗೆ ಸಂಗ್ರಹಣೆಯೂ ಹೆಚ್ಚಿತು. ಈ ಬದಲಾವಣೆ ಮೊದಲು ಬ್ರಿಟನ್‌ನಲ್ಲಿ ಪ್ರಾರಂಭವಾಯಿತು. ಕ್ರಮೇಣ ಉಳಿದ ಪಾಶ್ಚಾತ್ಯ ದೇಶಗಳಿಗೂ ಹರಡಿತು. ಕೈಗಾರಿಕಾ ಪ್ರಭುತ್ವದ ಉಗಮದ ಮೊದಲು ಹೆಚ್ಚುವರಿಯಾಗಿ ಉತ್ಪಾದನೆಯಾದದ್ದು ಹೆಚ್ಚುತ್ತಿದ್ದ ಜನಸಂಖ್ಯೆಯ ಬಳಕೆಗೆ ಹೋಗುತ್ತಿತ್ತು. ಹಾಗಾಗಿ ತಲಾ ಜಿಡಿಪಿಯಲ್ಲಿ ಹೆಚ್ಚಳವಾಗುತ್ತಿರಲಿಲ್ಲ. ಕೈಗಾರಿಕಾ ಕ್ರಾಂತಿ, ಮೂಲಭೂತ ಸೌಕರ್ಯ ಹಾಗೂ ಶಿಕ್ಷಣದಲ್ಲಿ ಹೂಡಿಕೆ ಇವುಗಳಿಂದ ಪರಿಸ್ಥಿತಿ ಬದಲಾಯಿತು. ಚರಿತ್ರೆಯಲ್ಲಿ ಮೊಟ್ಟ ಮೊದಲ ಬಾರಿಗೆ ತಲಾ ಜಿಡಿಪಿ ಹಾಗೂ ಸರಾಸರಿ ಜೀವನ ಮಟ್ಟದಲ್ಲಿ ಏರಿಕೆ ಕಾಣಿಸಿಕೊಂಡಿತು. ಆದರೆ ಬೆಳವಣಿಗೆಯ ಫಲ ಭೂಮಿ, ಬಂಡವಾಳ, ಶಿಕ್ಷಣ ಇದ್ದವರಿಗೆ ಹೆಚ್ಚಾಗಿ ಹೋಗುತ್ತಿತ್ತು. ಹಾಗಾಗಿ ಅಸಮಾನತೆ ತೀವ್ರವಾಯಿತು.

ಇತ್ತೀಚಿನ ನೂರು ವರ್ಷದಲ್ಲಿ ಪ್ರಭುತ್ವದ ಮೂರನೇ ಹಂತವಾದ, ಕಲ್ಯಾಣ ರಾಜ್ಯದ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಈ ಹಂತದಲ್ಲಿ ಸರ್ಕಾರ ಸಂಗ್ರಹವಾದ ತೆರಿಗೆಯನ್ನು ಸಂಕಟದಲ್ಲಿ ಸಿಲುಕಿದವರ, ಬೆಳವಣಿಗೆಯ ಫಲದಿಂದ ವಂಚಿತರಾದವರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತೊಡಗಿತು. ಉದಾಹರಣೆಗೆ ಪಿಂಚಣಿ, ಬಡವರಿಗೆ ಸಾಮಾಜಿಕ ಭದ್ರತೆ, ಆಹಾರ ಸುರಕ್ಷತೆ, ಆರೋಗ್ಯ ಸೇವೆ ಇವೆಲ್ಲಾ ಪ್ರಾರಂಭವಾದವು. ತೀವ್ರ ಆರ್ಥಿಕ ಬಿಕ್ಕಟ್ಟಿನ ನಂತರ ೧೯೩೦ರ ಸಮಯದಲ್ಲಿ ಈ ಕಾರ್ಯಕ್ರಮಗಳು ಪಾಶ್ಚಾತ್ಯ ಪ್ರಜಾಸತ್ತೆಯಲ್ಲಿ ಪ್ರಾರಂಭವಾದವು (ಚಿತ್ರ-೧). ಜಾಗತಿಕ ಯುದ್ಧದ ನಂತರ ಕ್ರಮೇಣ ಇತರ ಕಡೆಗೂ ವಿಸ್ತಾರಗೊಂಡಿತು.

ಒಂದು ಪ್ರಭುತ್ವ ರಕ್ಷಣೆ, ಮೂಲಸೌಕರ್ಯ ಹಾಗೂ ಜನಕಲ್ಯಾಣ ಈ ಮೂರನ್ನು ಒದಗಿಸಬಹುದು. ಯಾವುದಕ್ಕೆ ಹೆಚ್ಚಿಗೆ ಹೂಡಿಕೆ ಮಾಡುತ್ತದೆ ಅನ್ನುವುದು ಪ್ರಭುತ್ವದ ಸ್ವಭಾವವನ್ನು ನಿರ್ಧರಿಸುತ್ತದೆ. ಆದರೆ ಚಾರಿತ್ರಿಕವಾಗಿ ನೋಡಿದಾಗ ಒಂದು ದೇಶ ಶ್ರೀಮಂತವಾಗಿ ಬೆಳೆದ ಮೇಲೆ ಅಥವಾ ಕನಿಷ್ಠ ಮಧ್ಯಮ ವರಮಾನದ ದೇಶವಾದ ನಂತರವಷ್ಟೆ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಪಾಶ್ಚಾತ್ಯ ದೇಶಗಳು ತೆರಿಗೆ-ಜಿಡಿಪಿ ಅನುಪಾತ ಗಣನೀಯವಾಗಿ




ಚಿತ್ರ-೧. ತೀವ್ರ ಆರ್ಥಿಕ ಬಿಕ್ಕಟ್ಟಿನ ನಂತರ ೧೯೩೦ರ ಸಮಯದಲ್ಲಿ ಜನಕಲ್ಯಾಣ ಕಾರ್ಯಕ್ರಮಕ್ಕೆ ಪಾಶ್ಚಾತ್ಯ ಪ್ರಜಾಸತ್ತೆಯಲ್ಲಿ ಹೆಚ್ಚಿನ ಹೂಡಿಕೆ ಪ್ರಾರಂಭವಾಯಿತು.

ಏರಿದ ಮೇಲೆ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು. ನಂತರ ಅದಕ್ಕಾಗಿ ಹೆಚ್ಚಿಗೆ ಹಣ ಖರ್ಚುಮಾಡತೊಡಗಿದ್ದನ್ನು ಬಜೆಟ್ಟಿನಲ್ಲಿ ನೋಡಬಹುದು. ಹಾಗೆಯೇ ಮಿಲಿಟರಿ ಸರ್ಕಾರವಿದ್ದಾಗ ಕೆಲವೇ ಗುಂಪಿನ ಜನರಿಗೆ ಮತದಾನದ ಹಕ್ಕಿತ್ತು. ಕೈಗಾರಿಕಾ ಕ್ರಾಂತಿಯಾದ ಮೇಲೂ ಕೇವಲ ಬಂಡವಾಳ ಹಾಗೂ ಭೂಮಿ ಇದ್ದವರಿಗೆ ಮತದಾನದ ಹಕ್ಕಿತ್ತು. ದೇಶ ಹೆಚ್ಚು ಪ್ರಜಾಸತ್ತಾತ್ಮಕವಾಗಿ ಬೆಳೆಯತೊಡಗಿದಾಗ ಹೆಚ್ಚೆಚ್ಚು ಜನರನ್ನು ಒಳಗೊಳ್ಳತೊಡಗಿತು. ತೀವ್ರ ಹೋರಾಟದ ನಂತರವಷ್ಟೆ ಮಹಿಳೆಯರು, ಕಾರ್ಮಿಕರು ಹಾಗೂ ಅಲ್ಪಸಂಖ್ಯಾತರಿಗೆ ಮತದಾನದ ಹಕ್ಕು ದೊರಕಿದ್ದು. ವರಮಾನದ ಮರು ಹಂಚಿಕೆ ಹಾಗೂ ಕಲ್ಯಾಣ ಕಾರ್ಯಕ್ರಮಗಳು ಪ್ರಾರಂಭವಾದ ಮೇಲೆಯೇ ಅದು ಸಾಧ್ಯವಾಯಿತು.

ಆದರೆ ಭಾರತದಲ್ಲಿ ಪರಿಸ್ಥಿತಿ ಸ್ವಲ್ಪ ಭಿನ್ನ. ಈ ಮೂರು ಹಂತಗಳು ಕಳೆದ ೭೦ ವರ್ಷಗಳಲ್ಲಿ ಒಟ್ಟಿಗೆ ನಡೆದು ಹೋಗಿವೆ. ತೀರಾ ಕಡಿಮೆ ರಾಷ್ಟ್ರೀಯ ವರಮಾನವಿದ್ದಾಗಲೇ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಜನಕಲ್ಯಾಣ ಕಾರ್ಯಕ್ರಮಗಳು ಪ್ರಾರಂಭವಾಗಿದ್ದವು. ಇದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದು ಕಾರಣವೇನೆಂದರೆ, ಭಾರತದ ಬಹುತೇಕ ಎಲೈಟ್‌ಗಳು (ಗಣ್ಯರು) ಪಾಶ್ಚಾತ್ಯ ಶಿಕ್ಷಣಕ್ಕೆ ತೆರೆದುಕೊಂಡಿದ್ದರು. ಆಗಿನ ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವ ವಹಿಸಿದ್ದ ಗಾಂಧಿ, ನೆಹರು, ಅಂಬೇಡ್ಕರ್ ಮೊದಲಾದವರ ವಿಷಯದಲ್ಲೂ ಇದು ನಿಜ. ಅವರಿಗೆ ಆಧುನಿಕ ಕಲ್ಯಾಣ ರಾಜ್ಯದ ಅನುಕೂಲಗಳು ತಿಳಿದಿದ್ದವು. ಅದನ್ನು ಭಾರತದಲ್ಲೂ ಅನ್ವಯಿಸುವುದಕ್ಕೆ ಅವರು ಉತ್ಸುಕರಾಗಿದ್ದರು.

ಎರಡನೆಯ ಕಾರಣ, ಪ್ರಜಾಸತ್ತೆಯನ್ನು ಆರಿಸಿಕೊಂಡ ಬಹುತೇಕ ದೇಶಗಳಲ್ಲಿ ಸಾರ್ವತ್ರಿಕ ಮತದಾನದ ಹಕ್ಕು ತುಂಬಾ ತಡವಾಗಿ ಬಂತು. ಆದರೆ ಭಾರತ ಪ್ರಾರಂಭದಿಂದಲೇ ಸಾರ್ವತ್ರಿಕ ಮತದಾನವನ್ನು ಆಧರಿಸಿದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಆರಿಸಿಕೊಂಡಿತು.

ಪ್ರಾರಂಭದಿಂದಲೇ ಸಾರ್ವತ್ರಿಕ ಮತದಾನವನ್ನು ಆರಿಸಿಕೊಂಡಿದ್ದು ದೊಡ್ಡ ನೈತಿಕ ವಿಜಯ. ಅಮೆರಿಕ ಹಾಗೂ ಇಂಗ್ಲೆಂಡ್ ೧೮, ೧೯ನೇ ಶತಮಾನದಲ್ಲಿ ತಮ್ಮ ಜನಸಂಖ್ಯೆಯ ಬಹುತೇಕ ಸಮುದಾಯಗಳಿಗೆ ಮತದಾನದ ಹಕ್ಕನ್ನು ಕೊಟ್ಟಿರಲಿಲ್ಲ ಅನ್ನುವಾಗ ಇದು ನಾವೆಲ್ಲ ಹೆಮ್ಮೆಪಡಬೇಕಾದ ಸಂಗತಿ. ಹಾಗೆಯೇ ಅಮೆರಿಕದಲ್ಲಿ ಜನರಿಗೆ ಆಹಾರದ ನೆರವನ್ನು ನೀಡಿದಾಗ ಅಲ್ಲಿ ತಲಾವರಮಾನ ೨೦,೦೦೦ ಡಾಲರ್ ಇತ್ತು. ಭಾರತ ಸಾರ್ವಜನಿಕ ಪಡಿತರ ಪದ್ಧತಿಯನ್ನು ೧೯೬೦ರಲ್ಲಿ ಪ್ರಾರಂಭಿಸಿದಾಗ ತಲಾ ಆದಾಯ ಕೇವಲ ೧೨೫೦ ಡಾಲರಿತ್ತು.



ಚಿತ್ರ–೨. ಬಹುತೇಕ ದೇಶಗಳು ಹೆಚ್ಚು ಶ್ರೀಮಂತಗೊಂಡ ಮೇಲೆ ಹೆಚ್ಚು ಪ್ರಜಾಸತ್ತಾತ್ಮಕ ಗೊಳ್ಳುತ್ತಾ ಹೋಯಿತು. ಆದರೆ ಭಾರತ ಪ್ರಾರಂಭದಿಂದಲೇ ತಲಾ ಜಿಡಿಪಿ ಕಡಿಮೆ ಇದ್ದಾಗಲೆ ಸಾರ್ವತ್ರಿಕ ಮತದಾನವನ್ನು ಆಧರಿಸಿದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಆರಿಸಿಕೊಂಡಿತು.

ಸಾರ್ವತ್ರಿಕ ಮತದಾನವನ್ನು ಒಪ್ಪಿಕೊಂಡಿದ್ದರಿಂದ ಇಂತಹ ರಾಜಕೀಯ ಒತ್ತಾಯ ಅನಿವಾರ್ಯವಾಗಿತ್ತು. ಆದರೆ ಇದು ಪ್ರಭುತ್ವದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಬೇಕಾದ ಬಂಡವಾಳವನ್ನು ಕುಗ್ಗಿಸಿತು. ಹಾಗಾಗಿ ಸರ್ಕಾರಕ್ಕೆ ರಾಜಕೀಯ ಉತ್ತೇಜನದ ಒತ್ತಾಯ ಒಂದು ಕಡೆ ಕಾಡುತ್ತಿತ್ತು. ಇನ್ನೊಂದು ಕಡೆ ಸಾರ್ವಜನಿಕ ಹಣಕಾಸಿನ ಸವಾಲು ಕಾಡುತ್ತಿತ್ತು. ಒಂದು ಇನ್ನೊಂದನ್ನು ಬೆಳೆಸುತ್ತಿತ್ತು.

ಸಾರ್ವಜನಿಕ ಹಣಕಾಸಿನ ಸವಾಲನ್ನು ಅರ್ಥಮಾಡಿಕೊಳ್ಳೋಣ. ಭಾರತದಲ್ಲಿ ಜಿಡಿಪಿಗೆ ಹೋಲಿಸಿದರೆ ತೆರಿಗೆ ಸಂಗ್ರಹ ತುಂಬಾ ಕಮ್ಮಿ ಇದೆ. ಹಾಗಾಗಿ ಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಸಬ್ಸಿಡಿಗಳಿಗೆ ಮಾಡುತ್ತಿರುವ ಖರ್ಚಿನಿಂದಾಗಿ ಉತ್ಪಾದಕತೆಯನ್ನು ಹೆಚ್ಚಿಸುವ ಸಾರ್ವಜನಿಕ ಸರಕುಗಳ ಮೇಲೆ ಹೂಡಿಕೆಗೆ ಸಂಪನ್ಮೂಲದ ಲಭ್ಯತೆ ಕಡಿಮೆಯಾಗುತ್ತದೆ. ಭಾರತದಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದಕ್ಕೆ ಮತ್ತು ಪ್ರಭುತ್ವದ ಸಾಮರ್ಥ್ಯವನ್ನು ಬೆಳೆಸುವುದಕ್ಕೆ ಬಂಡವಾಳದ ಕೊರತೆಯುಂಟಾಗುತ್ತದೆ. ಭಾರತದ ರೈಲ್ವೆಯನ್ನು ಲೇಖಕರು ಉದಾಹರಣೆಯಾಗಿ ನೀಡುತ್ತಾರೆ. ಎಲ್ಲಾ ರಾಜಕೀಯ ಪಕ್ಷಗಳೂ ಮೊದಲಿನಿಂದ ಬಡವರಿಗೆ ಅನುಕೂಲವಾಗುವುದಕ್ಕಾಗಿ ಖರ್ಚಿಗಿಂತ, ಬೆಲೆಯನ್ನು ಕಡಿಮೆಯೇ ಇಟ್ಟಿದ್ದಾರೆ. ಅದರಿಂದ ಸರ್ಕಾರಕ್ಕೆ ಹೊರೆಯಾಗುತ್ತದೆ. ಇದೇ ಪರಿಸ್ಥಿತಿಯನ್ನು ನೀರು ಹಾಗೂ ವಿದ್ಯುತ್ ವಿಷಯದಲ್ಲೂ ನೋಡಬಹುದು. ಅವೆರಡನ್ನು ರಿಯಾಯಿತಿ ದರದಲ್ಲಿ ಪೂರೈಸಲಾಗುತ್ತದೆ. ಎಲ್ಲರಿಗೂ ಅವಶ್ಯಕ ಸೌಲಭ್ಯಗಳನ್ನು ಒದಗಿಸುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕರ್ತವ್ಯ. ಆದರೆ ಸಂಪನ್ಮೂಲದ ಕೊರತೆಯಿರುವುದರಿಂದ ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಅನಿವಾರ್ಯ. ಅದೊಂದು ವಿಷವೃತ್ತ. ಸಂಪನ್ಮೂಲದ ಕೊರತೆ ಸರ್ಕಾರದ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ದುರ್ಬಲ ಸರ್ಕಾರದಿಂದ ಕಾರ್ಯಕ್ರಮಗಳು ಪರಿಣಾಮಕಾರಿಯಾಗುವುದಿಲ್ಲ. ಆದರೆ ಅದನ್ನು ಸುಧಾರಿಸುವುದಕ್ಕೆ ಅವಕಾಶವಿದೆ. ರಾಜಕಾರಣಿಗಳು ಯಾಕೆ ಈ ನಿಟ್ಟಿನಲ್ಲಿ ಪ್ರಯತ್ನಿಸುತ್ತಿಲ್ಲ ಅನ್ನುವುದು ನಮ್ಮ ಮುಂದಿರುವ ಪ್ರಶ್ನೆ.

ಪ್ರಜಾಸತ್ತೆಯಲ್ಲಿ ಜನರಿಗೆ ಇರುವ ಅಸ್ತ್ರ ಎಂದರೆ ಚುನಾವಣೆ. ಸರಿಯಾಗಿ ಆಡಳಿತ ನಡೆಸದ ಪಕ್ಷವನ್ನು ಅಧಿಕಾರದಿಂದ ಇಳಿಸಬಹುದು. ಆದರೆ ಭಾರತದಲ್ಲಿ ಹೆಚ್ಚು ಮತ ಪಡೆದುಕೊಂಡವರು ಗೆಲ್ಲುತ್ತಾರೆ. ಶೇಕಡ ಎಷ್ಟು ಮತ ಪಡೆದುಕೊಂಡಿದ್ದಾರೆ ಅನ್ನುವುದು ಮುಖ್ಯವಾಗುವುದಿಲ್ಲ. ಒಂದು ಚುನಾವಣೆಯಲ್ಲಿ ಹಲವರು ಸ್ಪರ್ಧಿಸಿದ್ದರೆ, ಶೇಕಡ ೫೦ಕ್ಕಿಂತ ಕಡಿಮೆ ಮತ ಬಂದವರೂ ಗೆಲ್ಲಬಹುದು. ಎಷ್ಟೋ ಬಾರಿ ೨೫% ಗಿಂತ ಕಡಿಮೆ ಮತ ಬಂದವರೂ ಗೆಲ್ಲುತ್ತಾರೆ. ೧೯೯೧–೨೦೦೨ರಲ್ಲಿ ಉತ್ತರ ಪ್ರದೇಶದಲ್ಲಿ ಒಂದು ಸ್ಥಾನಕ್ಕೆ ಸರಾಸರಿ ೨೦ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಶೇಕಡ ೫೦ರಷ್ಟು ಮತದಾನ ಆಗಿತ್ತು. ಸರಾಸರಿ ೩೭% ಮತ ಪಡೆದ ಅಭ್ಯರ್ಥಿಗಳು ಗೆದ್ದಿದ್ದರು. ಅಂದರೆ ಒಟ್ಟು ಮತಗಳ ಶೇಕಡ ೨೦ರಷ್ಟು ಮತಗಳು ಗೆಲ್ಲುವುದಕ್ಕೆ ಸಾಕಾಗುತ್ತದೆ. ಇದೊಂದು ರಾಜಕೀಯ ಲೆಕ್ಕಾಚಾರವನ್ನು ಪ್ರಭಾವಿಸುತ್ತದೆ.

ಉದಾಹರಣೆಗೆ ೧೦೦ ಮತದಾರರು ಇರುವ ಕ್ಷೇತ್ರದಲ್ಲಿ ೧೦೦೦ ರೂ ಬಜೆಟ್ ಇದೆ ಅಂತ ಭಾವಿಸಿಕೊಳ್ಳಿ. ಅದನ್ನು ಹೂಡಿಕೆ ಮಾಡಿ ೧೫೦೦ ಮೌಲ್ಯದ ಸಾರ್ವಜನಿಕ ಸೇವೆಯನ್ನು ಸೃಷ್ಟಿಸಬಹುದು ಎಂದು ಭಾವಿಸಿ ಹೂಡಿಕೆಯನ್ನು ಮಾಡಬಹುದು. ಅದರಿಂದ ಪ್ರತಿಯೊಬ್ಬರಿಗೂ ೧೫ ರೂಪಾಯಿ ಅನುಕೂಲವಾಗುತ್ತದೆ. ಅಥವಾ ತಲಾ ೩೦ರಂತೆ ತನಗೆ ಮತ ನೀಡುವ ಶೇಕಡ ೨೦–೨೫ ಮತದಾರರಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಆ ಮತಗಳು ಅವನಿಗೆ ಖಾತ್ರಿಯಾಗುತ್ತದೆ. ಅದು ಗೆಲ್ಲುವುದಕ್ಕೆ ಸಾಕಾಗುತ್ತದೆ. ಹಾಗಾಗಿ ನಮ್ಮ ರಾಜಕೀಯ ವ್ಯವಸ್ಥೆ ಹೆಚ್ಚಿನವರಿಗೆ ಅನುಕೂಲವಾಗುವ ಯೋಜನೆಯನ್ನು ರೂಪಿಸುವುದಕ್ಕಿಂತ ತನ್ನದೇ

ಮತ ಬ್ಯಾಂಕುಗಳನ್ನು ಸೃಷ್ಟಿಸಿಕೊಳ್ಳುವುದಕ್ಕೆ ಪ್ರೇರೇಪಿಸುತ್ತದೆ.

ಈ ಮತ ಬ್ಯಾಂಕಿನ ರಾಜಕೀಯ ನಮ್ಮಲ್ಲಿ ತುಂಬಾ ಸಾಮಾನ್ಯವಾಗಿಬಿಟ್ಟಿದೆ. ಇದು ಧರ್ಮ, ಭಾಷೆ, ಪ್ರಾಂತ್ಯ, ಜಾತಿ ಯಾವುದನ್ನೇ ಆಧರಿಸಿ ನಡೆಯಬಹುದು. ದುರ್ಬಲ ಸರ್ಕಾರಗಳು ಎಲ್ಲಾ ಪ್ರಜೆಗಳ ಹಿತವನ್ನು ಪರಿಣಾಮಕಾರಿಯಾಗಿ ರಕ್ಷಿಸುವ ಸ್ಥಿತಿಯಲ್ಲಿ ಇಲ್ಲದೆ ಇರುವುದರಿಂದ ತಮ್ಮ ಗುಂಪಿನ ಮತದಾರರನ್ನು ಓಲೈಸುವ ಕೆಲಸ ಮಾಡುತ್ತವೆ. ಮತ ಬ್ಯಾಂಕಿನ ರಾಜಕೀಯ ಸರ್ಕಾರದ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಸರ್ಕಾರಗಳು ದುರ್ಬಲವಾದಷ್ಟೂ ಮತಬ್ಯಾಂಕಿನ ರಾಜಕೀಯ ಹೆಚ್ಚುತ್ತದೆ. ಇದು ಮತ್ತೊಂದು ವಿಷವೃತ್ತ. ತನ್ನ ಮತ ಬ್ಯಾಂಕಿನ ನಿರೀಕ್ಷೆಗಳನ್ನು ಪೂರೈಸುವ ಒತ್ತಡದಲ್ಲಿ ಹೆಚ್ಚು ವಿಶಾಲ ವ್ಯಾಪ್ತಿಯ ಕಾರ್ಯಕ್ರಮಗಳು ಸೊರಗುತ್ತವೆ. ತಮ್ಮ ಮತದಾರರ ತೀವ್ರ ಬೆಂಬಲ ಧ್ರುವೀಕರಣಕ್ಕೂ ರಾಜಕೀಯ ಉತ್ತೇಜನವನ್ನು ನೀಡುತ್ತದೆ. ಆ ಪಕ್ಷವಷ್ಟೇ ತಮ್ಮ ಹಿತಾಸಕ್ತಿಯನ್ನು ಕಾಪಾಡಬಲ್ಲದು ಅನ್ನಿಸಿದರೆ ಅದಕ್ಕೆ ಮಾತ್ರ ಮತ ನೀಡುತ್ತಾರೆ. ಬೇರೆ ಪಕ್ಷದವರು ತಮ್ಮ ಹಿತಾಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ ಅನಿಸಿದರಂತೂ ಈ ಪ್ರವೃತ್ತಿ ಇನ್ನೂ ಹೆಚ್ಚಾಗುತ್ತದೆ. ಹಾಗಾಗಿ ರಾಜಕಾರಣಿಗಳಿಗೆ ತಮ್ಮ ಜಾತಿಯ, ಪ್ರಾಂತ್ಯದ, ಧರ್ಮದ ಬೆಂಬಲಿಗರಿಗೆ ಬೇರೆ ಪಕ್ಷದವರು ಅವರ ವೈರಿಗಳು ಅಂತ ಬಿಂಬಿಸುವುದರಲ್ಲಿ ಲಾಭವಿದೆ. ಈ ರೀತಿಯ ಧ್ರುವೀಕರಣದಿಂದ ಸಾರ್ವಜನಿಕ ಹಿತಾಸಕ್ತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಕಷ್ಟವಾಗುತ್ತದೆ. ಅದರಿಂದ ಧ್ರುವೀಕರಣ ಇನ್ನೂ ಹೆಚ್ಚುತ್ತದೆ. ಎಲ್ಲಾ ಪ್ರಜೆಗಳಿಗೂ ಅನುಕೂಲವಾಗುವ ಸಾರ್ವಜನಿಕ ಸರಕು ಸೇವೆಗೆ ಆದ್ಯತೆ ನೀಡುವುದು, ವಿಶಾಲವಾದ ಸಾಮಾಜಿಕ ಐಕ್ಯತೆಯನ್ನು ರೂಪಿಸುವುದು ಇನ್ನೂ ಕಷ್ಟವಾಗುತ್ತದೆ.

ಕೆಲವರಿಗೆ ಅನುಕೂಲವಾಗುವ ನೀತಿಗಳಿಂದ ಬೇರೆ ತೊಂದರೆಗಳು ಇವೆ. ಉದಾಹರಣೆಗೆ ಉಕ್ಕಿನ ಆಮದಿನ ಮೇಲೆ ಸುಂಕ ಹಾಕುವ ನೀತಿಯನ್ನು ಗಮನಿಸೋಣ. ಅದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದರೆ ಅಂತಹ ನೀತಿಯನ್ನು ಜಾರಿಗೆ ತರುತ್ತಾರೆ. ಯಾಕೆಂದರೆ ಅದರ ಖರ್ಚು ಹಲವರ ನಡುವೆ ಹಂಚಿಹೋಗುತ್ತದೆ. ಆದರೆ ಕೆಲವೇ ಸ್ಥಳೀಯ ಉಕ್ಕಿನ ಉತ್ಪಾದಕರಿಗೆ ತುಂಬಾ ಲಾಭವಾಗುತ್ತದೆ. ಉದಾಹರಣೆಗೆ ಸುಂಕದಿಂದ ಪ್ರತಿ ಬಳಕೆದಾರನಿಗೆ ವರ್ಷಕ್ಕೆ ೫೦ ರೂಪಾಯಿ ಖರ್ಚು ಹೆಚ್ಚಾಗುತ್ತದೆ, ಅಂದರೆ ೧೪೦ ಕೋಟಿ ಭಾರತೀಯರು ವರ್ಷಕ್ಕೆ ಒಟ್ಟು ೭೦೦೦ ಕೋಟಿ ಹೆಚ್ಚು ತೆರಬೇಕಾಗುತ್ತದೆ. ೧೦೦ ಸ್ಟೀಲ್ ಉತ್ಪಾದಕರಿಗೆ ೩೦ ಕೋಟಿ ವಾರ್ಷಿಕ ಲಾಭವಾಗುತ್ತದೆ ಅಂದರೆ ಒಟ್ಟು ಲಾಭ ೩೦೦೦ ಕೋಟಿ ಆಗುತ್ತದೆ. ಆದರೆ ರಾಷ್ಟ್ರಕ್ಕೆ ವರ್ಷಕ್ಕೆ ೪೦೦೦ ಕೋಟಿ ನಷ್ಟವಾಗುತ್ತದೆ. ಆದರೂ ಜನ ವಿರೋಧಿಸುವುದಿಲ್ಲ. ಅವರು ಕಳೆದುಕೊಳ್ಳುವುದು ವರ್ಷಕ್ಕೆ ಕೇವಲ ೫೦ ರೂಪಾಯಿ. ಆದರೆ ಸ್ಟೀಲ್ ಉತ್ಪಾದಕರು ೧೦ ಕೋಟಿ ರಾಜಕೀಯ ದೇಣಿಗೆ (ಡೊನೇಷನ್) ಕೊಟ್ಟರೂ ತಲಾ ೨೦ ಕೋಟಿ ಲಾಭ ಮಾಡಿಕೊಳ್ಳುತ್ತಾರೆ. ಇದು ಸುಂಕವನ್ನು ಸುಂಕವನ್ನು ಜಾರಿಗೊಳಿಸುವುದಕ್ಕೆ ರಾಜಕೀಯವಾದ ಉತ್ತೇಜನ ನೀಡುತ್ತದೆ. ಹಾಗಾಗಿ ಇದರಿಂದ ಸಾರ್ವಜನಿಕ ಕಲ್ಯಾಣಕ್ಕೆ ಋಣಾತ್ಮಕ ಪರಿಣಾಮವಾಗುತ್ತಿದ್ದರೂ ಇದನ್ನು ಜಾರಿಗೊಳಿಸಲಾಗುತ್ತದೆ. ಆದರೆ ಕೇವಲ ಶೇಕಡ ಒಂದೋ ಎರಡೋ ಮತಗಳು ಮುಖ್ಯವಾಗುವ ಪರಿಸ್ಥಿತಿಯಲ್ಲಿ ಸರ್ಕಾರ ಇಂತಹ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಉದಾಹರಣೆಗೆ ತಮಿಳುನಾಡಿನಲ್ಲಿ ೨೦೧೬ರ ಚುನಾವಣೆಯಲ್ಲಿ ಡಿಎಂಕೆ ೨೩೪ ಸೀಟುಗಳಲ್ಲಿ ೯೮ ಸೀಟುಗಳನ್ನು ಪಡೆದಿದ್ದರು. ಅವರಿಗೆ ಬಂದ ಮತಗಳು ೩೯.೯%. ಎಐಡಿಎಂಕೆ ೧೩೬ ಸ್ಥಾನಗಳನ್ನು ಪಡೆದುಕೊಂಡಿತ್ತು. ಅವರಿಗೆ ಬಂದ ಮತಗಳು ೪೧.೯%. ಕೇವಲ ೨% ಮತಗಳು ಇಷ್ಟೊಂದು ದೊಡ್ಡ ಅಂತರವನ್ನು ಸೃಷ್ಟಿಸಿತ್ತು. ಹಾಗಾಗಿ ರಾಜಕಾರಣಿಗಳು ಮತದಾರರ ವಿರೋಧ ಬರುವ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ.

ಪ್ರಭುತ್ವ ದುರ್ಬಲವಾದಷ್ಟು ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಹೂಡಿಕೆ ಮಾಡುವುದಕ್ಕೆ ಬೇಕಾದ ರಾಜಕೀಯವನ್ನು ರೂಪಿಸುವುದಕ್ಕೆ ಉತ್ತೇಜನವಿರುವುದಿಲ್ಲ. ಯಾಕೆಂದರೆ ಸರ್ಕಾರ ದುರ್ಬಲವಾದಷ್ಟೂ ಸಾರ್ವಜನಿಕ ಸರಕು ಹಾಗೂ ಸೇವೆಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಜನ ರಾಜಕೀಯವನ್ನು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಒಂದು ಮಾರ್ಗವಾಗಿ ನೋಡುತ್ತಾರೆ. ಬಹುಶಃ ರಾಜಕೀಯದಲ್ಲಿ ಹೆಚ್ಚಿನ ಕ್ರಿಮಿನಲ್ ಆರೋಪಗಳುಳ್ಳ ಅಭ್ಯರ್ಥಿಗಳು ಹೆಚ್ಚಿರುವುದಕ್ಕೂ ಇದು ವಿವರಣೆ ಒದಗಿಸಿಬಲ್ಲದು. ಅವರಿಗೆ ಚುನಾವಣಾ ಖರ್ಚನ್ನು ಭರಿಸುವ ಸಾಮರ್ಥ್ಯವಿರುವುದರಿಂದ ಅವರಿಗೆ ಟಿಕೆಟುಗಳನ್ನು ಪಕ್ಷಗಳು ನೀಡುತ್ತವೆ. ಆದರೆ ಜನ ಯಾಕೆ ಮತ ಚಲಾಯಿಸುತ್ತಾರೆ ಅನ್ನುವುದು ಪ್ರಶ್ನೆ. ಒಂದು ವಿವರಣೆ ಅಂದರೆ ಜನರಿಗೆ ಅವರ ದೇಶದ ಅಭಿವೃದ್ಧಿಗೆ ದುಡಿಯುವ ಸಾಮರ್ಥ್ಯ ಮುಖ್ಯವಲ್ಲ. ಅಥವಾ ಅವರು ಉತ್ತಮ ನೀತಿಗಳನ್ನು ರೂಪಿಸಬೇಕೆಂಬ ನಿರೀಕ್ಷೆಯೂ ಜನರಿಗಿಲ್ಲ. ಲಭ್ಯವಿರುವ ಮಿತವಾದ ಸಂಪನ್ಮೂಲವನ್ನು ತಮಗೆ ಸಿಗುವಂತೆ ಮಾಡುವಲ್ಲಿ ಪರಿಣಾಮಕಾರಿಯಾಗಿದ್ದರೆ ಸಾಕು. ಅಧಿಕಾರಿಗಳ ಹತ್ತಿರ ತಮಗೆ ಬೇಕಾದ ಕೆಲಸ ಮಾಡಿಸಿಕೊಡುವ ಸಾಮರ್ಥ್ಯ ಇದ್ದರೆ ಸಾಕು. ಅಂತಹವರು ಇವರಿಗೆ ಪ್ರಬಲ ಅಭ್ಯರ್ಥಿಗಳಾಗಿ ಕಾಣುತ್ತಾರೆ. 'ಹೌದು ಅವನು ಗೂಂಡಾ, ಆದರೆ ನಮ್ಮ ಗೂಂಡಾ' ಅನ್ನುವ ಭಾವನೆ ಇರುತ್ತದೆ. ಈ ನಾಯಕರಿಗೆ ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವ ಆಸಕ್ತಿ ಇರುವುದಿಲ್ಲ. ಅದರಿಂದ ಅವರ ಬಲ ಕಮ್ಮಿಯಾಗಿಬಿಡುತ್ತದೆ. ಉದಾಹರಣೆಗೆ ಅವರಿಗೆ ಪೊಲೀಸ್ ವ್ಯವಸ್ಥೆ ಪರಿಣಾಮಕಾರಿಯಾಗುವುದು ಬೇಕಿಲ್ಲ. ರಾಜಕಾರಣಿಯ ಮೌಲ್ಯ ಹಾಗೂ ಗೌರವ ಅವನು ತನ್ನ ಮತದಾರನಿಗೆ ಒದಗಿಸಬಹುದಾದ ಅಥವಾ ಒದಗಿಸುತ್ತಾನೆ ಅಂತ ನಂಬಿರುವ ಅನುಕೂಲಗಳನ್ನು ಅವಲಂಬಿಸಿರುತ್ತದೆ. ಎಲ್ಲವನ್ನು ವ್ಯವಸ್ಥೆಯೇ ಅದರಷ್ಟಕ್ಕೆ ಮಾಡಿಬಿಟ್ಟರೆ ಅವರಿಗೆ ನೆಮ್ಮದಿ ಇರುವುದಿಲ್ಲ. ಶಿಕ್ಷಣ ಹಾಗೂ ಆರೋಗ್ಯ ಸೇವೆಯನ್ನು ಒದಗಿಸಬಯಸುವವರು ಕೂಡ, ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕಿಂತ ಕಣ್ಣಿಗೆ ಕಾಣುವ ಕಟ್ಟಡಗಳ, ಅಥವಾ ಲ್ಯಾಪ್ ಟಾಪ್ ಹಂಚುವ ಕೆಲಸದಲ್ಲಿ ಫೋಟೊ ತೆಗೆಸಿಕೊಳ್ಳುವುದರಲ್ಲೇ ಸಂತೋಷ ಪಡುತ್ತಿರುತ್ತಾರೆ. ಇಂತಹ ತಕ್ಷಣ ಕಾಣುವ ಕೆಲಸಗಳು ಮತದ ದೃಷ್ಟಿಯಿಂದ ಮುಖ್ಯವಾಗುತ್ತದೆ. ಗುಣಮಟ್ಟದ ಸುಧಾರಣೆಯ ಕೆಲಸದ ಫಲ ಕಾಣುವುದಕ್ಕೆ ಸಮಯ ಬೇಕು. ಕ್ರಮೇಣ ಆಗುವ ಈ ಬದಲಾವಣೆಗಳು ಜನರ ಗಮನಕ್ಕೆ ಬಾರದೇ ಹೋಗಬಹುದು. ಹಾಗಾಗಿ ಅವರು ಸಾರ್ವಜನಿಕ ಸೇವೆಯ ಗುಣಮಟ್ಟವನ್ನು ಸುಧಾರಿಸುವ ಕಡೆ ಹೆಚ್ಚು ಗಮನಕೊಡುವುದಿಲ್ಲ.

ಪ್ರಜಾಸತ್ತೆಯ ಇನ್ನೊಂದು ದೊಡ್ಡ ಸವಾಲೆಂದರೆ ಚುನಾವಣೆಯಲ್ಲಿ ಸ್ಪರ್ಧಿಸುವುದು ತುಂಬಾ ದುಬಾರಿ. ೨೦೧೪ರಲ್ಲಿ ಚುನಾವಣೆಗೆ ಪಕ್ಷಗಳು ಒಟ್ಟು ಸುಮಾರು ೩೫,೦೦೦ ಕೋಟಿ ಖರ್ಚು ಮಾಡಿವೆ ಎನ್ನುವ ಅಂದಾಜು ಮಾಡಲಾಗಿದೆ. ೨೦೧೯ರಲ್ಲಿ ಇದು ೫೫,೦೦೦ ಕೋಟಿಯಾಗಿದೆ. ಇದು ಕೇವಲ ರಾಷ್ಟ್ರೀಯ ಚುನಾವಣೆಯ ಖರ್ಚು. ಹಾಗಾಗಿ ಅಭ್ಯರ್ಥಿಗಳು ಚುನಾವಣೆಗೆ ಹಣ ಸಂಗ್ರಹಿಸುವುದಕ್ಕೆ ಹೆಚ್ಚಿನ ಶ್ರಮ ಹಾಕುತ್ತಾರೆ. ಇದು ದೊಡ್ಡ "ಪ್ರಜಾಸತ್ತಾತ್ಮಕ ತೆರಿಗೆ"ಯಾಗುತ್ತದೆ. ಆಡಳಿತದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಇದು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮದ ಮೇಲೆ ಪರಿಣಾಮ ಬೀರುತ್ತದೆ. ಚುನಾವಣಾ ಖರ್ಚಿನಲ್ಲಿ ಪಾರದರ್ಶಕತೆ ಇಲ್ಲದಿರುವುದು ಈ ಸಮಸ್ಯೆಯನ್ನು ಇನ್ನಷ್ಟು ಹಿಗ್ಗಿಸಿದೆ. ಚುನಾವಣಾ ಬಾಂಡುಗಳ ಪ್ರಕರಣ ಇದನ್ನು ಸ್ಪಷ್ಟಪಡಿಸಿದೆ. ಹಾಗಾಗಿಯೇ ತರಬೇತು ಇಲಾಖೆಗಳು ವರ್ಗಾವಣೆಯ

ಇಲಾಖೆಗಳಾಗಿವೆ. ಹಣ ಸಂಗ್ರಹಣೆ ಮುಖ್ಯ ಕಾಳಜಿಯಾಗಿದೆ. ಭ್ರಷ್ಟತೆಯೇ ಇಂದಿನ ಪ್ರಜಾಸತ್ತೆಯ ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಇದಕ್ಕೆ ಸರಳವಾದ ಪರಿಹಾರವಿಲ್ಲದಿದ್ದರೂ ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವ ಸುಧಾರಣೆಗೆ ನೀತಿಗಳನ್ನು ರೂಪಿಸುವ ಸಂದರ್ಭದಲ್ಲಿ ಇದನ್ನು ಗಮನಿಸುವುದು ಮುಖ್ಯ.

ಎಲೈಟ್‌ಗಳ ಪ್ರಾಬಲ್ಯ

ಪ್ರಣಬ್ ಬರ್ಧನ್ ಗುರುತಿಸುವಂತೆ ದೊಡ್ಡ ಉದ್ದಿಮೆಗಳು, ಜಮೀನ್ದಾರರು, ಸರ್ಕಾರಿ ನೌಕರರು ತುಂಬಾ ಪ್ರಭಾವಶಾಲಿಗಳಾಗಿದ್ದಾರೆ. ಅವರಿಗೆ ಚುನಾವಣೆಗೆ ಹಣ ಒದಗಿಸುವುದಕ್ಕೆ, ಮತದಾರರನ್ನು ಪ್ರಭಾವಿಸುವುದಕ್ಕೆ ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳಿಂದ ಸಾಧ್ಯವಾಗಿದೆ, ಮತ್ತು ಅವರ ಹಿತಾಸಕ್ತಿಗೆ ವಿರುದ್ಧವಾಗಿ ಸರ್ಕಾರ ನಡೆದುಕೊಂಡಾಗ ವಿರೋಧಿಸಲು ಆಂದೋಲನಗಳನ್ನು ಸಂಘಟಿಸುವ ಸಾಮರ್ಥ್ಯವೂ ಅವರಿಗಿದೆ. ಹಾಗಾಗಿ ಸಾರ್ವತ್ರಿಕ ಮತದಾನವಿದ್ದರೂ ಭಾರತದ ಪ್ರಜಾಸತ್ತೆ ಈ ಎಲೈಟ್ ಗುಂಪಿಗೆ ಅನುಕೂಲ ಮಾಡಿಕೊಡುತ್ತಿದೆ. ಒಟ್ಟಾರೆಯಾಗಿ ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಹಣ ವಿನಿಯೋಗ ಕಮ್ಮಿಯಾಗಿದೆ. ಜೊತೆಗೆ ಈ ಎಲೈಟ್ ಸಮುದಾಯ ಸಾರ್ವಜನಿಕ ಸೇವೆಯನ್ನು ಬಳಸಿಕೊಳ್ಳುವುದಿಲ್ಲ. ಹಾಗಾಗಿ ಸಾರ್ವಜನಿಕ ಸೇವೆಯನ್ನು ಸುಧಾರಿಸುವುದು ಅವರ ಗುರಿಯಲ್ಲ. ಅವರಿಗೆ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದು ಆದ್ಯತೆಯ ವಿಷಯ.

ಸಾರ್ವಜನಿಕ ಕಲ್ಯಾಣವನ್ನು ಹೆಚ್ಚಿಸುವುದು ರಾಜಕೀಯವಾಗಿ ಅನಿವಾರ್ಯವಾಗಬೇಕು. ರಾಜಕಾರಣಿಗಳಿಗೆ ದೀರ್ಘಕಾಲೀನ ಆಡಳಿತವನ್ನು ಸುಧಾರಿಸುವುದು ಒಳ್ಳೆಯದು ಅನಿಸಿದ್ದರೂ ಅವರೂ ಚುನಾವಣೆಯನ್ನು ಗೆಲ್ಲಬೇಕು. "ನಾವು ಏನು ಮಾಡಬೇಕು ಅನ್ನುವುದು ನಮಗೆಲ್ಲರಿಗೂ ಗೊತ್ತು. ಆದರೆ ಅದನ್ನು ಮಾಡಿದ ಮೇಲೆ ಚುನಾವಣೆಯಲ್ಲಿ ಮತ್ತೆ ಗೆಲ್ಲುವುದು ಹೇಗೆ ಎಂಬುದು ಗೊತ್ತಿಲ್ಲ." ಮತಬ್ಯಾಂಕಿನ ರಾಜಕೀಯದ ಸಮಸ್ಯೆ ಅಂದರೆ ಒಂದು ಪಂಗಡಕ್ಕೆ ಸಂಪನ್ಮೂಲ ಹೋದಾಗ ಇನ್ನೊಂದು ಗುಂಪು ಕಳೆದುಕೊಳ್ಳುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಒಟ್ಟಾರೆ ಆಡಳಿತವನ್ನು, ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವ ರಾಜಕೀಯ ಹೆಚ್ಚಿನವರಿಗೆ ಒಳಿತನ್ನು ಮಾಡಬಹುದು. ಒಟ್ಟಾರೆ ಬೆಳವಣಿಗೆಯನ್ನೂ ಹೆಚ್ಚಿಸಬಹುದು. ಬೆಳವಣಿಗೆಯಾದಂತೆ ಮತದಾರರು ಶಿಕ್ಷಿತರಾಗುತ್ತಾರೆ, ತಂತ್ರಜ್ಞಾನವೂ ಜನರಿಗೆ ಸೇವೆಯನ್ನು ನೇರವಾಗಿ ವರ್ಗಾಯಿಸುವುದಕ್ಕೆ ನೆರವಾಗುತ್ತದೆ. ಇದು ಹೆಚ್ಚು ಸಾರ್ವಜನಿಕ ಸೇವೆಯನ್ನು ಒದಗಿಸಲು ಬಯಸುವ ರಾಜಕಾರಣಿಗಳಿಗೆ ಅನುಕೂಲವಾಗುತ್ತದೆ. ಪ್ರಭಾವಶಾಲಿಗಳು ಸರ್ಕಾರದ ನೀತಿಯನ್ನು ರೂಪಿಸುವಲ್ಲಿ ಪ್ರಭಾವಶಾಲಿಗಳಾಗಿರುತ್ತಾರೆ. ಆದರೆ ಎಲೈಟ್‌ಗಳು ಸಾರ್ವಜನಿಕ ಸೇವೆಯನ್ನು ಸುಧಾರಿಸುವುದಕ್ಕೆ ಒತ್ತಡ ತಂದಿದ್ದಿಲ್ಲ. ಯಾಕೆಂದರೆ ಇಂತಹ ಸೇವೆಯನ್ನು ಬಳಸಿಕೊಳ್ಳದೆ ಖಾಸಗಿ ಕ್ಷೇತ್ರದಿಂದ ಅವರಿಗೆ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಅವರಿಗೆ ಸುಲಭ. ಆದರೆ ಈಗ ಎಲೈಟ್ ಆಧಾರಿತ ರಾಜಕೀಯ ವ್ಯವಸ್ಥೆಯ ಮೇಲೆ ಎಲೈಟೇತರ ಗುಂಪಿನಿಂದ ತಮ್ಮ ಬದುಕನ್ನು ಸುಧಾರಿಸುವುದಕ್ಕೆ ಒತ್ತಡ ಹೆಚ್ಚುತ್ತಿದೆ. ಆದರೆ ಅವರಿಗೆ ಇದನ್ನು ತರುವುದಕ್ಕಾಗದೆ ಇರುವುದು ಹತಾಶೆಯನ್ನು ಸೃಷ್ಟಿಸಿದೆ. ಜೊತೆಗೆ ಅಂತಹವರ ಅರ್ಧದಷ್ಟು ಮಕ್ಕಳು ನಾಲ್ಕನೆ ತರಗತಿಯನ್ನು ಓದಲಾಗದಂತಹ ಸ್ಥಿತಿ, ಶೇಕಡ ೩೦ರಷ್ಟು ಅಪೌಷ್ಟಿಕತೆಯಿಂದ ನರಳುತ್ತಿರುವುದು ಇವೆಲ್ಲಾ ಭಾರತದ ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸಿದೆ. ಹಾಗಾಗಿ ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ಸೇವೆಯನ್ನು ಪರಿಣಾಮಕಾರಿಯಾಗಿ ಒದಗಿಸುವುದು ಎಲ್ಲರನ್ನು ಒಳಗೊಳ್ಳುವುದಕ್ಕೆ ಅವಶ್ಯಕ. ಮತ್ತು ಬೆಳವಣಿಗೆಯ ದೃಷ್ಟಿಯಿಂದಲೂ ಅದು ಮುಖ್ಯವಾಗುತ್ತದೆ. ಇದನ್ನು ಅರ್ಥಮಾಡಿಕೊಂಡ ರಾಜಕಾರಣಿಗಳಿಂದ ಆಡಳಿತವನ್ನು ಹಾಗೂ ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಹೆಚ್ಚಿನ ಹೂಡಿಕೆಯನ್ನು ನಿರೀಕ್ಷಿಸಬಹುದು. ಅದು ಹೆಚ್ಚಿನ ಜನರಿಗೆ ಅನುಕೂಲವಾಗುತ್ತದೆ ಮತ್ತು ಹೆಚ್ಚು ಜನರನ್ನು ಒಳಗೊಳ್ಳುವುದರಿಂದ ರಾಜಕೀಯವಾಗಿಯೂ ಅನುಕೂಲವಾಗುತ್ತದೆ.

ಇಂತಹ ಒಳ್ಳೆಯ ಆಡಳಿತ ನೀಡುತ್ತಿರುವ ಸರ್ಕಾರಗಳನ್ನು ಹೆಚ್ಚು ಮತ ನೀಡುವ ಮೂಲಕ ಜನ ಬೆಂಬಲಿಸುತ್ತಿರುವ ಉದಾಹರಣೆಗಳು ಹೆಚ್ಚಾಗುತ್ತಿವೆ. ಕೆಲವು ಅಧ್ಯಯನಗಳ ಪ್ರಕಾರ ಬೆಳವಣಿಗೆಯನ್ನು ಸಾಧ್ಯಮಾಡಿದ ಸರ್ಕಾರಗಳಿಗೆ ಹೆಚ್ಚಿನ ಮತಗಳು ಹಾಗೂ ಸ್ಥಾನಗಳು ಸಿಕ್ಕಿವೆ. ಇಂತಹ ಅರಿವುಳ್ಳ ಮತದಾರರ ಸಂಖ್ಯೆ ಹೆಚ್ಚುತ್ತಿದೆ ಎಂದು ಕಾರ್ತಿಕ್ ಮುರುಳಿಧರನ್ ಹೇಳುತ್ತಾರೆ. ರಾಜಕಾರಣಿಗಳು ಕೂಡ ಜನರಿಗೆ ಅನುಕೂಲವಾಗುವ ಕೆಲಸ ತಮಗೂ ಒಳ್ಳೆಯದಾಗುತ್ತದೆ ಅನ್ನುವ ಭಾವನೆಯಿಂದ ಬೆಂಬಲಿಸುತ್ತಿದ್ದಾರೆ. ರಾಜಕೀಯವಾಗಿಯೂ ಅದು ಲಾಭದಾಯಕವಾಗಿದೆ. ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪ್ರಗತಿಯ ಕಡೆಗೆ ಮತದಾರರ ಒಲವು ತೋರುತ್ತಿರುವುದು ಒಳ್ಳೆಯ ಸೂಚನೆ. ಬಿಜೆಪಿ ಅಂತಹ ಪಕ್ಷವೂ ತನ್ನ ಹಿಂದೂ ಅಜೆಂಡಾ ಜೊತೆಗೆ 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಬಗ್ಗೆ ಮಾತನಾಡಬೇಕಾಗಿದೆ. ಆಮ್ ಆದ್ಮಿ ಪಕ್ಷದ ಗೆಲುವಿನ ಹಿಂದೆ ಆರೋಗ್ಯ, ಶಿಕ್ಷಣದಂತಹ ಕಾರ್ಯಕ್ರಮಗಳು ಮುಖ್ಯವಾಗಿವೆ. ಅಂದರೆ ಕೇವಲ ಜಾತಿ, ಪ್ರಾಂತ್ಯ, ಧರ್ಮ ಇವುಗಳೇ ಚುನಾವಣೆಯನ್ನು ಗೆಲ್ಲುವುದಕ್ಕೆ ಸಾಲುವುದಿಲ್ಲ. ಚುನಾವಣೆಯನ್ನು ಗೆಲ್ಲುವುದಕ್ಕೆ ಜನರ ಕಲ್ಯಾಣದ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಬೇಕಾಗಿದೆ.

ಯಶಸ್ವಿಯಾದ ನಾಯಕರು ರೈತರು, ಮಹಿಳೆಯರು ಇತ್ಯಾದಿ ವಿಶಾಲ ಸಮುದಾಯಗಳಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳಿಗೆ ಎದುರಾಗುವ ದೊಡ್ಡ ಸಮಸ್ಯೆ ಅಂದರೆ ಸಂಪನ್ಮೂಲದ ಕೊರತೆ. ಜನತೆಗೆ ಅನುಕೂಲವನ್ನು ಒದಗಿಸುವ ದೃಷ್ಟಿಯಿಂದ ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಅಂಕಿಅಂಶಗಳನ್ನು, ಪುರಾವೆಗಳನ್ನು ಆಧರಿಸಿ ಹೂಡಿಕೆಯನ್ನು ಮಾಡಬೇಕಾಗುತ್ತದೆ. ಸುಮ್ಮನೆ ಹಣ ಖರ್ಚು ಮಾಡುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಹೂಡಿಕೆ ಮಾಡಬೇಕು. ಇದು ಸೇವೆಯನ್ನು ಜನರಿಗೆ ಬೇಗ ಒದಗಿಸುತ್ತದೆ ಮತ್ತು ಅದರ ಗುಣಮಟ್ಟವೂ ಸುಧಾರಿಸಿರುತ್ತದೆ. ಹೆಚ್ಚಿನ ಅಂಗನವಾಡಿ ಕೆಲಸಗಾರರನ್ನು ನೇಮಿಸಿಕೊಳ್ಳುವುದರಿಂದ ದೀರ್ಘಕಾಲೀನ ದೃಷ್ಟಿಯಿಂದ ನೋಡಿದರೆ ಶಿಕ್ಷಣ ಹಾಗೂ ಪೌಷ್ಟಿಕತೆ ಸುಧಾರಿಸುತ್ತದೆ. ಅದರ ಫಲವೂ ಸಮುದಾಯಕ್ಕೆ ಕಾಣುತ್ತದೆ. ಉತ್ತಮ ಅಂಕಿಅಂಶ ಸಂಗ್ರಹಕ್ಕೆ ಹೂಡಿಕೆ ಮಾಡುವುದರಿಂದ ಆಡಳಿತವೂ ಸುಧಾರಿಸುತ್ತದೆ. ಅಂತಹ ಮಾಹಿತಿಯಿಂದ ಅಧಿಕಾರಶಾಹಿಯನ್ನು ಹೆಚ್ಚು ಪರಿಣಾಮಕಾರಿಯಾಗಿಯೂ, ಜವಾಬ್ದಾರಿಯುತರನ್ನಾಗಿಯೂ ಮಾಡಬಹುದು. ಮತದಾರರ ಬೆಂಬಲವೂ ಸಿಗುತ್ತದೆ.

ರಾಜಕಾರಣಿಗಳು ಬಹುಪಾಲು ಸಮಯ ಹಾಗೂ ಶ್ರಮವನ್ನು ಪಕ್ಷಕ್ಕೆ ಹಣ ಸಂಗ್ರಹಿಸಲು ಕಳೆಯುತ್ತಾರೆ. ನಿಷ್ಠಾವಂತ ನಾಯಕರು ಭ್ರಷ್ಟಾಚಾರ ಅನಿವಾರ್ಯ ಅನ್ನುವ ಹಂತಕ್ಕೆ ಬರುತ್ತಾರೆ. ಆದರೆ ಇಂತಹ ಮಾಹಿತಿ ಆಧಾರಿತ ಆಳ್ವಿಕೆಯಿಂದ ಚುನಾವಣಾ ಖರ್ಚು ಕಡಿಮೆಯಾಗಬಹುದು. ಕೇವಲ ಖರ್ಚಿನ ಮೇಲೆ ಮಿತಿಯನ್ನು ಹಾಕುವುದರಿಂದ ಪರಿಣಾಮಕಾರಿಯಾಗುವುದಿಲ್ಲ. ಹಣದ ಪಾತ್ರವನ್ನು ಕಡಿಮೆ ಮಾಡಬೇಕಾದರೆ ಚುನಾವಣೆಯಲ್ಲಿ ಹಣದ ಮಹತ್ವ ಕಡಿಮೆಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ಸಾಮಾನ್ಯವಾಗಿ ಚುನಾವಣೆಗೆ ಮೊದಲು ಹಣದ ರೂಪದಲ್ಲಿ ಅಥವಾ ವಸ್ತುಗಳ ರೂಪದಲ್ಲಿ ಮತದಾರರಿಗೆ ಉಡುಗೊರೆ




ನೀಡಲಾಗುತ್ತದೆ. ಜನರಿಗೆ ಅನುಕೂಲವನ್ನು ಒದಗಿಸುವುದರಲ್ಲಿ ವಿಫಲವಾಗಿರುವುದರಿಂದ ಹೀಗೆ ಮತದಾರರಿಗೆ ಉಡುಗೊರೆ ನೀಡುವುದು ಅನಿವಾರ್ಯವಾಗಿರಬಹುದು. ಇದು ಹೆಚ್ಚು ಹಣ ಕ್ರೋಡೀಕರಿಸುವುದಕ್ಕೆ ಒತ್ತಾಯಿಸುತ್ತದೆ. ಹೆಚ್ಚಿನ ಭ್ರಷ್ಟಾಚಾರಕ್ಕೆ ಕಾರಣವಾಗುತ್ತದೆ. ಸಂಪನ್ಮೂಲದ ಕೊರತೆಯಿಂದಾಗಿ ಸರ್ಕಾರದ ಸಾಮರ್ಥ್ಯ ಸೊರಗುತ್ತದೆ. ಹಾಗಾಗಿ ಸರ್ಕಾರ ಆಡಳಿತದ ಪ್ರಾರಂಭದಲ್ಲೇ ತನ್ನ ಅಜೆಂಡಾವನ್ನು ಘೋಷಿಸಿ, ಕೊನೆಯಲ್ಲಿ ತನ್ನ ಸಾಧನೆಯನ್ನು ಮುಂದಿಟ್ಟುಕೊಂಡು ಮತ ಕೇಳುವುದು ಒಳ್ಳೆಯದಿರಬಹುದು. ಇದರಿಂದ ಚುನಾವಣೆಗೆ ಹಣ ಕ್ರೋಡೀಕರಿಸುವುದು ಆ ಪ್ರಮಾಣದಲ್ಲಿ ಬೇಕಾಗದಿರಬಹುದು. ಭ್ರಷ್ಟಾಚಾರ ಕಡಿಮೆಯಾಗಬಹುದು. ಭಾರತೀಯ ಮತದಾರರು ಉತ್ತಮ ಆಳ್ವಿಕೆಯನ್ನು ಮೆಚ್ಚಿಕೊಂಡಿರುವುದಕ್ಕೆ ಹಲವಾರು ಉದಾಹರಣೆಗಳಿವೆ. ಇದು ಭಾರತದ ಬೆಳವಣಿಗೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸಬಹುದು.

ರಾಜಕಾರಣಿಗಳಿಗೆ, ವೋಟು–ನೋಟಿನ ಜೊತೆಗೆ ಒಳ್ಳೆಯದು ಮಾಡಬೇಕೆನ್ನುವ ಆಸೆಯೂ ಇರುತ್ತದೆ. ಎಷ್ಟೋ ಮುಖ್ಯಮಂತ್ರಿಗಳು ತಮ್ಮ ರಾಜ್ಯದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಇರುವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದಕ್ಕೆ ಅಂಕಿಅಂಶ ಹಾಗೂ ಪುರಾವೆ ಆಧಾರಿತ ಆಡಳಿತ ಮುಖ್ಯವಾಗುತ್ತದೆ.

ಭಾರತದಲ್ಲಿ ಪ್ರಜಾಸತ್ತೆಯ ಬಗ್ಗೆ ವಿಶ್ವಾಸ ಕಡಿಮೆಯಾಗುತ್ತಿದೆ. ಜನ ಪ್ರಬಲ ನಾಯಕರನ್ನು ಬಯಸುತ್ತಾರೆ ಅನ್ನುವ ಅಭಿಪ್ರಾಯ ಇದೆ. ಆದರೆ ಜಗತ್ತಿನಲ್ಲಿ ನಿರಂಕುಶ ಆಳ್ವಿಕೆ ಅತ್ಯಂತ ಕೆಟ್ಟ ಆಡಳಿತ ನಡೆಸುತ್ತಿರುವ ಉದಾಹರಣೆಗಳು ಧಾರಾಳವಾಗಿದೆ. ಪ್ರಜಾಸತ್ತೆ ಖಂಡಿತ ಬೆಳವಣಿಗೆಯನ್ನು ಪೋಷಿಸುತ್ತದೆ. ಅದಕ್ಕೆ ಬಲವಾದ ಪುರಾವೆ ಇದೆ. ಚೀನಾದಲ್ಲೂ ಅದರ ಯಶಸ್ಸಿಗೆ ನಿರಂಕುಶ ಆಳ್ವಿಕೆ ಕಾರಣವಲ್ಲ ಅನ್ನುವುದು ಕಾರ್ತಿಕ್ ಅವರ ವಾದ. ಡೆಂಗ್ ಕ್ಸಿಯೊಪಿಂಗ್ ಅಲ್ಲಿ ವಿಕೇಂದ್ರೀಕರಣದ ಆಳ್ವಿಕೆಯನ್ನು ಜಾರಿಗೆ ತಂದಿದ್ದರಿಂದ ಸುಧಾರಣೆ ಸಾಧ್ಯವಾಯಿತು. ಹಾಗೆ ಕ್ಸಿ ಜಿನ್‌ಪಿಂಗ್ ಮತ್ತೆ ಕೇಂದ್ರೀಕರಣ ಆಳ್ವಿಕೆಯನ್ನು ತಂದಿದ್ದರಿಂದ ಹಿಂಜರಿತ ಪ್ರಾರಂಭವಾಯಿತು. ಜನರು ಪ್ರಜಾಸತ್ತೆಯ ಬಗ್ಗೆ ನಂಬಿಕೆ ಕಳೆದುಕೊಂಡರೆ ಪ್ರಜಾಸತ್ತಾತ್ಮಕ ಪ್ರಯೋಗಕ್ಕೆ ಹಿಂಜರಿತವಾಗಬಹುದು. ಪ್ರಜಾಸತ್ತಾತ್ಮಕ ವ್ಯವಸ್ಥೆ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ತರುವಲ್ಲಿ ವಿಫಲವಾದರೆ ಜನ ನಿರಾಶರಾಗುವುದು ಸ್ವಾಭಾವಿಕ. ಅಂಬೇಡ್ಕರ್ ಹೇಳುವಂತೆ, "೨೬ ಜನವರಿ ೧೯೫೦ರಂದು ನಾವು ವೈರುಧ್ಯಗಳ ಬದುಕಿಗೆ ಪ್ರವೇಶಿಸುತ್ತಿದ್ದೇವೆ. ರಾಜಕೀಯವಾಗಿ ನಮಗೆ ಸಮಾನತೆ ಇದೆ. ಸಾಮಾಜಿಕ ಹಾಗೂ ಆರ್ಥಿಕವಾಗಿ ನಾವು ಅಸಮಾನ ಬದುಕನ್ನು ಬದುಕುತ್ತಿದ್ದೇವೆ. ರಾಜಕೀಯದಲ್ಲಿ ನಾವು ಒಬ್ಬನಿಗೆ ಒಂದು ವೋಟು ತತ್ವವನ್ನು ಒಪ್ಪಿಕೊಂಡಿದ್ದೇವೆ. ಆದರೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಒಬ್ಬನಿಗೆ ಒಂದು ಮೌಲ್ಯವೆಂಬ ತತ್ವವನ್ನು ಒಪ್ಪಿಕೊಂಡಿಲ್ಲ. ಈ ವೈರುಧ್ಯವನ್ನು ನಾವು ನಿವಾರಿಸಿಕೊಳ್ಳಬೇಕು. ಇಲ್ಲದೇ ಹೋದರೆ ಅಸಮಾನತೆಯಿಂದ ನರಳುತ್ತಿರುವವರು ರಾಜಕೀಯ ಪ್ರಜಾಸತ್ತೆಯ ರಚನೆಯನ್ನು ಛಿದ್ರಗೊಳಿಸುತ್ತಾರೆ." ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಮತದಾನದ ಹಕ್ಕುಗಳನ್ನು ನೀಡುವ ಮೂಲಕ ಎಲ್ಲರನ್ನೂ ಸಮಾನವಾಗಿ ಕಾಣಲಾಗುತ್ತದೆ. ಆದರೆ ರಾಜಕೀಯ ಸಮಾನತೆಯನ್ನು ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯಾಗಿ ಬದಲಿಸುವುದಕ್ಕೆ ಇರುವ ಸಾಧನವೇ ಸರ್ಕಾರ. ದುರ್ಬಲ ಸರ್ಕಾರವೇ ಈ ನಿಟ್ಟಿನಲ್ಲಿ ಅಡ್ಡಿಯಾಗಿದೆ. ಈ ಮಟ್ಟಿಗೆ ಭಾರತೀಯ ಪ್ರಜಾಸತ್ತೆ ಜನತೆಯ ಪ್ರಜಾಸತ್ತಾತ್ಮಕ ಅಭಿಲಾಷೆಯನ್ನು ಈಡೇರಿಸುವಲ್ಲಿ ವಿಫಲವಾಗಿದೆ. ಅದು ಭಾರತದ ಅಭಿವೃದ್ಧಿ ಹಾಗೂ ಬೆಳವಣಿಗೆಯನ್ನು ತ್ವರಿತಗೊಳಿಸುವುದಕ್ಕಷ್ಟೆ ಅಲ್ಲ, ಪ್ರಜಾಸತ್ತೆಯಲ್ಲಿ ಪ್ರಜೆಗಳ ಶ್ರದ್ಧೆಯನ್ನು ಉಳಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ 'ಅಭಿವೃದ್ಧಿಗೆ ಮೊದಲು ಪ್ರಜಾಸತ್ತೆ' ಚಾರಿತ್ರಿಕವಾಗಿ ವಿಶಿಷ್ಟ ಪ್ರಯೋಗ, ನಾವು ಹೆಮ್ಮೆ ಪಡಬಹುದಾದದ್ದು. ಆದರೆ ಇದರಿಂದ ಸರ್ಕಾರ ತನ್ನ ಸಾಮರ್ಥ್ಯಕ್ಕೆ ಮೀರಿ ಬೇಡಿಕೆಯನ್ನು ಎದುರಿಸಬೇಕಾಯಿತು. ಅದರಿಂದಾಗಿ ಸರ್ಕಾರದ ಮಿತವಾದ ಸಂಪನ್ಮೂಲವನ್ನು ಆದ್ಯತೆಯ ರಾಜಕೀಯ ಗುಂಪುಗಳಿಗೆ ಒದಗಿಸುವ ಪರಿಸ್ಥಿತಿ ಸೃಷ್ಟಿಯಾಯಿತು. ಭಾರತದ ಪ್ರಜಾಸತ್ತೆ ಸರ್ಕಾರವನ್ನು ಕುರಿತು ಬೇಡಿಕೆಗಳನ್ನು ಒತ್ತಾಯಿಸುವುದಕ್ಕೆ ಸಾಮರ್ಥ್ಯ ತಂದುಕೊಟ್ಟಿದೆ. ಆದರೆ ಈ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬೇಕಾದ ಸಾಮರ್ಥ್ಯ ಬೆಳೆದಿಲ್ಲ.

ಎರಡನೆಯದಾಗಿ ದುರ್ಬಲ ಸರ್ಕಾರದ ಸಾಮರ್ಥ್ಯ ಮತ ಬ್ಯಾಂಕಿನ ರಾಜಕೀಯವನ್ನು ಬೆಳೆಸುತ್ತದೆ. ಮತ ಬ್ಯಾಂಕಿನ ರಾಜಕೀಯ ಸರ್ಕಾರದ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಚುನಾವಣೆಯ ಖರ್ಚಿಗೆ ಹಣ ಕ್ರೋಡೀಕರಿಸುವುದು ಈ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಕೆಲವೇ ಎಲೈಟ್‌ಗಳ ಹಿತಾಸಕ್ತಿಯನ್ನು ಕಾಪಾಡುವ ವ್ಯವಸ್ಥೆಯಿಂದ ಹೆಚ್ಚು ಜನರ ಹಿತಾಸಕ್ತಿಯನ್ನು ಕಾಪಾಡುವ ವ್ಯವಸ್ಥೆಯ ಕಡೆಗೆ ಪರಿವರ್ತಿಸುವುದು ಹೇಗೆ? ಸರ್ಕಾರದ ಯಂತ್ರವೆಂಬ ೧೯೫೦ರ ಕಾರನ್ನು ಅಪ್‌ಗ್ರೇಡ್ ಮಾಡಬೇಕಾಗಿದೆ. ಹೆಚ್ಚಿನ ಇಂಧನ (ಬಜೆಟ್) ಮತ್ತು ಒತ್ತಡ (ಆಕ್ಸಿಲೇಟರ್) ಹೆಚ್ಚಿಸಿದರೂ ಕಾರನ್ನು ಬಲಗೊಳಿಸದೆ ಹೋದರೆ ಪ್ರಯೋಜನವಿಲ್ಲ. ಸರ್ಕಾರದ ಸಾಮರ್ಥ್ಯವನ್ನು ಹೆಚ್ಚಿಸುವ ಕಡೆ ಹೂಡಿಕೆ ಮಾಡುವುದರಿಂದ ಸಿಗುವ ಫಲ ಹೆಚ್ಚು. ಹಾಗಾಗಿ ಅದು ಮುಖ್ಯಮಂತ್ರಿಗಳ ಆದ್ಯತೆಯಾಗಬೇಕು. ರಾಜಕೀಯ ವಿಲ್ (Political Will) ಮುಖ್ಯವಾಗಿ ಬೇಕು. ದಾರಿಯನ್ನು ಈ ಪುಸ್ತಕದಲ್ಲಿ ನೀಡಲಾಗಿದೆ



ಕೃತಕ ಬುದ್ಧಿಮತ್ತೆಯ ಆರ್ಥಿಕತೆ ಎತ್ತ ಸಾಗಿದೆ?

ಕೃತಕ ಬುದ್ಧಿಮತ್ತೆ ಈಗ ತುಂಬಾ ಸುದ್ದಿಯಲ್ಲಿದೆ. ಅದು ದೊಡ್ಡ ಬಿಕ್ಕಟ್ಟಿನಲ್ಲಿದೆ ಅನ್ನುವ ಆತಂಕ ವ್ಯಾಪಕವಾಗಿ ವ್ಯಕ್ತವಾಗುತ್ತಿದೆ. ಹಿಂದೆ ಜಗತ್ತು ಕಂಡಿದ್ದ ಹಲವು ಬಿಕ್ಕಟ್ಟುಗಳಿಗಿಂತ ಇದು ಹಲವು ಪಟ್ಟು ಭೀಕರವಾಗಿರುತ್ತದೆ ಎಂದು ಹಲವರು ಹೇಳುತ್ತಿದ್ದಾರೆ. ಇಂದು ಜಾಗತಿಕ ಆರ್ಥಿಕತೆ ಕೃತಕ ಬುದ್ಧಿಮತ್ತೆಯನ್ನು(ಎಐ) ಆಧರಿಸಿ ಬೆಳೆಯುತ್ತಿದೆ. ಅಮೇರಿಕೆ ಅದನ್ನೇ ಹೆಚ್ಚಾಗಿ ನೆಚ್ಚಿಕೊಂಡಿದೆ. ಅಮೇರಿಕೆಯ ಜಿಡಿಪಿಯ ಶೇಕಡ ೪೦ಕ್ಕೂ ಹೆಚ್ಚು ಕೃತಕ ಬುದ್ಧಿಮತ್ತೆಯ ಕ್ಷೇತ್ರದಿಂದ ಬರುತ್ತಿದೆ. ಇಂದು ಅಮೇರಿಕೆಯಲ್ಲಿ ಕಾಣುತ್ತಿರುವ ಸ್ಟಾಕ್ ಮಾರುಕಟ್ಟೆಯ ಹೆಚ್ಚಳಕ್ಕೆ ಶೇಕಡ ೮೦ರಷ್ಟು ಎಐ ಸಂಬಂಧಿ ಸ್ಟಾಕುಗಳ ಬೆಲೆ ಏರಿಕೆ ಕಾರಣ. ಒಟ್ಟಾರೆ ಸ್ಟಾಕಿನ ಶೇಕಡ ೮೫ರಷ್ಟನ್ನು ಅಮೇರಿಕೆಯ ಅತಿ ಶ್ರೀಮಂತ ೧೦% ಜನ ಕೊಂಡಿದ್ದಾರೆ. ಅದರ ಬೆಲೆ ಏರಿದರೆ ಸಹಜವಾಗಿಯೇ ಅತಿಹೆಚ್ಚು ಲಾಭವಾಗುವುದು ಇವರಿಗೇ. ಈ ಶ್ರೀಮಂತರೇ ಇಂದು ಅಮೇರಿಕೆಯಲ್ಲಿ ಬಿಕರಿಯಾಗುತ್ತಿರುವ ಅರ್ಧದಷ್ಟು ಸರಕುಗಳನ್ನು ಕೊಳ್ಳುತ್ತಿರುವುದು. ಅಮೇರಿಕೆ ತಾನು ಎದುರಿಸುತ್ತಿರುವ ಎಲ್ಲಾ ಸವಾಲುಗಳಿಗೆ ಎಐ ಪರಿಹಾರ ಅಂತ ಭಾವಿಸಿದಂತಿದೆ. ನಿರುದ್ಯೋಗ, ಹಣದುಬ್ಬರ, ಸಾಲ, ಆರ್ಥಿಕ ಹಿಂಜರಿತ ಎಲ್ಲಾ ಸಮಸ್ಯೆಗಳನ್ನು ಅದು ಪರಿಹರಿಸುತ್ತದೆ ಅಂತ ಅಮೆರಿಕೆ ಭಾವಿಸಿದೆ. ವಲಸೆಗೆ ಕಡಿವಾಣ ಹಾಕಿರುವುದರಿಂದ ಕಾರ್ಮಿಕರ ಕೊರತೆ ಸಮಸ್ಯೆಯಾಗುತ್ತದೆ. ಆದರೆ ಕೃತಕ ಬುದ್ಧಿಮತ್ತೆ ಕಾರ್ಮಿಕರ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಕಾರ್ಮಿಕರ ಉತ್ಪಾದಕತೆ ಹೆಚ್ಚಿದರೆ ಕಾರ್ಮಿಕರ ಕೊರತೆ ಸಮಸ್ಯೆ ಪರಿಹಾರವಾಗುತ್ತದೆ ಎಂದು ಅದು ಭಾವಿಸಿದೆ.

ಇತ್ತೀಚೆಗೆ ಅಮೇರಿಕೆಯಲ್ಲಿ ಹೆಚ್ಚುತ್ತಿರುವ ಉತ್ಪಾದಕತೆ ಜನರ ಎಐ ಮೇಲಿನ ವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿದೆ. ವಿದೇಶಿ ಹೂಡಿಕೆದಾರರು ಅಮೇರಿಕೆಯ ಸ್ಟಾಕಿನ ಮೇಲೆ ವಿಪರೀತ ಹೂಡಿಕೆ ಮಾಡುತ್ತಿದ್ದಾರೆ. ಎರಡನೆಯ ತ್ರೈಮಾಸಿಕದಲ್ಲಿ ೨೯೦ ಬಿಲಿಯನ್ ಡಾಲರ್ ಮೌಲ್ಯದ ಸ್ಟಾಕ್ ಖರೀದಿಸಿದ್ದಾರೆ. ಮಾರುಕಟ್ಟೆಯ ಶೇಕಡ ೩೦ರಷ್ಟು ಸ್ಟಾಕುಗಳು ವಿದೇಶಿಗರ ಒಡೆತನದಲ್ಲಿದೆ. ಅಮೇರಿಕೆಯ ಸರಕನ್ನು ಬಹಿಷ್ಕರಿಸಬೇಕೆನ್ನುವ ಯುರೋಪಿಯನ್ನರಿಗೆ ಅಮೇರಿಕೆಯ ಸ್ಟಾಕುಗಳು ಮೈಲಿಗೆಯಲ್ಲ. ಅವನ್ನು ವಿಪರೀತ ಕೊಳ್ಳುತ್ತಿದ್ದಾರೆ. ಅದರಲ್ಲೂ ಟೆಕ್ ದೈತ್ಯರ ಸ್ಟಾಕುಗಳನ್ನು ಮುಗಿಬಿದ್ದು ಕೊಳ್ಳುತ್ತಿದ್ದಾರೆ. ಆದರೆ ಒಟ್ಟಾರೆ ಜಿಡಿಪಿಯಲ್ಲಿ ಎಐ ಪಾಲನ್ನು ಕಳೆದುಬಿಟ್ಟರೆ ಅಮೇರಿಕೆಯ ಜಿಡಿಪಿಯ ವಾರ್ಷಿಕ ಬೆಳವಣಿಗೆ ದರ ಕೇವಲ ೦.೧%. ಅಂದರೆ ಅಮೇರಿಕೆಯಲ್ಲಿ ಎಐ ಬಿಟ್ಟು ಉಳಿದ ಕ್ಷೇತ್ರಗಳಲ್ಲಿ ಸ್ಥಗಿತತೆ ಕಾಣಿಸಿಕೊಂಡಿದೆ. ಎರಡು ವರ್ಷಗಳಿಂದ ಅಮೇರಿಕೆಯ ಉತ್ಪಾದಕ ವಲಯದಲ್ಲಿ ಹಿಂಜರಿತವನ್ನು ಕಾಣಬಹುದು. ೨೦೨೫ರಲ್ಲಿ ಕೈಗಾರಿಕೆ, ಆರೋಗ್ಯ, ಬ್ಯಾಂಕ್ ಪ್ರತಿಯೊಂದು ಕ್ಷೇತ್ರಗಳಲ್ಲೂ ಅಮೇರಿಕೆಗಿಂತ ಬೇರೆ ದೇಶಗಳೇ ಮುಂದಿವೆ. ಅಂದರೆ ಅಮೇರಿಕೆಯ ಆರ್ಥಿಕತೆ ಸಂಪೂರ್ಣವಾಗಿ ಎಐ ಅನ್ನೇ ನೆಚ್ಚಿಕೊಂಡಿದೆ. ಅಮೇರಿಕೆಯ ಸಾಲ ೩೮ ಟ್ರಿಲಿಯನ್ ಡಾಲರ್ ದಾಟಿರುವುದು ಸಮಸ್ಯೆಯನ್ನು ಇನ್ನಷ್ಟು ಗಂಭೀರವಾಗಿಸಿದೆ. ಹಾಗೆಯೇ ವಿತ್ತೀಯ ಕೊರತೆಯೂ ಏರುತ್ತಿದೆ. ಎಐ ತರಲಿರುವ ಆರ್ಥಿಕ ಪ್ರಗತಿ ಇದಕ್ಕೆ ಪರಿಹಾರವಾಗಬಹುದು ಅನ್ನುವ ನಿರೀಕ್ಷೆಯಲ್ಲಿದೆ ಅಮೇರಿಕಾ. ಅಮೇರಿಕಾ ಹಾಗೂ ಚೀನಾದಲ್ಲಿ ಸರ್ಕಾರಗಳು ಎಐ ಕ್ಷೇತ್ರವನ್ನು ಬೆಂಬಲಿಸುತ್ತಿವೆ. ಅದಕ್ಕೆ ನೆರವು ನೀಡುವುದಕ್ಕಾಗಿ ಅಮೇರಿಕೆಯ ಸರ್ಕಾರ ಇನ್ನೊಂದೆರಡು ಟ್ರಿಲಿಯನ್ ಸಾಲ ಹೆಚ್ಚು ಮಾಡಿಕೊಂಡರೂ ಆಶ್ಚರ್ಯವಿಲ್ಲ. ಬಡ್ಡಿದರವನ್ನು ಕಡಿಮೆ ಮಾಡಲು ಕೇಂದ್ರ ಬ್ಯಾಂಕಿನ ಮೇಲೆ ಒತ್ತಡವೂ ಹೆಚ್ಚುತ್ತಿದೆ. ಆಗ ಈ ಉದ್ಯಮಗಳಿಗೆ ಹೆಚ್ಚು ಅಗ್ಗವಾಗಿ ಸಾಲ ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಒಟ್ಟಾರೆಯಾಗಿ ಇಂದು ಐಟಿ ಉದ್ಯಮಗಳು ಬೆಳೆಯಬೇಕು. ಐಟಿ ಕ್ಷೇತ್ರದ ಮೇಲೆ ಉದ್ಯಮಗಳು ವಿಪರೀತ ಹೂಡಿಕೆ ಮಾಡುತ್ತಿವೆ. ಉದಾಹರಣೆಗೆ ಮೆಟಾ ಕಂಪೆನಿ ೬೦೦ ಬಿಲಿಯನ್ ಡಾಲರ್ ಹೂಡಿಕೆ ಮಾಡುತ್ತಿದೆ. ೨೦೧೬ಕ್ಕೆ ಹೋಲಿಸಿದರೆ ಕೃತಕ ಬುದ್ಧಿಮತ್ತೆಯ ಮೇಲಿನ ಹೂಡಿಕೆ ಈಗ ಅಮೇರಿಕೆಯಲ್ಲಿ ಸುಮಾರು ಹತ್ತು ಪಟ್ಟು ಹೆಚ್ಚಿದೆ. ಚೀನಾದಲ್ಲೂ ಹೂಡಿಕೆ ಹೆಚ್ಚಿದೆ. ತಾವು ನೆಚ್ಚಿಕೊಂಡಿರುವ ಎಐ ಉದ್ಯಮವನ್ನು ಬೆಂಬಲಿಸುವುದು ಸರ್ಕಾರಕ್ಕೆ ಅನಿವಾರ್ಯವಾಗುತ್ತದೆ. ಆದರೆ ಹೀಗೆ ಎಐ ಒಂದನ್ನೇ ನೆಚ್ಚಿಕೊಂಡು ಆರ್ಥಿಕತೆಯನ್ನು ಕಟ್ಟುವುದಕ್ಕೆ ಪ್ರಯತ್ನಿಸುವುದು ಒಳ್ಳೆಯದಲ್ಲ ಅನ್ನುವುದು ಹಲವರ ಆತಂಕ. ಈಗ ಕಾಣುತ್ತಿರುವ ಎಐ ಪ್ರಗತಿ ಒಂದು ಹುಸಿ ಗುಳ್ಳೆಯಾಗಿಬಿಟ್ಟರೆ ಇಡೀ ಆರ್ಥಿಕತೆ ನಲುಗಿಹೋಗುತ್ತದೆ ಎನ್ನುವ ಗುಮಾನಿ ಅವರದ್ದು.


ಸಾಮಾನ್ಯವಾಗಿ ಇಂತಹ ಗುಳ್ಳೆಗಳು ಒಂದು ಹೊಸ ಚಿಂತನೆಯಿಂದ, ತಂತ್ರಜ್ಞಾನದಿಂದ ಪ್ರಾರಂಭವಾಗುತ್ತದೆ. ಹಿಂದೆ ರೈಲ್ವೆ, ಇಂಟರ್‌ನೆಟ್, ರಿಯಲ್ ಎಸ್ಟೇಟ್ ಇತ್ಯಾದಿಗಳ ವಿಷಯದಲ್ಲೂ ಹೀಗೆ ಆಗಿತ್ತು. ಇವೆಲ್ಲಾ ಪ್ರಾರಂಭವಾದಾಗ ಆ ಉದ್ಯಮಗಳಿಗೂ ಬಂಡವಾಳ, ಹೂಡಿಕೆ ನಿರೀಕ್ಷೆ ಮೀರಿ ಹರಿದು ಬಂದಿತ್ತು. ಈಗ ಕೃತಕ ಬುದ್ಧಿಮತ್ತೆಯ ಉದ್ಯಮಗಳು ಬಿಲಿಯನ್, ಟ್ರಿಲಿಯನ್ ಡಾಲರ್ ಮೊತ್ತದ ಯೋಜನೆಗಳನ್ನು ಪ್ರಕಟಿಸುತ್ತಲೇ ಇವೆ. ಇದು ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜನರಿಗಿರುವ ವಿಶ್ವಾಸವನ್ನು

ಇನ್ನಷ್ಟು ಹೆಚ್ಚಿಸುತ್ತದೆ. ಹಿಂದೆ ಉಳಿದರೆ ದಡ್ಡರಾಗುತ್ತೇವೆ ಅಂದುಕೊಂಡು ಜನ ಅದರ ಹಿಂದೆ ನುಗ್ಗುತ್ತಾರೆ. ತಾವು ಒಂದಿಷ್ಟು ಲಾಭ ಮಾಡಿಕೊಳ್ಳೋಣ ಅಂದುಕೊಂಡು ಹಣ ತೊಡಗಿಸುತ್ತಾರೆ. ಸ್ಟಾಕುಗಳ ಬೆಲೆ ಗಗನಕ್ಕೇರುತ್ತದೆ. ಪ್ರತಿಯೊಂದು ಕಂಪೆನಿಗೂ ಕೃತಕ ಬುದ್ಧಿಮತ್ತೆಯನ್ನು ತಮ್ಮ ಉತ್ಪಾದನಾ ಪ್ರಕ್ರಿಯೆಯ ಭಾಗವಾಗಿ ಮಾಡಿಕೊಳ್ಳಬೇಕಾದ ಒತ್ತಡ ನಿರ್ಮಾಣವಾಗುತ್ತಿದೆ. "ನಿಮ್ಮ ಸ್ಪರ್ಧಿಗಳು ಎಐನಲ್ಲಿ ತುಂಬಾ ಹೂಡಿಕೆ ಮಾಡುತ್ತಿದ್ದಾರೆ. ನೀವು ಮಾಡದೆ ಹೋದರೆ ಹಿಂದೆ ಬೀಳುತ್ತೀರಿ" ಎಂಬ ಒತ್ತಡ ಬರುತ್ತಿದೆ. ಸಮಸ್ಯೆಯೇನೆಂದರೆ ಮಾಡುತ್ತಿರುವ ಖರ್ಚಿಗೆ ತಕ್ಕಂತೆ ಆದಾಯ ಬರುತ್ತಿಲ್ಲ. ಓಪನ್ ಎಐ ಕಂಪೆನಿಯ ೨೦೨೫ರ ಮೊದಲರ್ಧ ವರ್ಷದಲ್ಲಿ ೩.೭ ಬಿಲಿಯನ್ ಡಾಲರ್ ಆದಾಯ ಮಾಡಿಕೊಂಡಿತ್ತು. ಆದರೆ ಆ ಅವಧಿಯಲ್ಲೇ ೭ರಿಂದ ೯ ಬಿಲಿಯನ್ ಖರ್ಚು ಮಾಡಿತ್ತು. ಅಂದರೆ ೩ರಿಂದ ನಾಲ್ಕು ಬಿಲಿಯನ್ ಡಾಲರ್ ನಷ್ಟ ಮಾಡಿಕೊಂಡಿತ್ತು. ನಿಜವಾಗಿ ಲಾಭ ಬರಬೇಕಾದರೆ ಕನಿಷ್ಟ ಹತ್ತು ವರ್ಷಗಳಾದರೂ ಬೇಕು. ಅಲ್ಲಿಯವರೆಗೂ ಈ ಪ್ರಮಾಣದ ಖರ್ಚನ್ನು ನಿಭಾಯಿಸುವುದಕ್ಕೆ ಅದಕ್ಕೆ ಸಾಧ್ಯವಾಗಬಹುದೆ? ಅಲ್ಲಿಯವರೆಗೆ ಜನರಲ್ಲಿ ವಿಶ್ವಾಸವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವೆ? ಇಂತಹ ಹಲವು ಅನುಮಾನಗಳು ಹುಟ್ಟಿಕೊಳ್ಳುತ್ತಿವೆ.

೨೦೧೫ರಲ್ಲಿ ಓಪನ್ ಎಐ ಪ್ರಾರಂಭವಾಯಿತು. ಅದು ಪ್ರಾರಂಭಿಸಿದ ಚಾಟ್ ಜಿಪಿಟಿ ಚರಿತ್ರೆಯಲ್ಲಿ ಅತಿ ವೇಗವಾಗಿ ಬೆಳೆದ ಡಿಜಿಟಲ್ ಉತ್ಪನ್ನವಾಯಿತು. ಇಂದು ಪ್ರತಿವಾರ ಸುಮಾರು ೮೦೦ ಮಿಲಿಯನ್ ಜನ ಚಾಟ್ ಜಿಪಿಟಿಯನ್ನು ಬಳಸುತ್ತಾರೆ. ಒಟ್ಟಾರೆ ಬಳಕೆದಾರರಲ್ಲಿ ಕೇವಲ ೧.೫% ಜನ ಮಾತ್ರ ಅದನ್ನು ಬಳಸಿಕೊಳ್ಳುವುದಕ್ಕೆ ಹಣ ಕೊಡುತ್ತಿದ್ದಾರೆ. ಅದು ಖರ್ಚು ಮಾಡುತ್ತಿರುವ ಪ್ರಮಾಣದಲ್ಲಿ ಆದಾಯ ಬಾರದೆ ಇರಬಹುದು. ಇಡೀ ವ್ಯವಹಾರದಲ್ಲಿ ಒಂದು ಅನಿಶ್ಚತತೆ ಇದೆ. ಇದರ ಬಿಜಿನೆಸ್ ಮಾಡೆಲ್ ಬಗ್ಗೆ ಯಾರಿಗೂ ಸ್ಪಷ್ಟವಿಲ್ಲ, ಪಾರದರ್ಶಕತೆಯೂ ಇಲ್ಲ. ಓಪನ್ ಎಐ, ಜೆಮಿನೈ ಇತ್ಯಾದಿ ಕಂಪೆನಿಗಳು ಬಿಲಿಯನ್‌ಗಟ್ಟಲೆ ಬಂಡವಾಳ ತೊಡಗಿಸಿವೆ. ಅವು ಲಾಭ ಮಾಡಿಕೊಳ್ಳುತ್ತಿಲ್ಲ. ಲಾಭ ಹೇಗೆ ಮಾಡಿಕೊಳ್ಳುವುದು ಅನ್ನುವುದರ ಬಗ್ಗೆಯೂ ಸ್ಪಷ್ಟತೆ ಇಲ್ಲ. ಆದರೆ ಹೂಡಿಕೆ ಕಮ್ಮಿಯಾಗುತ್ತಿಲ್ಲ. ಹೆಚ್ಚುತ್ತಲೇ ಇದೆ. ೨೦೨೫ರಲ್ಲಿ ಜಾಗತಿಕ ವೆಂಚರ್ ಕ್ಯಾಪಿಟಲ್‌ನ ಶೇಕಡ ೫೦ರಷ್ಟು ಕೃತಕ ಬುದ್ಧಿಮತ್ತೆಯ ನವ ಉದ್ಯಮಗಳಿಗೆ ಹೋಯಿತು. ಅಂದರೆ ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಉತ್ಪನ್ನ, ಸೇವೆ, ಅಥವಾ ತಂತ್ರಜ್ಞಾನವನ್ನು ನಿರ್ಮಿಸಲಿರುವ ಹೊಸ ಕಂಪೆನಿಗಳಿಗೆ ಹೋಗಿದೆ. ಗೀತಾ ಗೋಪಿನಾಥ್ ಹೇಳುವಂತೆ ಅಕಸ್ಮಾತ್ತಾಗಿ ಬಿಕ್ಕಟ್ಟು ಸಂಭವಿಸಿದರೆ ಒಟ್ಟಾರೆಯಾಗಿ ೩೫ ಟ್ರಿಲಿಯನ್ ಡಾಲರ್‌ನಷ್ಟು ನಷ್ಟವಾಗಬಹುದು. ಸ್ಟಾಕ್ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿರುವ ಕುಟುಂಬಗಳು ೨೦ ಟ್ರಿಲಿಯನ್ ಕಳೆದುಕೊಳ್ಳುತ್ತವೆ. ಸಹಜವಾಗಿಯೇ ಅವರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಬೇಡಿಕೆ ಕುಸಿಯುತ್ತದೆ. ಅದರಿಂದ ಜಿಡಿಪಿ ಶೇಕಡ ೨ರಷ್ಟು ಕಮ್ಮಿಯಾಗುತ್ತದೆ ಅನ್ನುತ್ತಾರೆ ಗೀತಾ ಗೋಪಿನಾಥ್. ಹಾಗೆಯೇ ವಿದೇಶಿ ಹೂಡಿಕೆದಾರರಿಗೆ ೧೫ ಟ್ರಿಲಿಯನ್ ನಷ್ಟವಾಗಬಹುದು ಅನ್ನುವುದು ಅವರ ಅಂದಾಜು. ಜಗತ್ತಿನ ಆರ್ಥಿಕತೆ ಅಮೇರಿಕೆಯ ಮಾರುಕಟ್ಟೆಯನ್ನು ನೆಚ್ಚಿಕೊಂಡಿದೆ. ಹಾಗಾಗಿ ಇದರ ಪರಿಣಾಮ ಜಾಗತಿಕವಾಗಿ ಆಗುತ್ತದೆ.
ಇಂದು ಕೃತಕ ಬುದ್ಧಿಮತ್ತೆಯ ಉದ್ಯಮ ಹೆಚ್ಚೆಚ್ಚು ಕೇಂದ್ರೀಕೃತವಾಗುತ್ತಿದೆ. ಇಡೀ ಎಐ ಕ್ಷೇತ್ರವನ್ನು ಏಳು ಬೃಹತ್ ಕಂಪೆನಿಗಳಾದ ಅಲ್ಫಬೆಟ್, ಅಮೆಜಾನ್, ಆಪಲ್, ಮೆಟಾ, ಮೈಕ್ರೊಸಾಫ್ಟ್, ಎನ್‌ವಿಡಿಯ ಮತ್ತು ಟೆಸ್ಲಾ ನಿಯಂತ್ರಿಸುತ್ತಿವೆ. ಎಐ ಕಂಪೆನಿಗಳ ಸ್ಟಾಕ್ ಬೆಲೆ ವಿಪರೀತ ಏರುತ್ತಿರುವುದರಿಂದ ಅವುಗಳ ಮೌಲ್ಯವೂ ಹೆಚ್ಚುತ್ತಿದೆ. ಹೆಚ್ಚೆಚ್ಚು ಶ್ರೀಮಂತವಾಗುತ್ತಿವೆ. ಪ್ರತಿಯೊಂದು ಕಂಪೆನಿಯ ಮೌಲ್ಯ ಒಂದು ಟ್ರಿಲಿಯನ್ ದಾಟಿದೆ. ಚಿಪ್ ಉತ್ಪಾದಿಸುವ ಎನ್‌ವಿಡಿಯ ೫ ಟ್ರಿಲಿಯನ್ ಕಂಪೆನಿಯಾಗಿದೆ. ಭಾರತ, ಕೆನಡಾ ಹಾಗೂ ಜಪಾನ್ ದೇಶಗಳ ಜಿಡಿಪಿಗಿಂತ ಹೆಚ್ಚಿದೆ. ಕೃತಕ ಬುದ್ಧಿಮತ್ತೆ ಇಂದು ಆಕರ್ಷಕ ತಂತ್ರಜ್ಞಾನವಾಗಿದೆ. ಎಐ ಬಳಸುವ ಕಂಪೆನಿಗಳಿಗೆ ಅಪಾರ ಹೂಡಿಕೆಯೂ ಬರುತ್ತದೆ. ಆ ಕಾರಣಕ್ಕೆ ಇಂದು ಬಹುತೇಕ ಕಂಪೆನಿಗಳು ಎಐಯನ್ನು ಬಳಸುತ್ತಿವೆ. ಆದರೆ ಪರಿಸ್ಥಿತಿ ಅಷ್ಟು ಆಶಾದಾಯಕವಾಗಿಲ್ಲ. ಎಂಐಟಿಯ ಒಂದು ಅಧ್ಯಯನದ ಪ್ರಕಾರ ಎಐ ಬಳಸಿಕೊಂಡ ಯೋಜನೆಗಳಲ್ಲಿ ಕೇವಲ ೫%ರಷ್ಟು ಯೋಜನೆಗಳು ಮಾತ್ರ ಒಂದಿಷ್ಟು ಲಾಭ ಮಾಡಿಕೊಂಡಿವೆ. ಶೇಕಡ ೯೫ರಷ್ಟು ವಿಫಲವಾಗಿವೆ. ಅದೂ ಕೂಡ ಸ್ಟಾಕ್ ಬೆಲೆಯ ಏರಿಕೆ ಕೇವಲ ಒಂದು ಗುಳ್ಳೆ ಅನಿಸುವುದಕ್ಕೆ ಒಂದು ಕಾರಣ.

ಹಿಂದೆಯೂ ಇಂತಹ ಗುಳ್ಳೆಗಳು ಹಲವಾರು ಆಗಿವೆ. ಇಂಟರ್‌ನೆಟ್ ಬಂದ ಸಂದರ್ಭದಲ್ಲೂ ಇಂತಹುದೇ ಪರಿಸ್ಥಿತಿ ಎದುರಾಗಿತ್ತು. ಇಂಟರ್‌ನೆಟ್ ಸಂಬಂಧಿತ ಉದ್ಯಮಗಳ ಮೇಲೆ ಹೂಡಿಕೆ ಹೆಚ್ಚಾಯಿತು. ಸ್ಟಾಕ್ ಬೆಲೆಗಳು ಏರಿದವು. ಆದರೆ ಆಗಲೂ ಆದಾಯ ಇರಲಿಲ್ಲ. ಡಾಟ್ ಕಾಂ ಗುಳ್ಳೆ ಒಡೆಯಿತು. ಸ್ಟಾಕ್ ಬೆಲೆ ಶೇಕಡ ೫೦ರಿಂದ ೯೦ರವರೆಗೆ ಕುಸಿದಿತ್ತು. ಈಗ ಅದೇ ಪರಿಸ್ಥಿತಿ ಬರಬಹುದು ಅನ್ನುವ ಆತಂಕವಿದೆ. ಓಪನ್ ಎಐ ನಷ್ಟದಲ್ಲಿದ್ದರೂ ಅದರ ಖರ್ಚು ಏರುತ್ತಲೇ ಇದೆ. ಚಾಟ್ ಜಿಪಿಟಿ-೩ ಬಿಡುಗಡೆಗೊಂಡಾಗ ಅದಕ್ಕೆ ೫೦ ಮಿಲಿಯನ್ ಡಾಲರ್ ಖರ್ಚು ಮಾಡಿತ್ತು. ಚಾಟ್ ಜಿಪಿಟಿ-೪ಕ್ಕೆ ೫೦೦ ಮಿಲಿಯನ್ ಆಗಿತ್ತು. ಇತ್ತೀಚಿನ ಚಾಟ್ ಜಿಪಿಟಿ-೫ಕ್ಕೆ ೫ ಬಿಲಿಯನ್ ಆಗಿದೆ. ಅದರ ನಷ್ಟ ಮುಂದುವರಿದೇ ಇದೆ. ೨೦೨೯ರವರೆಗೆ ಇದೇ ಪರಿಸ್ಥಿತಿ ಮುಂದುವರಿಯುತ್ತದೆ ಎಂದು ಸ್ಯಾಮ್ ಆಲ್ಟಮ್‌ಯಾನ್ ಸ್ವತಃ ಒಪ್ಪಿಕೊಂಡಿದ್ದಾನೆ. ಬಹುತೇಕ ಎಐ ಕಂಪೆನಿಗಳ ಖರ್ಚು ಆದಾಯಕ್ಕಿಂತ ಹೆಚ್ಚಿದೆ. ಅವಕ್ಕೆ ನಿಜವಾಗಿ ಲಾಭ ಬರುವುದಕ್ಕೆ ಇನ್ನು ಹತ್ತು ವರ್ಷಗಳಾದರೂ ಬೇಕು ಅನ್ನುವುದು ಕೆಲವರ ಅಂದಾಜು. ಆತಂಕಕ್ಕೆ ಇನ್ನೂ ಒಂದು ಕಾರಣ ಇದೆ. ಈ ದೊಡ್ಡ ಟೆಕ್ ಕಂಪೆನಿಗಳ ಹೂಡಿಕೆಯ ಕ್ರಮವೇ ಅನುಮಾನ ಮೂಡಿಸುತ್ತದೆ. ಅವರು ಒಬ್ಬರು ಇನ್ನೊಬ್ಬರ ಕಂಪೆನಿಯಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಒಬ್ಬರು ಇನ್ನೊಬ್ಬರ ಸರಕುಗಳನ್ನು ಕೊಳ್ಳುತ್ತಿದ್ದಾರೆ. ಇಲ್ಲಿ ಹೂಡಿಕೆ ವೃತ್ತದಲ್ಲಿ ನಡೆಯುತ್ತದೆ.





ಎನ್‌ವಿಡಿಯಾ ಇಂದು ಚಿಪ್‌ಗಳನ್ನು ಉತ್ಪಾದಿಸುವ ನಂಬರ್ ಒನ್ ಕಂಪೆನಿ. ಕೃತಕ ಬುದ್ಧಿಮತ್ತೆ ಬಂದ ಮೇಲೆ ಅದರ ಚಿಪ್‌ಗಳಿಗೆ ವಿಪರೀತ ಬೇಡಿಕೆ ಬಂದಿದೆ. ಅದರ ಸ್ಟಾಕುಗಳ ಬೆಲೆ ಗಗನಕ್ಕೇರಿದೆ. ಅದು ಓಪನ್‌ಎಐ ಕಂಪೆನಿಯಲ್ಲಿ ೧೦೦ ಬಿಲಿಯನ್ ಡಾಲರ್ ಹೂಡಿಕೆ ಮಾಡುತ್ತಿದೆ. ಓಪನ್‌ಎಐ ಎನ್‌ವಿಡಿಯಾದಿಂದ ಚಿಪ್‌ಗಳನ್ನು ಖರೀದಿಸುತ್ತದೆ. ಸ್ವತಃ ನಷ್ಟದಲ್ಲಿರುವ ಓಪನ್‌ಎಐ ಓರಾಕಲ್ ಜೊತೆ ೩೦೦ ಬಿಲಿಯನ್ ಒಪ್ಪಂದ ಮಾಡಿಕೊಂಡಿದೆ. ಓಪನ್‌ಎಐ ಕಂಪೆನಿಗೆ ತನ್ನ ಮಾಡೆಲ್‌ಗಳನ್ನು ತರಬೇತಿಗೊಳಿಸಲು, ಮಾಹಿತಿ ಕೂಡಿಡಲು ಓರಾಕಲ್ ಕಂಪೆನಿಯ ಡೇಟಾ ಸೆಂಟರ್ ನೆರವು ಬೇಕು. ಓರಾಕಲ್ ಕೂಡ ತನಗೆ ಬೇಕಾದ ಚಿಪ್‌ಗಳನ್ನು ಎನ್‌ವಿಡಿಯಾದಿಂದ ಕೊಳ್ಳುತ್ತದೆ. ಜೊತೆಗೆ ತನ್ನ ಡೇಟಾ ಸೆಂಟರ್ ವ್ಯವಹಾರಕ್ಕೆ ಅದು ಓಪನ್‌ಎಐ ಅನ್ನು ನೆಚ್ಚಿಕೊಂಡಿದೆ. ಹೀಗೆ ಈ ಕಂಪೆನಿಗಳು ಪರಸ್ಪರ ಗ್ರಾಹಕರಾಗುತ್ತಾ, ಹೂಡಿಕೆದಾರರಾಗುತ್ತಾ ಮ್ಯೂಸಿಕಲ್ ಚೇರ್ ಆಡುತ್ತಿದ್ದಾರೆ. ಒಬ್ಬರು ಇನ್ನೊಬ್ಬರ ಹೂಡಿಕೆಯನ್ನು ಹೆಚ್ಚಿಸುತ್ತಿದ್ದಾರೆ. ಪ್ರತಿ ಹೂಡಿಕೆಯಿಂದ ಸ್ಟಾಕ್ ಬೆಲೆ ಏರುತ್ತಾ ಹೋಗುತ್ತದೆ. ಎಐ ಉದ್ಯಮಕ್ಕೆ ಇಂದಲ್ಲ ನಾಳೆ ಲಾಭ ಬರತ್ತದೆ ಅಂದುಕೊಂಡು ಜನ ಸ್ಟಾಕುಗಳನ್ನು ಮುಗಿಬಿದ್ದು ಕೊಳ್ಳುತ್ತಿದ್ದಾರೆ. ೩೦ ಬಿಲಿಯನ್ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಈಗ ಪಿಂಚಣಿ ನಿಧಿಯೂ ಸೇರಿದಂತೆ ಎಲ್ಲವೂ ಎಐನಲ್ಲಿ ಹೂಡಿಕೆಯಾಗುತ್ತಿದೆ. ಹೀಗೆಯೇ ೨೦೦೦ರಲ್ಲಿ ಇಂಟರ್‌ನೆಟ್ ಸಂಬಂಧಿತ ಸ್ಟಾಕುಗಳು ಮಾರಾಟವಾಗುತ್ತಿತ್ತು.

ನಾವು ಫೇಸ್‌ಬುಕ್ ಇತ್ಯಾದಿಗಳಲ್ಲಿ ತುಂಬುವ ಫೋಟೋಗಳು, ಮಾಹಿತಿಗಳು, ಸರ್ಕಾರದ ಮಾಹಿತಿಗಳು, ಗೂಗಲ್ ಇತ್ಯಾದಿ ಸಂಸ್ಥೆಗಳು ಬಳಸುವ ಮಾಹಿತಿಗಳು ಆಕಾಶದಲ್ಲಿ ಇರುವುದಿಲ್ಲ. ಡೇಟಾ ಸೆಂಟರುಗಳಲ್ಲಿ ಶೇಖರವಾಗಿರುತ್ತವೆ. ಇಂತಹ ಮಾಹಿತಿಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಈ ಕಂಪೆನಿಗಳು ರೂಪಿಸುವ ಮಾಡೆಲ್‌ಗಳಿಗೆ ತರಬೇತಿ ನೀಡುವುದಕ್ಕೆ, ನಾವು ಕೇಳುವ ಪ್ರಶ್ನೆಗಳಿಗೆ ಅವು ಯೋಚಿಸುವಂತೆ ಮಾಡುವುದಕ್ಕೆ ತುಂಬಾ ಗಣಕಶಕ್ತಿ ಬೇಕು. ಮಾರುಕಟ್ಟೆಯಲ್ಲಿ ಮುಂದಿರಬೇಕಾದರೆ ನಿರಂತರವಾಗಿ ಬೆಳೆಯುತ್ತಾ, ಉತ್ತಮಗೊಳ್ಳುತ್ತಾ ಹೋಗಬೇಕು. ಅದಕ್ಕೆ ಹೆಚ್ಚೆಚ್ಚು ಗಣಕಶಕ್ತಿಯೂ ಬೇಕಾಗುತ್ತದೆ. ಹೆಚ್ಚೆಚ್ಚು ಪ್ರಬಲವಾದ ಡೇಟಾ ಸೆಂಟರುಗಳು ಬೇಕಾಗುತ್ತವೆ. ಅದೇ ಕಾರಣಕ್ಕೆ ಹೊಸ ಹೊಸ ಡೇಟಾ ಸೆಂಟರುಗಳು ಹುಟ್ಟಿಕೊಳ್ಳುತ್ತಿವೆ. ಅದಕ್ಕಾಗಿ ಅಪಾರ ಬಂಡವಾಳದ ಹೂಡಿಕೆಯಾಗುತ್ತಿದೆ. ಕಳೆದ ವರ್ಷ ಅಮೇರಿಕೆಯ ಜಿಡಿಪಿಯ ಸುಮಾರು ೧.೨% ಅಷ್ಟು ಇದಕ್ಕೆ ಖರ್ಚಾಗಿದೆಯಂತೆ. ೨೦೨೪ರಲ್ಲಿ ೧,೨೪೦ ಸೆಂಟರುಗಳು ಪ್ರಾರಂಭವಾಗಿದೆ ಎಂದು ಬಿಜಿನೆಸ್ ಇನ್‌ಸೈಡರ್ ಸಂಸ್ಥೆ ಅಂದಾಜು ಮಾಡಿದೆ. ೨೦೧೧ಕ್ಕೆ ಹೋಲಿಸಿದರೆ ನಾಲ್ಕುಪಟ್ಟು (೩೧೦) ಹೆಚ್ಚಾಗಿದೆ. ಅಮೆಜಾನ್, ಮೈಕ್ರೋಸಾಫ್ಟ್, ಗೂಗಲ್, ಮೆಟಾ ಇವು ಬಹುತೇಕ ಡೇಟಾ ಸೆಂಟರುಗಳನ್ನು ಬಳಸುತ್ತವೆ.

ಡೇಟಾ ಸೆಂಟರುಗಳು ವಿಪರೀತ ವಿದ್ಯುತ್ ಬಳಸಿಕೊಳ್ಳುತ್ತವೆ. ಸುಮಾರಾಗಿ ಒಂದು ಡೇಟಾ ಸೆಂಟರ್ ವರ್ಷಕ್ಕೆ ೨ ಟೆರಾ ವಾಟ್ ವಿದ್ಯುತ್ತನ್ನು ಬಳಸುತ್ತದೆ. ಓಪನ್ ಎಐ ಒಂದೇ ನ್ಯೂಯಾರ್ಕ್ ಹಾಗೂ ಸ್ಯಾನ್ ಡಿಯಾಗೊ ಒಟ್ಟಾಗಿ ಬಳಸುವಷ್ಟು ವಿದ್ಯುತ್ತನ್ನು ಬಳಸುತ್ತಿದೆ. ಅಂದರೆ ಸುಮಾರು ೨ ಲಕ್ಷ ಮನೆಗಳು ಬಳಸುವಷ್ಟು ವಿದ್ಯುತ್ತನ್ನು ಅದೊಂದೇ ಬಳಸುತ್ತಿದೆ. ಅಮೇರಿಕೆ ಉತ್ಪಾದಿಸುವ ವಿದ್ಯುತ್ತಿನ ಶೇಕಡ ೧೨ರಷ್ಟು ವಿದ್ಯುತ್ತನ್ನು ಈ ಡೇಟಾ ಸೆಂಟರುಗಳು ಒಟ್ಟಾರೆಯಾಗಿ ಬಳಸುತ್ತವಂತೆ. ಇದರಿಂದ ಅಪಾರ ಶಾಖ ಉತ್ಪತ್ತಿಯಾಗುತ್ತದೆ. ಅದನ್ನು ತಂಪುಮಾಡುವುದಕ್ಕೆ ತಂಪು ನೀರನ್ನು ಬಳಸಲಾಗುತ್ತದೆ. ನಿರಂತರವಾಗಿ ನೀರು ಹರಿಯುವುದರಿಂದ ಅಪಾರ ನೀರು ಬಳಕೆಯಾಗುತ್ತದೆ. ಮೈಕ್ರೋಸಾಫ್ಟ್ ಕಂಪೆನಿ ಒಂದು ಡೇಟಾ ಸೆಂಟರಿಗೆ ದಿನಕ್ಕೆ ಹತ್ತು ಲಕ್ಷ ಗ್ಯಾಲನ್ ನೀರನ್ನು ಬಳಸಲು ಅನುಮತಿ ಪಡೆದಿದೆ. ನೀರು ಕಡಿಮೆ ಇರುವ ಕಡೆಗಳಲ್ಲಿ ಅಂತರ್‌ಜಲದ ಮೇಲೆ ಇದರಿಂದ ಕೆಟ್ಟ ಪರಿಣಾಮ ಆಗುತ್ತಿದೆ. ಜೊತೆಗೆ ವಿದ್ಯುತ್ ನಿಂತಾಗ ಬೃಹತ್ ಜನರೇಟರುಗಳನ್ನು ಈ ಡೇಟಾ ಸೆಂಟರುಗಳಲ್ಲಿ ಬಳಸಲಾಗುತ್ತದೆ. ಅವು ಕೆಲವೇ ಗಂಟೆ ಕೆಲಸ ಮಾಡಿದರೂ ಪರಿಸರವನ್ನು ಸಾಕಷ್ಟು ಕೆಡಿಸಬಲ್ಲದು.

ಅಮೇರಿಕೆ ಇತ್ತೀಚಿನ ದಿನಗಳಲ್ಲಿ ಬಹುತೇಕ ಫಾಸಿಲ್ ಇಂಧನ ಬಳಸಿ ವಿದ್ಯುತ್ ತಯಾರಿಸುತ್ತಿದೆ. ಇಷ್ಟೆಲ್ಲಾ ಸಮಸ್ಯೆಯನ್ನು ಸೃಷ್ಟಿಸುವ ಡೇಟಾ ಸೆಂಟರುಗಳು ಹೆಚ್ಚೇನೂ ಉದ್ಯೋಗವನ್ನು ಸೃಷ್ಟಿಸುವುದಿಲ್ಲ. ಹೆಚ್ಚೆಂದರೆ ಒಂದು ಡೇಟಾ ಸೆಂಟರಿನಲ್ಲಿ ೧೫೦ ಉದ್ಯೋಗಿಗಳು ಇರಬಹುದು. ಕೆಲವು ಕಡೆ ೨೫ ಜನರೂ ಇಲ್ಲ. ಆದರೆ ಅಪಾರ ತೆರಿಗೆ ವಿನಾಯಿತಿ ಪಡೆದುಕೊಳ್ಳುತ್ತಿದ್ದಾರೆ. ಅವುಗಳಿಗೆ ವಿದ್ಯುತ್ ಹಾಗೂ ನೀರಿನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ವರ್ಜೀನಿಯಾದಲ್ಲಿ ೨೫ ಡೇಟಾ ಸೆಂಟರುಗಳು ಒಂದು ಬಿಲಿಯನ್ ಡಾಲರ್‌ನಷ್ಟು ತೆರಿಗೆ ರಿಯಾಯಿತಿ ಪಡೆದುಕೊಂಡಿವೆ.

ಇನ್ನೊಂದು ಆತಂಕದ ಬೆಳವಣಿಗೆಯನ್ನು ಹಲವರು ಗುರುತಿಸಿದ್ದಾರೆ. ಡೇಟಾ ಸೆಂಟರ್ ಹಾಗೂ ಇತರ ಮೂಲಸೌಕರ್ಯದ ನಿರ್ಮಾಣಕ್ಕೆ ಸಾಲವನ್ನು ಹೆಚ್ಚಾಗಿ ಬ್ಯಾಂಕೇತರ ಖಾಸಗಿ ಸಂಸ್ಥೆಗಳು ನೀಡುತ್ತಿವೆ. ಅವು ಹಣವನ್ನು ಬೇರೆ ಬೇರೆ ಮೂಲಗಳಿಂದ ಸಾಲ, ಹೂಡಿಕೆಯ ಮೂಲಕ ಸಂಗ್ರಹಿಸಿ, ಖಾಸಗಿ ಮಾರುಕಟ್ಟೆಯಲ್ಲಿ ಸಾಲ ಕೊಡುತ್ತಿವೆ. ಅವು ಬ್ಯಾಂಕಿನಿಂದಲೂ ಸಾಲ ಪಡೆದುಕೊಳ್ಳುತ್ತಿವೆ. ೨೦೧೩ರಲ್ಲಿ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಪಡೆದ ಒಟ್ಟು ಸಾಲದಲ್ಲಿ ಬ್ಯಾಂಕಿನಿಂದ ತೆಗೆದುಕೊಂಡ ಸಾಲದ ಪ್ರಮಾಣ ಕೇವಲ ೧% ಇತ್ತು. ಈಗ ಅದು ೧೪% ಆಗಿದೆ. ಈ ಖಾಸಗಿಯವರು ಕೊಡುತ್ತಿರುವ ಸಾಲದ ಹೆಚ್ಚಿನ ಪಾಲು ಅಮೇರಿಕೆಯಲ್ಲಿ ಡೇಟಾ ಸೆಂಟರಿಗೆ ಹೋಗುತ್ತಿದೆ. ಇವು ಯಾವುದೇ ಅಂಜಿಕೆ ಇಲ್ಲದೆ ಸಾಲ ಕೊಡುತ್ತಿವೆ. ವ್ಯಾಪಾರದಲ್ಲಿ ಅನಿಶ್ಚತತೆ ಇದ್ದರೂ ಹಿಂಜರಿಯುತ್ತಿಲ್ಲ. ಹಣಕಾಸು ನಿಯಂತ್ರಣಗಳು ದುರ್ಬಲವಾಗುತ್ತಿವೆ. ಅಕಸ್ಮಾತ್ತಾಗಿ ಕೃತಕ ಬುದ್ಧಿಮತ್ತೆಯ ಗುಳ್ಳೆ ಒಡೆದರೆ ಅಂತಿಮವಾಗಿ ಅದು ಬ್ಯಾಂಕನ್ನೂ ಕಾಡುತ್ತದೆ.

ಅಮೇರಿಕೆಯ ಆರ್ಥಿಕತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಸಾಲ ವಿಪರೀತವಾಗಿದೆ, ಹಣದುಬ್ಬರ ನಿಯಂತ್ರಣದಲ್ಲಿಲ್ಲ, ಸಂಸ್ಥೆಗಳು ದುರ್ಬಲವಾಗುತ್ತಿವೆ. ಈಗ ವ್ಯಾಪಾರ ಕುಗ್ಗುತ್ತಿದೆ. ಕೆಲಸಗಾರರನ್ನು ಕಡಿಮೆ ಮಾಡಬೇಕೆನ್ನುವ ಚಿಂತನೆ ಪ್ರಾರಂಭವಾಗಿದೆ. ಬೇಡಿಕೆ ಕಡಿಮೆ ಇರುವುದರಿಂದ ಉತ್ಪಾದನೆಯ ಖರ್ಚನ್ನು ಕಡಿಮೆ ಮಾಡುಕೊಳ್ಳುವ ನಿಟ್ಟಿನಲ್ಲಿ ಯೋಚನೆ ನಡೆಯುತ್ತಿದೆ. ಎಷ್ಟೋ ಕಂಪೆನಿಗಳು ಕೆಲಸಗಾರರನ್ನು ತೆಗೆಯುತ್ತಿವೆ. ಎಐ ಬಳಕೆಯಿಂದಾಗಿ ಉದ್ಯೋಗ ಕಡಿಮೆಯಾಗುತ್ತಿದೆ ಎನ್ನಲಾಗಿದೆ. ಆದರೆ ಅದಕ್ಕೆ ಆರ್ಥಿಕತೆಯ ಹಿಂಜರಿತವೂ ಕಾರಣವಿರಬಹುದು. ಆರ್ಥಿಕತೆ ಚೆನ್ನಾಗಿದ್ದಾಗ ಉದ್ಯಮಗಳನ್ನು



ಯಾಂತ್ರೀಕರಣಗೊಳಿಸುವ ಪ್ರಕ್ರಿಯೆ ಪ್ರಾರಂಭವಾಗಿತ್ತು. ಈಗ ಲಾಭ ಕಡಿಮೆಯಾಗತೊಡಗಿದ್ದರಿಂದ ಉತ್ಪಾದನೆಗೆ ಯಂತ್ರಗಳನ್ನು ಬಳಸಿ ಕಾರ್ಮಿಕರನ್ನು ತೆಗೆಯಲಾಗುತ್ತಿದೆ ಎನ್ನುತ್ತಾರೆ ಗೀತಾ ಗೋಪಿನಾಥ್.

ಒಂದು ದೇಶದ ಆರ್ಥಿಕತೆ ಅಭಿವೃದ್ಧಿಯಾದಷ್ಟೂ ಯಾಂತ್ರೀಕರಣದ ಪ್ರಕ್ರಿಯೆ ತೀವ್ರವಾಗುತ್ತದೆ. ಮುಂದುವರಿದ ರಾಷ್ಟ್ರಗಳಲ್ಲಿ ಶೇಕಡ ೩೦ರಷ್ಟು ಕೆಲಸಗಳು ಯಾಂತ್ರೀಕರಣಗೊಂಡರೆ, ಹಿಂದುಳಿದ ರಾಷ್ಟ್ರಗಳಲ್ಲಿ ಶೇಕಡ ೧೮ರಷ್ಟು ಕೆಲಸಗಳು ಯಾಂತ್ರೀಕರಣಗೊಳ್ಳುತ್ತವೆ. ಹಲವು ದೇಶಗಳಲ್ಲಿ ಯಾಂತ್ರೀಕರಣ ಪ್ರಕ್ರಿಯೆಗೆ ತೆರಿಗೆ ವಿನಾಯಿತಿಯನ್ನೂ ನೀಡಲಾಗುತ್ತದೆ. ಅಂದರೆ ಕೆಲಸಗಾರರನ್ನು ತೆಗೆದು ಯಂತ್ರಗಳನ್ನು ಉಪಯೋಗಿಸಿದರೆ ತೆರಿಗೆದರ ಕಡಿಮೆಯಾಗುತ್ತದೆ. ಇಂತಹ ಕ್ರಮ ಯಾಂತ್ರೀಕರಣವನ್ನು ಹೆಚ್ಚೆಚ್ಚು ಪ್ರೋತ್ಸಾಹಿಸುತ್ತದೆ. ಕೃತಕ ಬುದ್ಧಿಮತ್ತೆಯ ಕಾರಣಕ್ಕೋ, ಅಥವಾ ಕಂಪೆನಿಗಳ ಖರ್ಚು ಕಡಿಮೆ ಮಾಡಿಕೊಳ್ಳುವ ನೀತಿಯ ಕಾರಣಕ್ಕೋ ಇತ್ತೀಚಿನ ದಿನಗಳಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಅಮೇರಿಕೆಯಲ್ಲಿ ಈ ವರ್ಷ ಸುಮಾರು ೧೦ ಲಕ್ಷ ಜನ ಕೆಲಸ ಕಳೆದುಕೊಂಡಿದ್ದಾರೆ. ೨೦೨೩ಕ್ಕೆ ಹೋಲಿಸಿದರೆ ಇದು ಮೂರು ಪಟ್ಟು ಹೆಚ್ಚು. ಭವಿಷ್ಯದಲ್ಲಿ ಇನ್ನೂ ಹಲವು ಕಂಪೆನಿಗಳು ಕೆಲಸಗಾರರನ್ನು ತೆಗೆಯಲಿದೆ. ಹೊಸದಾಗಿ ಕೆಲಸಕ್ಕೆ ನೇಮಿಸಿಕೊಳ್ಳಲಿರುವ ಸಂಖ್ಯೆ ಕಡಿಮೆ ಆಗುತ್ತಿದೆ. ಅಮೆಜಾನ್ ೩೦,೦೦೦ ಕೆಲಸ ಕಡಿತ ಮಾಡಿದೆ, ಯುಪಿಎಸ್ ೪೮,೦೦೦ ಹೀಗೆ ಒಟ್ಟಾರೆಯಾಗಿ ಟೆಕ್ ಕಂಪೆನಿಗಳು ೧,೧೨,೦೦೦ ಕೆಲಸ ಕಡಿತ ಮಾಡಿದೆ.

ನಿಜವಾಗಿ ಮನುಷ್ಯ ಮಾಡುವ ಎಷ್ಟು ಕೆಲಸಗಳನ್ನು ಯಂತ್ರಗಳು ಮಾಡಬಲ್ಲವು ಅನ್ನುವುದು ಸ್ಪಷ್ಟವಿಲ್ಲ. ವಿಭಿನ್ನ ಅಭಿಪ್ರಾಯಗಳಿವೆ. ಡೆರೆನ್ ಅಸಿಮೊಗ್ಲು ಪ್ರಕಾರ ಒಟ್ಟಾರೆಯಾಗಿ ಮನುಷ್ಯ ಮಾಡುತ್ತಿರುವ ಕೆಲಸಗಳಲ್ಲಿ ಕೇವಲ ೫% ಕೆಲಸಗಳನ್ನು ಯಂತ್ರಗಳು ಮಾಡುತ್ತಿವೆ. ಕೃತಕ ಬುದ್ಧಿಮತ್ತೆಯಿಂದ ಜಾಗತಿಕ ಜಿಡಿಪಿ ಹೆಚ್ಚೆಂದರೆ ೧% ಜಾಸ್ತಿಯಾಗಬಹುದು. ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗುತ್ತಿದೆ. ಆದರೆ ಉತ್ಪಾದನಾ ಪ್ರಕ್ರಿಯೆಗೆ ತೀರಾ ಅನಿವಾರ್ಯವಾದ ಯಾವುದೂ ತಯಾರಾಗಿಲ್ಲ. ಹಾಗೆಯೇ ಮಹತ್ವದ ಯಾವ ಸರಕೂ ಉತ್ಪಾದನೆಯಾಗಿಲ್ಲ ಅನ್ನುತ್ತಾರೆ ಅಸಿಮೊಗ್ಲು. ಆದರೆ ಇಂಟರ್‌ನೆಟ್ ಬಂದಾಗ ಮೂಲಭೂತವಾದ ಬದಲಾವಣೆ ಸಾಧ್ಯವಾಗಿತ್ತು. ಅದರಿಂದ ನಾವು ಸಂವಹಿಸುವ ಕ್ರಮವೇ ಬದಲಾಗಿಬಿಟ್ಟಿತು. ಹೊಸ ಉತ್ಪನ್ನಗಳು ಬಂದವು. ಜನ ಒಟ್ಟಿಗೆ ಬರುವುದಕ್ಕೆ ಹೊಸ ವೇದಿಕೆಗಳು ಹುಟ್ಟಿಕೊಂಡವು. ಆದರೆ ಕೃತಕ ಬುದ್ಧಿಮತ್ತೆಯಿಂದ ಮನುಷ್ಯನ ಮೇಲ್ವಿಚಾರಣೆ ಇಲ್ಲದೆ ಯಾವುದೇ ಮಹತ್ವದ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಾಗಿಲ್ಲ. ಸಾಮಾಜಿಕ ಒಡನಾಟದ ಅವಶ್ಯಕತೆಯಿಲ್ಲದ, ಸುಮಾರಾಗಿ ಊಹಿಸಬಹುದಾದ ಅಕೌಂಟಿಂಗ್ ಇತ್ಯಾದಿ ಕೆಲಸಗಳನ್ನು ಅದು ಮಾಡುತ್ತವೆ. ಒಬ್ಬ ಸಿಇಒ, ಪ್ರೊಫೆಸರ್, ಅಥವಾ ಕಲಾವಿದನ ಕೆಲಸವನ್ನು ನಿರ್ವಹಿಸುವ ಸ್ಥಿತಿಯಲ್ಲಿ ಸಧ್ಯಕ್ಕೆ ಕೃತಕ ಬುದ್ಧಿಮತ್ತೆ ಇಲ್ಲ.

ಡೆರೆನ್ ಅಸಿಮೊಗ್ಲು ಹೇಳುವಂತೆ ಕೃತಕ ಬುದ್ಧಿಮತ್ತೆಯನ್ನು ಮನುಷ್ಯರ ಬದಲಿಗೆ ಬಳಸಿಕೊಳ್ಳುವ ಬದಲು ಮನುಷ್ಯರಿಗೆ ಅನುಕೂಲವಾಗುವಂತೆ, ಅವರ ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ ಅನುಕೂಲವಾಗುವಂತೆ ರೂಪಿಸಬೇಕು. ಅದು ಮನುಷ್ಯರ ಜಾಗವನ್ನು ಆಕ್ರಮಿಸುವಂತಾಗಬಾರದು. ನಮ್ಮ ಅತಿ ದೊಡ್ಡ ಸಂಪನ್ಮೂಲವಾದ ಮಾನವ ಸಂಪನ್ಮೂಲವನ್ನು ಹೆಚ್ಚು ಪರಿಣಾಮಕಾರಿಯಾಗಿ ತೊಡಗಿಸುವ ನಿಟ್ಟಿನಲ್ಲಿ ಯೋಚಿಸಬೇಕು. ತಂತ್ರಜ್ಞಾನ ಹಾಗೂ ಮಾಹಿತಿಗಳನ್ನು ಬಳಸಿಕೊಂಡು ಅವರ ಪರಿಣಾಮಕಾರಿತ್ವವನ್ನು ಹೇಗೆ ಹೆಚ್ಚಿಸಬಹುದು ಅನ್ನುವುದರ ಬಗ್ಗೆ ಚಿಂತಿಸಬೇಕು. ಉತ್ಪಾದನಾ ಖರ್ಚು ಕಡಿಮೆ ಮಾಡುವುದು ನಮ್ಮ ಆದ್ಯತೆಯಾಗಬಾರದು. ಹೆಚ್ಚು ಉಪಯುಕ್ತವಾದ ಸರಕನ್ನು ತಯಾರಿಸುವುದು ನಮ್ಮ ಆದ್ಯತೆಯಾಗಬೇಕು.

ಕೃತಕ ಬುದ್ಧಿಮತ್ತೆಯಿಂದ ಉದ್ಯೋಗದ ಮೇಲೆ ಖಂಡಿತಾ ಪರಿಣಾಮ ಆಗುತ್ತದೆ. ಮೊದಲನೆಯದಾಗಿ ಕೃತಕ ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಬಿಕ್ಕಟ್ಟಾದರೆ ಆ ಕ್ಷೇತ್ರದಲ್ಲಿ ನೇರವಾಗಿ ತೊಡಗಿಕೊಂಡ ಹಲವರು ಉದ್ಯೋಗ ಕಳೆದುಕೊಳ್ಳುವುದು ಅನಿವಾರ್ಯ. ಎರಡನೆಯದಾಗಿ ಕೃತಕ ಬುದ್ಧಿಮತ್ತೆಯ ಗುಳ್ಳೆ ಒಡೆದರೂ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಹೋಗಿಬಿಡುವುದಿಲ್ಲ. ಅದು ಉಳಿಯುತ್ತದೆ ಹಾಗೂ ಬೆಳೆಯುತ್ತದೆ. ಯಾಂತ್ರೀಕರಣ ಪ್ರಕ್ರಿಯೆ

ಮುಂದುವರಿಯುತ್ತದೆ. ಅದರಿಂದ ಇನ್ನೊಂದಿಷ್ಟು ಜನ ಕೆಲಸ ಕಳೆದುಕೊಳ್ಳುತ್ತಾರೆ. ಡೇಟಾ ಎಂಟ್ರಿ, ಕಸ್ಟಮರ್ ಸಪೋರ್ಟ್ ಇತ್ಯಾದಿ ಕೆಲಸಗಳಿಗೆ ಯಂತ್ರಗಳನ್ನು ಬಳಸಿಕೊಳ್ಳತೊಡಗುತ್ತಾರೆ. ಮೂರನೆಯದಾಗಿ ಬಿಕ್ಕಟ್ಟಿನಿಂದ ಆರ್ಥಿಕ ಚಟುವಟಿಕೆ ಕುಸಿಯುತ್ತದೆ. ಇದರಿಂದ ಉದ್ಯೋಗದ ಮೇಲೆ ಪರೋಕ್ಷವಾಗಿ ಪರಿಣಾಮ ಆಗುತ್ತದೆ. ಭಾರತದ ಇನ್ಫೋಸಿಸ್, ಟಿಸಿಎಸ್ ಅಂತಹ ಸಂಸ್ಥೆಗಳು ವಿದೇಶಿ ಬಳಕೆದಾರರಿಗೆ ಎಐ ಪ್ರಾಜೆಕ್ಟ್‌ಗಳನ್ನು ಮಾಡುತ್ತಿವೆ. ಅವುಗಳಿಗೆ ಹೊಡೆತ ಬೀಳುತ್ತದೆ. ಈಗಾಗಲೇ ಅಂತಹ ಹಲವು ಒಪ್ಪಂದಗಳ ನವೀಕರಣ ನಿಧಾನವಾಗುತ್ತಿದೆ. ಭಾರತದಲ್ಲಿ ೫೦ ಲಕ್ಷಕ್ಕೂ ಹೆಚ್ಚು ಜನ ಐಟಿ ಉದ್ಯಮವನ್ನು ನೆಚ್ಚಿಕೊಂಡಿದ್ದಾರೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸ್ಥಗಿತತೆಯ ಕಡೆಗಿನ ಚಲನೆ ಅಂತರ್ಗತವಾಗಿದೆ ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್. ಅಸಮಾನತೆಯ ಹೆಚ್ಚಳ ಉದಾರೀಕರಣ ನೀತಿಯ ಸಾಮಾನ್ಯ ಲಕ್ಷಣ. ಅಸಮಾನತೆ ಹೆಚ್ಚುತ್ತಿದ್ದಂತೆ ಬಡವರ ಖರೀದಿ ಶಕ್ತಿ ಕಡಿಮೆಯಾಗುತ್ತದೆ. ಅದು ಬೇಡಿಕೆಯನ್ನು ಕುಂಠಿಸುತ್ತದೆ. ನಿರುದ್ಯೋಗ ಹೆಚ್ಚುತ್ತದೆ, ಸಂಪನ್ಮೂಲದ ಪೂರ್ಣ ಬಳಕೆಯಾಗುವುದಿಲ್ಲ. ಆರ್ಥಿಕತೆ ಕುಸಿಯುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ಬೇಡಿಕೆಯನ್ನು ಹೆಚ್ಚಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಕೇನ್ಸ್ ಪ್ರತಿಪಾದಿಸುತ್ತಾನೆ. ಸರ್ಕಾರ ಅದಕ್ಕೆ ಬೇಕಾದ ಹಣವನ್ನು ವಿತ್ತೀಯ ಕೊರತೆಯನ್ನು ಹೆಚ್ಚಿಸುವುದರಿಂದಲೋ, ಅಥವಾ ಶ್ರೀಮಂತರ ಮೇಲೆ ತೆರಿಗೆ ಹಾಕುವ ಮೂಲಕವೂ ಸಂಗ್ರಹಿಸಬೇಕು. ಆದರೆ ಇತ್ತೀಚಿನ ಉದಾರವಾದೀ ಆರ್ಥಿಕ ವ್ಯವಸ್ಥೆಯಲ್ಲಿ ಈ ಎರಡಕ್ಕೂ ಅವಕಾಶವಿಲ್ಲ. ಹಾಗಾಗಿ ಇಂದಿನ ಪರಿಸ್ಥಿತಿಯಲ್ಲಿ ಸ್ಥಗಿತತೆ ಅನಿವಾರ್ಯವಾಗುತ್ತದೆ. ಹೊಸ ತಂತ್ರಜ್ಞಾನ ಬಂದಾಗ ಹೆಚ್ಚಿನ ಹೂಡಿಕೆ, ಹೆಚ್ಚಿನ ನಿರೀಕ್ಷೆ ಇರುತ್ತದೆ. ಸ್ಟಾಕ್ ಇತ್ಯಾದಿ ಸ್ವತ್ತುಗಳ ಬೆಲೆ ವಿಪರೀತ ಏರುತ್ತದೆ. ಅದು ನಿಜವಾದ ಸಂಪತ್ತಲ್ಲ. ಅವುಗಳ ಬೆಲೆ ಕೃತ್ರಿಮವಾಗಿ ಏರುತ್ತಾ ಹೋಗುತ್ತದೆ. ಆರ್ಥಿಕ ಪ್ರಗತಿಯಾಗುತ್ತಿರುವಂತೆ ಭಾಸವಾಗುತ್ತದೆ. ವಾಸ್ತವದಲ್ಲಿ ಅಮೇರಿಕಾ ಈಗ ಆರ್ಥಿಕ ಹಿಂಜರಿತದಿಂದ ಹೊರಬಂದಿಲ್ಲ. ಕೃತಕ ಬುದ್ಧಿಮತ್ತೆಯ ಮೇಲಿನ ಹೂಡಿಕೆಯಿಂದ ಜಿಡಿಪಿಯಲ್ಲಿ ಹೆಚ್ಚಳವಾಗಿದೆ. ಆದರೆ ಇದೊಂದು ತಾತ್ಕಾಲಿಕ ಬೆಳವಣಿಗೆ, ದೀರ್ಘಕಾಲೀನ ಅಲ್ಲ. ತಂತ್ರಜ್ಞಾನದಿಂದ ಸಮಗ್ರ ಬೇಡಿಕೆ ಹೆಚ್ಚುವ ಸಾಧ್ಯತೆ ಕಡಿಮೆ. **"**ಬಿಕ್ಕಟ್ಟು ಪರಿಹಾರಗೊಂಡ ಕೂಡಲೆ ತಂತ್ರಜ್ಞಾನದಿಂದ ಶ್ರಮದ ಉತ್ಪಾದಕತೆ ಹೆಚ್ಚುತ್ತದೆ. ಕಾರ್ಮಿಕರ ಕೂಲಿ ಹೆಚ್ಚುತ್ತದೆ. ಕಾರ್ಮಿಕರ ಸ್ಥಿತಿ ಸುಧಾರಿಸುತ್ತದೆ**"** ಎಂದು ಷುಂಪೀಟರ್ ಅಭಿಪ್ರಾಯಪಡುತ್ತಾರೆ. ಆದರೆ ವಾಸ್ತವ ಬೇರೆಯದೇ ಕಥೆ ಹೇಳುತ್ತದೆ. ಹಿಂದೆ ಬಿಕ್ಕಟ್ಟುಗಳು ಉಂಟಾದಾಗಲೆಲ್ಲಾ ಜಾಗತಿಕ ಆರ್ಥಿಕತೆ ದೀರ್ಘಕಾಲಿನ ಸ್ಥಗಿತತೆಯನ್ನು ಅನುಭವಿಸಿತ್ತು. ಈಗಲೂ ಕೃತಕ ಬುದ್ಧಿಮತ್ತೆ ಸ್ಥಗಿತತೆಯನ್ನು ತಡೆಯುತ್ತದೆ, ಅರ್ಥಿಕತೆ ನಿರಂತರ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತದೆ ಎಂದು ಹೇಳುವುದಕ್ಕೆ ಯಾವುದೇ ಚಾರಿತ್ರಿಕ ಅಥವಾ ಸೈದ್ಧಾಂತಿಕ ಪುರಾವೆಯಿಲ್ಲ.
ಈಗ ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಎಷ್ಟೋ ಉದ್ಯಮಗಳು ನಷ್ಟದಲ್ಲಿದ್ದರೂ ಅವುಗಳ ಸ್ಟಾಕ್‌ಗಳ ಬೆಲೆ ವಿಪರೀತ ಏರುತ್ತಿರುವುದು ಆತಂಕವನ್ನು ಮೂಡಿಸಿದೆ. ಚರಿತ್ರೆಯಲ್ಲಿ ನಾವು ನೋಡಿದ್ದ ಹಲವು ಗುಳ್ಳೆಗಳಂತೆ ಇದೂ ಒಂದು ಗುಳ್ಳೆ ಇರಬಹುದೆ ಅನ್ನುವ ಅನುಮಾನವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. ಐಎಂಎಫ್ ಕೂಡ ಎದುರಾಗಬಹುದಾದ ಬಿಕ್ಕಟ್ಟಿನ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದೆ.

ಕ್ರಿಪ್ಟೋ ನಾಣ್ಯವೂ ಸೇರಿದಂತೆ ಸಟ್ಟಾ ಬಂಡವಾಳ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡಿದೆ. ಲಾಭಕ್ಕಿಂತ ಲಾಭದ ನಿರೀಕ್ಷೆಯಿಂದ ಜನ ಇದರಲ್ಲಿ ಹಣ ತೊಡಗಿಸುತ್ತಿದ್ದಾರೆ. ಸ್ಟಾಕ್ ಬೆಲೆ ಹಲವು ಪಟ್ಟು ಏರಿದೆ. ಹಣಕಾಸು ಗುಳ್ಳೆ ಅಪಾಯಕಾರಿ ಹಂತ ತಲುಪಿರುವುದಕ್ಕೆ ಇದು ಸೂಚನೆ ಇರಬಹುದು. ಹೂಡಿಕೆದಾರರು ಸ್ವಲ್ಪ ಹಿಂದೆ ಸರಿದುಕೊಂಡರೂ ತೀವ್ರ ಸಮಸ್ಯೆಯಾಗಬಹುದು.

ಅಮೇರಿಕಾ ಹಾಗೂ ಯುರೋಪಿನಲ್ಲಿ ಆರಂಭವಾದ ಬಿಕ್ಕಟ್ಟು ಬೇರೆ ದೇಶಗಳ ಮೇಲೂ ಪರಿಣಾಮ ಬೀರುತ್ತದೆ. ಹಿಂದೆಯೂ ಡಾಟ್ ಕಾಂ ಇತ್ಯಾದಿ ಗುಳ್ಳೆಗಳು ಸಿಡಿದಾಗಲೂ ಬಿಕ್ಕಟ್ಟಿನ ಪರಿಣಾಮ ಬೇರೆ ದೇಶಗಳ ಮೇಲೆ ಆಗಿದೆ. ಹಣಕಾಸು ಮಾರುಕಟ್ಟೆಯ ಆಚೆಗೂ ಬಿಕ್ಕಟ್ಟಿನ ಪರಿಣಾಮ ಕಾಣಿಸಿಕೊಂಡರೆ ಅದರ ಪರಿಣಾಮ ಬೇಗನೆ ಬೇರೆ ದೇಶಗಳಿಗೂ ಹರಡುತ್ತದೆ. ಅಷ್ಟೇ ಅಲ್ಲ ಮತ್ತು ತೀವ್ರವೂ ಆಗುತ್ತದೆ. ಆ ದೇಶಗಳಲ್ಲೂ ಹೂಡಿಕೆ ಕುಂಠಿಸುತ್ತದೆ. ಬೆಳವಣಿಗೆ ನಿಧಾನವಾಗುತ್ತದೆ, ನಿರುದ್ಯೋಗ ಹೆಚ್ಚುತ್ತದೆ. ಕೊನೆಗೆ ರಫ್ತಿಗೆ ಬೇಡಿಕೆ ಕಡಿಮೆಯಾಗುತ್ತದೆ. ವಿದೇಶಿ ವಿನಿಮಯ ಹರಿದು ಬರುವುದೂ ಕಡಿಮೆಯಾಗುತ್ತದೆ.

ಡಾಲರ್ ಬಗ್ಗೆ ಅನುಮಾನ ಕಾಣಿಸಿಕೊಂಡಿದ್ದರೂ ಇಂದಿಗೂ ಅದು ಪ್ರಬಲವಾದ ಕರೆನ್ಸಿ. ಹಾಗಾಗಿ ಆರ್ಥಿಕತೆಯಲ್ಲಿ ಅನಿಶ್ಚತತೆ ಕಾಣಿಸಿಕೊಂಡಾಗ ಹೂಡಿಕೆದಾರರು ಡಾಲರನ್ನು ನೆಚ್ಚಿಕೊಳ್ಳುತ್ತಾರೆ. ಖಾಸಗಿ ಬಂಡವಾಳ ಅಮೆರಿಕೆಗೆ ಹರಿದು ಹೋಗುತ್ತದೆ. ಈಗ ಜನ ಡಾಲರಿಗಿಂತ ಕೃತಕ ಬುದ್ಧಿಮತ್ತೆಯ ಉದ್ಯಮಗಳ ಸ್ಟಾಕ್‌ನನ್ನು ನೆಚ್ಚಿಕೊಂಡಿದ್ದಾರೆ. ಹಿಂದುಳಿದ ದೇಶಗಳಿಂದ ಬಂಡವಾಳ ಹೊರಗೆ ಹರಿದುಹೋಗುವ ಅಪಾಯ ತೀವ್ರವಾಗಿದೆ. ಬಹುತೇಕ ದೇಶಗಳು ಅಮೆರಿಕೆಯಂತಹ ದೇಶಗಳ ಮಾರುಕಟ್ಟೆಯನ್ನು ನೆಚ್ಚಿಕೊಂಡಿವೆ. ಟ್ರಂಪ್ ಅವರ ಸುಂಕನೀತಿ ಸಂಕಷ್ಟದಲ್ಲಿರುವ ದೇಶಗಳ ರಫ್ತಿಗೆ ಇನ್ನಷ್ಟು ತೊಂದರೆ ಮಾಡುತ್ತದೆ. ಅವು ಜಾಗತಿಕ ಹಣಕಾಸು ಬಿಕ್ಕಟ್ಟುಗಳನ್ನು ನೇರವಾಗಿ ಎದುರಿಸಬೇಕಾಗುತ್ತದೆ. ಬೇರೆ ಕಡೆಗಳಲ್ಲಿ ವ್ಯಾಪಾರದ ಸಂಬಂಧಗಳನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಈಗಾಗಲೇ ವಿದೇಶಿ ಸಾಲದ ಹೊರೆಯಲ್ಲಿರುವ ದೇಶಗಳ ಮೇಲೆ ಬಿಕ್ಕಟ್ಟಿನ ಪರಿಣಾಮ ಹೆಚ್ಚು ತೀವ್ರವಾಗಿರುತ್ತದೆ.

ಆಧುನಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆಗಾಗ್ಗೆ ಇಂತಹ ಗುಳ್ಳೆಗಳು ಕಾಣಿಸಿಕೊಳ್ಳುತ್ತಿರುತ್ತವೆ. ರೇಲ್ವೆ, ಇಂಟರ್‌ನೆಟ್ ಇತ್ಯಾದಿಗಳು ಬಂದಾಗ ಅಪಾರವಾದ ಬಂಡವಾಳದ ಹೂಡಿಕೆಯಾಗಿತ್ತು. ಅವೆಲ್ಲಾ ಜಗತ್ತನ್ನೇ ಬದಲಿಸಿಬಿಡುತ್ತದೆ ಅನ್ನುವ ತಂತ್ರಜ್ಞಾನಗಳು. ಇದರಿಂದ ಬರಬಹುದಾದ ಆದಾಯದ ಬಗ್ಗೆ ಸ್ಪಷ್ಟ ಚಿತ್ರವಿರುತ್ತಿರಲಿಲ್ಲ. ಈ ಎಲ್ಲಾ ಪ್ರಕರಣಗಳಲ್ಲಿ ಮೂಲಸೌಕರ್ಯ ನಿರ್ಮಿಸಿದ ಕಂಪೆನಿಗಳು ಅಪಾರ ನಷ್ಟ ಅನುಭವಿಸಿದವು. ಆದರೆ ಬಿಕ್ಕಟ್ಟು ಮರೆಯಾದ ಮೇಲೆ ರೈಲ್ವೆ ಹಳಿಗಳು, ಫೈಬರ್ ಆಪ್ಟಿಕ್ ಕೇಬಲ್ಸ್ ಇವೆಲ್ಲಾ ಉಳಿದುಕೊಂಡವು. ಹಲವು ವರ್ಷಗಳ ನಂತರ ಹೊಸ ಆರ್ಥಿಕತೆಯಲ್ಲಿ ಬಳಕೆಯಾದವು. ಆದರೆ ಕೃತಕ ಬುದ್ಧಿಮತ್ತೆಯ ವಿಷಯದಲ್ಲಿ ಇದು ಸಾಧ್ಯವಾಗದೆ ಇರಬಹುದು. ಈಗ ಬಳಸುತ್ತಿರುವ ಚಿಪ್ಪುಗಳು ಕೆಲವೇ ತಿಂಗಳಿನಲ್ಲಿ ಹಳತಾಗಿಬಿಡುತ್ತವೆ. ಉಪಯೋಗಕ್ಕೆ ಬಾರದೆ ಹೋಗಬಹುದು.

ಕೃತಕ ಬುದ್ಧಿಮತ್ತೆಯ ಬಿಕ್ಕಟ್ಟನ್ನು ಉದ್ದಿಮೆಗಳಿಗೆ ತಡೆದುಕೊಳ್ಳುವುದಕ್ಕೆ ಹಾಗೂ ಜನರಲ್ಲಿ ವಿಶ್ವಾಸವನ್ನು ಕಾಪಾಡಿಕೊಳ್ಳುವುದಕ್ಕೆ ಸಾಧ್ಯವೂ ಆಗಬಹುದು. ಎಲ್ಲಾ ಉದ್ದಿಮೆಗಳು ನಾಶವಾಗುವುದಿಲ್ಲ. ಕೆಲವು ಖಂಡಿತಾ ಉಳಿದುಕೊಳ್ಳುತ್ತವೆ. ಬಿಕ್ಕಟ್ಟಿನ ಪರಿಣಾಮ ಏನೇ ಆಗಲಿ ಕೃತಕ ಬುದ್ಧಿಮತ್ತೆ ದಿಕ್ಕು ಬದಲಾಗಬೇಕು. ತಂತ್ರಜ್ಞಾನ ಮನುಷ್ಯರ ಒಳಿತಿಗೆ ದುಡಿಯುವಂತಾಗಬೇಕೆ ಹೊರತು, ಮನುಷ್ಯರ ಸ್ಥಾನವನ್ನು ಆಕ್ರಮಿಸಿಕೊಳ್ಳುವಂತಾಗಬಾರದು. ಇಲ್ಲದೆ ಹೋದರೆ ಬಿಕ್ಕಟ್ಟುಗಳು ಹೊಸ ಹೊಸ ರೂಪದಲ್ಲಿ ಕಾಡುತ್ತಲೇ ಇರುತ್ತವೆ.